ಸೋಮವಾರ, ಮೇ 19, 2025 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ರಾಹುಲ್ ಶತಕ ಸಂಭ್ರಮ

ನವದೆಹಲಿಯಲ್ಲಿ ಭಾನುವಾರ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಬ್ಯಾಟರ್, ಕನ್ನಡಿಗ ಕೆ.ಎಲ್. ರಾಹುಲ್ ಅವರು ಗುಜರಾತ್ ಟೈಟನ್ಸ್ ಎದುರು ಅಜೇಯ ಶತಕ ಗಳಿಸಿದರು. ಟಿ20 ಕ್ರಿಕೆಟ್ ಮಾದರಿಯಲ್ಲಿ ಒಟ್ಟು 8 ಸಾವಿರ ರನ್ ಗಳಿಸಿ, ದಾಖಲೆ ಬರೆದರು

112*	65	14	4
ರನ್	ಎಸೆತ	ಬೌಂಡರಿ	ಸಿಕ್ಸರ್

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರ ಕಂದಾಯ ಇಲಾಖೆ

ಉತ್ತಮ ಆಡಳಿತ ನಿಮಗಾಗಿ

ಪರಿಹಾರ 2.0
ವಿಳಂಬವಿಲ್ಲದೆ ವಿಪತ್ತು ಪರಿಹಾರ
2 ವರ್ಷಗಳಲ್ಲಿ **38+ ಲಕ್ಷ ರೈತರಿಗೆ ₹3700 ಕೋಟಿ ಪರಿಹಾರ.**
ನಿಖರವಾದ ಫಲಾನುಭವಿಗಳನ್ನು ಗುರುತಿಸಲು **ಭೂಮಿ ಮತ್ತು ಆಧಾರ್‌ನೊಂದಿಗೆ ಸಂಯೋಜನೆ.**
15-20 ದಿನಗಳೊಳಗೆ ಪರಿಹಾರ ವಿತರಣೆ.

ಇ-ಸಂಯೋಜನೆ
ವಂಚನೆ ಜಾಲಕ್ಕೆ ಕಡಿವಾಣ
ವಹಿವಾಟುಗಳಲ್ಲಿ **ವಂಚನೆಗೆ ತಡೆ.**
ಪ್ರಮುಖ ಸರ್ಕಾರಿ ಡೇಟಾಬೇಸ್‌ಗಳೊಂದಿಗೆ ಸಂಯೋಜನೆ.

ಕಂದಾಯ ಗ್ರಾಮ
ಗುರುತಿಗೊಂದು ವಿಳಾಸ, ಬದುಕಿಗೊಂದು ಭರವಸೆ
2,600+ ಹೊಸ ಕಂದಾಯ ಗ್ರಾಮಗಳು.
20 ಮೇ 2025 ರಂದು **1 ಲಕ್ಷ ಹಕ್ಕುಪತ್ರಗಳ** ವಿತರಣೆ.
2 ವರ್ಷಗಳಲ್ಲಿ **1,000+ ಗ್ರಾಮಗಳ ಸೇರ್ಪಡೆ.**

ಬಗೈರ್ ಹುಕುಂ
ಸಾಗುವಳಿದಾರರಿಗೆ ಕಾನೂನು ಮಾನ್ಯತೆ
ಪಾರದರ್ಶಕ ಮತ್ತು ಸಂಪೂರ್ಣ ಡಿಜಿಟಲ್ ಪ್ರಕ್ರಿಯೆ.

ಲ್ಯಾಂಡ್ ಬೀಟ್
ಸಾರ್ವಜನಿಕ ಆಸ್ತಿಗಳ ರಕ್ಷಣೆ
96.91% ಕಂದಾಯ ಇಲಾಖಾ ಭೂಮಿಗಳ ಪರಿಶೀಲನೆ.
ವಿ.ಎ.ಓ.ಗಳಿಂದ **100% ಆ್ಯಪ್ ಬಳಕೆ.**
ತಮ್ಮ **ಆಸ್ತಿ ರಕ್ಷಣೆಗಾಗಿ** ಇತರ ಇಲಾಖೆಗಳಿಂದಲೂ **ಲ್ಯಾಂಡ್ ಬೀಟ್ ಆ್ಯಪ್ ಬಳಕೆ.**

ಇ-ಪೌತಿ ಆಂದೋಲನ
ವಾರಸುದಾರರಿಗೆ ಮನ್ನಣೆ, ಹಕ್ಕುಗಳಿಗೆ ಗೌರವ
52 ಲಕ್ಷ ಲ್ಯಾಂಡ್ ಪಾರ್ಸೆಲ್ ಉತ್ತರಾಧಿಕಾರಿಗಳಿಗೆ ವರ್ಗಾಯಿಸುವ ಅಭಿಯಾನ.

ಭೂ ಸುರಕ್ಷಾ
ನಿಮ್ಮ ಭೂ ದಾಖಲೆಗಳ ಇ-ಖಜಾನೆ
22+ ಕೋಟಿ ಪುಟಗಳ ಡಿಜಿಟಲೀಕರಣ.
1 ವರ್ಷದಲ್ಲಿ **100%** ಪೂರ್ಣಗೊಳ್ಳಲಿದೆ.

ಡಿಜಿಟಲ್ ಸೇವೆಗಳ ವಿತರಣೆ
ಸರತಿ ಸಾಲು ಇನ್ನಿಲ್ಲ ಆನ್‌ಲೈನ್‌ನಲ್ಲೇ ಇನ್ನೆಲ್ಲಾ
ಕಳೆದ ವರ್ಷ **2+ ಕೋಟಿ ಆನ್‌ಲೈನ್ ವಹಿವಾಟು.**
60+ ಭೂಮಿ ಮತ್ತು ಕಂದಾಯ ಸೇವೆಗಳು.
SMS ಮೂಲಕ **1.3 ಕೋಟಿ** ಜಾತಿ, ಆದಾಯ ಪ್ರಮಾಣಪತ್ರಗಳ ವಿತರಣೆ.

ಪೋಡಿ ಮುಕ್ತ ಗ್ರಾಮ ಅಭಿಯಾನ
ಸಂಪೂರ್ಣ ಸರ್ವೇ ಅಭಿಯಾನ
1 ವರ್ಷದಲ್ಲಿ **2204** ಗ್ರಾಮಗಳ ಪೋಡಿ ಮುಕ್ತ.
2025-26 ರಲ್ಲಿ **6,925** ಗ್ರಾಮಗಳ ಗುರಿ.

ಭೂ ಗ್ಯಾರಂಟಿ
ಕಂದಾಯ ಸೇವೆಗಳ ಸುಧಾರಣೆ

ಆಟೋ ಮ್ಯುಟೇಶನ್
ತಕ್ಷಣ ಖಾತೆ ಬದಲಾವಣೆ
70% ಮ್ಯುಟೇಷನ್‌ಗಳಿಗೆ ಸ್ವಯಂ-ಅನುಮೋದನೆ.
5 ದಿನಗಳ ಪ್ರಕ್ರಿಯೆ 12 ಗಂಟೆಗಳಿಗೆ ಇಳಿಕೆ.

ನನ್ನ ಆಸ್ತಿ
ಆರ್‌ಟಿಸಿ-ಆಧಾರ್ ಜೋಡಣೆ - ಮಾಲೀಕತ್ವಕ್ಕೆ ಭದ್ರತೆ
73+ ಲಕ್ಷ ವಿಶಿಷ್ಟ ಭೂ ಮಾಲೀಕರು ಆಧಾರ್ ಗೆ ಲಿಂಕ್.

ಭೂ ನ್ಯಾಯ
ಆರ್‌ಸಿಸಿಎಂಎಸ್ 2.0 - ನ್ಯಾಯದೀಕ್ಷೆಗೆ ತಂತ್ರಜ್ಞಾನದ ಸ್ಪರ್ಶ
ಬಾಕಿ ಪ್ರಕರಣಗಳು: ತಹಶೀಲ್ದಾರ್ ನ್ಯಾಯಾಲಯಗಳಲ್ಲಿ **10000 ದಿಂದ 400 ಕ್ಕೆ**
AC ನ್ಯಾಯಾಲಯಗಳಲ್ಲಿ **70000 ದಿಂದ 30000 ಕ್ಕೆ ಇಳಿಕೆ.**

ಇ-ಕಛೇರಿ
ಕಾಗದರಹಿತ ಆಡಳಿತ
1200+ ಕಚೇರಿಗಳು ಈಗ ಡಿಜಿಟಲ್.
15 ದಿನಗಳ ಪ್ರಕ್ರಿಯೆ ಈಗ **15 ನಿಮಿಷಗಳಲ್ಲಿ.**

ಇ-ದಾಖಲೆ
ಬೆರಳ ತುದಿಯಲ್ಲೇ ದಾಖಲೆ
ಆನ್‌ಲೈನ್ ನಲ್ಲೇ ಅಪ್ಲಿಕೇಶನ್ ಮತ್ತು ವಿತರಣೆ.

ನನ್ನ ಭೂಮಿ
ರೈತರಿಗೆ ಹಕ್ಕು ಖಚಿತಪಡಿಸುವ ಅಭಿಯಾನ
ಕಳೆದ 3 ತಿಂಗಳಲ್ಲಿ **88000+ ಅನುಮೋದನೆ**
30000 ಭೂಮಿಗಳ ಸರ್ವೆ ಪೋಡಿ ಪೂರ್ಣ.
ಎಲ್ಲಾ ಪ್ರಕ್ರಿಯೆ ಈಗ **ಆನ್‌ಲೈನ್‌ನಲ್ಲಿ** ಮತ್ತು **100% ಕಾಗದರಹಿತ.**

ಸಂಯೋಜಿತ ಮುಟೇಷನ್ ಪೋಡಿ
ಪಹಣಿ ಜೊತೆಗೆ ಆಕಾರಬಂದ್ ಗಣಕೀಕರಣ
2024-25 ನೇ ಸಾಲಿನಲ್ಲಿ **8.5 ಲಕ್ಷ** ಮುಟೇಷನ್ ಪ್ರಕರಣಗಳ ವಿಲೇ.
ಪಹಣಿಯಲ್ಲಿ ಸ್ವಯಂಚಾಲಿತ ಬದಲಾವಣೆ **90%** ಸಮಯ ಉಳಿತಾಯ.
ಮಾಸಿಕ **45,000 ಆಕಾರ್** ಬಂದ್ ಪ್ರಕರಣಗಳ ಸಂಯೋಜಿತ ಪರಿಹಾರ.

ಸಮರ್ಪಣೆ ಸಂಕಲ್ಪ
1,11,111 ಕುಟುಂಬಗಳಿಗೆ
ಕಂದಾಯ ಗ್ರಾಮ ಹಕ್ಕು ಪತ್ರ ಸಮರ್ಪಣೆ

20 ಮೇ 2025 ಬೆಳಿಗ್ಗೆ 11.00 ಘಂಟೆಗೆ
ಜಿಲ್ಲಾ ಕ್ರೀಡಾಂಗಣ, ಹೊಸಪೇಟೆ

www.revenuecommissionerate.karnataka.gov.in

ಭಾರತದ ಸಾರ್ವಭೌಮತ್ವ , ಅಖಂಡತೆ ಮತ್ತು ಏಕತೆಯನ್ನು ಎತ್ತಿ ಹಿಡಿಯುವುದು ಮತ್ತು ಕಾಪಾಡುವುದು.

ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನ ರಾರಾವಿಯಲ್ಲಿ ಯಲ್ಲಮ್ಮನಹಳ್ಳ ಉಕ್ಕಿ ಹರಿಯುತ್ತಿದೆ (ಎಡ ಚಿತ್ರ). ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಮಸ್ತೇನಹಳ್ಳಿಯ ಮಾವಿನ ತೋಪಿನಲ್ಲಿ ಮಳೆ ನೀರು ನಿಂತಿದೆ

ಕಲ್ಯಾಣ ಕರ್ನಾಟಕದಲ್ಲಿ ವರ್ಷಧಾರೆ • ಬೀದರ್‌ನಲ್ಲಿ ಜನಜೀವನ ಅಸ್ತವ್ಯಸ್ತ • ರಾಜ್ಯದ ಹಲವೆಡೆ ವರುಣನ ಆರ್ಭಟ

ವಿವಿಧೆಡೆ ಭಾರಿ ಮಳೆ: ಬಿಸಿಲ ಧಗೆ ಶಮನ

ಪ್ರಜಾವಾಣಿ ವಾರ್ತೆ

ಕಲಬುರಗಿ/ಹುಬ್ಬಳ್ಳಿ: ಕಲ್ಯಾಣ ಕರ್ನಾಟಕದ ಕಲಬುರಗಿ, ಬೀದರ್, ರಾಯಚೂರು ಜಿಲ್ಲೆಗಳಲ್ಲಿ ಶನಿವಾರ ರಾತ್ರಿ ಹಾಗೂ ಭಾನುವಾರ ಬಿರುಸಿನ ಮಳೆಯಾಗಿದೆ.

ಕಳೆದ 24 ಗಂಟೆಗಳಲ್ಲಿ ಧಾರವಾಡ, ಉತ್ತರ ಕನ್ನಡ, ಬಳ್ಳಾರಿ, ವಿಜಯಪುರ ಮತ್ತು ಬೆಳಗಾವಿ ಜಿಲ್ಲೆಯ ವಿವಿಧೆಡೆ ಉತ್ತಮ ಮಳೆಯಾಗಿದ್ದು, ಬಿಸಿಲ ಧಗೆ ಕಡಿಮೆಯಾಗಿದೆ.

ಬೀದರ್ ನಗರವೂ ಸೇರಿದಂತೆ ತಾಲ್ಲೂಕಿನ ಹಲವೆಡೆ ಭಾನುವಾರ ಮಧ್ಯಾಹ್ನ ಗಂಟೆಗೂ ಹೆಚ್ಚು ಕಾಲ ಗುಡುಗು ಸಹಿತ ಬಿರುಸಿನ ಮಳೆಯಾಗಿದೆ. ಕಳೆದ ಮೂರ್ನಾಲ್ಕು ದಿನಗಳಿಂದ ಸುರಿಯುತ್ತಿರುವ ಮಳೆಗೆ ಜನಜೀವನ ಅಸ್ತವ್ಯಸ್ತಗೊಂಡಿದೆ.

ರಾಯಚೂರು ನಗರ, ಮಸ್ಕಿ, ಹಟ್ಟಿ ಚಿನ್ನದಗಣಿ, ಸಿಂಧನೂರು, ಸಿರವಾರ, ದೇವದುರ್ಗ, ಲಿಂಗಸುಗೂರು, ಮಾನ್ವಿ ತಾಲ್ಲೂಕಿನಲ್ಲಿ ಮಳೆಯಾಗಿದೆ. ಮಸ್ಕಿ ತಾಲ್ಲೂಕಿನಲ್ಲಿ 6.7 ಸೆಂ.ಮೀ. ಮಳೆಯಾಗಿದೆ.

ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನಲ್ಲಿ ಭಾರಿ ಮಳೆ, ಗಾಳಿಗೆ ಮಾವಿನ ಮರಗಳಲ್ಲಿನ ಮಾವಿನಕಾಯಿ ಉದುರಿ ಬಿದ್ದಿದೆ.

ಬಳ್ಳಾರಿ ಜಿಲ್ಲೆಯ ಗೊಲ್ಲನಾಗೇನಹಳ್ಳಿಯಲ್ಲಿ ಐದು ಕುರಿಗಳು ಮೃತಪಟ್ಟಿವೆ. ಕೆಲವೆಡೆ ಮನೆಗಳಿಗೆ ಹಾನಿಯಾಗಿದೆ. ವಿಜಯಪುರ ಜಿಲ್ಲೆ ತಾಳಿಕೋಟೆ ತಾಲ್ಲೂಕಿನಾದ್ಯಂತ 7.82 ಸೆಂ.ಮೀ ಮಳೆಯಾಗಿದೆ. ರಭಸದ ಗಾಳಿಗೆ ಹಲವೆಡೆ ಮರಗಳ ಕೊಂಬೆಗಳು ಮುರಿದು ಬಿದ್ದಿವೆ. ವಾಹನಗಳ ಸುಗಮ ಸಂಚಾರಕ್ಕೆ ಅಡ್ಡಿಯಾಯಿತು. ಬಹುತೇಕ ಕಡೆ ವಿದ್ಯುತ್ ಪೂರೈಕೆ ಕಡಿತಗೊಂಡಿತು.

ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನ ರಾರಾವಿಯಲ್ಲಿ ಯಲ್ಲಮ್ಮನಹಳ್ಳ ಉಕ್ಕಿ ಹರಿಯುತ್ತಿದ್ದು, ಕುರುವಳ್ಳಿ, ರಾಂಪುರ ಗ್ರಾಮಗಳಿಗೆ ಸಂಪರ್ಕಿಸುವ ರಸ್ತೆ ಮೇಲೆ ನೀರು ಹರಿಯುತ್ತಿದೆ. ಅಲ್ಲಿ 3.87ಸೆಂ.ಮೀ ಮಳೆಯಾಗಿದೆ. ಹರಪನಹಳ್ಳಿ ತಾಲ್ಲೂಕಿನ ಚೆನ್ನಹಳ್ಳಿ ತಾಂಡದಲ್ಲಿ ವಿದ್ಯುತ್ ತಂತಿ ತಗುಲಿ ಎತ್ತು ಮೃತಪಟ್ಟಿದೆ.

ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಹೊನ್ನಾವರ, ಕುಮಟಾ ಮತ್ತು ಮುಂಡಗೋಡದಲ್ಲಿ ಉತ್ತಮ ಮಳೆಯಾಯಿತು.

ಬೆಳಗಾವಿ ಜಿಲ್ಲೆಯ ಚನ್ನಮ್ಮನ ಕಿತ್ತೂರು, ಖಾನಾಪುರ, ಗೋಕಾಕದಲ್ಲಿ ಮತ್ತು ಬಾಗಲಕೋಟೆ ಜಿಲ್ಲೆ ಬಾದಾಮಿ ಸೇರಿ ಸುತ್ತಮುತ್ತಲ ಪ್ರದೇಶದಲ್ಲಿ ರಭಸದ ಮಳೆ ಸುರಿಯಿತು.

ಮಾವಿನ ತೋಟದಲ್ಲಿ ನಿಂತ ಮಳೆ ನೀರು

ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಯ ವಿವಿಧೆಡೆ ಭಾನುವಾರ ಮಧ್ಯಾಹ್ನ ಗುಡುಗು, ಮಿಂಚು ಸಹಿತ ಜೋರು ಮಳೆ ಸುರಿಯಿತು. ದಟ್ಟವಾದ ಮೋಡ ಆವರಿಸಿ ಮಧ್ಯಾಹ್ನ ಕತ್ತಲು ಕವಿಯಿತು. ಅದರ ಬೆನ್ನಲ್ಲೇ ಮಳೆ ಸುರಿಯಲು ಆರಂಭವಾಯಿತು. ಕೋಲಾರ ಜಿಲ್ಲೆಯಲ್ಲಿ ಸತತ ಐದು ದಿನಗಳಿಂದ ಬಿಟ್ಟುಬಿಟ್ಟು ಮಳೆ ಸುರಿಯುತ್ತಲೇ ಇದೆ.

ಮಾಲೂರು ತಾಲ್ಲೂಕಿನ ಸಂತೇಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 7 ಸೆಂ.ಮೀ. ಮಳೆಯಾಗಿದೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನಾದ್ಯಂತ ಹದ ಮಳೆಯಾಯಿತು. ಬಾಗೇಪಲ್ಲಿ ತಾಲ್ಲೂಕಿನಲ್ಲಿ ಸುರಿದ ಭಾರಿ ಮಳೆಗೆ ಚಿತ್ರಾವತಿ ನದಿಯಲ್ಲಿ ನೀರು ಹರಿಯುತ್ತಿದೆ. ರಾಜಕಾಲುವೆ ಒತ್ತುವರಿಯಾದ ಕಾರಣ ಮಳೆ ನೀರು ಪಕ್ಕದ ಮಾವಿನ ತೋಪಿಗೆ ನುಗ್ಗಿದೆ. ಚಿಂತಾಮಣಿ ತಾಲ್ಲೂಕಿನ ಮಸ್ತೇನಹಳ್ಳಿ ಗ್ರಾಮದ ಇಡೀ ಮಾವಿನ ತೋಪಿನಲ್ಲಿ ನೀರು ನಿಂತಿದೆ.

ಕೊಯ್ಲಿಗೆ ಬಂದಿದ್ದ ಮಾವು ಕಟಾವು ಮಾಡದಿದ್ದರಿಂದ, ಮರದಲ್ಲಿಯೇ ಕೊಳೆಯುವ ಆತಂಕ ಎದುರಾಗಿದೆ.

ಸುದ್ದಿ 2 ನಿಮಿಷ

ಆನೆಗಳ ಹಸ್ತಾಂತರ 21ರಂದು

ಬೆಂಗಳೂರು: ರಾಜ್ಯ ಸರ್ಕಾರವು ಇದೇ 21ರಂದು ವಿಧಾನಸೌಧದ ಎದುರು ನಡೆಯಲಿರುವ ಸಮಾರಂಭದಲ್ಲಿ, ನೆರೆಯ ಆಂಧ್ರಪ್ರದೇಶಕ್ಕೆ ಪಳಗಿಸಿದ ಆನೆಗಳನ್ನು ಹಸ್ತಾಂತರಿಸಲಿದೆ.

‘ಆಂಧ್ರಪ್ರದೇಶದಲ್ಲಿ ಆನೆ–ಮಾನವ ಸಂಘರ್ಷ ತಡೆ ಮತ್ತು ಪುಂಡಾನೆಗಳ ಸೆರೆ ಕಾರ್ಯಾಚರಣೆಗಳಲ್ಲಿ ಬಳಸಲು ಕುಮ್ಕಿ ಆನೆಗಳನ್ನು ಒದಗಿಸುವಂತೆ ಮತ್ತು ಮಾವುತರಿಗೆ ತರಬೇತಿ ನೀಡುವಂತೆ, ಅಲ್ಲಿನ ಅರಣ್ಯ ಸಚಿವ ಪವನ್ ಕಲ್ಯಾಣ್ ಅವರು ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು. ಅದರ ಭಾಗವಾಗಿ ಪಳಗಿಸಿದ ಕುಮ್ಕಿ ಆನೆಗಳನ್ನು ನೀಡುತ್ತಿದ್ದೇವೆ’ ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಅವರು ತಿಳಿಸಿದ್ದಾರೆ.

‘2024ರ ಆಗಸ್ಟ್‌ನಲ್ಲಿ ಬೆಂಗಳೂರಿನಲ್ಲಿ, ಆನೆ–ಮಾನವ ಸಂಘರ್ಷ ಕುರಿತ ಅಂತರರಾಷ್ಟ್ರೀಯ ಸಮ್ಮೇಳನ ನಡೆದಿತ್ತು. ಆನೆ–ಮಾನವ ಸಂಘರ್ಷ ತಡೆ ಸಂಬಂಧ ಚಾಲ್ತಿಯಲ್ಲಿರುವ ಉತ್ತಮ ರೂಢಿಗಳ ವಿನಿಮಯಕ್ಕೆ ಕರ್ನಾಟಕ, ಕೇರಳ, ಆಂಧ್ರಪ್ರದೇಶ ಮತ್ತು ತೆಲಂಗಾಣ ಸರ್ಕಾರಗಳು ತಿಳಿವಳಿಕೆ ಪತ್ರಕ್ಕೆ ಸಹಿ ಹಾಕಿದ್ದವು. ಅದರ ಭಾಗವಾಗಿಯೇ ಆಂಧ್ರಪ್ರದೇಶಕ್ಕೆ ಆನೆಗಳನ್ನು ಹಸ್ತಾಂತರಿಸಲಾಗುತ್ತಿದೆ’ ಎಂದಿದ್ದಾರೆ.

ಉಪ ತಹಶೀಲ್ದಾರ್ ಅಮಾನತು

ಗದಗ: ಇಲ್ಲಿನ ತಹಶೀಲ್ದಾರ್ ಕಚೇರಿ ಒಳಗೆ ಯುವಕನೊಬ್ಬನಿಗೆ ಹಲ್ಲೆ ಮಾಡಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದು, ಈ ಸಂಬಂಧ ಉಪ ತಹಶೀಲ್ದಾರ್ ಡಿ.ಟಿ.ವಾಲ್ಮೀಕಿ ಅವರನ್ನು ಅಮಾನತು ಮಾಡಲಾಗಿದೆ.

ಅಕ್ಷಯ್ ಬೊಳ್ಳೊಳ್ಳಿ ಎಂಬಾತನ ಗೆಳೆಯನ ಬೈಕ್‌ಗೆ ಉಪ ತಹಶೀಲ್ದಾರ್ ಅವರ ಪರಿಚಯಸ್ಥನ ಕಾರು ಡಿಕ್ಕಿ ಹೊಡೆದ ಘಟನೆಗೆ ಸಂಬಂಧಿಸಿ ಮಾತಿನ ಚಕಮಕಿ ನಡೆದಿತ್ತು. ಬಳಿಕ ಅಕ್ಷಯ್, ತಹಶೀಲ್ದಾರ್ ಕಚೇರಿ ಒಳಕ್ಕೆ ಹೋಗಿ ಪ್ರಶ್ನಿಸಿದಾಗ ಕೆರಳಿದ ಉಪ ತಹಶೀಲ್ದಾರ್ ಹಾಗೂ ಅವರ ತಂಡ ಯುವಕನ ಮೇಲೆ ಹಲ್ಲೆ ನಡೆಸಿದೆ. ಈ ಘಟನೆಯಲ್ಲಿ ವಾಲ್ಮೀಕಿ ಜತೆಗೆ ಕಾಂಗ್ರೆಸ್ ಮುಖಂಡರೊಬ್ಬರೂ ಭಾಗಿಯಾಗಿದ್ದರು ಎಂದು ಆರೋಪಿಸಲಾಗಿದೆ.

‘ವಿಡಿಯೊದಲ್ಲಿರುವಂತೆ ನಾನು ಚೇರ್ ಎತ್ತಿಕೊಂಡು ಯುವಕನಿಗೆ ಹೊಡೆಯಲು ಹೋಗಿಲ್ಲ. ಕಚೇರಿಯೊಳಗೆ ಜಗಳ ಮಾಡಿಕೊಳ್ಳಬೇಡಿ. ಹೊರಕ್ಕೆ ಹೋಗಿ ಎಂದು ಹೇಳಿದ್ದೇನೆ’ ಎಂದು ಉಪ ತಹಶೀಲ್ದಾರ್ ತಿಳಿಸಿದ್ದಾರೆ.

‘ಕಚೇರಿಯೊಳಗೆ ನಡೆದಿರುವ ಘಟನೆ ಸಂಬಂಧ ಕಾರಣ ಕೇಳಿ ಉಪ ತಹಶೀಲ್ದಾರ್‌ಗೆ ನೋಟಿಸ್ ಕೊಡಲಾಗಿದೆ. ಜತೆಗೆ ಅವರನ್ನು ಅಮಾನತು ಮಾಡಿ ಜಿಲ್ಲಾಧಿಕಾರಿ ಆದೇಶಿಸಿದ್ದಾರೆ’ ಎಂದು ಗದಗ ತಹಶೀಲ್ದಾರ್ ಶ್ರೀನಿವಾಸ ಕುಲಕರ್ಣಿ ತಿಳಿಸಿದ್ದಾರೆ.

‘ಸಮಾಧಿ ಮೇಲೆ ಸಮಾವೇಶ’

ಚಿಕ್ಕಮಗಳೂರು: ‘ರೈತರು, ಬಾಣಂತಿಯರು ಮತ್ತು ಪ್ರಾಮಾಣಿಕ ಅಧಿಕಾರಿಗಳ ಸಮಾಧಿಗಳ ಮೇಲೆ ರಾಜ್ಯ ಸರ್ಕಾರ ಸಾಧನಾ ಸಮಾವೇಶ ನಡೆಸಲು ಹೊರಟಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

‘ಬಿಯರ್ ದರ ಮೂರನೇ ಬಾರಿಗೆ ಹೆಚ್ಚಾಗಿದೆ. ಖಜಾನೆ ಖಾಲಿಯಾಗಿದ್ದು, ನೌಕರರಿಗೆ ಸಂಬಳ ಕೊಡಲಾಗುತ್ತಿಲ್ಲ. ಎಲ್ಲಾ ಬೆಲೆಗಳ ಏರಿಕೆಯಿಂದ ಜನರ ಜೀವನ ನಿರ್ವಹಣೆ ಕಷ್ಟವಾಗುತ್ತಿದೆ. ಇದರಿಂದಾಗಿ ಕಳ್ಳತನ ಹೆಚ್ಚಾಗಲಿದೆ’ ಎಂದು ಸುದ್ದಿಗೋಷ್ಠಿಯಲ್ಲಿ ಭಾನುವಾರ ವಾಗ್ದಾಳಿ ನಡೆಸಿದರು.

‘ಎರಡು ವರ್ಷ ತುಂಬುತ್ತಿರುವ ಬೇಜವಾಬ್ದಾರಿ ಸರ್ಕಾರ ಇದು. ಜನೌಷಧಿ ಯೋಜನೆಗೆ ಎಳ್ಳು ನೀರು ಹಾಕಿದೆ. ದೇಶ ಯುದ್ಧದ ಸಂದರ್ಭ ಎದುರಿಸುತ್ತಿದೆ. ಈ ವೇಳೆ ಸಮಾವೇಶ ಬೇಕೆ, ಕಾಂಗ್ರೆಸ್‌ಗೆ ಭವಿಷ್ಯ ಇಲ್ಲ. ಜನರಿಂದ ಛೀಮಾರಿ ಹಾಕಿಸಿಕೊಳ್ಳುತ್ತಿದೆ’ ಎಂದರು.

ತೆರಿಗೆ ದುಡ್ಡಲ್ಲಿ ‘ಸಿದ್ದರಾಮೋತ್ಸವ’: ಗುತ್ತಿಗೆದಾರರಿಗೆ ಬಿಲ್ ಪಾವತಿಯಾಗಿಲ್ಲ. ಕಮಿಷನ್ ಮೊತ್ತ ಶೇ 60ಕ್ಕೆ ಏರಿಕೆಯಾಗಿದೆ ಎಂದು ಗುತ್ತಿಗೆದಾರರು ಹೇಳುತ್ತಿದ್ದಾರೆ. ಮುಡಾ ಹಗರಣ, ವಾಲ್ಮೀಕಿ ನಿಗಮದ ₹187 ಕೋಟಿ ಲೂಟಿ ಮಾಡಿದರು. ಪ್ರಾಮಾಣಿಕ ಅಧಿಕಾರಿಗಳು ಬಲಿಯಾದರು, 2 ಸಾವಿರ ರೈತರ ಆತ್ಮಹತ್ಯೆಯಾಗಿದೆ. ಈ ಸರ್ಕಾರದ ಎರಡು ವರ್ಷಗಳ ಸಾಧನೆ ಇವೇ. ಅಭಿವೃದ್ಧಿಗೆ ಅನುದಾನ ಇಲ್ಲ ಎಂದು ಅವರ ಪಕ್ಷದ ಶಾಸಕರೇ ಹೇಳುತ್ತಿದ್ದಾರೆ. ಜನ ಕಷ್ಟದಲ್ಲಿರುವ ಸಂದರ್ಭದಲ್ಲಿ ಇವರು ಬಿರಿಯಾನಿ ತಿನ್ನಲು ಹೊರಟಿದ್ದಾರೆ. ಜನರ ತೆರಿಗೆ ಹಣದಲ್ಲಿ ಇವರು ‘ಸಿದ್ದರಾಮೋತ್ಸವ’ ಮಾಡಲು ಹೊರಟಿದ್ದಾರೆ ಎಂದು ಅಶೋಕ ಟೀಕಿಸಿದರು.

‘1 ಲಕ್ಷ ಹಕ್ಕುಪತ್ರ ವಿತರಣೆ ಇದೇ ಮೊದಲು’

ಗ್ಯಾರಂಟಿ ಹೊರತಾಗಿಯೂ ಐದು ಕ್ಷೇತ್ರಗಳಲ್ಲಿ ಸಾಧನೆ: ಕೆಪಿಸಿಸಿ ವಕ್ತಾರ ಕಶ್ಯಪ್ ನಂದನ್ ಅಭಿಮತ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ‘ರಾಜ್ಯದ ಇತಿಹಾಸದಲ್ಲೇ ಮೊದಲ ಬಾರಿಗೆ ಒಂದು ಲಕ್ಷಕ್ಕೂ ಅಧಿಕ ಕುಟುಂಬಗಳಿಗೆ ಹಕ್ಕುಪತ್ರ ನೀಡಲಾಗುತ್ತಿದೆ. ಗ್ಯಾರಂಟಿ ಹೊರತುಪಡಿಸಿ ಇದು ರಾಜ್ಯ ಸರ್ಕಾರದ ಬಹುದೊಡ್ಡ ಜನಪರ ಕೆಲಸ’ ಎಂದು ಕೆಪಿಸಿಸಿ ವಕ್ತಾರ ಕಶ್ಯಪ್ ನಂದನ್ ಹೇಳಿದರು.

ಸಮರ್ಪಣಾ ಸಂಕಲ್ಪ ಸಮಾವೇಶದ ಸಿದ್ಧತೆ ಹಿನ್ನೆಲೆಯಲ್ಲಿ ಭಾನುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಹಟ್ಟಿ, ತಾಂಡಾ, ಕೇರಿಗಳಲ್ಲಿ ಹತ್ತಾರು ವರ್ಷಗಳಿಂದ ನೆಲಸಿದವರಿಗೆ ಸೂಕ್ತ ದಾಖಲೆ ಇರಲಿಲ್ಲ. ಅದನ್ನು ನೀಡುವ ಕೆಲಸವನ್ನು ಕಾಂಗ್ರೆಸ್ ಸರ್ಕಾರ ಮಾಡಿದೆ. ಅದಕ್ಕೆ ಫಲಾನುಭವಿಗಳನ್ನು ಹೊಸಪೇಟೆಗೆ ಕರೆಸಿ ಹಕ್ಕುಪತ್ರ ನೀಡಲಾಗುತ್ತಿದೆ’ ಎಂದರು.

‘ಐದು ಗ್ಯಾರಂಟಿ ಯೋಜನೆಗಳನ್ನು ಅಧಿಕಾರಕ್ಕೆ ಬಂದ ತಕ್ಷಣವೇ ಜಾರಿಗೊಳಿಸಿ, ಕಾಂಗ್ರೆಸ್ ತನ್ನ ಮಾತು ಉಳಿಸಿಕೊಂಡಿದೆ. ಬಂಡವಾಳ ಆಕರ್ಷಣೆ, ಉದ್ಯೋಗ ಸೃಷ್ಟಿ, ಗ್ರಾಮೀಣ ರಸ್ತೆ ಅಭಿವೃದ್ಧಿ, ವಿವಿಧ ಇಲಾಖೆಗಳಿಗೆ ನೇಮಕಾತಿ ಹಾಗೂ ದೊಡ್ಡಬಳ್ಳಾಪುರದಲ್ಲಿ ಅವಳಿ ನಗರ ನಿರ್ಮಾಣ ಸರ್ಕಾರದ ಬಹುದೊಡ್ಡ ಸಾಧನೆಗಳು’ ಎಂದರು.

‘ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ₹500 ಕೋಟಿವರೆಗೆ ಅನುದಾನ ನೀಡಲಾಗಿದೆ. ಗ್ಯಾರಂಟಿ ಕೊಟ್ಟೂ ಇತರ ಅಭಿವೃದ್ಧಿ ಕಾರ್ಯಗಳಿಗೆ ಹಣದ ಕೊರತೆ ಇಲ್ಲ ಎಂಬ ಸ್ಪಷ್ಟ ಸಂದೇಶವನ್ನು ರಾಜ್ಯ ಸರ್ಕಾರ ರವಾನಿಸಿದೆ. ಆದರೆ, ರಾಜ್ಯವನ್ನು ಅನುಸರಿಸಿ ಗ್ಯಾರಂಟಿ ಯೋಜನೆಗಳನ್ನು ಘೋಷಿಸಿದ್ದ ಮಹಾರಾಷ್ಟ್ರದಲ್ಲಿ ಮಹಿಳೆಯರಿಗೆ ಹಣ ನೀಡುವ ಯೋಜನೆ ಒಂದೇ ತಿಂಗಳಿಗೆ ಕೊನೆಗೊಂಡಿದೆ’ ಎಂದು ಅವರು ಟೀಕಿಸಿದರು.

ಅಂತಿಮ ಹಂತದ ಸಿದ್ಧತೆ: ಶಾಮಿಯಾನ, ವೇದಿಕೆ ನಿರ್ಮಾಣ ಸೇರಿ ಇತರ ಕಾರ್ಯಗಳು ಅಂತಿಮ ಹಂತಕ್ಕೆ ತಲುಪಿವೆ. ಸಚಿವರಾದ ಕೃಷ್ಣ ಬೈರೇಗೌಡ, ಜಮೀರ್ ಅಹಮದ್ ಖಾನ್, ಶಾಸಕ ಎಚ್.ಆರ್.ಗವಿಯಪ್ಪ, ಕೆಎಂಎಫ್ ಅಧ್ಯಕ್ಷ ಭೀಮಾ ನಾಯ್ಕ್ ಮತ್ತು ಅಧಿಕಾರಿಗಳು ಭಾನುವಾರದ ಸಿದ್ಧತೆ ಪರಿಶೀಲಿಸಿದರು.

ಸಮರ್ಪಣಾ ಸಂಕಲ್ಪ ಸಮಾವೇಶದ ಸಿದ್ಧತೆಯನ್ನು ಸಚಿವರಾದ ಜಮೀರ್ ಅಹಮದ್ ಖಾನ್, ಕೃಷ್ಣ ಬೈರೇಗೌಡ, ಶಾಸಕ ಎಚ್.ಆರ್.ಗವಿಯಪ್ಪ, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೊಸಪೇಟೆಯಲ್ಲಿ ಭಾನುವಾರ ಪರಿಶೀಲಿಸಿದರು

ಪ್ರಜಾವಾಣಿ ಚಿತ್ರ

> ಕೇಂದ್ರವು, ರಾಜ್ಯದ ಪಾಲಿನ ತೆರಿಗೆ ಬಾಕಿ ಉಳಿಸಿಕೊಂಡು ಸತಾಯಿಸುತ್ತಿದೆ. ಅದಕ್ಕೆ ರಾಜ್ಯದಲ್ಲಿ ಬೆಲೆ ಏರಿಕೆ ಆಗಿದೆ ಎಂಬುದನ್ನು ಜನ ಅರ್ಥ ಮಾಡಿಕೊಳ್ಳಬೇಕು
>
> **ಕಶ್ಯಪ್ ನಂದನ್**
> ವಕ್ತಾರ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ

> ‘ಆಪರೇಷನ್ ಸಿಂಧೂರ’ ಬಗ್ಗೆ ಶಾಸಕ ಕೊತ್ತೂರು ಮಂಜುನಾಥ್ ನೀಡಿದ ಹೇಳಿಕೆ ವೈಯಕ್ತಿಕ. ಸೈನಿಕರ ಬಗ್ಗೆ ಎಲ್ಲರೂ ವಿಶ್ವಾಸ ಇಡಬೇಕು
>
> **ಸತೀಶ ಜಾರಕಿಹೊಳಿ**
> ಸಚಿವ

ಕಾಂಗ್ರೆಸ್ ಪ್ರತಿಪಾದನೆ

- 148ರಲ್ಲಿ 141 ಭರವಸೆಯನ್ನೂ ಈಡೇರಿಸಿದ ತೃಪ್ತಿ
- ಬಡವರ ಬದುಕನ್ನು ಹಸನುಗೊಳಿಸಿದ ಸಾಧನೆ
- ಮಾಡಿದ ಕೆಲಸವನ್ನು ಲಕ್ಷಾಂತರ ಜನರ ಮುಂದೆ ಹೇಳುವ ಸಂಭ್ರಮ

‘ಗ್ಯಾರಂಟಿ ಹಣ ನೀರಾವರಿಗೆ ಬಳಸಬೇಕಿತ್ತು’

ಹುಬ್ಬಳ್ಳಿ: ‘ರಾಜ್ಯ ಸರ್ಕಾರವು ಗ್ಯಾರಂಟಿ ಯೋಜನೆಗಳಿಗಾಗಿ ₹56 ಸಾವಿರ ಕೋಟಿ ವ್ಯಯ ಮಾಡುವ ಬದಲು ಕೃಷ್ಣಾ ಮೇಲ್ದಂಡೆ ಸೇರಿ ಇತರ ನೀರಾವರಿ ಯೋಜನೆಗಳಿಗೆ ಬಳಸಬೇಕಿತ್ತು. ರೈತರಿಗೆ ಉಪಯುಕ್ತವಾಗುತ್ತಿತ್ತು’ ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಹೇಳಿದರು.

ನಗರದಲ್ಲಿ ಭಾನುವಾರ ನಡೆದ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಮಹಿಳೆಯರಿಗೆ ಗೃಹಲಕ್ಷ್ಮಿ ಯೋಜನೆಯಡಿ ₹2 ಸಾವಿರ ನೀಡುತ್ತಿದ್ದೇವೆ ಎಂದು ಸರ್ಕಾರ ಹೇಳುತ್ತದೆ. ಆದರೆ, ಅಷ್ಟು ಹಣ ಕೊಟ್ಟರೆ ಎಲ್ಲವೂ, ಎಲ್ಲರೂ ಅಭಿವೃದ್ಧಿ ಆಗುವುದಿಲ್ಲ’ ಎಂದರು.

‘ವೃದ್ಧಾಪ್ಯ ವೇತನಕ್ಕೆ ನಿಯಮಗಳಿವೆ. ಈ ಸರ್ಕಾರದಲ್ಲಿ ನಿರ್ದಿಷ್ಟ ಮಾನದಂಡಗಳಿಲ್ಲ. ಸರ್ಕಾರದ ಮುಖ್ಯಕಾರ್ಯದರ್ಶಿ ಸಹ ಗೃಹಲಕ್ಷ್ಮಿ ಯೋಜನೆಯಡಿ ₹2 ಸಾವಿರ ಪಡೆಯಬಹುದು. ಇದು ತೆರಿಗೆದಾರರ ಹಣ. ಇದನ್ನು ಧೈರ್ಯವಾಗಿ ಕೇಳುವ ನೈತಿಕತೆ ಯಾವ ಸಚಿವರಿಗೂ ಇಲ್ಲ. ಇದು ಜನರ ಸರ್ಕಾರವಲ್ಲ. ಜನವಿರೋಧಿ ಸರ್ಕಾರ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬಿಜೆಪಿಗೇನು ಸಮಸ್ಯೆ: ಸತೀಶ

ಬೆಳಗಾವಿ: ‘ಎರಡು ವರ್ಷಗಳ ನಮ್ಮ ಸರ್ಕಾರದ ಸಾಧನೆ ಹೇಳುವ ಉದ್ದೇಶವಿದೆಯೇ ಹೊರತು ಬಿಜೆಪಿಯವರ ಸಾಧನೆ ನಾವು ಹೇಳುತ್ತಿಲ್ಲ. ನಮ್ಮ ಸಾಧನೆ ಹೇಳಿದರೆ, ಬಿಜೆಪಿಗೇನು ಸಮಸ್ಯೆ?’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

‘ರೈತರ ಸಮಾಧಿ ಮೇಲೆ ಕಾಂಗ್ರೆಸ್ ಸಾಧನಾ ಸಮಾವೇಶ ನಡೆದಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಆರೋಪಕ್ಕೆ ಭಾನುವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ‘ಬಿಜೆಪಿ ಸರ್ಕಾರದ ಅವಧಿಯಲ್ಲೂ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ನಾವು ಸಾಧನೆ ಹೇಳುತ್ತೇವೆ ಹೊರತು ವೈಫಲ್ಯವಲ್ಲ’ ಎಂದರು.

‘ನಮ್ಮ ಸರ್ಕಾರವು 30 ತಿಂಗಳ ಅಧಿಕಾರವಧಿ ಪೂರೈಸಿದ ಬಳಿಕ ಹಲವು ಶಾಸಕರಿಗೆ ಸಚಿವರಾಗುವ ಒತ್ತಾಸೆ ಇದೆ. ಸಂಪುಟ ವಿಸ್ತರಣೆಯಾದರೆ ಎಲ್ಲರಿಗೂ ಅವಕಾಶ ಸಿಗುತ್ತದೆ. ಅದನ್ನು ಪಕ್ಷದ ಹೈಕಮಾಂಡ್ ನಿರ್ಧರಿಸುತ್ತದೆ’ ಎಂದರು.

‘ನಾವು ಅಧಿಕಾರಕ್ಕೆ ಬಂದ ದಿನದಿಂದ ಗ್ಯಾರಂಟಿ ಯೋಜನೆ ಬಂದ್ ಆಗುತ್ತವೆ ಎಂದು ಬಿಜೆಪಿಯವರು ಹೇಳುತ್ತಿದ್ದಾರೆ. ಆದರೆ, ಎರಡು ವರ್ಷಗಳಿಂದ ಅವು ಜಾರಿಯಲ್ಲಿವೆ. ಮುಂದಿನ ಮೂರು ವರ್ಷವೂ ಯಥಾಸ್ಥಿತಿ ಇರುತ್ತವೆ’ ಎಂದರು.

‘ಕಾಂಗ್ರೆಸ್ ಕಚೇರಿ ಪಾಕ್‌ನ ರಾಯಭಾರಿ’

ಗದಗ: ‘ಪ್ರಪಂಚದ ಎಲ್ಲ ರಾಷ್ಟ್ರಗಳಿಗೂ ನಮ್ಮ ದೇಶದಲ್ಲಿ ತಲಾ ಒಂದು ರಾಯಭಾರ ಕಚೇರಿ ಇದೆ. ಪಾಕಿಸ್ತಾನಕ್ಕೆ ಮಾತ್ರ ಎರಡು ಇವೆ. ಒಂದು ಅಧಿಕೃತ ಆಗಿದ್ದರೆ, ಇನ್ನೊಂದು ಕಾಂಗ್ರೆಸ್ ಪಕ್ಷದ ಕೇಂದ್ರ ಕಚೇರಿ ಅನಧಿಕೃತ ರಾಯಭಾರ ಕಚೇರಿಯಾಗಿದೆ’ ಎಂದು ನರಗುಂದ ಶಾಸಕ ಸಿ.ಸಿ.ಪಾಟೀಲ ಆರೋಪಿಸಿದರು.

‘ನಮ್ಮ ಸೈನಿಕರು ನಡೆಸಿದ ದಾಳಿಯಿಂದ ಹಾನಿ ಆಗಿರುವ ಬಗ್ಗೆ ಸ್ವತಃ ಪಾಕಿಸ್ತಾನದ ಪ್ರಧಾನಿಯೇ ಹೇಳಿದ್ದಾರೆ. ಭಾರತೀಯ ಸೈನ್ಯದ ಅಧಿಕಾರಿಗಳು ಎಲ್ಲವನ್ನೂ ವಿವರಿಸಿ, ದಾಳಿಯ ಚಿತ್ರಗಳನ್ನೂ ಬಿಡುಗಡೆ ಮಾಡಿದ್ದಾರೆ. ಆದರೂ ಕಾಂಗ್ರೆಸ್‌ನವರಿಗೆ ಇನ್ನೂ ಖಚಿತವಾಗಿಲ್ಲ’ ಎಂದು ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಹರಿಹಾಯ್ದರು.

‘ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ, ಸಚಿವರಾದ ಕೃಷ್ಣಬೈರೇಗೌಡ, ದಿನೇಶ್ ಗುಂಡೂರಾವ್, ಸಂತೋಷ್ ಲಾಡ್ ಒಂದೊಂದು ರೀತಿ ಹೇಳಿಕೆ ನೀಡುತ್ತಾರೆ. ಶಾಸಕ ಕೊತ್ತೂರು ಮಂಜುನಾಥ್ ಮತ್ತೊಂದು ಹೆಜ್ಜೆ ಮುಂದೆ ಹೋಗಿ, ಸಾಕ್ಷಿ ಕೇಳುತ್ತಾರೆ. ಇವೆಲ್ಲವೂ ಗಮನಿಸಿದರೆ, ಕಾಂಗ್ರೆಸ್‌ನವರ ದೇಶಪ್ರೇಮದ ಬಗ್ಗೆ ಪ್ರಶ್ನೆ ಮೂಡುತ್ತದೆ’ ಎಂದು ಅವರು ಹೇಳಿದರು.

‘ರಾಜ್ಯದಲ್ಲಿ ಬೇಡ ಜಂಗಮರಿಲ್ಲ’

ಚಿತ್ರದುರ್ಗ: ‘ರಾಜ್ಯದ ಯಾವ ಭಾಗದಲ್ಲೂ ಬೇಡ ಜಂಗಮರು ಇಲ್ಲ. ಕೆಲವೆಡೆ ಮಾತ್ರ ಬುಡ್ಗ ಜಂಗಮರಿದ್ದಾರೆ. ಆದರೆ, ನಮ್ಮೆಲ್ಲರ ಪಾಲಿಗೆ ಗುರು ಸ್ಥಾನದಲ್ಲಿರುವ ವೀರಶೈವ ಜಂಗಮರು, ಜಾತಿ ಸಮೀಕ್ಷೆಯಲ್ಲಿ ಬೇಡ ಜಂಗಮರೆಂದು ಸುಳ್ಳು ಮಾಹಿತಿ ದಾಖಲಿಸುತ್ತಿದ್ದಾರೆ’ ಎಂದು ಕೆಪಿಸಿಸಿ ಉಪಾಧ್ಯಕ್ಷ ಎಚ್.ಆಂಜನೇಯ ದೂರಿದರು.

‘ಆಂಧ್ರಪ್ರದೇಶದಿಂದ ರಾಜ್ಯಕ್ಕೆ ವಲಸೆ ಬಂದಿದ್ದ ಬೇಡ ಜಂಗಮರ ಭಾಷೆ ತೆಲುಗು. ಸತ್ತ ಹಂದಿ-ದನದ ಮಾಂಸ ಅವರ ಆಹಾರ. ಅವರು ಹೊಟ್ಟೆ ತುಂಬ ಮದ್ಯ ಸೇವಿಸುವ ಜನ. ಮಾದಿಗರ ಬಳಿ ಬೇಡಿಕೊಂಡು ಬದುಕು ನಡೆಸುತ್ತಿದ್ದ ವರ್ಗ. ಈ ಜಾತಿ ಜನರು ರಾಜ್ಯದಲ್ಲಿ ಈಗ ಇಲ್ಲ’ ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ಒಳಮೀಸಲಾತಿ ಕಲ್ಪಿಸುವ ಉದ್ದೇಶದಿಂದ ನಡೆದಿರುವ ಸಮೀಕ್ಷೆಯಲ್ಲಿ ಬಹಳಷ್ಟು ಮಂದಿ ತಾವು ಬೇಡ ಜಂಗಮರು ಎಂದು ಬರೆಸುತ್ತಿರುವುದು ಗಮನಕ್ಕೆ ಬಂದಿದೆ. ಬೇಡ ಜಂಗಮ ಜಾತಿ ಪ್ರಮಾಣ ಪತ್ರ ವಿತರಿಸಿರುವ ತಹಶೀಲ್ದಾರ್‌ಗಳನ್ನು ಜೈಲಿಗೆ ಹಾಕಬೇಕು’ ಎಂದು ಆಗ್ರಹಿಸಿದರು.

ಅಪಾಯಕಾರಿ ಅಬಕಾರಿ ನೀತಿ: ಅಶೋಕ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯ ಉತ್ಪಾದನೆ, ಬಾಟ್ಲಿಂಗ್, ಮಾರಾಟ ಮಳಿಗೆಗಳು ಸೇರಿ ಎಲ್ಲದರ ಮೇಲಿನ ಶುಲ್ಕಗಳನ್ನು ಶೇ100ರಷ್ಟು ಹೆಚ್ಚಿಸಲು ಸರ್ಕಾರ ಮುಂದಾಗಿದೆ. ಇದರಿಂದ ಅಬಕಾರಿ ಆದಾಯದ ಮೂಲಕ್ಕೇ ಕೊಡಲಿ ಪೆಟ್ಟು ಬೀಳಲಿದೆ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್. ಅಶೋಕ ಹೇಳಿದ್ದಾರೆ.

ಶುಲ್ಕಗಳ ಹೆಚ್ಚಳಕ್ಕೆ ಸಂಬಂಧಿಸಿದಂತೆ ಅಬಕಾರಿ ಕಾನೂನುಗಳಿಗೆ ತಿದ್ದುಪಡಿ ಮಾಡಿ ಕರಡು ನಿಯಮಗಳ ಅಧಿಸೂಚನೆ ಪ್ರಕಟಿಸಿದ್ದು, ಜುಲೈ 1ರಿಂದ ಪರಿಷ್ಕೃತ ದರ ಜಾರಿಗೊಳ್ಳಲಿದೆ. ಇದು ಅಪಾಯಕಾರಿ ಅಬಕಾರಿ ನೀತಿ ಎಂದು ಅವರು ಟೀಕಿಸಿದ್ದಾರೆ.

ದರ ಮತ್ತು ಸನ್ನದು ಶುಲ್ಕ ಏರಿಕೆಗೂ ಒಂದು ಮಾನದಂಡ ಇರುತ್ತದೆ. ಆದರೆ, ಒಂದೇ ವರ್ಷದಲ್ಲಿ ಮದ್ಯ ಮಾರಾಟ ಮತ್ತು ಸನ್ನದು ಶುಲ್ಕ ಅಡ್ಡಾದಿಡ್ಡಿ ಹೆಚ್ಚಿಸುತ್ತಿರುವುದರಿಂದ ಉದ್ಯಮದ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ ಎಂದು ಅವರು ಪ್ರಕಟಣೆಯಲ್ಲಿ ಎಚ್ಚರಿಸಿದ್ದಾರೆ.

ಬಜೆಟ್‌ನಲ್ಲಿ ಯಾವುದೇ ತೆರಿಗೆ ಹಾಕಿಲ್ಲ ಎಂದು ಬೆನ್ನು ತಟ್ಟಿಕೊಂಡು ನಂತರ ಮದ್ಯದ ದರಗಳನ್ನು ಯದ್ವಾತದ್ವಾ ಹೆಚ್ಚಿಸಿದ್ದಾರೆ. ಅದರಲ್ಲೂ ಬಿಯರ್ ದರವನ್ನು ವರ್ಷದಲ್ಲಿ ಎರಡು– ಮೂರು ಸಲ ಹೆಚ್ಚಿಸಲಾಗಿದೆ. ಮದ್ಯ ಪ್ರಿಯರು ಪ್ರತಿಭಟಿಸುವುದಿಲ್ಲ ಎಂಬ ಕಾರಣಕ್ಕೆ ಇಂತಹ ಕ್ರಮ ಅನುಸರಿಸುವುದು ಒಳ್ಳೆಯದಲ್ಲ ಎಂದು ಹೇಳಿದ್ದಾರೆ.

ಸರಿಯಾದ ಆರ್ಥಿಕ ಶಿಸ್ತು ಮತ್ತು ಸಿದ್ಧತೆಗಳಿಲ್ಲದೆ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಲಾಯಿತು. ಇದರಿಂದ ಅಭಿವೃದ್ಧಿ ಸ್ಥಗಿತಗೊಂಡಿದೆ. ಬೊಕ್ಕಸ ಬರಿದಾಗಿದೆ. ಇದನ್ನು ಸರಿಪಡಿಸಿಕೊಳ್ಳಲು ಹೆಣಗಾಡುತ್ತಿರುವ ಸರ್ಕಾರ, ಎಲ್ಲ ವಸ್ತುಗಳ ದರ ಹೆಚ್ಚಿಸಿದೆ. ಆದರೂ ಪರಿಸ್ಥಿತಿ ಸುಧಾರಿಸುತ್ತಿಲ್ಲ. ಹೀಗಾಗಿ ದರ ಮತ್ತು ಶುಲ್ಕ ಹೆಚ್ಚಳದಂತಹ ವಾಮಮಾರ್ಗಗಳ ಮೂಲಕ ಸರ್ಕಾರವು ಉದ್ಯಮವನ್ನು ಶೋಷಿಸುತ್ತಿದೆ ಎಂದಿದ್ದಾರೆ.

ಅಬಕಾರಿ ಇಲಾಖೆಗೆ ₹40 ಸಾವಿರ ಕೋಟಿ ಆದಾಯ ಸಂಗ್ರಹದ ಗುರಿ ನಿಗದಿ ಮಾಡಲಾಗಿದೆ. ಈ ಗುರಿ ತಲುಪಲು ಅಧಿಕಾರಿಗಳು ಎಲ್ಲ ಅವಕಾಶಗಳನ್ನು ಬಳಕೆ ಮಾಡುತ್ತಿದ್ದಾರೆ. ಆ ಮೂಲಕ ಉದ್ಯಮವನ್ನು ಸಂಕಷ್ಟಕ್ಕೆ ದೂಡಲಾಗುತ್ತಿದೆ ಎಂದು ಅವರು ಟೀಕಿಸಿದ್ದಾರೆ.

ಉದ್ಯಮದ ಹಿತದೃಷ್ಟಿಯಿಂದ ಈಗಲೂ ಕಾಲ ಮಿಂಚಿಲ್ಲ. ಅವೈಜ್ಞಾನಿಕ ಕ್ರಮಗಳನ್ನು ಬಿಟ್ಟು ಉದ್ಯಮ, ಮಾರಾಟಗಾರರು ಮತ್ತು ಗ್ರಾಹಕರ ಹಿತದೃಷ್ಟಿಯಿಂದ ನಿರ್ಧಾರ ಕೈಗೊಳ್ಳಬೇಕು. ಸನ್ನದು ಶುಲ್ಕ ಪರಿಷ್ಕರಣೆಯನ್ನು ಮರು ಪರಿಶೀಲಿಸಬೇಕು ಎಂದು ಅಶೋಕ ಆಗ್ರಹಿಸಿದ್ದಾರೆ.

‘ಸತ್ಯ ಹೇಳಲು ಕವಿ ಹಿಂಜರಿಯಬಾರದು’

ಪ್ರಜಾವಾಣಿ ವಾರ್ತೆ

ಸಿಂಧನೂರು (ರಾಯಚೂರು ಜಿಲ್ಲೆ): ‘ಕವಿ ತನ್ನ ಸುತ್ತಲಿನ ಪರಿಸರ, ಸಮುದಾಯದ ಸಂಕಟವನ್ನು ನಿಷ್ಠುರವಾಗಿ ಹೇಳಬೇಕು. ಸತ್ಯವನ್ನು ಹೇಳಲು ಹೆದರುವ ಕವಿ ಸ್ವಾಭಿಮಾನಿ ಸಮಾಜ ನಿರ್ಮಿಸಲಾರ’ ಎಂದು ಪಶ್ಚಿಮ ಬಂಗಾಳದ ಡಾರ್ಜಿಲಿಂಗ್‌ನ ಕವಿ ಮನೋಜ್ ಬೋಗಾಟಿ ಅಭಿಪ್ರಾಯಪಟ್ಟರು.

ಸ್ಥಳೀಯ ಸತ್ಯಗಾರ್ಡನ್‌ನಲ್ಲಿ ‘ಅಸಮಾನ ಭಾರತ ಸಮಾನತೆಗಾಗಿ ಸಂಘರ್ಷ ಅಂದು–ಇಂದು’ ಘೋಷವಾಕ್ಯದಡಿ ಆಯೋಜಿಸಿರುವ 11ನೇ ಮೇ ಸಾಹಿತ್ಯ ಮೇಳದ ಎರಡನೇ ದಿನವಾದ ಭಾನುವಾರ ನಡೆದ ಕವಿಗೋಷ್ಠಿಯಲ್ಲಿ ಅವರು ಆಶಯ ಭಾಷಣ ಮಾಡಿದರು.

‘ವಾಸ್ತವಿಕತೆಯನ್ನು ಬಚ್ಚಿಟ್ಟು ಕಲ್ಪನಾ ಲೋಕವನ್ನು ಸೃಷ್ಟಿಸುವ ಅಂಜುಬುರಕ ಕವಿಯಾದರೆ ಆತನ ಕವಿತೆಗಳು ಸಹ ಓದುಗರಿಗೆ ಪೊಳ್ಳು ಎಂದು ಗೊತ್ತಾಗುತ್ತದೆ. ಕೇವಲ ಮನರಂಜನೆಗಾಗಿ ಸೃಷ್ಟಿಯಾಗುವ ಕಾವ್ಯದಿಂದ ಜನರಿಗೆ ಯಾವುದೇ ಪ್ರಯೋಜನ ಆಗುವುದಿಲ್ಲ. ಅಂಥ ಕವಿತೆಗಳನ್ನು ಪ್ರಜ್ಞಾವಂತ ಓದುಗರು ಕಸದ ಬುಟ್ಟಿಗೆ ಹಾಕಬಹುದು ಎನ್ನುವ ಎಚ್ಚರಿಕೆ ಕವಿಗೆ ಇರಬೇಕು’ ಎಂದು ಹೇಳಿದರು.

‘ಅನ್ಯ ಭಾಷೆ ಹೇರಿಕೆಯಿಂದ ಎಲ್ಲ ಕ್ಷೇತ್ರಗಳಲ್ಲೂ ಬುಡಕಟ್ಟು ಸಮುದಾಯಗಳ ಅಸ್ಮಿತೆ ಕಣ್ಮರೆಯಾಗಿದೆ. ಇಂತಹ ಹಲವು ನೋವುಗಳನ್ನು ಅನುಭವಿಸುವ ಜನರ ಸಂಕಟಗಳನ್ನೇ ಕವಿತೆಯಾಗಿ ಅಭಿವ್ಯಕ್ತಿ ಮಾಡಿದ ಕಾರಣಕ್ಕಾಗಿ ನನ್ನ ಮೇಲೆ 17 ಪ್ರಕರಣಗಳು ದಾಖಲಾಗಿವೆ. ಆದಾಗ್ಯೂ ನಾನು ಭಯ ಪಡುವುದಿಲ್ಲ. ನನ್ನೊಂದಿಗೆ ಜೀವಪರ, ಮನುಷ್ಯಪರ ಸಂಗಾತಿಗಳು ಇದ್ದಾರೆ’ ಎಂದು ನುಡಿದರು.

ನ್ಯಾಯಮೂರ್ತಿ ಎಸ್.ಆರ್.ನಾಯಕ್ ನಿಧನ

ಬೆಂಗಳೂರು: ನಿವೃತ್ತ ನ್ಯಾಯಮೂರ್ತಿ ಎಸ್.ಆರ್.ನಾಯಕ್ (80) ಅವರು ಭಾನುವಾರ ನಗರದಲ್ಲಿ ನಿಧನರಾದರು.

ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ನಾಯಕ್ ಅವರು ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು. ಮೃತರಿಗೆ ಪತ್ನಿ ಶಾಲಿನಿ ಎಸ್.ನಾಯಕ್, ಪುತ್ರ ಡಾ.ಎನ್.ಎಸ್.ರಾಹುಲ್, ಪುತ್ರಿ ನಿಶಾ ಗಾಂವ್ಕರ್ ಇದ್ದಾರೆ.

ಮೃತರು ಕರ್ನಾಟಕ ಹೈಕೋರ್ಟ್ ಹಂಗಾಮಿ ಮುಖ್ಯ ನ್ಯಾಯಮೂರ್ತಿಯಾಗಿ, ಛತ್ತೀಸಗಡ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ, ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾಗಿ, ಕಾನೂನು ಆಯೋಗದ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸಿದ್ದರು.

‘ಅಂತ್ಯಕ್ರಿಯೆ ಸೋಮವಾರ (ಮೇ 19) ಸಂಜೆ 4 ಗಂಟೆಗೆ ಹೆಬ್ಬಾಳ ಚಿತಾಗಾರದಲ್ಲಿ ನೆರವೇರಲಿದೆ. ಆರ್‌ಎಂವಿ ಎರಡನೇ ಹಂತದ ಡಾಲರ್ಸ್ ಕಾಲೋನಿಯ ನಿವಾಸದಲ್ಲಿ ಮಧ್ಯಾಹ್ನ 1 ಗಂಟೆಯವರೆಗೂ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ’ ಎಂದು ಪುತ್ರ ಡಾ.ರಾಹುಲ್ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ. ಕುಟುಂಬದವರ ಸಂಪರ್ಕ ಸಂಖ್ಯೆ: 99028-41803.

ಪರಿಚಯ: ಕುಮಟಾ ತಾಲ್ಲೂಕಿನ ನಾಡಮ್ಯಾಸಕೇರಿ ಗ್ರಾಮದಲ್ಲಿ ಕೃಷಿಕ ಮತ್ತು ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದಲ್ಲಿ 1945ರ ಜನವರಿ 1 ರಂದು ಎಸ್.ಆರ್.ನಾಯಕ್ ಜನಿಸಿದರು.

ಮೈಸೂರು ವಿಶ್ವವಿದ್ಯಾಲಯದಿಂದ ಬಿಎಸ್‌ಸಿ ಪದವಿ, ಬೆಂಗಳೂರು ವಿಶ್ವವಿದ್ಯಾಲಯದಿಂದ ಕಾನೂನು ಮತ್ತು ಕಾನೂನು ವಿಭಾಗದಲ್ಲಿಯೇ ಸ್ನಾತಕೋತ್ತರ ಪದವಿಯನ್ನೂ ಪಡೆದಿದ್ದ ನಾಯಕ್ ಅವರು ತಮ್ಮ ಶೈಕ್ಷಣಿಕ ಜೀವನದಲ್ಲಿ ರ‍್ಯಾಂಕ್ ವಿದ್ಯಾರ್ಥಿಯಾಗಿದ್ದರು. 1974ರಲ್ಲಿ ವಕೀಲರಾಗಿ ರಾಜ್ಯ ವಕೀಲರ ಪರಿಷತ್‌ನಲ್ಲಿ ಸನ್ನದು ನೋಂದಣಿ ಮಾಡಿಸಿದ ಅವರು ಮೊದಲಿಗೆ ಎಂ.ಗೋಪಾಲಕೃಷ್ಣ ಶೆಟ್ಟಿ ನಂತರ ಎಲ್.ಜಿ.ಹಾವನೂರು ಅವರ ಬಳಿ ಕಿರಿಯ ವಕೀಲರಾಗಿ ವೃತ್ತಿ ಪ್ರಾವೀಣ್ಯ ಸಾಧಿಸಿದರು. ಕೆಲವು ಕಾಲ ಬೆಂಗಳೂರಿನ ಬಿಎಂಎಸ್ ಮತ್ತು ಎಸ್‌ಎಲ್‌ಎಸ್‌ಆರ್‌ಸಿ ಹಾವನೂರು ಕಾನೂನು ಕಾಲೇಜುಗಳಲ್ಲಿ ಅರೆಕಾಲಿಕ ಪ್ರಾಧ್ಯಾಪಕರಾಗಿಯೂ ಕಾರ್ಯ ನಿರ್ವಹಿಸಿದ್ದರು.

ಎಸ್‌ ಆರ್‌ ನಾಯಕ್

ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಯಾಗಿ 1994ರ ಫೆಬ್ರುವರಿ 25ರಂದು ನೇಮಕಗೊಂಡ ಅವರು ನಂತರ ಆಂಧ್ರಪ್ರದೇಶ ಹೈಕೋರ್ಟ್‌ಗೆ ವರ್ಗಾವಣೆಗೊಂಡಿದ್ದರು. ಆಂಧ್ರಪ್ರದೇಶ ನ್ಯಾಯಾಂಗ ಅಕಾಡೆಮಿ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದರು. ನಂತರ ಛತ್ತೀಸಗಡ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ನಿವೃತ್ತರಾಗಿದ್ದರು. ಅವರಿಗೆ ‘ನಾಡೋಜ’ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು.

‘ಎಲ್ಲ ವರ್ಗದ ಬಡವರ, ದಲಿತ, ಹಿಂದುಳಿದ ಮತ್ತು ದಮನಿತರ ದನಿಯಾಗಿ ಖ್ಯಾತಿ ಹೊಂದಿದ್ದ ನಾಯಕ್ ಅವರು ಸಿಟಿ ಸಿವಿಲ್ ಕೋರ್ಟ್ ಅಭಿವೃದ್ಧಿಗೆ ಅಪಾರವಾಗಿ ಶ್ರಮಿಸಿದ್ದರು’ ಎಂದು ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ಮಾಜಿ ಅಧ್ಯಕ್ಷ ಎ.ಪಿ.ರಂಗನಾಥ್ ಸ್ಮರಿಸಿದ್ದಾರೆ.

ಸರ್ಕಾರಿ ನೌಕರರ ರಾಜ್ಯಮಟ್ಟದ ಕ್ರೀಡಾಕೂಟಕ್ಕೆ ಚಾಲನೆ ನೀಡಿದ ಸಚಿವ ಮಧು ಬಂಗಾರಪ್ಪ

ಒಪಿಎಸ್ ಜಾರಿ; ಪ್ರಕ್ರಿಯೆ ಆರಂಭಕ್ಕೆ ಮನವಿ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ‘ಪ್ರಣಾಳಿಕೆಯಲ್ಲಿ ಭರವಸೆ ಕೊಟ್ಟಂತೆ ಸರ್ಕಾರಿ ನೌಕರರಿಗೆ ಹಳೆಯ ಪಿಂಚಣಿ ಯೋಜನೆ (ಒಪಿಎಸ್) ಜಾರಿಗೊಳಿಸಲು ರಾಜ್ಯ ಸರ್ಕಾರ ಬದ್ಧವಾಗಿದೆ. ಶೀಘ್ರ ಪ್ರಕ್ರಿಯೆ ಆರಂಭಿಸುವಂತೆ ನೌಕರರ ಪರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸುವೆ’ ಎಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಹೇಳಿದರು.

ಇಲ್ಲಿನ ನೆಹರೂ ಕ್ರೀಡಾಂಗಣದಲ್ಲಿ ಭಾನುವಾರ ಸರ್ಕಾರಿ ನೌಕರರ ರಾಜ್ಯಮಟ್ಟದ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿದರು.

‘ವಿಧಾನಸಭಾ ಚುನಾವಣೆಗೆ ಮುನ್ನ ರೂಪಿಸಿದ್ದ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯಲ್ಲಿ ಹೊಸ ಪಿಂಚಣಿ ವ್ಯವಸ್ಥೆ (ಎನ್‌ಪಿಎಸ್) ಬದಲಿಗೆ ಒಪಿಎಸ್ ಜಾರಿಗೊಳಿಸುವ ಭರವಸೆ ನೀಡಲಾಗಿತ್ತು. ಕಾರ್ಯಕ್ರಮಗಳನ್ನು ಸರ್ಕಾರ ಆದ್ಯತೆಯ ಪ್ರಣಾಳಿಕೆಯಲ್ಲಿ ಘೋಷಿಸಿದ್ದ ಎಲ್ಲ ಮೇರೆಗೆ ಅನುಷ್ಠಾನಗೊಳಿಸುತ್ತಿದೆ. ಪ್ರಣಾಳಿಕೆ ಸಮಿತಿಯ ಉಪಾಧ್ಯಕ್ಷನಾಗಿದ್ದ ನನಗೂ ಒಪಿಎಸ್ ಜಾರಿ ವಿಚಾರದಲ್ಲಿ ಹೊಣೆಗಾರಿಕೆ ಇದೆ’ ಎಂದರು.

‘ರಾಜ್ಯ ಸರ್ಕಾರಿ ನೌಕರರ ಹಿತ ಕಾಯುವ ವಿಚಾರದಲ್ಲಿ ಕಾಂಗ್ರೆಸ್ ಸರ್ಕಾರದ ನಿಲುವು ಪ್ರಶ್ನಾತೀತ. ಆರು ಮತ್ತು ಏಳನೇ ವೇತನ ಆಯೋಗಗಳ ಶಿಫಾರಸುಗಳನ್ನು ಜಾರಿಗೊಳಿಸಿದ ಶ್ರೇಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲ್ಲುತ್ತದೆ’ ಎಂದು ತಿಳಿಸಿದರು.



ಶಿವಮೊಗ್ಗದಲ್ಲಿ ಭಾನುವಾರ ನಡೆದ ಕ್ರೀಡಾಕೂಟವನ್ನು ಸಚಿವ ಮಧು ಬಂಗಾರಪ್ಪ ಉದ್ಘಾಟಿಸಿದರು. (ಎಡದಿಂದ) ಸಿ.ಎಸ್.ಷಡಾಕ್ಷರಿ, ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಚ್.ಎಸ್.ಸುಂದರೇಶ್, ಶಾಸಕರಾದ ಗೋಪಾಲಕೃಷ್ಣ ಬೇಳೂರು, ಬಿ.ಕೆ.ಸಂಗಮೇಶ್ವರ, ವಿಧಾನ ಪರಿಷತ್ ಸದಸ್ಯೆ ಬಲ್ಕಿಸ್ ಬಾನು, ಸಂಸದ ಬಿ.ವೈ.ರಾಘವೇಂದ್ರ, ಶಾಸಕ ಆರಗ ಜ್ಞಾನೇಂದ್ರ, ವಿಧಾನ ಪರಿಷತ್ ಸದಸ್ಯೆ ಭಾರತಿ ಶೆಟ್ಟಿ, ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ರವಿಕುಮಾರ್ ಉಪಸ್ಥಿತರಿದ್ದರು

ಖಾಲಿ ಹುದ್ದೆ ಭರ್ತಿಗೆ ಷಡಾಕ್ಷರಿ ಒತ್ತಾಯ

‘ರಾಜ್ಯದಲ್ಲಿ ಆಡಳಿತ ನಡೆಸುವ ಸರ್ಕಾರಗಳು ಜನಪ್ರಿಯ ಯೋಜನೆಗಳ ಜಾರಿಗೆ ಒತ್ತು ನೀಡುತ್ತಿವೆ. ಆದರೆ, ಅವುಗಳ ಅನುಷ್ಠಾನಕ್ಕೆ ಅಗತ್ಯವಿರುವಷ್ಟು ಸರ್ಕಾರಿ ನೌಕರರ ನೇಮಕಕ್ಕೆ ಮುಂದಾಗುತ್ತಿಲ್ಲ. ಇದರಿಂದ ಕಾರ್ಯಭಾರ ಹೆಚ್ಚಾಗಿ ನೌಕರರು ಒತ್ತಡಕ್ಕೆ ಒಳಗಾಗುತ್ತಿದ್ದಾರೆ. ಅವರ ಆರೋಗ್ಯದ ಮೇಲೂ ಪರಿಣಾಮ ಉಂಟಾಗುತ್ತಿದೆ. ಇದನ್ನು ತಪ್ಪಿಸಲು ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು’ ಎಂದು ಸರ್ಕಾರಿ ನೌಕರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಆಗ್ರಹಿಸಿದರು.

‘ಎನ್‌ಪಿಎಸ್ ಬದಲು ಒಪಿಎಸ್ ಜಾರಿಗೊಳಿಸಿದರೆ 2.5 ಲಕ್ಷ ಸರ್ಕಾರಿ ನೌಕರರಿಗೆ ನೆರವಾಗಲಿದೆ. ಇದರ ಜೊತೆಗೆ 2027ರ ವೇಳೆಗೆ ಕೇಂದ್ರದ ಮಾದರಿಯ ವೇತನ ವ್ಯವಸ್ಥೆಯನ್ನೂ ರಾಜ್ಯದಲ್ಲಿ ಅನುಷ್ಠಾನಗೊಳಿಸಬೇಕು’ ಎಂದು ಕೋರಿದರು.

ಸೋಮವಾರ, ಮೇ 19, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 138 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಹಿಳಾ ಶಿಕ್ಷಣದಲ್ಲಿ ಲಿಂಗ ತಾರತಮ್ಯ

35% ಜಗತ್ತಿನಾದ್ಯಂತ ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಗಣಿತ ವಿಷಯಗಳಲ್ಲಿ ಪದವಿ ಪಡೆದ ಮಹಿಳೆಯರ ಪ್ರಮಾಣ

26% ದತ್ತಾಂಶ ಮತ್ತು ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳೆಯರ ಪ್ರಮಾಣ

ಅಧ್ಯಯನ ಅವಧಿ: 2018-23

- ಮಹಿಳೆಯರ ಶೈಕ್ಷಣಿಕ ವಿಚಾರದಲ್ಲಿ ಕಳೆದ 10 ವರ್ಷಗಳಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ಲಿಂಗ ತಾರತಮ್ಯದ ಸಿದ್ಧಮಾದರಿಗಳ ಕಾರಣದಿಂದಲೇ ಏಳಿಗೆ ಸಾಧ್ಯವಾಗಿಲ್ಲ ಎಂದು ವಿಶ್ಲೇಷಿಸಲಾಗಿದೆ

ಆಧಾರ: ಯುನೆಸ್ಕೊದ ಗ್ಲೋಬಲ್ ಎಜುಕೇಷನ್ ಮೊನಿಟರಿಂಗ್ ತಂಡದ ವಿಶ್ಲೇಷಣೆ

ಆಳ-ಅಗಲ
ಜನಸಂಖ್ಯೆ ಕುಸಿತ ಉತ್ತರ-ದಕ್ಷಿಣ ಅಂತರ
11 ಹೊಸ ಷರತ್ತು ವಿಧಿಸಿದ ಐಎಂಎಫ್ 10
'ಸರ್ಕಾರದ್ದು ಅಗ್ಗದ ರಾಜಕೀಯ ಆಟ' 6

ಹೊಟ್ಟೆನೋವು, ಗ್ಯಾಸ್ ಟ್ರಬಲ್, ಅ್ಯಸಿಡಿಟಿಗೆ ಕೇರಳದ ಆಯುರ್ವೇದ ಔಷಧ 'ಅಮೃತ ಬಿಂದು'

ಹೊಟ್ಟೆನೋವು, ಗ್ಯಾಸ್ ಟ್ರಬಲ್, ಅಸಿಡಿಟಿ, ಅಜೀರ್ಣ, ವಾಂತಿ, ಎದೆ ಉರಿ, ಹುಳಿತೇಗು, ಹಸಿವಿಲ್ಲದಿರುವುದು, ನಿದ್ರಾಹೀನತೆ, ಬೆನ್ನುನೋವು, ಕೆಲಸದಲ್ಲಿ ನಿರಾಸಕ್ತಿ ಎಲ್ಲ ತರಹದ ಉದರ ವ್ಯಾದಿ ಸಮಸ್ಯೆಗಳಿಗೆ ಕೇರಳದ ಶಂಕರ ಫಾರ್ಮಸಿಯವರಿಂದ ತಯಾರಿಸಲ್ಪಟ್ಟ 150 ವರ್ಷಗಳ ಆಯುರ್ವೇದ ಸಂಪ್ರದಾಯಸ್ಥ ಕುಟುಂಬದ ಪರಿಣಾಮಕಾರಿ ದಿವ್ಯ ಔಷಧ ಅಮೃತ ಬಿಂದು. ಅಮೃತ ಬಿಂದುವಿನಿಂದ ಗರಿಷ್ಠ ಪೈಲೋರಿಯನ್ನು ಪರಿಣಾಮಕಾರಿಯಾಗಿ ಹತೋಟಿಗೆ ತರಬಹುದೆಂದು ಸಂಶೋಧನೆಯಿಂದ ಸಾಬೀತಾಗಿದೆ.

ಅಮೃತ ಬಿಂದು ಎಲ್ಲಾ ರೀತಿಯ ಹೊಟ್ಟೆಗೆ ಸಂಬಂಧಿಸಿದ ಸಮಸ್ಯೆಗಳಿಗೆ ಮೊಟ್ಟ ಮೊದಲು ಪ್ರಾಯೋಗಿಕವಾಗಿ ಸಾಬೀತಾಗಿರುವ ಆಯುರ್ವೇದ ಔಷಧ.

'ಅಮೃತಬಿಂದು' ಇದೀಗ ಟ್ಯಾಬ್ಲೆಟ್ ರೂಪದಲ್ಲೂ ಲಭ್ಯ

ಅಮೃತ ಬಿಂದು ಸಿರಪ್

ಎ&ಜೆ ಹೆಲ್ತ್ ಕೇರ್, ಬೆಂಗಳೂರು. Ph : 9243112373 | Also available at : amazon Flipkart

ಸಕ್ಕರೆ ಕಾಯಿಲೆಯಿಂದ ನರಳುತ್ತಿರುವ ಸಮಸ್ತ ಭಾರತೀಯರಿಗೆ ಒಂದು ಸಂತಸದ ಕ್ಷಣ!

ವೈದ್ಯಕಲಾನಿಧಿ ದಿ. ಡಾ.ಕೆ.ಎಸ್.ಗಂಗಾಧರನ್ ಸಂಸ್ಥಾಪಕರು

ಇಂದಿನಿಂದ ನಿಮ್ಮ ಜೀವನ ನಿರಾಳವಾಗಲಿ. 2 ನಿಮಿಷ ನಿಧಾನವಾಗಿ ಒಮ್ಮೆ ಓದಿರಿ

ಸಕ್ಕರೆ ಕಾಯಿಲೆ ನಿಯಂತ್ರಿಸಲು ನೀವು ಸೇವಿಸುತ್ತಿರುವ ಯಾವುದೇ ಇಂಗ್ಲೀಷ್ ಮದ್ದು ಅಥವಾ ಇನ್ಸುಲಿನ್ ಜತೆಗೆ ಆಯುರ್ವೇದವನ್ನು ಬಳಸಿ ಆರೋಗ್ಯದಲ್ಲಿ ಸಕರಾತ್ಮಕ ಪರಿಣಾಮಗಳನ್ನು ಕಾಣಬಹುದು.

ಮಧುಮೇಹ-ಎನ್ ಮಾತ್ರೆಗಳು

ಡಯಾಬಿಟೀಸ್‌ನಲ್ಲಿ ನಿಶ್ಶಕ್ತಿಯಾದ ಪ್ಯಾನ್‌ಕ್ರಿಯಾಸ್ ಜೊತೆಗೆ ನಿಷ್ಕ್ರಿಯವಾಗುವ ಹೃದಯ, ಕಣ್ಣು, ಕಿಡ್ನಿ, ನರಮಂಡಲಗಳನ್ನು ಗಿಡಮೂಲಿಕೆಗಳು ಪುನ:ಶ್ಚೇತನಗೊಳಿಸುತ್ತವೆ.

ಸಕ್ಕರೆ ಕಾಯಿಲೆಯಿಂದಾಗುವ ಅತಿಮೂತ್ರ, ಸುಸ್ತು, ಕಾಲ್ಸೆಳೆತ, ತಲೆಸುತ್ತುವಿಕೆ ಇವುಗಳನ್ನು ತಡೆಗಟ್ಟಬಹುದು ಮತ್ತು ಮಿತವ್ಯಯವಾಗಿರುವುದರಿಂದ ಮದ್ದಿಗಾಗಿ ದುಂದುವೆಚ್ಚವನ್ನು ತಡೆಯಬಹುದು.

ಹೈದರಾಬಾದ್‌ನಲ್ಲಿ ನಡೆದ ದುರಂತ: ಮೃತರೆಲ್ಲ ಒಂದೇ ಕುಟುಂಬದವರು

ಬೆಂಕಿ ಅವಘಡ: 17 ಮಂದಿ ಸಾವು

ಪ್ರಜಾವಾಣಿ ವಾರ್ತೆ/ಪಿಟಿಐ

ಹೈದರಾಬಾದ್: ಶಾರ್ಟ್ ಸರ್ಕೀಟ್ ನಿಂದಾಗಿ ಬೆಳಿಗ್ಗೆ ಸುಮಾರು 6.15ಕ್ಕೆ ಹೊತ್ತಿಕೊಂಡ ಬೆಂಕಿಯು ಒಂದೇ ಕುಟುಂಬದ 17 ಮಂದಿಯನ್ನು ಮಲಗಿದ್ದಲ್ಲಿಯೇ ಬಲಿ ತೆಗೆದುಕೊಂಡಿದೆ. ಐತಿಹಾಸಿಕ ಮಹತ್ವದ ಚಾರ್‌ಮಿನಾರ್‌ಗೆ 200 ಮೀ ದೂರದಲ್ಲಿ ಭಾನುವಾರ ಈ ದುರಂತ ನಡೆದಿದೆ. ಈ ಅಗ್ನಿ ಅವಘಡದಲ್ಲಿ 8 ಮಕ್ಕಳೂ ಮೃತಪಟ್ಟಿದ್ದಾರೆ. ಅವರಲ್ಲಿ ಒಂದೂವರೆ ವರ್ಷದ ಹಸುಳೆಯೂ ಸೇರಿದೆ.

ಮೃತ ಪ್ರಹ್ಲಾದ್ ಅಗರ್ವಾಲ್ ಅವರಿಗೆ ಸೇರಿದ ಕಟ್ಟಡದಲ್ಲಿ ಬೆಂಕಿ ಅವಘಡ ಸಂಭವಿಸಿದೆ. ಈ ಕುಟುಂಬವು ಸುಮಾರು 125 ವರ್ಷಗಳಿಂದ ಇಲ್ಲಿಯೇ ವಾಸಿಸುತ್ತಿತ್ತು. ಪ್ರಹ್ಲಾದ್ ಅವರು ತಲತಲಾಂತರಗಳಿಂದ ಆಭರಣ ವ್ಯಾಪಾರ ಮಾಡುತ್ತಿದ್ದಾರೆ. ನೆಲ ಮಳಿಗೆಯಲ್ಲಿ 'ಕೃಷ್ಣ ಪರ್ಲ್ಸ್' ಆಭರಣ ಅಂಗಡಿ, ಮೇಲೆರಡು ಅಂತಸ್ತಿನಲ್ಲಿ ವಾಸದ ಮನೆಗಳಿದ್ದವು.

ಆಭರಣ ಮಳಿಗೆಯಲ್ಲಿ ಶಾರ್ಟ್ ಸರ್ಕೀಟ್‌ನಿಂದ ಬೆಂಕಿ ಕಾಣಿಸಿಕೊಂಡಿತು. ಇದರಿಂದ ಮಳಿಗೆಯ ಹವಾನಿಯಂತ್ರಿತ ಯಂತ್ರವೊಂದು ಸ್ಫೋಟಗೊಂಡಿತು. ಈ ಬಳಿಕ ಬೆಂಕಿಯು ತೀವ್ರವಾಗಿ ಹಬ್ಬಿದೆ. ಮಳಿಗೆಯ ಮೊದಲ ಮಹಡಿಯಲ್ಲಿ 17 ಮಂದಿ ನಿದ್ದೆಯಲ್ಲಿದ್ದರು. ಎರಡನೇ ಅಂತಸ್ತಿನಲ್ಲಿ 4 ಮಂದಿ ಮಲಗಿದ್ದರು.

ಹೈದರಾಬಾದ್‌ನ ಚಾರ್‌ಮಿನಾರ್ ಬಳಿ ಕಟ್ಟಡವೊಂದರಲ್ಲಿ ಭಾನುವಾರ ಬೆಳಿಗ್ಗೆ ಬೆಂಕಿ ಕಾಣಿಸಿಕೊಂಡಿದ್ದರಿಂದ ರಕ್ಷಣಾ ತಂಡವು ಕಾರ್ಯಾಚರಣೆ ನಡೆಸಿತು —ಪಿಟಿಐ ಚಿತ್ರ

ಬೇಸಿಗೆ ರಜೆಯ ಕಾರಣ ಕುಟುಂಬದ ಹಲವು ಮಂದಿ ಪ್ರಹ್ಲಾದ್ ಅವರ ಮನೆಗೆ ಬಂದಿದ್ದರು.

'ತೀವ್ರ ಬೆಂಕಿ ಹೊತ್ತಿಕೊಂಡಿದ್ದರಿಂದ ದಟ್ಟ ಹೊಗೆಯಿಂದಾಗಿ ಮೊದಲ ಅಂತಸ್ತಿನಲ್ಲಿ ಮಲಗಿದ್ದವರಿಗೆ ಉಸಿರುಗಟ್ಟಿದೆ. ಮೃತರಲ್ಲಿ ಸುಟ್ಟ ಗಾಯಗಳು ಇರಲಿಲ್ಲ. ಅರೆಪ್ರಜ್ಞಾವಸ್ಥೆಯಲ್ಲಿದ್ದ ಹಲವರನ್ನು ತಕ್ಷಣವೇ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ, ಆಸ್ಪತ್ರೆ ತಲುಪುವ ಮೊದಲೇ ಎಲ್ಲರೂ ಮೃತಪಟ್ಟಿದ್ದರು ಎಂದು ವೈದ್ಯರು ಹೇಳಿದರು' ಎಂದು ತೆಲಂಗಾಣ ವಿಪತ್ತು ನಿರ್ವಹಣೆ ಮತ್ತು ಅಗ್ನಿ ಶಾಮಕ ಸೇವೆಗಳ ಮಹಾನಿರ್ದೇಶಕ ವೈ. ನಾಗಿ ರೆಡ್ಡಿ ವಿವರಿಸಿದರು.

ಭಾರಿ ಹೊಗೆ: '6.17ರ ಸುಮಾರಿಗೆ ಅವಘಡ ಕುರಿತು ಅಗ್ನಿ ಶಾಮಕ ಇಲಾಖೆಗೆ ಕರೆ ಬಂದಿತು. ಸಿಬ್ಬಂದಿಯು ಸುಮಾರು 6.20ಕ್ಕೆ ಸ್ಥಳಕ್ಕೆ ಧಾವಿಸಿದರು. ಬೆಂಕಿಯು ಪಕ್ಕದ ಕಟ್ಟಡಗಳಿಗೆ ಹರಡುವುದನ್ನು ತಡೆಯುವುದು ನಮ್ಮ ಮುಂದಿದ್ದ ಸವಾಲಾಗಿತ್ತು. ಎರಡು ತಾಸಿನ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಲಾಗಿದೆ' ಎಂದು ಉಪಮುಖ್ಯಮಂತ್ರಿ ಭತ್ತಿ ವಿಕ್ರಮಾರ್ಕ ಮಲ್ಲು ಹೇಳಿದರು.

11ನೇ ಪುಟ ನೋಡಿ

ಕಟ್ಟಡವನ್ನು ತಲುಪಲು ಕಿರಿದಾದ ಮೆಟ್ಟಿಲು: ರಕ್ಷಿಸಿಕೊಳ್ಳಲಾಗದ ಸ್ಥಿತಿ

'ಮೊದಲ ಮತ್ತು ಎರಡನೇ ಅಂತಸ್ತಿನಲ್ಲಿದ್ದ ವಸತಿ ಕಟ್ಟಡವನ್ನು ತಲುಪಲು ಇರುವ ಮೆಟ್ಟಿಲು ಬಹಳ ಕಿರಿದಾಗಿದೆ. ಇದು ಸುಮಾರು ಒಂದು ಮೀಟರ್‌ನಷ್ಟು ಅಗಲವಾಗಿದೆಯಷ್ಟೆ. ಇಷ್ಟು ಕಿರಿದಾದ ಜಾಗದಲ್ಲಿ ಓಡಿ ಹೋಗಲು ಸಾಧ್ಯವಾಗಲಿಲ್ಲ. ಇಡೀ ಕಟ್ಟಡಕ್ಕೆ ಒಂದೇ ಪ್ರವೇಶ ದ್ವಾರ ಇತ್ತು. ಇದರಲ್ಲಿಯೇ ಕಟ್ಟಡದಿಂದ ಹೊರಬರಬೇಕಿತ್ತು. ಇದು ಎರಡು ಮೀಟರಷ್ಟು ಅಗಲವಿತ್ತು. ಇದು ಒಂದು ರೀತಿ ಓಣಿಯಂತಿತ್ತು' ಎಂದು ನಾಗಿ ರೆಡ್ಡಿ ಮಾಹಿತಿ ನೀಡಿದರು.

ಕಿರಿದಾದ ಮೆಟ್ಟಿಲ ಕಾರಣಕ್ಕೆ ರಕ್ಷಣಾ ಕಾರ್ಯಾಚರಣೆ ಬಹಳ ಕಷ್ಟವಾಯಿತು. ಒಟ್ಟು 12 ಅಗ್ನಿ ಶಾಮಕ ಉಪಕರಣ, 11 ವಾಹನ, ಬೆಂಕಿ ನಂದಿಸುವ ರೋಬೊ, 70 ಸಿಬ್ಬಂದಿ ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿಕೊಂಡಿದ್ದರು. ಹಳೇ ಹೈದರಾಬಾದ್‌ನಲ್ಲಿದ್ದ ಕಟ್ಟಡ ಸ್ವರೂಪಗಳೇ ಕಿರಿದಾಗಿವೆ. ಹೀಗಾಗಿ ರಕ್ಷಣಾ ಕಾರ್ಯಕ್ಕೆ ತೊಡಕಾಯಿತು' ಎಂದು ಹೇಳಿದರು.

ಇಲ್ಲದ ಆಮ್ಲಜನಕ ಮಾಸ್ಕ್

ಆಂಬುಲೆನ್ಸ್ ಒಳಗೆ ಮುಖ್ಯಮಂತ್ರಿ ರೇವಂತ ರೆಡ್ಡಿ ಅವರ ಚಿತ್ರವನ್ನು ಅಂಟಿಸಲಾಗಿದೆ. ಆದರೆ, ರೋಗಿಗಳಿಗೆ ಅಗತ್ಯವಾಗಿ ಬೇಕಿರುವ ಆಮ್ಲಜನಕ ಮಾಸ್ಕ್ ಮಾತ್ರ ಕಾಣೆಯಾಗಿತ್ತು. ಇದು ಇದ್ದಿದ್ದರೆ ಪುಟ್ಟ ಹುಡುಗಿಯೊಬ್ಬಳನ್ನು ಉಳಿಸಿಕೊಳ್ಳಬಹುದಿತ್ತು

ಮೃತರ ಕುಟುಂಬಸ್ಥರು

(ಕಾಂಗ್ರೆಸ್ ಸಂಸದ ಅನಿಲ್ ಕುಮಾರ್ ಯಾದವ್ ಅವರು ಘಟನಾ ಸ್ಥಳಕ್ಕೆ ಬಂದ ವೇಳೆ ಕುಟುಂಬಸ್ಥರು ಆಕ್ರೋಶ ಹೊರಹಾಕಿದರು)

ಕಕ್ಷೆ ಸೇರಲು ಪಿಎಸ್‌ಎಲ್‌ವಿ ವಿಫಲ

111.64 ಸೆಕೆಂಡ್	**110** ಸೆಕೆಂಡ್	**264.34** ಸೆಕೆಂಡ್	**261.8** ಸೆಕೆಂಡ್
ಉಡಾವಣೆಯಾಗಿ ಮೊದಲ ಹಂತ ಪೂರ್ಣಗೊಳ್ಳಲು ಇಸ್ರೊ ನಿಗದಿ ಮಾಡಿದ್ದ ಸಮಯ	ನಿಗದಿತ ಸಮಯಕ್ಕಿಂತ ಮುನ್ನವೇ ಮೊದಲನೇ ಹಂತ ಪೂರ್ಣಗೊಂಡ ಸಮಯ	ಉಡಾವಣೆಯಾಗಿ ಎರಡನೇ ಹಂತ ಪೂರ್ಣಗೊಳ್ಳಲು ಇಸ್ರೊ ನಿಗದಿ ಮಾಡಿದ್ದ ಸಮಯ	ನಿಗದಿತ ಸಮಯಕ್ಕಿಂತ ಮೊದಲೇ ಎರಡನೇ ಹಂತ ಪೂರ್ಣಗೊಂಡ ಸಮಯ

ಶ್ರೀಹರಿಕೋಟಾ (ಪಿಟಿಐ): ಭೂ ಸರ್ವೇಕ್ಷಣೆಯ ಉದ್ದೇಶದಿಂದ ಉಡಾವಣೆ ಮಾಡಲಾಗಿದ್ದ ಪಿಎಸ್‌ಎಲ್‌ವಿ ರಾಕೆಟ್‌ನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡು ಕಕ್ಷೆ ಸೇರುವಲ್ಲಿ ಅದು ಭಾನುವಾರ ವಿಫಲವಾಯಿತು. ಇದು ಇಸ್ರೊದ 101ನೇ ಉಡ್ಡಯನವಾಗಿತ್ತು.

ಪೂರ್ವನಿಗದಿಯಂತೆ ಭಾನುವಾರ ಬೆಳಿಗ್ಗೆ 5.59ಕ್ಕೆ ರಾಕೆಟ್ ಉಡಾವಣೆ ಮಾಡಲಾಯಿತು. 'ಒಟ್ಟು 4 ಹಂತದಲ್ಲಿ ನಡೆಯುವ ಕಾರ್ಯಾಚರಣೆ ಇದಾಗಿತ್ತು. ಎರಡು ಹಂತಗಳವರೆಗೆ ಎಲ್ಲವೂ ಅಂದುಕೊಂಡಂತೆಯೇ ನಡೆಯಿತು. ಆದರೆ, 3ನೇ ಹಂತದಲ್ಲಿ ಕಾರ್ಯಾಚರಣೆ ವಿಫಲವಾಯಿತು' ಎಂದು ಇಸ್ರೊ ಹೇಳಿದೆ.

'ಇನ್ನಷ್ಟು ಮೇಲೆ ಹೋಗಲು ರಾಕೆಟ್‌ನ ಎಂಜಿನ್‌ಗೆ ಬೇಕಾಗಿದ್ದ ಒತ್ತಡ ಸೃಷ್ಟಿಯಾಗಲಿಲ್ಲ. ಎಂಜಿನ್‌ಗೆ ಒತ್ತಡ ಸೃಷ್ಟಿಸಿಕೊಡಬೇಕಿದ್ದ ಇಂಧನ ಟ್ಯಾಂಕ್‌ನಲ್ಲಿಯೂ ಒತ್ತಡ ಸೃಷ್ಟಿಯಾಗಲಿಲ್ಲ. ಆದ್ದರಿಂದ ನೆಲಮಟ್ಟದಿಂದ 450 ಕಿ.ಮೀನಷ್ಟು ಎತ್ತರಕ್ಕೆ ಹಾರಿದ್ದ ರಾಕೆಟ್ ಸಮುದ್ರ ಸೇರಿತು' ಎಂದಿದೆ.

11ನೇ ಪುಟ ನೋಡಿ

ಮೂರನೇ ಬಾರಿಗೆ ವಿಫಲ

ಉಪಗ್ರಹವನ್ನು ಕಕ್ಷೆಗೆ ಸೇರಿಸುವಲ್ಲಿ ನಂಬಿಕಸ್ಥ ರಾಕೆಟ್ ಅಂದರೆ ಅದು ಪಿಎಸ್‌ಎಲ್‌ವಿ. ಆದರೆ, ಭೂ ಸರ್ವೇಕ್ಷಣಾ ಉಪಗ್ರಹವನ್ನು ಕಕ್ಷೆಗೆ ಸೇರಿಸುವಲ್ಲಿ ಪಿಎಸ್‌ಎಲ್‌ವಿ ವಿಫಲವಾಗಿದೆ. ಅಭಿವೃದ್ಧಿಪಡಿಸಿದಾಗಿನಿಂದ ಇಲ್ಲಿಯವರೆಗೆ ಪಿಎಸ್‌ಎಲ್‌ವಿ ಅನ್ನು 63 ಬಾರಿ ಬಳಕೆ ಮಾಡಲಾಗಿದೆ. ಮೂರನೇ ಬಾರಿಗೆ ಈಗ ರಾಕೆಟ್ ವೈಫಲ್ಯ ಕಂಡಿದೆ. 1993 ಮತ್ತು 2017ರಲ್ಲಿಯೂ ಈ ರಾಕೆಟ್ ವಿಫಲವಾಗಿತ್ತು.

'ಕಕ್ಷೆ ಸೇರುವಲ್ಲಿ ಪಿಎಸ್‌ಎಲ್‌ವಿ ರಾಕೆಟ್ ವಿಫಲವಾಗಿದ್ದರ ಕುರಿತು ಅಧ್ಯಯನ ನಡೆಸಲು ಸಮಿತಿ ರಚಿಸಲಾಗುವುದು' ಎಂದು ಇಸ್ರೊ ಅಧ್ಯಕ್ಷ ವಿ. ನಾರಾಯಣನ್ ಹೇಳಿದರು.

ಪಿಎಸ್‌ಎಲ್‌ವಿ ಸುಟ್ಟು ಬೂದಿಯಾಯಿತು —ಪಿಟಿಐ ಚಿತ್ರ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಧರ್ಮಸ್ಥಳ: ಯುವತಿ ನಿಗೂಢ ಸಾವು

ಪ್ರಜಾವಾಣಿ ವಾರ್ತೆ

ಉಜಿರೆ (ದಕ್ಷಿಣ ಕನ್ನಡ): ಧರ್ಮಸ್ಥಳ ಗ್ರಾಮದ ಬೊಳಿಯಾರು ನಿವಾಸಿ, ಪ್ರಸ್ತುತ ಲಾಯಿಲ ಗ್ರಾಮದ ಕಾಶಿಬೆಟ್ಟು ಎಂಬಲ್ಲಿ ವಾಸ್ತವ್ಯ ಇರುವ ಸಿವಿಲ್ ಗುತ್ತಿಗೆದಾರ ಸುರೇಂದ್ರ ಮತ್ತು ಸಿಂಧೂದೇವಿ ದಂಪತಿ ಪುತ್ರಿ ಆಕಾಂಕ್ಷ ಎಸ್. ನಾಯರ್ (22) ಮೇ 17ರಂದು ಪಂಜಾಬ್‌ನಲ್ಲಿ ನಿಗೂಢವಾಗಿ ಮೃತಪಟ್ಟಿದ್ದಾರೆ.

ಪಂಜಾಬ್‌ನ ಎಲ್‌ಪಿಯು ಪಗ್ವಾಡ ಕಾಲೇಜಿನಲ್ಲಿ ಉನ್ನತ ಶಿಕ್ಷಣ ಪಡೆದಿದ್ದ ಅವರು ಆರು ತಿಂಗಳಿನಿಂದ ದೆಹಲಿಯಲ್ಲಿ ಜೆಟ್ ಏರೋಸ್ಪೇಸ್ ಎಂಜಿನಿಯರ್ ಆಗಿ ಉದ್ಯೋಗದಲ್ಲಿದ್ದರು. ಮುಂದೆ ಉದ್ಯೋ ಗ ನಿಮಿತ್ತ ಜಪಾನ್‌ಗೆ ತೆರಳಲು ಸಿದ್ಧತೆ ಮಾಡಿಕೊಂಡಿದ್ದ ಅವರು, ಓದಿದ್ದ ಕಾಲೇಜಿನಿಂದ ಪ್ರಮಾಣಪತ್ರ ಪಡೆಯಲು ಶನಿವಾರ ತೆರಳಿದ್ದರು.

ಮಿತ್ರನ ಜತೆ ಬೈಕ್‌ನಲ್ಲಿ ಕಾಲೇಜಿಗೆ ಹೋಗಿದ್ದ ಅವರು, ಪ್ರಮಾಣಪತ್ರ ಪಡೆದ ಬಳಿಕ ಕುಟುಂಬದ ಸದಸ್ಯರ ಜೊತೆ ಮಾತನಾಡಿದ್ದರು. ಕೆಲವೇ ಕ್ಷಣಗಳ ಬಳಿಕ ಆಕೆ ಕಾಲೇಜಿನ ಮೂರನೇ ಮಹಡಿಯಿಂದ ಕೆಳಗೆ ಬಿದ್ದು ಮೃತಪಟ್ಟಿರುವುದಾಗಿ ಮಾಹಿತಿ ಬಂದಿತ್ತು. ಈ ಸಂಬಂಧ ಪಂಜಾಬ್‌ನ ಜಲಂಧರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ತನಿಖೆ ನಡೆಸಲಾಗುತ್ತಿದೆ.

ಆಕಾಂಕ್ಷ ಎಸ್. ನಾಯರ್

ಆಕೆಯ ಕುಟುಂಬದ ಸದಸ್ಯರೆಲ್ಲರೂ ಶನಿವಾರ ರಾತ್ರಿಯೇ ಪಂಜಾಬ್‌ಗೆ ತೆರಳಿದ್ದಾರೆ. ಸುರೇಂದ್ರ ಮತ್ತು ಸಿಂಧೂದೇವಿ ದಂಪತಿಗೆ ಪುತ್ರಿ ಆಕಾಂಕ್ಷ, ಮತ್ತೊಬ್ಬ ಪುತ್ರ ಇದ್ದು, ಅವರಿಗೆ ಇತ್ತೀಚೆಗೆ ಕೇರಳದಲ್ಲಿ ವಿವಾಹವಾಗಿತ್ತು.

ಶಾಸಕ ಹರೀಶ್ ಪೂಂಜ ಅವರು ಆಕಾಂಕ್ಷ ಕುಟುಂಬದವರನ್ನು ವಿಮಾನ ನಿಲ್ದಾಣದಲ್ಲಿ ಭೇಟಿಯಾಗಿ ಸಾಂತ್ವನ ಹೇಳಿದ್ದಾರೆ. 'ಆಕಾಂಕ್ಷ ಅವರನ್ನು ಕೊಲೆ ಮಾಡಲಾಗಿದ್ದು, ಆಕೆ ಆತ್ಮಹತ್ಯೆ ಮಾಡಿಕೊಳ್ಳಲು ಸಾಧ್ಯವಿಲ್ಲ. ಈ ಬಗ್ಗೆ ತನಿಖೆ ಆಗಬೇಕು' ಎಂದು ಆಕಾಂಕ್ಷ ಅವರ ಪೋಷಕರು ಶಾಸಕರಲ್ಲಿ ಒತ್ತಾಯಿಸಿದ್ದಾರೆ.

ಪ್ಯಾನ್ ಇಲ್ಲದೆ ಆಸ್ತಿ ನೋಂದಣಿ ಆಗಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ₹30 ಲಕ್ಷ ಮತ್ತು ಅದಕ್ಕಿಂತ ಹೆಚ್ಚಿನ ಮೌಲ್ಯದ ಆಸ್ತಿ ಖರೀದಿ ನೋಂದಣಿಯ ವೇಳೆ ಮಾರಾಟಗಾರರು ಮತ್ತು ಖರೀದಿದಾರರು ಪ್ಯಾನ್ ವಿವರ ಸಲ್ಲಿಸುವುದನ್ನು ರಾಜ್ಯ ನೋಂದಣಿ ಮತ್ತು ಮುದ್ರಾಂಕ ಇಲಾಖೆ ಕಡ್ಡಾಯ ಮಾಡಿದೆ. ಪ್ಯಾನ್ ಸಲ್ಲಿಸದೇ ಇದ್ದರೆ ಆಸ್ತಿ ನೋಂದಣಿ ಆಗುವುದಿಲ್ಲ.

ನೋಂದಣಿ ಪರಿವೀಕ್ಷಕ ಮತ್ತು ಮುದ್ರಾಂಕ ಆಯುಕ್ತರು ಇದೇ 16ರಂದು ಎಲ್ಲ ಜಿಲ್ಲಾ ನೋಂದಣಾಧಿಕಾರಿಗಳು ಮತ್ತು ಉಪ ನೋಂದಣಾಧಿಕಾರಿ ಕಚೇರಿಗಳಿಗೆ ಈ ಸಂಬಂಧ ಸುತ್ತೋಲೆ ಹೊರಡಿಸಿದ್ದಾರೆ. '₹30 ಲಕ್ಷ ಮತ್ತು ಅದಕ್ಕಿಂತ ಹೆಚ್ಚಿನ ಮೌಲ್ಯದ ಆಸ್ತಿ ನೋಂದಣಿಗೆ ಸಂಬಂಧಿಸಿದಂತೆ ಮಾರಾಟಗಾರರು ಮತ್ತು ಖರೀದಿದಾರರ ವಿವರಗಳನ್ನು ಆರ್ಥಿಕ ವರ್ಷಾಂತ್ಯಕ್ಕೆ ಆದಾಯ ತೆರಿಗೆ ಇಲಾಖೆಗೆ ಸಲ್ಲಿಸಬೇಕು' ಎಂದು ಸೂಚಿಸಿದ್ದಾರೆ.

'ಆಸ್ತಿ ನೋಂದಣಿ ವೇಳೆ ಸಲ್ಲಿಸ ಬೇಕಿರುವ ದಾಖಲೆಗಳು ಮತ್ತು ಸ್ವಯಂಘೋಷಣಾ ಪತ್ರದ ವಿವರಗಳನ್ನೂ ಸುತ್ತೋಲೆ ಒಳಗೊಂಡಿದೆ. ಆ ಎಲ್ಲ ವಿವರ ಮತ್ತು ಮಾಹಿತಿಗಳನ್ನು ಸಲ್ಲಿಸಿದರಷ್ಟೇ ನೋಂದಣಿ ಪೂರ್ಣಗೊಂಡು, ದಸ್ತಾವೇಜನ್ನು ಹಸ್ತಾಂತರಿಸಬೇಕು. ಇಲ್ಲದೇ ಇದ್ದರೆ ದಸ್ತಾವೇಜನ್ನು ನೀಡಬಾರದು' ಎಂದು ತಿಳಿಸಿದ್ದಾರೆ.

'ಮಾರಾಟಗಾರರು ಮತ್ತು ಖರೀದಿದಾರರು ಈ ಮಾಹಿತಿಗಳನ್ನು ಸಲ್ಲಿಸಲು ಪ್ರತ್ಯೇಕ ನಮೂನೆಯನ್ನು ರೂಪಿಸಿದ್ದು, ಅದರಲ್ಲಿ ಎಲ್ಲ ವಿವರಗಳನ್ನು ತುಂಬಬೇಕು. ನಮೂನೆಗೆ ಸಹಿ ಮಾಡಿ, ಸ್ಕ್ಯಾನ್ ಮಾಡಬೇಕು. ಸ್ಕ್ಯಾನ್ ಮಾಡಲಾದ ಕಡತವನ್ನು ಕಾವೇರಿ-2 ತಂತ್ರಾಂಶಕ್ಕೆ ಅಪ್‌ಲೋಡ್ ಮಾಡಬೇಕು. ಇಡೀ ಆರ್ಥಿಕ ವರ್ಷದಲ್ಲಿ ನೋಂದಣಿಯಾದ ಆಸ್ತಿ, ವಹಿವಾಟು, ಮಾರಾಟ ಮತ್ತು ಖರೀದಿದಾರರ ವಿವರವನ್ನು 61-ಎ ನಮೂನೆಯಲ್ಲಿ ಆದಾಯ ತೆರಿಗೆ ಇಲಾಖೆಗೆ ಕಡ್ಡಾಯವಾಗಿ ಸಲ್ಲಿಸಬೇಕು' ಎಂದು ಸೂಚಿಸಿದ್ದಾರೆ.

11ನೇ ಪುಟ ನೋಡಿ

ಯಾವೆಲ್ಲಾ ವಿವರ...

- ಹೆಸರು, ತಂದೆ–ತಾಯಿಯ ಹೆಸರು
- ಹಣ ವರ್ಗಾವಣೆಯ ವಿವರ
- ಪ್ಯಾನ್ ಸಂಖ್ಯೆ
- ಆಧಾರ್ ಸಂಖ್ಯೆ
- ಪೂರ್ಣ ವಿಳಾಸ
- ಸಂಪರ್ಕ ಸಂಖ್ಯೆ ಮತ್ತು ಪರ್ಯಾಯ ಸಂಪರ್ಕ ಸಂಖ್ಯೆ
- ನಮೂನೆ 60

(ಮಾರಾಟಗಾರರು ಮತ್ತು ಖರೀದಿದಾರ ಇಬ್ಬರಿಗೂ ಅನ್ವಯ)

ಹಣ ರವಾನೆಗೂ ತೆರಿಗೆ ಬರೆ

ನವದೆಹಲಿ (ಪಿಟಿಐ): ಅಮೆರಿಕದ ನಾಗರಿಕರಲ್ಲದವರು ಮಾಡುವ ವಿದೇಶಿ ಹಣ ರವಾನೆ ಮೇಲೆ ಡೊನಾಲ್ಡ್ ಟ್ರಂಪ್ ಆಡಳಿತವು ಶೇ 5ರಷ್ಟು ತೆರಿಗೆ ವಿಧಿಸಲು ಮುಂದಾಗಿದೆ. ಇದು ದೇಶದಲ್ಲಿರುವ ಅನಿವಾಸಿ ಭಾರತೀಯರ ಕುಟುಂಬಗಳ ಆರ್ಥಿಕ ಸ್ಥಿತಿ ಹಾಗೂ ರೂಪಾಯಿ ಮೌಲ್ಯದ ಮೇಲೂ ಪರಿಣಾಮ ಬೀರಲಿದೆ ಎಂದು ಗ್ಲೋಬಲ್ ಟ್ರೇಡ್ ರಿಸರ್ಚ್ ಇನಿಷಿಯೇಟಿವ್ (ಜಿಟಿಆರ್‌ಐ) ತಿಳಿಸಿದೆ.

ಮೇ 12ರಂದು ಅಮೆರಿಕದ ಜನಪ್ರತಿನಿಧಿ ಸಭೆಯಲ್ಲಿ 'ಒನ್ ಬಿಗ್ ಬ್ಯೂಟಿಪುಲ್ ಬಿಲ್' ಎಂಬ ಶೀರ್ಷಿಕೆ ಹೊಂದಿರುವ ಮಸೂದೆ ಮಂಡಿಸಲಾಗಿದೆ. ಗ್ರೀನ್ ಕಾರ್ಡ್ ಹೊಂದಿದವರು, ಎಚ್‌-1ಬಿ ಅಥವಾ ಎಚ್‌-2ಎ ವೀಸಾ ಅಡಿ ತಾತ್ಕಾಲಿಕವಾಗಿ ಕೆಲಸ ನಿರ್ವಹಿಸುತ್ತಿರುವ ಉದ್ಯೋಗಿಗಳು, ತಮ್ಮ ತಾಯ್ನಾಡುಗಳಿಗೆ ರವಾನಿಸುವ ಹಣಕ್ಕೆ ತೆರಿಗೆ ವಿಧಿಸುವುದು ಈ ಮಸೂದೆಯ ಉದ್ದೇಶವಾಗಿದೆ. ಅಮೆರಿಕದ ಪ್ರಜೆಗಳಿಗೆ ಈ ನಿಯಮ ಅನ್ವಯವಾಗುವುದಿಲ್ಲ.

ಅಮೆರಿಕದಲ್ಲಿ ನೆಲಸಿರುವ ಅನಿವಾಸಿ ಭಾರತೀಯರು 2023–24ರಲ್ಲಿ ₹10.27 ಲಕ್ಷ ಕೋಟಿ ಮೊತ್ತವನ್ನು ಭಾರತಕ್ಕೆ ರವಾನಿಸಿದ್ದಾರೆ. ಅಮೆರಿಕದಲ್ಲಿ ನೆಲಸಿರುವ ವಿವಿಧ ದೇಶದ ಜನರು ಪ್ರತಿ ವರ್ಷ ತಮ್ಮ ತಾಯ್ನಾಡುಗಳಿಗೆ ರವಾನಿಸುವ ಒಟ್ಟು ಮೊತ್ತದ ಪೈಕಿ ಈ ಪಾಲು ಶೇ 28ರಷ್ಟಿದೆ ಎಂದು ಜಿಟಿಆರ್‌ಐ ಹೇಳಿದೆ. 'ಮಸೂದೆಯು ಕಾಯ್ದೆ ರೂಪ ಪಡೆದು ಅನುಷ್ಠಾನಗೊಂಡರೆ ಪ್ರಸ್ತುತ ಭಾರತಕ್ಕೆ ರವಾನೆಯಾಗುತ್ತಿರುವ ಹಣದ ಪೈಕಿ ಶೇ 10ರಿಂದ ಶೇ 15ರಷ್ಟು ಕಡಿಮೆಯಾಗಲಿದೆ. ಭಾರತಕ್ಕೆ ವಾರ್ಷಿಕ ₹1.54 ಲಕ್ಷ ಕೋಟಿ ನಷ್ಟವಾಗಲಿದೆ' ಎಂದು ಜಿಟಿಆರ್‌ಐ ಸಂಸ್ಥಾಪಕ ಅಜಯ್ ಶ್ರೀವಾಸ್ತವ ಹೇಳಿದ್ದಾರೆ.

ರೂಪಾಯಿ ಮೇಲೆ ಪರಿಣಾಮ

ಕಾಯ್ದೆ ಜಾರಿಗೆ ಬಂದರೆ ದೇಶದ ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಪೂರೈಕೆ ಕೂಡ ಕಡಿಮೆಯಾಗಲಿದೆ. ಇದು ರೂಪಾಯಿ ಮೌಲ್ಯದ ಮೇಲೆ ಹೆಚ್ಚಿನ ಪರಿಣಾಮ ಬೀರಲಿದೆ ಎಂದು ಜಿಟಿಆರ್‌ಐ ಹೇಳಿದೆ.

ಸದ್ಯ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೂಪಾಯಿ ಮೌಲ್ಯದ ಬಲವರ್ಧನೆಗೆ ಮಧ್ಯಪ್ರವೇಶಿಸಿದೆ. ಈ ತೆರಿಗೆ ಜಾರಿಗೊಂಡರೆ ಡಾಲರ್ ಎದುರು ರೂಪಾಯಿ ಮೌಲ್ಯವು ಶೇ 1ರಿಂದ ಶೇ 1.5ರಷ್ಟು ಕುಸಿತಗೊಳ್ಳುವ ಸಾಧ್ಯತೆಯಿದೆ ಎಂದು ಹೇಳಿದೆ. ಕೇರಳ, ಉತ್ತರ ಪ್ರದೇಶ, ಬಿಹಾರದ ಲಕ್ಷಾಂತರ ಕುಟುಂಬಗಳ ಶಿಕ್ಷಣ, ಆರೋಗ್ಯ, ವಸತಿ ಸೇರಿ ಅವರ ಒಟ್ಟಾರೆ ಜೀವನ ವೆಚ್ಚವು ಅಮೆರಿಕದಲ್ಲಿ ನೆಲಸಿರುವ ಈ ರಾಜ್ಯಗಳ ಜನರು ಕಳುಹಿಸುವ ಹಣವನ್ನು ಅವಲಂಬಿಸಿದೆ.

CAUTION NOTICE

On instructions of our client, Mr. Rangineni Venkat Rao, S/o R. Malla Rao, aged about 74 years, presently residing in Hyderabad, we do hereby give notice to the general public that the immovable property more fully described in the **SCHEDULE** shown below and hereinafter referred to as "**Property**" is the subject matter of an ongoing dispute involving allegations of fraud, cheating, and non-payment of sale consideration.

Mr. Chethan Kumar and Mr. Praveen Kumar, Managing Partners of M/s Nine Triangle Infrastructure, having address at 1871, 2nd "A" Main, 7th Cross, 8th Main, Judicial Layout, Bengaluru – 560065 are claiming rights to the said Property under a sale deed dated 21 April 2025 registered as document bearing No. DNH-1-00968-2025-26 in the office of the Sub-Registrar, Bangalore Rural (Devanahalli), which is obtained through fraudulent means and pursuant to which our client has been cheated. The transfer effected by way of the mentioned said sale deed is in contravention of law, wherein the full sale consideration has not been paid.

Our client is initiating legal proceedings before the appropriate civil and criminal forums *inter alia* for taking action against the above noted individuals, recovery of the unpaid sale consideration and for declaring the Property as encumbered by way of statutory charge, as envisaged under Section 55(4)(b) of the Transfer of Property Act, 1882 favouring our client.

In light of the above, all members of the public are hereby cautioned:

1. Not to deal with, purchase, lease, mortgage, or otherwise engage in any transaction involving the said Property in any manner whatsoever;
2. Any person or entity dealing with the said Property or part thereof shall do so at their own risk and consequences; and
3. Any transaction made in violation/disregard of this notice may be treated as void and liable to be challenged before competent courts of law and such persons would also be liable for loss and damages caused to our Client.

This notice is being issued in the interest of justice and to safeguard the rights and claims of our client to the said Property.

SCHEDULE

Item No. 1

All that piece and parcel of agricultural land bearing Survey No. 38/2 measuring 7 Acres 2 guntas (inclusive of 7 guntas kharab) situated at Gonur Village, Vijayapura Hobli, Devanahalli Taluk, Bengaluru Rural District and is bounded as follow:

East by : Land belonging to Bachappa's son Krishnappa and others;
West by : Land belonging to R Narayanappa;
North by : Land belonging to Nanjappa; and
South by : Land belonging to M Gopalappa.

Item No. 2

All that piece and parcel of agricultural land bearing Survey No. 46/2 measuring 1 acre situated at Gonur Village, Vijayapura Hobli, Devanahalli Taluk, Bengaluru Rural District and is bounded as follow:

East by : Land belonging to Ramanna;
West by : Remaining property of same survey number;
North by : Land belonging to Venkataramanappa; and
South by : Land belonging to Shivanna.

Item No. 3

All that piece and parcel of agricultural land bearing Survey No. 46/5 measuring 1 acre situated at Gonur Village, Vijayapura Hobli, Devanahalli Taluk, Bengaluru Rural District and is bounded as follow:

East by : Land belonging to A. M. Swetha W/o T. Lokesh;
West by : Remaining property of V. Ramanna;
North by : Land belonging to Venkataramanappa; and
South by : Land belonging to Shivanna.

Item No. 4

All that piece and parcel of agricultural land bearing Survey No. 48/4 measuring 1 acre 29 guntas situated at Gonur Village, Vijayapura Hobli, Devanahalli Taluk, Bengaluru Rural District and is bounded as follow:

East by : Road and property of Manjunath;
West by : Property in Survey No. 48/2;
North by : Property of Bangalore Reddy's; and
South by : Land of G. N. Ramesh in Survey No. 48/3.

Mohammed Shameer
Partner
M/s. Trilegal
Advocate & Solicitors
6th Floor, Marksquare, 61,
St. Marks Road, Bengaluru - 560 001

Place: Bangalore
Date: 19th May 2025

ಸೋಮವಾರದ ಉಷ್ಣಾಂಶ 31° ಗರಿಷ್ಠ 21° ಕನಿಷ್ಠ

ಹವಾಮಾನ ಮುನ್ಸೂಚನೆ
ಮೋಡ ಕವಿದ ವಾತಾವರಣ ಇರಲಿದ್ದು, ಗುಡುಗು, ಮಿಂಚು ಸಹಿತ ಮಳೆ ಆಗಲಿದೆ.

ಹವಾಮಾನ: ಮಂಗಳವಾರ 31° 21° | ಬುಧವಾರ 31° 21° | ಗುರುವಾರ 32° 22°

ಸೂರ್ಯೋದಯ: 5:54 ಸೂರ್ಯಾಸ್ತ: 6:39 ಚಂದ್ರೋದಯ: ರಾ. 11:35 ಚಂದ್ರಾಸ್ತ: ಬೆ. 10:21 ಭಾನುವಾರದ ಹವಾಮಾನ : ಗರಿಷ್ಠ 30° ಕನಿಷ್ಠ 20°

ಪ್ರಜಾವಾಣಿ

ವೈಟ್ ಟಾಪಿಂಗ್ ಕಾಮಗಾರಿಗಾಗಿ ಪರ್ಯಾಯ ಮಾರ್ಗ

ರೆಸಿಡೆನ್ಸಿ ರಸ್ತೆ ಬಂದ್: ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಟ್ ಟಾಪಿಂಗ್ ಕಾಮಗಾರಿಗಾಗಿ ರೆಸಿಡೆನ್ಸಿ ರಸ್ತೆಯಲ್ಲಿ ಆಶೀರ್ವಾದಂ ಜಂಕ್ಷನ್‌ನಿಂದ ಬ್ರಿಗೇಡ್ ರಸ್ತೆಯ ಜಂಕ್ಷನ್‌ವರೆಗೆ ವಾಹನ ಸಂಚಾರ ಬಂದ್ ಮಾಡಿದ್ದು, ದ್ವಿಚಕ್ರ ವಾಹನ ಸವಾರರು ಹಾಗೂ ವಾಹನ ಚಾಲಕರು ಪರದಾಡುತ್ತಿದ್ದಾರೆ.

ರೆಸಿಡೆನ್ಸಿ ರಸ್ತೆಯಲ್ಲಿ ನಡೆಯುತ್ತಿರುವ ವೈಟ್ ಟಾಪಿಂಗ್ ಕಾಮಗಾರಿ

ನಗರದ ಕೇಂದ್ರ ವಲಯದ ರೆಸಿಡೆನ್ಸಿ ರಸ್ತೆಯು ಪ್ರಮುಖ ಮಾರ್ಗವಾಗಿದ್ದು, ಮೇ 31ರವರೆಗೆ ಪರ್ಯಾಯ ಮಾರ್ಗ ಕಲ್ಪಿಸಲಾಗಿದೆ. ಶನಿವಾರ ರಾತ್ರಿ ಎರಡು ತಾಸಿಗೂ ಹೆಚ್ಚು ಕಾಲ ವಾಹನ ರೆಸಿಡೆನ್ಸಿ ರಸ್ತೆ ಮೇಲ್ಸೇತುವೆಯಲ್ಲಿ ಸಾಲುಗಟ್ಟಿ ನಿಂತವು. ಆಂಬುಲೆನ್ಸ್‌ಗಳೂ ದಟ್ಟಣೆಯಲ್ಲಿ ಸಿಲುಕಿದ್ದವು. ಭಾನುವಾರ ಕೂಡ ಇದೇ ಪರಿಸ್ಥಿತಿ ಇತ್ತು. ಬ್ಯಾರಿಕೇಡ್ ಹಾಕಿ ವಾಹನ ಸಂಚಾರಕ್ಕೆ ಪರ್ಯಾಯ ಮಾರ್ಗ ಕಲ್ಪಿಸಿದ್ದು, ವಾಹನ ಸಾಲುಗಟ್ಟಿ ನಿಲ್ಲುತ್ತಿವೆ. ಸೇಂಟ್ ಮಾರ್ಕ್ಸ್ ರಸ್ತೆ, ಮ್ಯೂಸಿಯಂ ರಸ್ತೆ, ಬ್ರಿಗೇಡ್ ರಸ್ತೆಯಲ್ಲಿ ದಟ್ಟಣೆ ಉಂಟಾಗಿದೆ.

ಸಂಚಾರ ಸಲಹೆ: ರಿಚ್ಮಂಡ್ ಜಂಕ್ಷನ್, ರಿಚ್ಮಂಡ್ ಮೇಲ್ಸೇತುವೆ, ಸೇಂಟ್ ಮಾರ್ಕ್ಸ್ ರಸ್ತೆ ಕಡೆಯಿಂದ ರೆಸಿಡೆನ್ಸಿ ರಸ್ತೆಯಲ್ಲಿ ಬಂದು ಎಚ್‌ಎಎಲ್, ಮಾರತ್ತಹಳ್ಳಿ ಕಡೆಗೆ ಸಂಚರಿಸುವ ವಾಹನ ಸವಾರರು, ಆಶೀರ್ವಾದಂ ಜಂಕ್ಷನ್, ಅನಿಲ್ ಕುಂಬ್ಳೆ ಜಂಕ್ಷನ್ ಮೂಲಕ ಮುಂದೆ ಸಾಗಬಹುದು ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

‘ತುಮಕೂರು ಮೆಟ್ರೊ: ಸಂಸದರ ಜತೆ ಚರ್ಚೆ’

ಪ್ರಜಾವಾಣಿ ವಾರ್ತೆ

ತುಮಕೂರು: ಬೆಂಗಳೂರು–ತುಮಕೂರು ಮೆಟ್ರೊ ಯೋಜನೆಗೆ ವಿರೋಧ ವ್ಯಕ್ತಪಡಿಸುತ್ತಿರುವ ಸಂಸದರ ಜತೆಗೆ ಚರ್ಚಿಸಲಾಗುವುದು. ಬೆಂಗಳೂರು ತುಂಬಾ ಬೆಳೆದಿದೆ. ಮತ್ತಷ್ಟು ಬೆಳೆದು ಅಸಹ್ಯಕರ ವ್ಯವಸ್ಥೆ ನಿರ್ಮಾಣ ಆಗುವುದು ಬೇಡ ಎಂದು ಕೇಂದ್ರ ಜಲಶಕ್ತಿ, ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿದರು.

ವಿ.ಸೋಮಣ್ಣ

ನಗರದಲ್ಲಿ ಭಾನುವಾರ ಸುದ್ದಿಗಾರರ ಜತೆ ಮಾತನಾಡಿ, ಸಂಸದರಾದ ಪಿ.ಸಿ. ಮೋಹನ್, ತೇಜಸ್ವಿ ಸೂರ್ಯ ಮೆಟ್ರೊ ಕುರಿತು ಭಾವನೆ ವ್ಯಕ್ತಪಡಿಸಿದ್ದಾರೆ. ರಾಜಧಾನಿಗೆ ಹತ್ತಿರವಿರುವ ತುಮಕೂರು ಜಿಲ್ಲೆಗೆ ಮೆಟ್ರೊ ಯೋಜನೆಯ ಅವಶ್ಯಕತೆಯೂ ಇದೆ. ಎಲ್ಲರೂ ವಾಸ್ತವಾಂಶಕ್ಕೆ ಆದ್ಯತೆ ನೀಡಬೇಕು. ಈ ಬಗ್ಗೆ ಸಂಸದರ ಜತೆಗೆ ಚರ್ಚಿಸಲಾಗುವುದು ಎಂದರು.

ಸೈನೆಡ್ ಕೊಟ್ಟು ಕೊಲೆ: ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೈಕ್ ಮಾರಾಟಕ್ಕಿದೆ ಎಂದು ಫೇಸ್‌ಬುಕ್‌ನಲ್ಲಿ ಜಾಹೀರಾತು ನೀಡಿದ್ದ ಯುವಕನನ್ನು ಗ್ರಾಹಕನ ಸೋಗಿನಲ್ಲಿ ಭೇಟಿ ಮಾಡಿ, ಸಿಹಿ ಎಂದು ಸೈನೆಡ್ ಕೊಟ್ಟು ಕೊಲೆ ಮಾಡಿದ್ದ ಅಪರಾಧಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಜೀವಾವಧಿ ಶಿಕ್ಷೆ ಹಾಗೂ ₹1 ಲಕ್ಷ ದಂಡ ವಿಧಿಸಿ ಆದೇಶಿಸಿದೆ.

ಕಾರ್ತಿಕ್ ದೌಲತ್ ಶಿಕ್ಷೆಗೆ ಒಳಗಾದ ಅಪರಾಧಿ. ಕಾಡುಗೋಡಿ ಪೊಲೀಸ್ ಠಾಣಾ ವ್ಯಾಪ್ತಿಯ ಪ್ರೆಸ್ಟೀಜ್ ಶಾಂತಿನಿಕೇತನ್ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ನಲ್ಲಿ ಸೋಹನ್ ಹಲ್ದಾರ್ ಅವರು ನೆಲಸಿದ್ದರು. ತಮ್ಮ ಕೆಟಿಎಂ ದ್ವಿಚಕ್ರ ವಾಹನ ಮಾರಾಟ ಮಾಡಲು ಫೇಸ್‌ಬುಕ್‌ನಲ್ಲಿ ಜಾಹೀರಾತು ಪ್ರಕಟಿಸಿದ್ದರು.

ಈ ಜಾಹೀರಾತು ಗಮನಿಸಿದ್ದ ಅಪರಾಧಿ, 2016ರ ಆಗಸ್ಟ್‌ನಲ್ಲಿ ಸೋಹನ್ ಅವರನ್ನು ಭೇಟಿ ಮಾಡಿದ್ದ. ಸೋಹನ್ ಹಲ್ದಾರ್ ಅವರ ಬಳಿಯಿದ್ದ ವಸ್ತುಗಳನ್ನು ದೋಚುವ ಉದ್ದೇಶದಿಂದ ಅಪರಾಧಿ ಕಾರ್ತಿಕ್ ದೌಲತ್, ಸಿಲ್ವರ್ ಪೊಟಾಶಿಯಂ ಸೈನೆಡ್ ಖರೀದಿಸಿ 2016ರ ಆಗಸ್ಟ್ 3ರಂದು ಫ್ಲ್ಯಾಟ್‌ಗೆ ಹೋಗಿದ್ದ. ಆ ಸಂದರ್ಭದಲ್ಲಿ ಮಲಗಿದ್ದ ಸೋಹಾನ್‌ಗೆ ಬಾಯಿಗೆ ಸಕ್ಕರೆ ಹಾಕುವುದಾಗಿ ಹೇಳಿ ಸೈನೆಡ್ ಹಾಕಿ ಕೊಲೆ ಮಾಡಿದ್ದ. ಫ್ಲ್ಯಾಟ್‌ನಲ್ಲಿದ್ದ ಮೊಬೈಲ್ ಫೋನ್, ಆಕ್ಸಿಸ್ ಬ್ಯಾಂಕ್ ಸೇರಿ ವಿವಿಧ ಬ್ಯಾಂಕ್‌ಗಳ ಎಟಿಎಂ ಕಾರ್ಡ್, ಪಿನ್ ನಂಬರ್, ಕೆಟಿಎಂ ಬೈಕ್, ಆರ್‌ಸಿ ಕಾರ್ಡ್, ಕೀ, ಹೆಲ್ಮೆಟ್ ಸೇರಿ ಇತರೆ ವಸ್ತುಗಳನ್ನು ಕಳ್ಳತನ ಮಾಡಿಕೊಂಡು ಪರಾರಿ ಆಗಿದ್ದ. ಸೋಹನ್‌ಗೆ ಸೇರಿದ ಎಕ್ಸಿಸ್ ಬ್ಯಾಂಕ್, ಕಾರ್ಪೊರೇಷನ್ ಬ್ಯಾಂಕ್, ಲಕ್ಷ್ಮೀವಿಲಾಸ ಬ್ಯಾಂಕ್ ಎಟಿಎಂ ಕಾರ್ಡ್ ಬಳಸಿ ₹27 ಸಾವಿರ ಡ್ರಾ ಮಾಡಿದ್ದ ಎಂಬುದು ಪೊಲೀಸ್ ತನಿಖೆಯಿಂದ ದೃಢಪಟ್ಟಿತ್ತು.

ಕಾಡುಗೋಡಿ ಪೊಲೀಸ್ ಠಾಣೆಯ ಅಂದಿನ ಇನ್‌ಸ್ಪೆಕ್ಟರ್ ಎಚ್.ಎನ್.ಚಂದ್ರಪ್ಪ ಅವರು ಪ್ರಕರಣದ ತನಿಖೆ ನಡೆಸಿ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಾದ–ಪ್ರತಿವಾದ ಆಲಿಸಿದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಒಂದನೇ ಹೆಚ್ಚುವರಿ ಮತ್ತು ಜಿಲ್ಲಾ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಆರ್.ರವೀಂದ್ರ ಅವರು ಅಪರಾಧಿಗೆ ಜೀವಾವಧಿ ಶಿಕ್ಷೆ ಹಾಗೂ ದಂಡ ವಿಧಿಸಿ ಆದೇಶಿಸಿದ್ದಾರೆ. ಪ್ರಾಸಿಕ್ಯೂಷನ್ ಪರ ಪಬ್ಲಿಕ್ ಪ್ರಾಸಿಕ್ಯೂಟರ್ ಸೂರ್ಯನಾರಾಯಣ ಅವರು ವಾದ ಮಂಡನೆ ಮಾಡಿದ್ದರು.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್‌ಆ್ಯಪ್ ಮಾಡಿ: 9606038256

‘ಗುಂಡಿ ಮುಚ್ಚಿ, ಸುರಕ್ಷತೆಗೆ ಆದ್ಯತೆ ನೀಡಿ’

ಸಿವಿಲ್ ಕೋರ್ಟ್ ಮುಂಭಾಗದ ಡಾ.ಬಿ.ಆರ್. ಅಂಬೇಡ್ಕರ್ ರಸ್ತೆಯ ಗಣಪತಿ ದೇವಸ್ಥಾನ ರಸ್ತೆಯ ಮುಂಭಾಗದ ತಿರುವಿನಲ್ಲಿ ದೊಡ್ಡ ಗುಂಡಿಯಾಗಿದೆ. ಇದರಿಂದ ವಾಹನ ಸಂಚಾರಕ್ಕೆ ತೊಂದರೆ ಆಗುತ್ತಿದೆ. ನಿತ್ಯ ಈ ರಸ್ತೆಯಲ್ಲಿ ನೂರಾರು ವಾಹನಗಳು ಸಂಚರಿಸುತ್ತವೆ. ಇದು ವಿಧಾನಸೌಧ, ವಿಕಾಸಸೌಧ, ಕಬ್ಬನ್ ಉದ್ಯಾನ ಸೇರಿದಂತೆ ಪ್ರಮುಖ ಸ್ಥಳಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಯಾಗಿದೆ. ಇಂತಹ ರಸ್ತೆಯಲ್ಲಿ ವಾಹನ ಚಲಾಯಿಸುವುದು ಸವಾಲಿನ ಕೆಲಸವಾಗಿದ್ದು, ಇದರಿಂದ ಸಂಚಾರ ದಟ್ಟಣೆ ಹಾಗೂ ಅಪಘಾತಗಳು ಸಂಭವಿಸುತ್ತವೆ. ಕೂಡಲೇ ಗುಂಡಿ ಮುಚ್ಚಲು ಕ್ರಮ ಕೈಗೊಳ್ಳಬೇಕು.

ಶಿವಪ್ರಸಾದ್, ವಾಹನ ಚಾಲಕ

‘ರಸ್ತೆ ದುರಸ್ತಿಗೊಳಿಸಿ’



ಮಹದೇವಪುರ ಬಿಬಿಎಂಪಿ ವಲಯದ ಬಾಬುಸಾಪಾಳ್ಯದ ದೊಡ್ಡಯ್ಯ ಬಡಾವಣೆಯಿಂದ ರಾಮಕೃಷ್ಣ ರೆಡ್ಡಿ ಬಡಾವಣೆಗೆ ಸಂಪರ್ಕಿಸುವ ರಸ್ತೆಯಲ್ಲಿ ಕಟ್ಟಡ ತ್ಯಾಜ್ಯ ತಂದು ಸುರಿಯಲಾಗುತ್ತಿದೆ. ಇದರಿಂದ ಸಾರ್ವಜನಿಕರ ಸಂಚಾರಕ್ಕೆ ಅಡಚಣೆಯಾಗಿದೆ. ನಾಗ್ ಪ್ಯಾರಡೈಸ್ ಹಿಂಭಾಗದ ರಸ್ತೆಯೆಲ್ಲ ಕಿತ್ತುಹೋಗಿದ್ದು, ವಾಹನ ಸಂಚಾರಕ್ಕೆ ತೊಂದರೆ ಆಗುತ್ತಿದೆ. ಈ ಬಗ್ಗೆ ಬಿಬಿಎಂಪಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಕೂಡಲೇ ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ಆಕಾಶ್, ಬಾಬುಸಾಪಾಳ್ಯ

‘ರಸ್ತೆ ದುರಸ್ತಿಗೆ ಆಗ್ರಹ’



ಮೆಜೆಸ್ಟಿಕ್‌ಗೆ ಹೊಂದಿಕೊಂಡಿರುವ ಗಾಂಧಿನಗರ ಆರನೇ ಕ್ರಾಸ್‌ನ ರಸ್ತೆಯಲ್ಲಿ ಗುಂಡಿಗಳಾಗಿದ್ದು, ಸಂಪೂರ್ಣವಾಗಿ ಹಾಳಾಗಿದೆ. ಇದರಿಂದ ವಾಹನ ಸಂಚಾರಕ್ಕೆ ಅನನುಕೂಲವಾಗಿದೆ. ಈ ರಸ್ತೆಯಲ್ಲಿ ಗುಂಡಿಗಳು ಬಿದ್ದು ವರ್ಷಗಳೇ ಕಳೆದರೂ ಬಿಬಿಎಂಪಿ ಅಧಿಕಾರಿಗಳು ದುರಸ್ತಿಗೆ ಕ್ರಮ ಕೈಗೊಂಡಿಲ್ಲ. ಇದು ಪ್ರಮುಖ ಮುಖ್ಯರಸ್ತೆಗೆ ಕೂಡು ರಸ್ತೆಯಾಗಿದ್ದು, ಈ ಮಾರ್ಗದಲ್ಲಿ ಜನಸಂಚಾರ ಹೆಚ್ಚಾಗಿರುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ಶಿವಕುಮಾರ್, ಗಾಂಧಿನಗರ

‘ವಿದ್ಯುತ್ ಕಂಬಕ್ಕೆ ವಾಲಿದ ಮರ’

ಜ್ಞಾನಭಾರತಿಯ ವಾರ್ಡ್ ಸಂಖ್ಯೆ 129ರ ಪೂರ್ಣಚಂದ್ರ ಬಡಾವಣೆಯ 13ನೇ ಮುಖ್ಯರಸ್ತೆ, ಕೃಷ್ಣದೇವರಾಯ ರಸ್ತೆಯ ತಿರುವಿನಲ್ಲಿ ಮರವೊಂದು ಬೀಳುವ ಹಂತಕ್ಕೆ ತಲುಪಿದ್ದು, ಸದ್ಯ ಆ ಮರ ವಿದ್ಯುತ್ ಕಂಬದತ್ತ ವಾಲಿಕೊಂಡಿದೆ. ಈ ವಿದ್ಯುತ್ ಕಂಬವೂ ಶಿಥಿಲಾವಸ್ಥೆಗೆ ತಲುಪಿದೆ. ಈ ರಸ್ತೆಯಲ್ಲಿ ನಿತ್ಯ ಶಾಲಾ ಮಕ್ಕಳು, ವಯೋವೃದ್ಧರು ಓಡಾಡುತ್ತಾರೆ. ಏನಾದರೂ ಅಪಾಯ ಸಂಭವಿಸುವ ಮುನ್ನ ಬಾಗಿರುವ ಮರ ಮತ್ತು ವಿದ್ಯುತ್ ಕಂಬವನ್ನು ತೆರವುಗೊಳಿಸಬೇಕು. ಈ ಸಮಸ್ಯೆ ಬಗೆಹರಿಸುವಂತೆ ಬಿಬಿಎಂಪಿ ಹಾಗೂ ಬೆಸ್ಕಾಂ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ.

ಜ.ಬೋ.ಮಂಜುನಾಥ, ಪೂರ್ಣಚಂದ್ರ ಬಡಾವಣೆ

‘ಅರ್ಹ ಫಲಾನುಭವಿಗಳಿಗೆ ಗ್ಯಾರಂಟಿ ಯೋಜನೆ ಸಿಗಲಿ’

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ‘ಸಮಾಜದಲ್ಲಿ ಅರ್ಹರೆಲ್ಲರಿಗೂ ಪಂಚ ಗ್ಯಾರಂಟಿಗಳ ಸೌಲಭ್ಯ ಸಿಗುವ ರೀತಿಯಲ್ಲಿ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕು’ ಎಂದು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ರಾಜ್ಯಾಧ್ಯಕ್ಷ ಎಚ್.ಎಂ.ರೇವಣ್ಣ ಹೇಳಿದರು.

ಕೆ.ಆರ್.ಪುರ ಸಮೀಪದ ಮಂಡೂರಿನಲ್ಲಿ ತಾಲ್ಲೂಕು ಪಂಚಾಯಿತಿ ಆವರಣದಲ್ಲಿ ಪೂರ್ವ ತಾಲ್ಲೂಕು ಪಂಚ ಗ್ಯಾರಂಟಿಗಳ ಸಮಿತಿ ಕಚೇರಿ ಉದ್ಘಾಟಿಸಿ ಮಾತನಾಡಿದರು.

‘ಗ್ಯಾರಂಟಿ ಯೋಜನೆಗಳು ರಾಜ್ಯ ಸರ್ಕಾರದ ಮಹತ್ವಕಾಂಕ್ಷೆಯ ಸಾಮಾಜಿಕ ಕಾರ್ಯಕ್ರಮವಾಗಿದೆ. ಅರ್ಹರೆಲ್ಲರೂ ಗ್ಯಾರಂಟಿ ಯೋಜನೆಗಳ ವ್ಯಾಪ್ತಿಗೆ ಒಳಪಡಬೇಕು ಎಂಬುದು ಸರ್ಕಾರದ ಉದ್ದೇಶವಾಗಿದ್ದು, ಯಾವುದೇ ಅರ್ಹ ಫಲಾನುಭವಿಗಳು ಈ ಯೋಜನೆಯಿಂದ ಹೊರಗುಳಿಯಬಾರದು’ ಎಂದರು.

‘ಶಕ್ತಿ, ಗೃಹಲಕ್ಷ್ಮಿ, ಅನ್ನಭಾಗ್ಯ, ಗೃಹಜ್ಯೋತಿ ಹಾಗೂ ಯುವನಿಧಿ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ಉಂಟಾಗುತ್ತಿರುವ ಸಣ್ಣ-ಪುಟ್ಟ ತಾಂತ್ರಿಕ ಸಮಸ್ಯೆಗಳನ್ನು ಕೂಡಲೇ ಬಗೆಹರಿಸಿ. ಎಲ್ಲಾ ಅರ್ಹ ಫಲಾನುಭವಿಗಳಿಗೆ ಲಾಭ ಸಿಗುವಂತೆ ಮಾಡಿ’ ಎಂದು ಅಧಿಕಾರಿಗಳಿಗೆ ತಿಳಿಸಿದರು.

ಈ ಸಂದರ್ಭದಲ್ಲಿ ಬೀದರಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ನಾರಾಯಣ ಸ್ವಾಮಿ, ವರ್ತೂರು ಬ್ಲಾಕ್ ಅಧ್ಯಕ್ಷ ಶ್ರೀನಿವಾಸ್ ರೆಡ್ಡಿ, ಹೂಡಿ ಬ್ಲಾಕ್ ಕಾಂಗ್ರೆಸ್ ಮಾಯಾಂಕ್ ಬಾಬು, ತಾ. ಪಂ. ಕಾರ್ಯ ನಿರ್ವಾಹಣಾಧಿಕಾರಿ ವಸಂತ್ ಕುಮಾರ್ ಇದ್ದರು.

ನಗರದಲ್ಲಿ ಇಂದು

ಪ್ರೊ.ಜಿ.ಎಸ್. ಸಿದ್ಧಲಿಂಗಯ್ಯ ಸ್ಮರಣೆ: ಅಧ್ಯಕ್ಷತೆ: ಎಲ್.ಎನ್. ಮುಕುಂದರಾಜ್, ನುಡಿನಮನ: ಎಸ್. ಜಿ. ಸಿದ್ಧರಾಮಯ್ಯ, ಎಂ.ಎಸ್. ಆಶಾದೇವಿ, ನಲ್ಲೂರು ಪ್ರಸಾದ್ ಆರ್.ಕೆ., ಪುಷ್ಪ ನಮನ: ಕೆ.ವಿ. ನಾಗರಾಜಮೂರ್ತಿ, ಕಾ.ವೆಂ. ಶ್ರೀನಿವಾಸಮೂರ್ತಿ, ಸುಜಾತ ಎಚ್.ಆರ್., ನಾದನಮನ: ಮೃತ್ಯುಂಜಯ ದೊಡ್ಡವಾಡ, ಕದಳಿ ಮಹಿಳಾ ವೇದಿಕೆ, ನಿರ್ವಹಣೆ: ರುದ್ರೇಶ್ ಅದರಂಗಿ, ಆಯೋಜನೆ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಡಾ.ಎಸ್. ವಿದ್ಯಾಶಂಕರ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4.30

ಜಿ.ಎಸ್. ಸಿದ್ಧಲಿಂಗಯ್ಯ

‘ವನಪರ್ವ’ ಮಹಾಭಾರತ ಪ್ರವಚನ: ವ್ಯಾಸನಕೆರೆ ಪ್ರಭಂಜನಾಚಾರ್ಯ, ಆಯೋಜನೆ ಮತ್ತು ಸ್ಥಳ: ಪೂರ್ಣಪ್ರಜ್ಞ ವಿದ್ಯಾಪೀಠ, ಕತ್ರಿಗುಪ್ಪೆ ಮುಖ್ಯರಸ್ತೆ, ಸಂಜೆ 6.30

‘ಬಿ.ವಿ. ಕಾರಂತ–90’ ನೆನಪಿನ ರಾಜ್ಯಮಟ್ಟದ ನಾಟಕೋತ್ಸವ: ಉದ್ಘಾಟನೆ: ಎಸ್.ಜಿ. ಸಿದ್ಧರಾಮಯ್ಯ, ಉಪಸ್ಥಿತಿ: ಮಹೇಶ್ ಶ್ರೀಪತಿ, ‘ಅಣ್ಣನ ನೆನಪು’ ನಾಟಕ ಪ್ರದರ್ಶನ: ತಂಡ: ಪ್ರವರ, ರಂಗರೂಪ: ಕರಣಂ ಪವನ್ ಪ್ರಸಾದ್, ನಿರ್ದೇಶನ: ಹನುರಾಮ ಸಂಜೀವ, ಆಯೋಜನೆ: ಭಾಗವತರು, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.45

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ADMISSION CORNER

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business to Business

Business

VIZAG (VISAKHAPATNAM) Biggest City of Andhra. Want to start Any Business/ Buy Apartments/ RE/ Schools Arranging Big Finances. Excellent Guidance. Radhika Projects/ Services. Dr Swamy Naidu:- 9342247637. Bangalore.

Business Offers

Finance

NRI'S Investment And Finance Available On Low Interest Against Properties,Land& Building,Sites,Flats,Converted& Agriculture Lands Call:7204995189

JOB OPPORTUNITIES

Accounts & Finance

WANTED FEMALE Office Assistant Any Degree Knowing Tally Fluent In English, Kannada, Hindi Around Rajajinagar Contact: 9108458798/ 9845579620

Graphic Designers

WANTED MALE/ Female Graphic Designer (Corel Draw Photoshop Illustrator) in Reputed Company around Rajajinagar Contact: 9108458798/ 9845579620

PERSONAL

Change of Name

CHANGE OF NAME
I, **SIDDALINGASWAMY** S/o MARISWAMY, R/a: # 24, 1st Main, 7th Cross, Manjunathanagar, Rajajinagar, Bengaluru 560010, have changed my name to **SIDDALINGASWAMY MARISWAMY** vide affidavit dated 17-05-2025 before notary Onkarappa NR, Bengaluru.

REAL ESTATE SELLING

House

Girinagar

SALE 40X60 house at Girinagar, Bangalore, near saibaba temple, no middle men, genuine buyer write to PGNAGARA@GMAIL.COM

TOURS & TRAVEL

Travel

VISIT HIMALAYAN Kingdom Nepal with Expert Guide Manager. All Inclusive Best Arrangements. GANESH SHENOY 8970126393

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9845114560 | +91 9900428036
*Conditions apply

ಕನ್ನಡಿಗರಿಗೆ ಅಪಮಾನ ಆರೋಪ: ಡಿಜಿಟಲ್ ಬೋರ್ಡ್ ತಯಾರಿಸಿದ್ದ ವ್ಯಕ್ತಿ ವಿಚಾರಣೆ

ಜಿ.ಎಸ್. ಸೂಟ್ಸ್ ಹೋಟೆಲ್ ವ್ಯವಸ್ಥಾಪಕ ಜೈಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡಿಗರಿಗೆ ಅಪಮಾನ ಆಗುವಂತೆ ಡಿಜಿಟಲ್ ಬೋರ್ಡ್‌ನಲ್ಲಿ ಅವಾಚ್ಯ ಬರಹ ಪ್ರಕಟಿಸಿದ್ದ ಆರೋಪದ ಮೇಲೆ ಜಿ.ಎಸ್. ಸೂಟ್ಸ್ ಹೋಟೆಲ್ ವ್ಯವಸ್ಥಾಪಕ, ಕೇರಳದ ಕಾಸರಗೋಡಿನ ಸರ್ಫರಾಜ್(32) ಎಂಬಾತನನ್ನು ಬಂಧಿಸಿರುವ ಮಡಿವಾಳ ಠಾಣೆಯ ಪೊಲೀಸರು, ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಇನ್ನೊಂದೆಡೆ ಹೋಟೆಲ್‌ನ ಮಾಲೀಕ ಜಮ್ಮಾದ್ ವಿರುದ್ಧವೂ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ. ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿ ಮಾಡಿದ್ದಾರೆ.

‘ಜಮ್ಮಾದ್ ಅವರು ಸದ್ಯ ಕೇರಳದಲ್ಲಿದ್ದು, ಶೀಘ್ರದಲ್ಲೇ ವಿಚಾರಣೆಗೆ ಹಾಜರಾಗುವುದಾಗಿ ತಿಳಿಸಿದ್ದಾರೆ’ ಎಂದು ಗೊತ್ತಾಗಿದೆ.

ಮೇ 16ರಂದು ರಾತ್ರಿ ತಾವರೆಕೆರೆ ಮುಖ್ಯರಸ್ತೆಯ ಜಿ.ಎಸ್. ಸೂಟ್ಸ್ ಹೋಟೆಲ್‌ನ ಡಿಜಿಟಲ್ ಬೋರ್ಡ್‌ನಲ್ಲಿ ಕನ್ನಡಿಗರನ್ನು ಅವಮಾನಿಸುವಂತಹ ವಾಕ್ಯವನ್ನು ಪ್ರಕಟಿಸಲಾಗಿತ್ತು. ಸ್ಥಳೀಯರೊಬ್ಬರು ಮೊಬೈಲ್‌ನಲ್ಲಿ ಸೆರೆ ಹಿಡಿದು ಸಾಮಾಜಿಕ ಮಾಧ್ಯಮ ‘ಎಕ್ಸ್’ನಲ್ಲಿ ಹಾಕಿದ್ದರು.

ಸಾಮಾಜಿಕ ಜಾಲತಾಣದಲ್ಲಿ ವಿಡಿಯೊ ಹರಿದಾಡುತ್ತಿದ್ದಂತೆಯೇ ಮಡಿವಾಳ ಠಾಣೆ ಪೊಲೀಸರು, ತಾವರೆಕೆರೆ ಮುಖ್ಯರಸ್ತೆಯ ಭವನಪ್ಪ ಲೇಔಟ್‌ನಲ್ಲಿ ಇರುವ ಜಿ.ಎಸ್. ಸೂಟ್ಸ್ ಮಾಲೀಕ ಜಮ್ಮಾದ್ ಮತ್ತು ವ್ಯವಸ್ಥಾಪಕ ಸರ್ಫರಾಜ್ ವಿರುದ್ಧ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದರು.

‘ಕೇರಳದ ಕಾಸರಗೋಡು ಮೂಲದ ಸರ್ಫರಾಜ್, 5 ತಿಂಗಳ ಹಿಂದೆ ಜಿ.ಎಸ್. ಸೂಟ್ಸ್‌ನಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದರು’ ಎಂದು ಪೊಲೀಸರು ಹೇಳಿದ್ದಾರೆ.

‘ಹ್ಯಾಕ್ ಮಾಡಿದ್ದಾರೆ, ಆನ್ ಮಾಡದಂತೆ ಸೂಚಿಸಿದ್ದೆ’

ಡಿಜಿಟಲ್ ಬೋರ್ಡ್ ಮಾಡಿಕೊಟ್ಟ ರಾಯ್ ಅವರನ್ನು ವಿಚಾರಣೆ ನಡೆಸಿ ಹೇಳಿಕೆ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

‘ಕೇರಳದ ನೀರಾವರಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೆ. ಅನಾರೋಗ್ಯದ ಕಾರಣಕ್ಕೆ ಸ್ವಯಂ ನಿವೃತ್ತಿ ಪಡೆದುಕೊಂಡಿದ್ದೆ. ಮೂರು ವರ್ಷಗಳ ಹಿಂದೆ ಬೆಂಗಳೂರಿಗೆ ಬಂದು, ಮಡಿವಾಳದ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಬಳಿ ಅಂಗಡಿ ನಡೆಸುತ್ತಿದ್ದೇನೆ. ಜಿ.ಎಸ್. ಸೂಟ್ಸ್ ಹೋಟೆಲ್‌ಗೆ ಕೆಲವು ತಿಂಗಳ ಹಿಂದೆ ಡಿಜಿಟಲ್ ಬೋರ್ಡ್ ತಯಾರಿಸಿಕೊಟ್ಟಿದ್ದು, ಅದಕ್ಕೆ ವೈ-ಫೈ ವ್ಯವಸ್ಥೆಯೂ ಇತ್ತು ಎಂಬುದಾಗಿ ವಿಚಾರಣೆ ವೇಳೆ ರಾಯ್ ಮಾಹಿತಿ ನೀಡಿದ್ದಾರೆ’ ಎಂದು ಮೂಲಗಳು ಹೇಳಿವೆ.

‘ಡಿಜಿಟಲ್ ಬೋರ್ಡ್‌ನಲ್ಲಿ ಅನಗತ್ಯ ಪದಗಳು ಬರುತ್ತಿವೆ ಎಂಬುದಾಗಿ ಹೋಟೆಲ್ ವ್ಯವಸ್ಥಾಪಕ ಮಾಹಿತಿ ನೀಡಿದ್ದರು. ಹೋಟೆಲ್‌ಗೆ ಹೋಗಿ ಪರಿಶೀಲಿಸಿ, ಪಾಸ್‌ವರ್ಡ್ ಹಾಕಿ ಬದಲಾವಣೆಗೆ ಮುಂದಾಗಿದ್ದೆ. ಆದರೆ ಸಾಧ್ಯವಾಗಿರಲಿಲ್ಲ. ಯಾರೋ ಹ್ಯಾಕ್ ಮಾಡಿದ್ದಾರೆ ಎಂದು ಗೊತ್ತಾಗಿತ್ತು. ಬೋರ್ಡ್‌ನ ಮದರ್ ಬೋರ್ಡ್ ಬದಲಾಯಿಸಬೇಕಿದ್ದು, ಆನ್ ಮಾಡದಂತೆ ತಿಳಿಸಿದ್ದೆ. ಈ ಪ್ರಕರಣದಲ್ಲಿ ನನ್ನ ತಪ್ಪಿಲ್ಲ’ ಎಂಬುದಾಗಿ ರಾಯ್ ಹೇಳಿಕೆ ನೀಡಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಗೊತ್ತಾಗದೇ ಆನ್ ಮಾಡಿದ್ದಾರೆ’

‘ರಾಯ್ ಸೂಚನೆ ಮೇರೆಗೆ ಡಿಜಿಟಲ್ ಬೋರ್ಡ್ ಬಳಸದಂತೆ ಹೋಟೆಲ್ ಸಿಬ್ಬಂದಿಗೆ ಸೂಚಿಸಿದ್ದೆ. ಸಿಬ್ಬಂದಿಗೆ ಗೊತ್ತಾಗದೇ ಬೋರ್ಡ್ ಆನ್ ಮಾಡಿದ್ದರು. ಪರಿಚಯಸ್ಥರೊಬ್ಬರು ಈ ವಿಚಾರ ತಿಳಿಸಿದ್ದರಿಂದ ತಕ್ಷಣವೇ ಬೋರ್ಡ್ ಆಫ್ ಮಾಡಿಸಿದ್ದೆ ಎಂಬುದಾಗಿ ವ್ಯವಸ್ಥಾಪಕ ಸರ್ಫರಾಜ್ ಹೇಳಿಕೆ ನೀಡಿದ್ದಾರೆ’ ಎಂದು ಮೂಲಗಳು ತಿಳಿಸಿವೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರ ಹೇಳಿಕೆಯನ್ನು ದಾಖಲು ಮಾಡಿಕೊಳ್ಳಲಾಗಿದೆ. ತನಿಖೆ ಮುಂದುವರಿದಿದೆ ಎಂದು ಪೊಲೀಸರು ಹೇಳಿದರು.

ಆರೋಪಿ ಪಲ್ಲವಿ ನಿಮ್ಹಾನ್ಸ್‌ಗೆ ದಾಖಲು

ಅಪರಾಧ ಸುದ್ದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ನಿವೃತ್ತ ಪೊಲೀಸ್ ಮಹಾನಿರ್ದೇಶಕ (ಡಿಜಿ ಮತ್ತು ಐಜಿಪಿ) ಓಂ ಪ್ರಕಾಶ್ (68) ಕೊಲೆ ಪ್ರಕರಣದ ಆರೋಪಿಯಾದ ಅವರ ಪತ್ನಿ ಪಲ್ಲವಿ (64) ಪರಪ್ಪನ ಅಗ್ರಹಾರ ಜೈಲಿನಲ್ಲಿ ಗಲಾಟೆ ಮಾಡಿಕೊಂಡಿದ್ದು, ಅವರನ್ನು ನಿಮ್ಹಾನ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಕೊಲೆ ಪ್ರಕರಣದ ಆರೋಪದ ಅಡಿ ಪಲ್ಲವಿ ಅವರನ್ನು ಏಪ್ರಿಲ್ 21ರಂದು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು.

‘ಪಲ್ಲವಿ ಅವರು ಜೈಲಿನಲ್ಲಿ ಸಹ ಕೈದಿಗಳ ಜತೆಗೆ ಗಲಾಟೆ ಮಾಡಿಕೊಂಡಿದ್ದಾರೆ. ಅವರನ್ನು ಮನೋವೈದ್ಯಕೀಯ ಚಿಕಿತ್ಸೆಗೆ ದಾಖಲು ಮಾಡಲಾಗಿದೆ. ವೈದ್ಯರು ವಿವಿಧ ಪರೀಕ್ಷೆಗೆ ಒಳಪಡಿಸಿದ್ದಾರೆ’ ಎಂದು ಮೂಲಗಳು ಹೇಳಿವೆ.

ಬಸ್ ಏರುವಾಗ ಮಾಂಗಲ್ಯ ಕಳವು

ಕನಕಪುರ: ಇಲ್ಲಿನ ಬಸ್ ನಿಲ್ದಾಣದಲ್ಲಿ ಬಸ್ ಹತ್ತುವ ವೇಳೆ ಬೆಂಗಳೂರಿನ ವೆಂಕಟೇಶ್ವರ ಬಡಾವಣೆಯ ನಿವಾಸಿ ತೇಜಸ್ವಿನಿ ಎಂಬುವರ ಮಾಂಗಲ್ಯ ಸರ ಕಳ್ಳತನವಾಗಿದೆ.

ಮೇ 11ರಂದು ತಾಲ್ಲೂಕಿನ ಸಂಗಮಕ್ಕೆ ಬಂದಿದ್ದ ಅವರು ಅದೇ ದಿನ ಸಂಜೆ 6ಕ್ಕೆ ಕನಕಪುರ ಬಸ್ ನಿಲ್ದಾಣದಲ್ಲಿ ಬೆಂಗಳೂರಿಗೆ ತೆರಳುವ ಬಸ್ ಹತ್ತಿದ್ದಾರೆ. ನೂಕುನುಗ್ಗಲಿನಲ್ಲಿ, 36 ಗ್ರಾಂ ಮಾಂಗಲ್ಯ ಸರ ಕಳ್ಳತನವಾಗಿದ್ದು, ಕನಕಪುರದ ಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಬಾವಿಗೆ ಕಾರು: ಮೂವರು ಸಾವು

ಚಿಂತಾಮಣಿ: ರಸ್ತೆ ಬದಿಯ ಬಾವಿಗೆ ಕಾರು ಬಿದ್ದು, ಅದರಲ್ಲಿ ಪ್ರಯಾಣಿಸುತ್ತಿದ್ದ ಮೂವರು ಬಾಣಸಿಗರು ಮೃತಪಟ್ಟ ಘಟನೆ ಆಂಧ್ರಪ್ರದೇಶದ ಕುರುಪ್ಪಲ್ಲಿ ಗ್ರಾಮದ ಬಳಿ ಭಾನುವಾರ ಬೆಳಗಿನ ಜಾವ ನಡೆದಿದೆ.

ಮೃತರನ್ನು ಚಿಂತಾಮಣಿ ತಾಲ್ಲೂಕಿನ ಮುತ್ತುಕದಹಳ್ಳಿಯ ಲೋಕೇಶ್ (34), ಚಾಂಡ್ರಹಳ್ಳಿಯ ಶಿವಣ್ಣ (44) ಹಾಗೂ ಕೋಲಾರ ತಾಲ್ಲೂಕು ಸುಗಟೂರಿನ ಚಲಪತಿ (49) ಎಂದು ಗುರುತಿಸಲಾಗಿದೆ. ಚಾಂಡ್ರಹಳ್ಳಿಯ ಸುನಿಲ್ ಮತ್ತು ಮುತ್ತುಕದಹಳ್ಳಿಯ ತಿಪ್ಪಾರೆಡ್ಡಿ ಕಾರಿನ ಗಾಜು ಒಡೆದು ಪಾರಾಗಿದ್ದಾರೆ.

ಇವರೆಲ್ಲರೂ ವೃತ್ತಿಯಲ್ಲಿ ಬಾಣಸಿಗರಾಗಿದ್ದು, ಸ್ವಂತ ಕಾರಿನಲ್ಲಿ ಆಂಧ್ರಪ್ರದೇಶದ ಅನ್ನಮಯ್ಯ ಜಿಲ್ಲೆಯ ಪಿಲೇರು ಪಟ್ಟಣಕ್ಕೆ ಸಮಾರಂಭವೊಂದರ ಅಡುಗೆಗಾಗಿ ತೆರಳುತ್ತಿದ್ದರು. ಪಿಲೇರು-ಚದುಂ ರಸ್ತೆಯ ಕುರುಪ್ಪಲ್ಲಿ ಗ್ರಾಮದ ಬಳಿ ಭಾನುವಾರ ಬೆಳಗಿನ ಜಾವ 4ಕ್ಕೆ ಈ ದುರ್ಘಟನೆ ನಡೆದಿದೆ.

VASANTDADA SUGAR INSTITUTE

संशोधनेन सवृध्दिः

Manjari (Bk.), Tal. Haveli, Dist. Pune 412307, Maharashtra, India

"NAAC Accredited with 'A' Grade" Ph.: 020-26902100/171/172

Email - registrar@vsisugar.com Website: www.vsisugar.com

ADMISSION OPEN VSI provides an excellent opportunity to the Science and Engineering Graduates and Diploma holders for the development of their career in Sugar and allied industries through the following

Post Graduate, Diploma and Certificate Courses.

SN.	Post Graduate Degree, Diploma Courses	SN.	Certificate Course
1	Sugar Technology (ST)	1	Sugar Engineering (Online/Offline)
2	Sugar Instrumentation Technology (SIT) (Online / Offline)		
3	Industrial Fermentation & Alcohol Technology (IFAT)	2	Sugar Manufacture
4	Sugar Engineering Diploma (SED) (Online/Offline)	3	Sugar Boiling
5	M.Sc. Environmental Sciences		Affiliated to Savitribai Phule Pune, University, Pune
6	M.Sc. Wine, Brewing & Alcohol Technology		
SN.	Certificate Course		COURSES APPROVED BY MAHARASHTRA STATE BOARD OF SKILL, VOCATIONAL AND TRAINING.
1	Certificate course in Quality control Laboratory Technician		
2	Certificate course in Mill Fitter		
3	Certificate course in Electrician		
4	Certificate course in Boiler Attendant		

The details of admission procedure are available on **Website: www.vsisugar.com**

The Last date of receipt of applications is:- 30th June 2025

Director General

ಸವಿನೆನಪು

ಡಾ. ಕೆ. ಭುಜಂಗ ಶೆಟ್ಟಿ

(21.10.1953 – 19.05.2023)

ಸಂಸ್ಥಾಪಕ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು
ನಾರಾಯಣ ನೇತ್ರಾಲಯ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆ, ಬೆಂಗಳೂರು

ನೀವು ನಮ್ಮನ್ನು ಅಗಲಿ ಎರಡು ವರ್ಷಗಳಾದರೂ, ನೀವು ಪ್ರೀತಿಯಿಂದ ಸ್ಥಾಪಿಸಿ,
ಪೋಷಿಸಿದ ಈ ಸಂಸ್ಥೆಯ ನಾಲ್ಕು ಗೋಡೆಗಳ ಮಧ್ಯೆ ಎಲ್ಲೆಡೆಯೂ ನಿಮ್ಮದೇ ಸವಿನೆನಪು.

ಪ್ರತಿ ಅಂತಃಕರಣದ ಸ್ಪರ್ಶದಲ್ಲೂ, ಪ್ರತಿ ರೋಗಿಯ ನಗುವಿನಲ್ಲೂ ನಿಮ್ಮ ಚೇತನದ ಅರಿವಾಗುತ್ತದೆ.

ನಿಮ್ಮ ಮೌಲ್ಯಗಳೇ ನಾವು ನಿಂತಿರುವ ಬುನಾದಿ,
ನಿಮ್ಮ ಪರಂಪರೆಯೇ ನಮಗೆ ದಾರಿ ತೋರುವ ಬೆಳಕು.

ನಿಮ್ಮ ಮಾರ್ಗದರ್ಶನ ನಮ್ಮನ್ನು ಮುನ್ನಡೆಸುತ್ತಿದೆ.

ನಿಮ್ಮ ಅನುಪಸ್ಥಿತಿ ನಮ್ಮನ್ನು ಸದಾ ಕಾಡುತ್ತದೆ.
ಆದರೂ ನಮ್ಮ ನೆನಪುಗಳಲ್ಲಿ ನೀವು ಸದಾ ಚಿರಾಯು... ಇಂದಿಗೂ... ಎಂದೆಂದಿಗೂ...

ನಾರಾಯಣ ನೇತ್ರಾಲಯ ಕುಟುಂಬ

ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ

(ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ)

Govt. Tool Room & Training Centre (GTTC)

2025-26 ನೇ ಸಾಲಿನ ಪ್ರವೇಶ ಪ್ರಕಟಣೆ

ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ 2025-26ನೇ ಶೈಕ್ಷಣಿಕ ಸಾಲಿನ ಡಿಪ್ಲೋಮಾ ಕೋರ್ಸುಗಳ ಪ್ರವೇಶಕ್ಕಾಗಿ 10ನೇ ತರಗತಿ ಉತ್ತೀರ್ಣರಾದ ಅರ್ಹ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ

SSLC ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ

Diploma / Integrated BE Programs (Diploma+Degree)

- Diploma in Tool & Die Making
- Diploma in Precision Manufacturing
- Diploma in Mechatronics
- Diploma in Electronics & Communication Engineering
- Diploma in Automation & Robotics
- Diploma in Artificial Intelligence & Machine Learning
- Diploma in Electrical & Electronics Engineering

Integrated BE Programs (6 Years)

- Integrated BE in Advanced Manufacturing
- Integrated BE in Mechatronics
- Integrated BE in Artificial Intelligence & Machine Learning

JOIN GTTC
100% ಉದ್ಯೋಗ
ಉಜ್ವಲ ಭವಿಷ್ಯ

ಜಿಟಿಟಿಸಿ ವಿಶೇಷತೆಗಳು

- Duration: 3+1 Year
- AICTE approved
- German Collaboration with Global Opportunity
- Latest Technology Lab Facility
- Industry Oriented Curriculum Design
- Dual Learning System 70% Practical and 30% Theory
- Foreign Language Labs

ಆನ್‌ಲೈನ್ ಅರ್ಜಿಗಾಗಿ ಇಲ್ಲಿ ಸ್ಕ್ಯಾನ್ ಮಾಡಿ

https://gttc.karnataka.gov.in/

ಇನ್‌ಪ್ಲಾಂಟ್ ತರಬೇತಿಯ ಅವಧಿಯಲ್ಲಿ ಪ್ರತಿ ತಿಂಗಳಿಗೆ ರೂ. 15000/- ರಿಂದ ರೂ. 30000/- ವರೆಗೆ ಸ್ಟೈಪೆಂಡ್ ಸೌಲಭ್ಯ

ಪ್ರವೇಶಕ್ಕಾಗಿ ಹತ್ತಿರದ ಜಿಟಿಟಿಸಿ ಕೇಂದ್ರವನ್ನು ಸಂಪರ್ಕಿಸಿ

Social Media

ಜಿಟಿಟಿಸಿಯ 32 ಡಿಪ್ಲೋಮಾ ಕಾಲೇಜುಗಳು

ಕ್ರಮ ಸಂಖ್ಯೆ	ಜಿಟಿಟಿಸಿ ಕೇಂದ್ರ	ಮೊಬೈಲ್ ನಂ.	ವಿಳಾಸ
1	ಬೆಂಗಳೂರು	9141629575 9141629580	ರಾಜಾಜಿನಗರ ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು
2	ಮೈಸೂರು	7760682629 9141630315	ಬೆಳಗೊಳ ಇಂಡಸ್ಟ್ರಿಯಲ್ ಏರಿಯಾ, ಮೈಸೂರು
3	ಬೆಳಗಾವಿ	9916231899 9141629568	ಉದ್ಯಮಭಾಗ್ ಕೈಗಾರಿಕಾ ಪ್ರದೇಶ, ಬೆಳಗಾವಿ
4	ಧಾರವಾಡ	9035630312	ರಾಯಾಪುರ ಕೆಐಎಡಿಬಿ ಇಂಡಸ್ಟ್ರಿಯಲ್ ಏರಿಯಾ, ಧಾರವಾಡ
5	ಹಾಸನ	9611674143	ಕೆಐಎಡಿಬಿ ಇಂಡಸ್ಟ್ರಿಯಲ್ ಏರಿಯಾ, ಹಾಸನ
6	ಕಲಬುರಗಿ	9113658659	ದರ್ಶನಾಪುರ ಲೇಔಟ್, ಕಲಬುರಗಿ
7	ಮಂಗಳೂರು	9008263660 8073208137	ಕೆಐಎಡಿಬಿ ಇಂಡಸ್ಟ್ರಿಯಲ್ ಏರಿಯಾ, ಬೈಕಂಪಾಡಿ, ಮಂಗಳೂರು
8	ಕೋಲಾರ	9886839574	ಹಳೆ ಡಿಐಸಿ ಕಟ್ಟಡ ಅವರಣ, ಕೋಲಾರ
9	ದಾಂಡೇಲಿ	8618413074	ಅಂಬೇವಾಡಿ, ದಾಂಡೇಲಿ
10	ಗೌರಿಬಿದನೂರು	8380229889 8884585436	ಕೆಐಎಡಿಬಿ ಇಂಡಸ್ಟ್ರಿಯಲ್ ಏರಿಯಾ, ಕೂಡಮಲಕುಂಟೆ, ಗೌರಿಬಿದನೂರು
11	ಗುಂಡ್ಲುಪೇಟೆ	8147384716	ಹೊಸೂರು ರಸ್ತೆ, ಗುಂಡ್ಲುಪೇಟೆ
12	ಹರಿಹರ	9845941245	ಕೆಐಎಡಿಬಿ ಇಂಡಸ್ಟ್ರಿಯಲ್ ಏರಿಯಾ, ಹರಿಹರ
13	ಹೊಸಪೇಟೆ	9845416198	ಮರಿಯಮ್ಮನಹಳ್ಳಿ, ಹೊಸಪೇಟೆ
14	ಹುಮನಾಬಾದ್	8867441317	ಕೆಐಎಡಿಬಿ ಇಂಡಸ್ಟ್ರಿಯಲ್ ಏರಿಯಾ, ಹುಮನಾಬಾದ್
15	ಕಡೂರು	9902232839	ಬಿ ಹೆಚ್ ರಸ್ತೆ, ಕಡೂರು
16	ಕನಕಪುರ	6361122792 9964625775	ಸಂಗಮ ರಸ್ತೆ, ಕನಕಪುರ
17	ಕೂಡಲಸಂಗಮ	9902556110	ಕೂಡಲಸಂಗಮ ಹುನಗುಂದ ತಾಲ್ಲೂಕು
18	ಲಿಂಗಸುಗೂರು	9902072101	ಕರಡಕಲ್ ರಸ್ತೆ, ಲಿಂಗಸುಗೂರು
19	ಮದ್ದೂರು	6362883923	ಸೋಮನಹಳ್ಳಿ, ಮದ್ದೂರು
20	ಶಿವಮೊಗ್ಗ	9880141054	ಮಾಚೇನಹಳ್ಳಿ, ಶಿವಮೊಗ್ಗ
21	ತುಮಕೂರು	9379853899	ಹಿರೇಹಳ್ಳಿ ಇಂಡಸ್ಟ್ರಿಯಲ್ ಏರಿಯಾ, ತುಮಕೂರು
22	ಚಿಕ್ಕೋಡಿ	9880785591	ನಿಪ್ಪಾಣಿ ರಸ್ತೆ, ಚಿಕ್ಕೋಡಿ
23	ಉಡುಪಿ	9880510585	ಉಪ್ಪೂರು, ಉಡುಪಿ
24	ಗೋಕಾಕ	9538570950	ಅರಭಾವಿ, ಗೋಕಾಕ ತಾಲ್ಲೂಕು
25	ಕೊಪ್ಪಳ	9986088894	ದಡೇಗಲ್, ಕೊಪ್ಪಳ
26	ಯಾದಗಿರಿ	9738255123	ಬಡಿಯಾಳ ಕೈಗಾರಿಕಾ ಪ್ರದೇಶ, ಕಡೇಚೂರು, ಯಾದಗಿರಿ
27	ಚಿತ್ರದುರ್ಗ	9738465834 9606467914	ಕುಂಚಿಗನಾಳ ಗ್ರಾಮ, ಚಿತ್ರದುರ್ಗ
28	ಚಳ್ಳಕೆರೆ	9731754567	ಕಸಬಾ ಹೋಬಳಿ, ಚಳ್ಳಕೆರೆ
29	ದೇವನಹಳ್ಳಿ	8050758240	ಚನ್ನರಾಯಪಟ್ಟಣ ಗ್ರಾಮ, ದೇವನಹಳ್ಳಿ, ತಾಲ್ಲೂಕು
30	ಮಾಗಡಿ	9379853899	ಚಿಕ್ಕಕಲ್ಯಾ ಗ್ರಾಮ, ಮಾಗಡಿ
31	ಶಿಗ್ಗಾವಿ	9035630312	ಕಲ್ಯಾಣ ಗ್ರಾಮ, ಶಿಗ್ಗಾವಿ
32	ಹಾವೇರಿ	9916769649	ಕರಜಗಿ ಹೋಬಳಿ, ನೆಲೋಗಲ ಗ್ರಾಮ, ಹಾವೇರಿ

ಆದೂರು: ಮೂಲಸೌಕರ್ಯಕ್ಕೆ ಆಗ್ರಹಿಸಿ ಪ್ರತಿಭಟನೆ

ಪ್ರಜಾ ವಿಮೋಚನ ಚಳವಳಿ ಸಮತಾವಾದ ಸಂಘಟನೆಯ ಕಾರ್ಯಕರ್ತರು ಖಾಲಿ ಕೊಡ ಹಿಡಿದು ಪ್ರತಿಭಟನೆ ನಡೆಸಿದರು

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಕುಡಿಯುವ ನೀರು ಹಾಗೂ ಮೂಲಸೌಕರ್ಯ ಒದಗಿಸುವಂತೆ ಒತ್ತಾಯಿಸಿ ಆದೂರು ಗ್ರಾಮದಲ್ಲಿ ಪ್ರಜಾ ವಿಮೋಚನ ಚಳವಳಿ ಸಮತಾವಾದ ಸಂಘಟನೆಯ ಕಾರ್ಯಕರ್ತರು ಖಾಲಿ ಕೊಡ ಹಿಡಿದು ಪ್ರತಿಭಟನೆ ನಡೆಸಿದರು.

'ಆದೂರು ಗ್ರಾಮದಲ್ಲಿ ಕುಡಿಯುವ ನೀರು, ರಸ್ತೆ, ಚರಂಡಿ, ಬೀದಿ ದೀಪಗಳು ಸೇರಿದಂತೆ ವಿವಿಧ ಮೂಲಸೌಕರ್ಯಗಳು ಸಮರ್ಪಕವಾಗಿಲ್ಲ. ರಸ್ತೆಗಳು ಸಂಪೂರ್ಣವಾಗಿ ಹದಗೆಟ್ಟಿವೆ. ಮಳೆ ಬಂದರೆ ಸಂಚರಿಸುವುದು ಕಷ್ಟ' ಎಂದು ಪ್ರತಿಭಟನಾಕಾರರು ದೂರಿದರು.

ಸಂಘಟನೆಯ ಮುಖಂಡ ಆದೂರು ದೇವರಾಜ್, 'ಗ್ರಾಮದಲ್ಲಿ ಕೆಲದಿನಗಳಿಂದ ಕೊಳವೆ ಬಾವಿ ಕೆಟ್ಟು ಹೋಗಿದೆ. ಹೀಗಾಗಿ ಗ್ರಾಮದಲ್ಲಿ ನೀರಿನ ಸಮಸ್ಯೆ ಉಲ್ಬಣಗೊಂಡಿದೆ. ಕುಡಿಯುವ ನೀರಿಲ್ಲದೆ ಜನರು ಪರದಾಡುವಂತಾಗಿದೆ. ಸಮಸ್ಯೆ ಬಗೆಹರಿಸದಿದ್ದರೆ ಹೋರಾಟ ತೀವ್ರಗೊಳಿಸುವ ಪರಿಸ್ಥಿತಿ ಉಂಟಾಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ನೀರಿನ ಸಮಸ್ಯೆ ಪರಿಹರಿಸಿ ಹಾಗೂ ಮೂಲಸೌಕರ್ಯ ಒದಗಿಸುವಂತೆ ಬಿದರಹಳ್ಳಿ ಗ್ರಾಮ ಪಂಚಾಯಿತಿ ಅಧಿಕಾರಿಗಳ ಗಮನಕ್ಕೆ ತಂದಿದ್ದರೂ ಯಾವುದೇ ಪ್ರಯೋಜನವಾಗಿಲ್ಲ' ಎಂದು ದೂರಿದರು. ಹೀಗೆ ಮುಂದುವರಿದರೆ ಗ್ರಾಮ ಪಂಚಾಯಿತಿ ಮುಂದೆ ತೀವ್ರ ಹೋರಾಟ ಮಾಡುವುದಾಗಿ ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಆದೂರು ಚಂದ್ರಶೇಖರ್, ವೆಂಕಟೇಶ್, ಹೆಜ್ಜಾಲ ಮುನಿರಾಜು, ಆದೂರ್ ಚಂದ್ರಪ್ಪ, ವಜ್ರಪ್ಪ, ಹಳೆಹಳ್ಳಿ ಪರಮೇಶ್, ವಿಶ್ವನಾಥಪುರ ಶ್ರೀನಿವಾಸ್, ಚಿಕ್ಕಬಸವನಹಳ್ಳಿ ರವಿ ಇದ್ದರು.

ವರದಿಗಾರರ ಕೂಟಕ್ಕೆ ಅವಿರೋಧ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವರದಿಗಾರರ ಕೂಟದ ಅಧ್ಯಕ್ಷರಾಗಿ ಆರ್.ಟಿ.ವಿಠ್ಠಲ ಮೂರ್ತಿ, ಉಪಾಧ್ಯಕ್ಷರಾಗಿ ನಿರಂಜನ ಕೆ.ಎನ್, ಪ್ರಧಾನಕಾರ್ಯದರ್ಶಿಯಾಗಿ ಕಿರಣ್ ಎಚ್.ವಿ, ಜಂಟಿ ಕಾರ್ಯದರ್ಶಿಯಾಗಿ ಆರ್.ಎಚ್.ನಟರಾಜ್, ಖಜಾಂಚಿಯಾಗಿ ಶಿವಣ್ಣ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸದಸ್ಯರಾಗಿ ಕೆ.ಎಂ.ಶಿವರಾಜು, ಚಂದ್ರಶೇಖರ್ ಬಿ, ಕೆ.ಎಸ್. ಸೋಮಶೇಖರ್, ಸೈಯದ್ ಪೀರ್ ಪಾಷ ಖಾದ್ರಿ, ರಮ್ಯ ಬಿ.ಟಿ. ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
3ನೇ ಮತ್ತು 4ನೇ ಮಹಡಿ, ಜನೋಪಯೋಗಿ ಕಟ್ಟಡ, ಎಂ.ಜಿ. ರಸ್ತೆ, ಬೆಂಗಳೂರು–560 001.
ಫೋನ್: 080–2558 6550/2558 6399 ಇ–ಮೇಲ್: info@ksicsilk.com
ಸಂಖ್ಯೆ: ಕೆಎಸ್‌ಐಸಿ/ಪಿಆರ್/ಎಸ್‌ಡಬ್ಲ್ಯೂಎಫ್/ಎಎಂಸಿ–ಇ–ಜಾಕಾರ್ಡ್/01/2025–26 ದಿನಾಂಕ: 12.05.2025

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ)

ಕೆಎಸ್‌ಐಸಿ, ರೇಷ್ಮೆ ನೇಯ್ಗೆ ಕಾರ್ಖಾನೆ, ಮೈಸೂರು, ಇಲ್ಲಿನ ಮಗ್ಗಗಳಿಗೆ ಅಳವಡಿಸಲಾದ 10 ಸಂಖ್ಯೆಯ ಎಲೆಕ್ಟ್ರಾನಿಕ್ ಜಾಕಾರ್ಡ್‌ಗಳು–1056 ಹುಕ್‌ಗಳಿಗೆ ಮತ್ತು ಮೈಸೂರಿನ ಕೆಎಸ್‌ಐಸಿ, ಸಂಯುಕ್ತ ರೇಷ್ಮೆ ನೇಯ್ಗೆ ಘಟಕ, ಇಲ್ಲಿನ 10 ಸಂಖ್ಯೆಯ ಜಕಾರ್ಡ್ಸ್–256 ಹುಕ್ಸ್ ಗಳಿಗೆ ವಾರ್ಷಿಕ ನಿರ್ವಹಣಾ ಒಪ್ಪಂದಕ್ಕಾಗಿ ಹೆಸರಾಂತ ತಯಾರಕರು/ಗುತ್ತಿಗೆದಾರರಿಂದ ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.
ಟೆಂಡರ್ ದಸ್ತಾವೇಜು, ಟೆಂಡರ್ ಪ್ರಕಟಣೆಯ ವಿವರಗಳು, ವೇಳಾಪಟ್ಟಿ, ನಿಯಮಗಳು ಮತ್ತು ಷರತ್ತುಗಳನ್ನು https://kppp.karnataka.gov.in ನಿಂದ ಡೌನ್‌ಲೋಡ್ ಮಾಡಬಹುದಾಗಿದೆ. **ಇಎಂಡಿ ರೂ. 10,700/– ಮೊತ್ತದೊಂದಿಗೆ** ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **27–05–2025 ಅಪರಾಹ್ನ 3.00 ಗಂಟೆಯವರೆಗೆ.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **28–05–2025 ಅಪರಾಹ್ನ 3.30 ಗಂಟೆಗೆ.** ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಎಲ್ಲಾ ಕೆಲಸದ ದಿನದಂದು ಅಥವಾ ಕೆಪಿಪಿ ಪೋರ್ಟಲ್ ಸಹಾಯವಾಣಿ – 080–46010000/68948777 ಯಿಂದ ಪಡೆದುಕೊಳ್ಳಬಹುದಾಗಿದೆ.
ಸಹಿ/–
ವಾಸಾಸಂಇ/ವಾ.ಪ್ರ/707/ಎಂಎಎ/2025–26 ಪ್ರಧಾನ ವ್ಯವಸ್ಥಾಪಕರು(ಸಂ)

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ
ಪಂಚಾಯತ್‌ರಾಜ್‌ಇಂಜಿನಿಯರಿಂಗ್ ವಿಭಾಗ, ಮೈಸೂರು
ಸಂ./ಕಾಅ/ಪಂ.ರಾ.ಇಂ.ವಿ/ಮೈ/ಇ–ಪ್ರಕ್ಯೂರ್‌ಮೆಂಟ್/ಸ.ಇಂ/ಕಿ.ಇಂ.
ಅಲ್ಪಾವಧಿ ಇ–ಪ್ರಕ್ಯೂರ್‌ಮೆಂಟ್–ಟೆಂಡರ್ ಪ್ರಕಟಣೆ ಸಂಖ್ಯೆ. 02/2025–26, ದಿ: 15.05.2025

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ'ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮೈಸೂರುರವರು ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ ಬೆಂಗಳೂರುರವರ ಸಹಯೋಗದೊಂದಿಗೆ, KPWD ಇಲಾಖೆಯಲ್ಲಿ ಎನ್‌ರೋಲ್ ಮಾಡಿರುವ 4ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ಟೆಂಡರ್ ನಮೂನೆ KW-1 & 2 ಪದ್ಧತಿಯಂತೆ ಮೈಸೂರು ವಿಭಾಗ ವ್ಯಾಪ್ತಿಯ ವಿವಿಧ ಲೆಕ್ಕಶೀರ್ಷಿಕೆಗಳ ಯೋಜನೆ ಅನುದಾನದಡಿ ಟೆಂಡರ್ ಆಹ್ವಾನಿಸಲಾಗಿದ್ದು, ಮೈಸೂರು, ತಿ.ನರಸೀಪುರ ಮತ್ತು ನಂಜನಗೂಡು ತಾಲ್ಲೂಕುಗಳಲ್ಲಿ ಅನುಮೋದನೆಯಾಗಿದ್ದು, ಸದರಿ ಕಾಮಗಾರಿಗಳಲ್ಲಿ ಕಟ್ಟಡಗಳ ನಿರ್ಮಾಣ/ದುರಸ್ಥಿ/ಅಭಿವೃದ್ಧಿ, ಸ್ಮಶಾನ ಅಭಿವೃದ್ಧಿ ಹಾಗೂ ಸಿ.ಸಿ. ರಸ್ತೆ ಮತ್ತು ಚರಂಡಿ ನಿರ್ಮಾಣ, ಒಟ್ಟು 10 ಕಾಮಗಾರಿಗಳಿದ್ದು, ಸದರಿ ಕಾಮಗಾರಿಗಳ ಮೊತ್ತವು ರೂ.6.00 ಲಕ್ಷದಿಂದ 25.00 ಲಕ್ಷಗಳಾಗಿದ್ದು, ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್ ಲೈನ್‌ನಲ್ಲಿ ಸಲ್ಲಿಸಲು ದಿ: 19.05.2025 ರಿಂದ 30.05.2025 ಸಂಜೆ 16.00 ಘಂಟೆಯವರೆಗೆ ಹಾಗೂ ಟೆಂಡರ್ ಬಗ್ಗೆ ಸ್ಪಷ್ಟೀಕರಣ/ವಿಚಾರಿಸಿ ಮಾಹಿತಿ ಪಡೆಯಲು ಅಂತಿಮ ದಿ: 29.05.2025ರ ಸಂಜೆ 16.00 ಘಂಟೆಯಾಗಿದ್ದು, ಟೆಂಡರ್ ತೆರೆಯುವ ದಿ: 31.05.2025ರ ಸಂಜೆ 17.00 ಘಂಟೆಯ ನಂತರ ಟೆಂಡರ್ ಫಾರಂ ಬೆಲೆ ಇ–ಪ್ರಕ್ಯೂರ್‌ಮೆಂಟ್‌ನಂತೆ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (e-procurement portal) ವೆಬ್‌ಸೈಟ್‌ನಲ್ಲಿ ಪಡೆಯಬಹುದು https://kppp.karnataka.gov.in ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಕುವೆಂಪುನಗರ, ಮೈಸೂರು (ಫೋನ್ ನಂ.0821–2560853) ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರು, ಪಂ.ರಾ.ಇಂ.ವಿಭಾಗ, ಮೈಸೂರು
DIPR/DDMYS/198/KSMCA/169/2025-26

ಕೋಲಾರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.ಕೋಲಾರ
ಡೇರಿ ಆವರಣ, ಪಿ.ಬಿ.ನಂ 63, ಎನ್ ಹೆಚ್ – 75, ಹುತ್ತೂರು ಅಂಚೆ, ಕೋಲಾರ – 563102
[Ph.No 08152-282310, 7760978866 E-mail: komulproducts@yahoo.com]
ಕ್ರ.ಸಂ:ಕೋಹಾಒ/ಉತ್ಪಾದನೆ/ ಇ–ಪ್ರೊಕ್ಯೂರ್‌ಮೆಂಟ್/761/2025–26 ದಿನಾಂಕ:14/05/2025

ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಪ್ರಕಟಣೆ

ಕೋಲಾರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ಹಾಲನ್ನು ಅಗತ್ಯಯಂತೆ ರಾಜ್ಯ/ ಹೂರ ರಾಜ್ಯಗಳ ವಿವಿಧ ಡೇರಿ/ಪರಿವರ್ತನಾ ಘಟಕಗಳಿಗೆ ಹಾಲನ್ನು (ಶ್ಯೇಥೀಕರಿಸಿದ ಕಚ್ಚಾ ಹಾಲು, ಕೆನೆರಹಿತ ಹಾಲು, ಪ್ಯಾಶ್ಚುರೈಜರ್ಡ್ ಹಾಲು) ಕೋಲಾರ ಡೇರಿಯಿಂದ ಕರ್ನಾಟಕ ರಾಜ್ಯದೊಳಗಿನ ಮತ್ತು ಹೊರ ರಾಜ್ಯಗಳ ವಿವಿಧ ಸ್ಥಳಗಳಿಗೆ ರಸ್ತೆ ಹಾಲಿನ ಟ್ಯಾಂಕರ್‌ಗಳ ಮೂಲಕ ದ್ವೈವಾರ್ಷಿಕ ಗುತ್ತಿಗೆ ದರಗಳಲ್ಲಿ ಸಾಗಾಣಿಕೆ ಮಾಡಲು 19,000 ಮತ್ತು 24,000 ಕೆ.ಜಿ ಸಾಮರ್ಥ್ಯದ ಟ್ಯಾಂಕರ್‌ಗಳನ್ನು ಪೂರೈಸಲು ಅರ್ಹ ಬಿಡ್ಡುದಾರರಿಂದ ಟೆಂಡರ್ ಆಹ್ವಾನಿಸಿದ್ದು, ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ವಿವರಗಳನ್ನು https://Kppp.karnataka.gov.in/.ನಲ್ಲಿ ಪಡೆಯ ಬಹುದಾಗಿರುತ್ತದೆ.

ಟೆಂಡರ್ ಶುರುವಾಗುವ ದಿನಾಂಕ	:	19.05.2025
ಟೆಂಡರ್ ಬಗ್ಗೆ ಆಕ್ಷೇಪಣೆ ಸಲ್ಲಿಸುವ ಕೊನೆಯ ದಿನಾಂಕ	:	26.05.2025 ರ ಸಂಜೆ 5.30 ಗಂಟೆಯವರೆಗೆ
ಟೆಂಡರ್ ಅಪ್‌ಲೋಡ್ ಮಾಡಲು ಕಡೆಯ ದಿನಾಂಕ	:	02.06.2025 ರ ಸಂಜೆ 5.30 ಗಂಟೆಯವರೆಗೆ
ಟೆಂಡರ್ ತಾಂತ್ರಿಕ ಭಾಗ–1ನ್ನು ತೆರೆಯುವ ದಿನಾಂಕ	:	04.06.2025 ರಂದು ಬೆಳಗ್ಗೆ 11.00 ಗಂಟೆ ನಂತರ

ಸಹಿ/– ವ್ಯ.ನಿ,ಕೋಮುಲ್

ಮಾನ್ಯತಾ ಟೆಕ್ ಪಾರ್ಕ್, ನಾಗವಾರ ಜಂಕ್ಷನ್‌ಗೆ ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರರಾವ್ ಭೇಟಿ, ಪರಿಶೀಲನೆ

ಧಾರಾಕಾರ ಮಳೆ: ಸಾಯಿ ಲೇಔಟ್ ಜಲಾವೃತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹದೇವಪುರ ವಲಯ ವ್ಯಾಪ್ತಿಯಲ್ಲಿರುವ ಶ್ರೀಸಾಯಿ ಲೇಔಟ್ ಜಲಾವೃತವಾಗುವುದನ್ನು ತಪ್ಪಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಎಂ.ಮಹೇಶ್ವರ ರಾವ್ ಭರವಸೆ ನೀಡಿದರು.

ನಗರದಲ್ಲಿ ಶನಿವಾರ ಸುರಿದ ಮಳೆಯಿಂದಾಗಿ ಜಲಾವೃತಗೊಂಡಿದ್ದ ಶ್ರೀಸಾಯಿ ಲೇಔಟ್, ಮಾನ್ಯತಾ ಟೆಕ್ ಪಾರ್ಕ್ ಮತ್ತು ನಾಗವಾರ ಜಂಕ್ಷನ್‌ಗಳಿಗೆ ಭೇಟಿ ನೀಡಿದ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ಶ್ರೀಸಾಯಿ ಲೇಔಟ್ ಪ್ರದೇಶವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಅಭಿವೃದ್ಧಿಪಡಿಸಿದೆ. ಪ್ರಾಧಿಕಾರದ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಸಮಸ್ಯೆಯನ್ನು ತ್ವರಿತವಾಗಿ ಬಗೆಹರಿಸಲು ಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಿದರು.

'ಈ ಲೇಔಟ್ ರಾಜಕಾಲುವೆಗಿಂತ ತುಂಬ ತಗ್ಗಿನಲ್ಲಿದೆ. ಇದೇ ಕಾರಣಕ್ಕೆ ಪ್ರತಿ ಬಾರಿ ಮಳೆ ಬಂದಾಗ ಜಲಾವೃತ ವಾಗುತ್ತದೆ. ಜೊತೆಗೆ ರಾಜಕಾಲುವೆ ಹಾದುಹೋಗುವ ಜಾಗದಲ್ಲಿರುವ ರೈಲ್ವೆ ವೆಂಟ್ ಸಣ್ಣದಾಗಿದೆ. ಇದರಿಂದ ನೀರು ಸರಾಗವಾಗಿ ಹರಿದು ಹೋಗಲು ಸಮಸ್ಯೆಯಾಗುತ್ತಿದೆ' ಎಂದು ವಿವರಿಸಿದರು.

'ಈಗಾಗಲೇ ರೈಲ್ವೆ ಇಲಾಖೆ ಜೊತೆ ಸಮನ್ವಯ ಸಾಧಿಸಿ ರೈಲ್ವೆವೆಂಟ್ ವಿಸ್ತರಣೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಅದನ್ನು ತ್ವರಿತವಾಗಿ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ' ಎಂದರು.

ಲೇಔಟ್ ಪರಿಶೀಲನೆ ವೇಳೆ ಸ್ಥಳೀಯರಿಂದ ಅಹವಾಲು ಆಲಿಸಿದ ಮಹೇಶ್ವರ್, 'ಮಳೆಗಾಲ ಮುಗಿಯುವವರೆಗೂ ತಾತ್ಕಾಲಿಕವಾಗಿ ಸಂಪ್ ನಿರ್ಮಿಸಿ, ಅಲ್ಲಿ ತುಂಬುವ ನೀರನ್ನು ಹೊರ ಹಾಕಲು ಪಂಪ್ ಸೆಟ್ ವ್ಯವಸ್ಥೆ ಮಾಡುತ್ತೇವೆ. ಅದನ್ನು ನಿರ್ವಹಿಸಲು ಒಂದು ತಂಡವನ್ನೂ ನಿಯೋಜಿಸಲಾಗುವುದು. ನೀರು ನುಗ್ಗಿರುವ ಮನೆಗಳನ್ನು ಗುರುತಿಸಿ, ವಿಪತ್ತು ನಿರ್ವಹಣೆ ಅಡಿ ಪರಿಹಾರ ನೀಡಲಾಗುವುದು' ಎಂದು ಭರವಸೆ ನೀಡಿದರು.

ಮಹದೇವಪುರ ವಲಯ ಆಯುಕ್ತ ರಮೇಶ್, ಯಲಹಂಕ ವಲಯ ಜಂಟಿ ಆಯುಕ್ತ ಮೊಹ್ಮದ್ ನಯೀಮ್ ಮೊಮಿಮ್, ಕಾರ್ಯಪಾಲಕ ಎಂಜಿನಿಯರ್‌ಗಳು, ಪಾಲಿಕೆ ಹಾಗೂ ಮೆಟ್ರೊ ಅಧಿಕಾರಿಗಳು ಸೇರಿದಂತೆ ಸಂಬಂಧಪಟ್ಟ ವಿಭಾಗದ ಅಧಿಕಾರಿಗಳು ಉಪಸ್ಥಿತರಿದ್ದರು.

ಶ್ರೀಸಾಯಿಲೇಔಟ್‌ನ ಜಲಾವೃತ ಪ್ರದೇಶಗಳನ್ನು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರರಾವ್ ಪರಿಶೀಲಿಸಿದರು

ನಾಗರಿಕರಿಂದ ಅಹವಾಲು ಕೇಳುತ್ತಿರುವ ಬಿಬಿಎಂಪಿ ಮುಖ್ಯ ಆಯುಕ್ತ

ಟ್ರ್ಯಾಕ್ಟರ್ ಏರಿ ಲೇಔಟ್ ವೀಕ್ಷಣೆ

ಸಾಯಿ ಲೇಔಟ್‌ನಲ್ಲಿ ಜಲಾವೃತ ಆಗಿರುವ ಪ್ರದೇಶವನ್ನು ಮಹೇಶ್ವರರಾವ್ ಅವರು ಟ್ರ್ಯಾಕ್ಟರ್‌ನಲ್ಲಿ ಕುಳಿತು ಪರಿಶೀಲನೆ ನಡೆಸಿದರು. ಎಲ್ಲೆಲ್ಲಿ ನೀರು ನಿಂತಿದೆಯೋ ಅದನ್ನೆಲ್ಲಾ ಪಂಪ್‌ಗಳ ಮೂಲಕ ತ್ವರಿತವಾಗಿ ಹೊರ ಹಾಕುವ ವ್ಯವಸ್ಥೆ ಮಾಡಲು ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಅವರು ಸೂಚಿಸಿದರು.

ಕಂಪನಿಗಳ ಜೊತೆ ಸಭೆ

ಮಾನ್ಯತಾ ಟೆಕ್ ಬಳಿ ಬರುವ ಮಾನ್ಫೋ ಹತ್ತಿರದ ರಾಜಕಾಲುವೆ ಸಂಪರ್ಕ ಸರಿಯಾಗಿಲ್ಲದ ಕಾರಣ ಜಲಾವೃತವಾಗುತ್ತದೆ. ಈ ಸಂಬಂಧ ಹೊಸದಾಗಿ ಮಳೆ ನೀರುಗಾಲುವೆ ನಿರ್ಮಾಣ ಮಾಡಲು ಮಾನ್ಯತಾ, ಇ.ಬಿ.ಸ್ ಐಟಿ ಪಾರ್ಕ್, ಮ್ಯಾನ್ಫೊ, ಕಾರ್ಲೆ ಇನ್ಫಾಟೆಕ್ ಕಂಪನಿಗಳೊಂದಿಗೆ ಸಭೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

ಜಲಾವೃತ ಸ್ಥಳದಿಂದ ನೀರನ್ನು ಹೊರ ತೆಗೆಯಲಾಯಿತು

20 ಲೋಡ್ ಹೂಳು ತೆರವು

ನಾಗವಾರ ಜಂಕ್ಷನ್ ಬಳಿ ಮೆಟ್ರೊ ಕಾಮಗಾರಿ ನಡೆಯುತ್ತಿದೆ. ಮಳೆ ಬಂದಾಗ ಇಲ್ಲಿ ಜಲಾವೃತವಾಗುವುದನ್ನು ತಪ್ಪಿಸಲು ಮಳೆ ನೀರುಗಾಲುವೆಯನ್ನು ನಿರಂತರವಾಗಿ ಸ್ವಚ್ಛವಾಗಿಟ್ಟುಕೊಳ್ಳುವಂತೆ ಮೆಟ್ರೊ ಅಧಿಕಾರಿಗಳಿಗೆ ಮುಖ್ಯ ಆಯುಕ್ತರು ಸೂಚಿಸಿದರು. ಜೊತೆಗೆ 'ಹೈಡೆನ್ಸಿಟಿ ಕಾರಿಡಾರ್' ಕಾಮಗಾರಿ ಪ್ರಗತಿಯಲ್ಲಿದ್ದು, ಇದರಿಂದ ಕ್ರಾಸ್ ಕಲ್ವರ್ಟ್ ಕಾಮಗಾರಿ ಮಾಡುವಂತೆಯೂ ಸೂಚಿಸಿದರು.

ಥಣಿಸಂದ್ರದ ಬಳಿಯ ಮಳೆ ನೀರುಗಾಲುವೆಯಿಂದ ಈಗಾಗಲೇ 20 ಲೋಡ್ ಹೂಳನ್ನು ತೆರವುಗೊಳಿಸಲಾಗಿದೆ. ಬಾಕಿಯಿರುವ ಹೂಳನ್ನೂ ಶೀಘ್ರ ತೆರವುಗೊಳಿಸಿ, ಮಳೆ ನೀರುಗಾಲುವೆ ಮೇಲೆ ಸ್ಲ್ಯಾಬ್‌ಗಳನ್ನು ಅಳಡಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು

'ಮೂಲಸೌಲಭ್ಯ ಒದಗಿಸಲು ಕ್ರಮ'

ರಾಜಾನುಕುಂಟೆ ಗ್ರಾಮ ಪಂಚಾಯಿತಿ ವತಿಯಿಂದ ಆಯೋಜಿಸಿದ್ದ ಗ್ರಾಮಸಭೆಯಲ್ಲಿ ಆಟ್‌ಮಾಸ್ ಕನಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್ ವತಿಯಿಂದ ಕೊಡುಗೆಯಾಗಿ ನೀಡಲಾದ ಟಾಟಾ ಏಸ್ ವಾಹನದ ಕೀ ಮತ್ತು ದಾಖಲೆಯನ್ನು ಸಂಸ್ಥೆಯ ನಿರ್ದೇಶಕ ವಿ.ಲೋಕೇಶ್, ಪಂಚಾಯಿತಿ ಅಧ್ಯಕ್ಷೆ ಭವಾನಿ ಶ್ರೀನಿವಾಸ್ ಅವರಿಗೆ ಹಸ್ತಾಂತರಿಸಿದರು

ಪ್ರಜಾವಾಣಿ ವಾರ್ತೆ

ಯಲಹಂಕ: 'ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಈಗಾಗಲೆ ವಾರ್ಡ್ ಮಟ್ಟದ ಸಭೆಗಳನ್ನು ನಡೆಸಲಾಗಿದೆ. ಮೂಲ ಸೌಕರ್ಯಗಳನ್ನು ಕಲ್ಪಿಸುವ ಕುರಿತು ಸಾರ್ವಜನಿಕರಿಂದ ಬಂದಿರುವ ಬೇಡಿಕೆಗಳಿಗೆ ಹಣಕಾಸಿನ ಲಭ್ಯತೆಯ ಅನುಸಾರ ಅನುಷ್ಠಾನಗೊಳಿಸಲು ಸಾಮಾನ್ಯಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗುವುದು' ಎಂದು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಭವಾನಿ ಶ್ರೀನಿವಾಸ್ ಹೇಳಿದರು.

ರಾಜಾನುಕುಂಟೆ ಗ್ರಾಮ ಪಂಚಾಯಿತಿ ವತಿಯಿಂದ ಆಯೋಜಿಸಿದ್ದ 2025-26ನೇ ಸಾಲಿನ ಮೊದಲ ಸುತ್ತಿನ ಗ್ರಾಮಸಭೆಯಲ್ಲಿ ಅವರು ಈ ವಿಷಯಲ್ಲಿ ಅವರು ಈ ವಿಷಯ ತಿಳಿಸಿದರು.

ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಎಸ್.ಜಿ.ನರಸಿಂಹಮೂರ್ತಿ, ಸದಸ್ಯರಾದ ಆರ್.ಡಿ.ರಾಜಣ್ಣ, ಸಂತೋಷ್‌ಕುಮಾರ್, ಚಿಕ್ಕಣ್ಣ, ಮಮತಾ, ಸುಜಾತ ಮಂಜುನಾಥ್, ಪಿಡಿಒ ನಾಗರಾಜ್, ಮುಖಂಡರಾದ ಅಪ್ಪಣ್ಣಗೌಡ, ಪ್ರಕಾಶ್‌ಗೌಡ ಮತ್ತಿತರರು ಉಪಸ್ಥಿತರಿದ್ದರು.

20ಕ್ಕೂ ಹೆಚ್ಚು ಮರಗಳು ಧರೆಗೆ • ನಾಲ್ಕು ದಿನ 'ಯೆಲ್ಲೊ ಅಲರ್ಟ್'

ಮುಂದುವರಿದ ಪೂರ್ವ ಮುಂಗಾರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮುಂಗಾರು ಪೂರ್ವ ಮಳೆ ಭಾನುವಾರವೂ ಮುಂದುವರಿದಿದ್ದು, ಕೆಲವೆಡೆ ಬಿರುಸಿನ ಮಳೆಯಾಗಿದೆ.

ಎಂ.ಜಿ.ರಸ್ತೆ, ವಿಧಾನಸೌಧ, ಶಾಂತಿನಗರ, ಕೆ.ಆರ್. ಮಾರ್ಕೆಟ್ ಸುತ್ತಮುತ್ತ ರಾತ್ರಿ 7.30 ಸುಮಾರಿಗೆ ಮಳೆ ಆರಂಭವಾಯಿತು. ರಾತ್ರಿ 9ರ ನಂತರವೂ ಕೆಲವೆಡೆ ಸೋನೆ ಮಳೆ ಮುಂದುವರಿದಿತ್ತು. ಕೆ.ಆರ್. ಮಾರ್ಕೆಟ್ ಮೇಲ್ಸೇತುವೆ ಕೆಳಭಾಗ, ಅನಿಲ್‌ಕುಂಬ್ಳೆ ವೃತ್ತದಲ್ಲಿ ನೀರು ನಿಂತು ಸಂಚಾರಕ್ಕೆ ತೊಂದರೆಯಾಯಿತು.

ನಗರದ ವಿವಿಧೆಡೆ 20ಕ್ಕೂ ಹೆಚ್ಚು ಮರಗಳು ಹಾಗೂ 50ಕ್ಕೂ ಹೆಚ್ಚು ಕೊಂಬೆಗಳು ಮುರಿದು ಬಿದ್ದಿದ್ದವು. ಕೆಲ ಮರಗಳನ್ನು ತೆರವುಗೊಳಿಸಲಾಗಿದ್ದು, ಉಳಿದವುಗಳ ತೆರವು ಕಾರ್ಯ ಪ್ರಗತಿಯಲ್ಲಿದೆ ಎಂದು ಬಿಬಿಎಂಪಿ ತಿಳಿಸಿದೆ.

ನಗರದಲ್ಲಿ ಸೋಮವಾರದಿಂದ ನಾಲ್ಕು ದಿನ ಭಾರಿ ಗಾಳಿ ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

19ರಿಂದ 22ರವರೆಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಮುಂದಿನ ನಾಲ್ಕು ದಿನಗಳು ಮೋಡ ಕವಿದ ವಾತಾವರಣ ಇರಲಿದ್ದು, ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ. ಗಂಟೆಗೆ 40ರಿಂದ 50 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಂಭವವಿದೆ. ಗರಿಷ್ಠ ಉಷ್ಣಾಂಶ 30 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ಉಷ್ಣಾಂಶ 20 ಡಿಗ್ರಿ ಸೆಲ್ಸಿಯಸ್ ಇರುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಇನ್ನು ಒಂದು ವಾರ ಮಳೆ ಮುಂದು-ವರಿಯಲಿದ್ದು, 23ರಿಂದ ಗಾಳಿಯ ವೇಗ ಕೊಂಚ ಕಡಿಮೆಯಾಗುವ ಸಂಭವವಿದೆ ಎಂದು ಮುನ್ಸೂಚನೆ ನೀಡಿದೆ.

ನಗರದಲ್ಲಿ ಕೆಲ ದಿನಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ ಗರಿಷ್ಠ ಉಷ್ಣಾಂಶ ಇಳಿಕೆಯಾಗಿದೆ. ಭಾನುವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡಂತೆ ಗರಿಷ್ಠ ಉಷ್ಣಾಂಶ 29.5 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ಸರಾಸರಿ ಗರಿಷ್ಠ ಉಷ್ಣಾಂಶಕ್ಕಿಂತ 4.8 ಡಿಗ್ರಿ ಸೆಲ್ಸಿಯಸ್ ಇಳಿಕೆಯಾಗಿದೆ.

ನಗರದಲ್ಲಿ ಶನಿವಾರ ಸುರಿದ ಧಾರಾಕಾರ ಮಳೆಯಿಂದಾಗಿ ಹೊಸಕೆರೆಹಳ್ಳಿಯ ರಸ್ತೆ ಕುಸಿದಿದೆ –ಪ್ರಜಾವಾಣಿ ಚಿತ್ರ

ಜಿಬಿಎ: ಜನಾಭಿಪ್ರಾಯ

'ಜಿಬಿಎ ರಚನೆಯ ನಂತರ ಮುಂದೇನಾಗಬೇಕು'– ಈ ಪ್ರಶ್ನೆಗೆ ಸಾರ್ವಜನಿಕರು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಇಲ್ಲಿವೆ.

ರಾಜ್ಯ ಸರ್ಕಾರ ಗ್ರೇಟರ್ ಬೆಂಗಳೂರು ಮಾಡಲು ಹೊರಟಿರುವುದು ಸರಿ. ಆದರೆ, ಸಂಚಾರ ದಟ್ಟಣೆಯ ಮಧ್ಯೆ ನಿತ್ಯ ಆಂಬುಲೆನ್ಸ್‌ಗಳು ಸಂಚರಿಸುತ್ತಿವೆ. ಆಂಬುಲೆನ್ಸ್ ಸಂಚರಿಸಲು ಒಂದು ಪ್ರತ್ಯೇಕ ರಸ್ತೆ ನಿರ್ಮಿಸಬೇಕು. ನಗರದ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡಿದ ನಂತರ ಜಿಬಿಎ ರಚನೆ ಮಾಡಬೇಕು.

ಮಂಜುಳಾ ಎಚ್.ವಿ., ಬಸವೇಶ್ವರನಗರ

ನಗರದಲ್ಲಿ ರಸ್ತೆ, ನೀರು, ವಿದ್ಯುತ್, ಉದ್ಯಾನ ಸೇರಿದಂತೆ ಮೂಲ ಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡಬೇಕು. ನಗರ ಸಾರಿಗೆ ವ್ಯವಸ್ಥೆ ಸುಧಾರಣೆಗೆ ಕ್ರಮ ಕೈಗೊಳ್ಳಬೇಕು. ಸಂಚಾರ ದಟ್ಟಣೆ ನಿಯಂತ್ರಿಸಬೇಕು. ವೇಗವಾಗಿ ಬೆಳೆಯುತ್ತಿರುವ ನಗರದಲ್ಲಿ ಹಸಿರು ಪ್ರದೇಶವನ್ನು ರಕ್ಷಿಸಿ, ಬೆಳೆಸಬೇಕು. ಉದ್ಯೋಗ ಸೃಷ್ಟಿ, ವ್ಯಾಪಾರ–ವಹಿವಾಟಿನ ವಿಸ್ತರಣೆಗೆ ಅವಕಾಶ ನೀಡಿದ ನಂತರ ಜಿಬಿಎ ರಚನೆಗೆ ಮುಂದಾಗಬೇಕು.

ಸಿದ್ದು ಮೈದೊಳಲು, ಜ್ಞಾನಭಾರತಿ

ರಾಜ್ಯ ಸರ್ಕಾರ ಬಿಬಿಎಂಪಿಯನ್ನು ಜಿಬಿಎ ಮಾಡುವ ಮುನ್ನ ನಗರದ ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚಬೇಕು. ಗ್ಯಾರಂಟಿ ಯೋಜನೆಗಳನ್ನು ಸ್ಥಗಿತಗೊಳಿಸಿ, ಹಾಲು, ಮೊಸರಿನ ಬೆಲೆ ನಿಯಂತ್ರಿಸಬೇಕು. ಬಿಬಿಎಂಪಿ ಮನೆ ತೆರಿಗೆ, ಕಾವೇರಿ ನೀರಿನ ತೆರಿಗೆ ಕಡಿತಗೊಳಿಸಬೇಕು. ನಗರದಲ್ಲಿ ಖಾಸಗಿ ಶಾಲೆಗಳಲ್ಲಿ ಪ್ರವೇಶ ಶುಲ್ಕ ಹೆಚ್ಚಿಸಲಾಗಿದೆ. ಈ ಎಲ್ಲ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಿದ ನಂತರ ಜಿಬಿಎ ಮಾಡಿದರೆ ಸಾರ್ವಜನಿಕರಿಗೆ ಅನುಕೂಲವಾಗಲಿದೆ.

ಎಂ.ಲಿಂಗರಾಜು ಗೌಡ, ಮಲ್ಲತ್ತಹಳ್ಳಿ

ಬೆಂಗಳೂರು ನಗರ ಮತ್ತು ಅದರ ಸುತ್ತಮುತ್ತಲಿನ ನಗರಗಳು ವೇಗವಾಗಿ ಬೆಳೆಯುತ್ತಿವೆ. ಇದಕ್ಕೆ ಪೂರಕವಾಗಿ ಮೂಲಸೌಕರ್ಯ ಅಭಿವೃದ್ಧಿಗೆ ಜಿಬಿಎಗೆ ಆದ್ಯತೆ ನೀಡಬೇಕಿದೆ. ಪಾದಚಾರಿ ಮಾರ್ಗ, ಸರ್ವೀಸ್ ರಸ್ತೆಗಳು ಒತ್ತುವರಿಯಾಗಿವೆ. ಸಂಬಂಧಪಟ್ಟ ಅಧಿಕಾರಿಗಳು ಇವುಗಳನ್ನು ತೆರವುಗೊಳಿಸಬೇಕು. ಉದ್ಯಾನ ನಗರಿಯ ಶ್ವಾಸಕೋಶಗಳಂತಿರುವ ಉದ್ಯಾನಗಳ ನಿರ್ವಹಣೆ ಹಾಗೂ ಸಂರಕ್ಷಣೆಗೆ ವಿನೂತನ ಯೋಜನೆಗಳನ್ನು ರೂಪಿಸಬೇಕು.

ಸಿದ್ದಣ್ಣ ಪೂಜಾರಿ, ವಿಜಯನಗರ

ಜಿಬಿಎ ಆಯ್ತು: ಮುಂದೇನಾಗಬೇಕು

'ಗ್ರೇಟರ್ ಬೆಂಗಳೂರು ಪ್ರದೇಶ' ಘೋಷಣೆಯಾಗಿದೆ. ಮುಂದೆ ಏನಾಗಬೇಕು? ಪ್ರತಿಕ್ರಿಯಿಸಿ. ಮಾಹಿತಿ ಸಂಕ್ಷಿಪ್ತವಾಗಿರಲಿ.ಜೊತೆಗೆ ವಿಳಾಸ, ಭಾವಚಿತ್ರವಿರಲಿ.

9606038256

'ಗ್ರೇಟರ್ ಅಲ್ಲ, ಲೂಟರ್ ಬೆಂಗಳೂರು'

ಪ್ರಜಾವಾಣಿ ವಾರ್ತೆ

ಎಚ್‌.ಡಿ. ಕುಮಾರಸ್ವಾಮಿ

ಬೆಂಗಳೂರು: 'ಗ್ರೇಟರ್ ಬೆಂಗಳೂರು ಹೆಚ್ಚು ಮಳೆಯಾದರೆ ಮುಳುಗುತ್ತದೆ. ಕಡಿಮೆ ಮಳೆಯಾದರೆ ತೇಲುತ್ತದೆ. ಇದು ಗ್ರೇಟರ್ ಬೆಂಗಳೂರು ಅಲ್ಲ, ಲೂಟರ್ ಬೆಂಗಳೂರು' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಶನಿವಾರ ಸಂಜೆ ಮತ್ತು ರಾತ್ರಿ ಬೆಂಗಳೂರಿನಲ್ಲಿ ಸುರಿದ ಭಾರಿ ಮಳೆಯಿಂದ ರಸ್ತೆಗಳಲ್ಲಿ ನೀರು ನಿಂತಿದ್ದ ಚಿತ್ರಗಳನ್ನು ಪೋಸ್ಟ್ ಮಾಡಿರುವ ಅವರು, 'ರಸ್ತೆಗಳಲ್ಲಿಯೇ ಕೆರೆ, ಚರಂಡಿ. ಗುಂಡಿಗೆ ಹಿಡಿ ಮಣ್ಣು ಹಾಕುವುದಕ್ಕೂ ಬಿಡಿಗಾಸಿಲ್ಲ, ಸುರಂಗ ಮಾರ್ಗಕ್ಕೆ ಮಾತ್ರ ಸಾವಿರಾರು ಕೋಟಿ ಟೆಂಡರು. ಹೊಟ್ಟೆಗೆ ಹಿಟ್ಟಿಲ್ಲ, ಜುಟ್ಟಿಗೆ ಮಲ್ಲಿಗೆ ಹೂವು' ಎಂದಿದ್ದಾರೆ.

'ವಾರಕ್ಕೊಮ್ಮೆ ತೆರಿಗೆ ಬರೆ, ದರ ಏರಿಕೆ. ಜನರೆಂದರೆ ಜೀವರಹಿತ ಕಲ್ಲುಬಂಡೆಗಳೇ? ಮನಸೋ ಇಚ್ಛೆ ಒಡೆದು ಬಡಿದು ನುಂಗಲು. ನಾಡು ಎಂದರೆ ಕಲ್ಲು ಬಂಡೆಗಳಲ್ಲ, ನಾಡು ಎಂದರೆ ಮನುಷ್ಯರು' ಎಂದಿದ್ದಾರೆ.

'ಕೆರೆಯ ನೀರನು ಕೆರೆಗೆ ಚೆಲ್ಲುತ್ತಿಲ್ಲವೇಕೆ? ಕೆರೆ ನೀರಿಗೆ ಕಮಿಷನ್‌ನ ಕೋಡಿ ಬಿದ್ದಿದೆ. ಜಾಹೀರಾತುಗಳಲ್ಲಿ ಬಣ್ಣಬಣ್ಣವಾಗಿ ಕಾಣುವ ಬೆಂಗಳೂರು, ನೈಜವಾಗಿ ನಿಟ್ಟುಸಿರು ಬಿಡುತ್ತಿದೆಯೇಕೆ? ಬರುತ್ತಿರುವ ಆದಾಯ ಎಲ್ಲಿ ಹೋಗುತ್ತಿದೆ? ನಗರದ ಜನರ ಬೆವರಿನ ಹಣ ಏನಾಗುತ್ತಿದೆ' ಎಂದು ಪ್ರಶ್ನಿಸಿದ್ದಾರೆ.

'ಗುಂಡಿ ಮುಚ್ಚಲು ಗತಿ ಇಲ್ಲ. ಚರಂಡಿ ಕಸ ಎತ್ತಲು ದಿಕ್ಕಿಲ್ಲ. ಆದರೆ, ನಿತ್ಯವೂ ಗುದ್ದಲಿಪೂಜೆ, ಶಂಕುಸ್ಥಾಪನೆ. ಹೊಸ ಶೀಶೆ, ಹಳೇ ಮದ್ಯ. ಹಳೇ ಕಾಮಗಾರಿ, ಹೊಸ ಬಿಲ್ಲು' ಎಂದಿದ್ದಾರೆ.

ಹುಲಿಕುಂಟೆ ಶಾಸನ ಪತ್ತೆ

ಕೂಡ್ಲಿಗಿ (ಬಳ್ಳಾರಿ ಜಿಲ್ಲೆ): ತಾಲ್ಲೂಕಿನ ಹುಲಿಕುಂಟೆಯ ಹೊಸಕೆರೆಕಟ್ಟೆಯಲ್ಲಿ ಶಾಸನ ಪತ್ತೆಯಾಗಿದೆ ಎಂದು ಪಟ್ಟಣದ ಎಸ್‌ಎವಿಟಿ ಸರ್ಕಾರಿ ಪದವಿ ಕಾಲೇಜಿನ ಅಧ್ಯಾಪಕ ಓ. ಓಬಯ್ಯ ತಿಳಿಸಿದ್ದಾರೆ.

ಸುಮಾರು 6 ಅಡಿ ಉದ್ದ , 1 ಅಡಿ ಅಗಲ ಕೆತ್ತಲಾದ ಶಾಸನದಲ್ಲಿ ಸೂರ್ಯ ಚಂದ್ರರ ಮಧ್ಯ ಶ್ರೀ ಅಕ್ಷರವಿದ್ದು, ಶ್ರೀ ಕೃಷ್ಣ ಪದ ಉಲ್ಲೇಖವಿದೆ. ಹುಲಿಕುಂಟೆಯ ಭೀಮನಗಾನು ಎಂಬುವರ ಜಮೀನಿನಲ್ಲಿ ಡಾಲಿಗಾರು ಪುತ್ರರೊಂದಿಗೆ 1890ರಲ್ಲಿ ಕೆರೆ ಕಟ್ಟಿಸಿದ ಬಗ್ಗೆ ಮತ್ತು ಕೆರೆ ನಿರ್ಮಾಣಕ್ಕೆ ತಗುಲಿದ ವೆಚ್ಚದ ಬಗ್ಗೆ ತಿಳಿಸುತ್ತದೆ.

'ಈ ಶಾಸನವು ಕನ್ನಡ ಲಿಪಿಯ 16 ಸಾಲುಗಳನ್ನು ಒಳಗೊಂಡಿದ್ದು. ಅಲ್ಲಲ್ಲಿ ಕನ್ನಡ ಮತ್ತು ಇಂಗ್ಲಿಷ್ ಅಂಕೆಗಳನ್ನು ಬಳಸಿರುವುದು ಕಂಡು ಬರುತ್ತದೆ. ಒಟ್ಟಿನಲ್ಲಿ ಈ ಶಾಸನದ ಲಿಪಿ ಮತ್ತು ಆರಂಭದಲ್ಲಿ ಶ್ರೀ ಕೃಷ್ಣ ಪದದ ಉಲ್ಲೇಖದ ಆಧಾರದ ಮೇಲೆ ಮೈಸೂರು ಒಡೆಯರ ಕಾಲದ ಶಾಸನವೆಂದು ಗುರುತಿಸಬಹುದು' ಎಂದು ಅವರು ತಿಳಿಸಿದ್ದಾರೆ.

'ಮಕ್ಕಳಿಗೆ ದಾರ್ಶನಿಕರ ತತ್ವ– ವಿಚಾರ ತಿಳಿಸಿ'

ಪ್ರಜಾವಾಣಿ ವಾರ್ತೆ

ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ವೀರಶೈವ ಲಿಂಗಾಯತ ಸಮುದಾಯದ ಸಾಧಕರನ್ನು ಅಭಿನಂದಿಸಲಾಯಿತು

ಪೀಣ್ಯ ದಾಸರಹಳ್ಳಿ: 'ಮಕ್ಕಳಿಗೆ ವಿದ್ಯಾಭ್ಯಾಸದ ಜೊತೆಗೆ ದಾರ್ಶನಿಕರ ತತ್ವಗಳನ್ನು, ಆಚಾರ–ವಿಚಾರಗಳನ್ನು ಕಲಿಸಬೇಕು. ಸಂಸ್ಕಾರವಂತ ಮಕ್ಕಳು ಮನೆಗೆ ಮತ್ತು ಸಮಾಜಕ್ಕೆ ದಾರಿದೀಪವಾಗುತ್ತಾರೆ' ಎಂದು ಆನೇಕಲ್ ವೀರಧರ್ಮ ಸಿಂಹಾಸನ ಸಂಸ್ಥಾನ ಮಠದ ಪಟ್ಟದ ರಾಜೇಶ್ವರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಚಿಕ್ಕಬಾಣಾವರದ ರಾಘವೇಂದ್ರ ಪವಮಾನ ಮಂದಿರದಲ್ಲಿ ವಿಶ್ವವೀರಶೈವ ಲಿಂಗಾಯತ ವೇದಿಕೆ ಸಹಯೋಗದೊಂದಿಗೆ ಶ್ರೀ ವೀರಶೈವ ಲಿಂಗಾಯತ ವೇದಿಕೆ ಆಯೋಜಿಸಿದ್ದ ಶಿವಕುಮಾರ ಸ್ವಾಮೀಜಿ ಅವರ 118ನೇ ಜನ್ಮದಿನೋತ್ಸವ, ವೇದಿಕೆಯ 14ನೇ ವಾರ್ಷಿಕೋತ್ಸವ, ಬಸವ ಜಯಂತಿ ಮತ್ತು ರೇಣುಕಾಚಾರ್ಯ ಜಯಂತಿ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಕನ್ನಡ ಜಾನಪದ ಪರಿಷತ್ತಿನ ದಾಸರಹಳ್ಳಿ ಕ್ಷೇತ್ರ ಘಟಕದ ಅಧ್ಯಕ್ಷ ವೈ.ಬಿ.ಎಚ್ ಜಯದೇವ್, 'ಕ್ರಾಂತಿಯೋಗಿ ಬಸವಣ್ಣನವರನ್ನು ನಮ್ಮ ಸರ್ಕಾರ ಸಾಂಸ್ಕೃತಿಕ ನಾಯಕ ಎಂದು ಘೋಷಿಸಿದೆ. ಆದರೆ ಬಸವಣ್ಣನವರು ಇಡೀ ವಿಶ್ವಕ್ಕೆ ಅತ್ಯುತ್ತಮ ಸಂದೇಶ ಕೊಟ್ಟ ವಿಶ್ವದ ಸಾಂಸ್ಕೃತಿಕ ನಾಯಕ' ಎಂದರು.

ಸಮಾರಂಭದಲ್ಲಿ ಉಚಿತ ಲಿಂಗ ದೀಕ್ಷೆ, ಕವಯಿತ್ರಿ ಪುಷ್ಪ ಬಸವರಾಜ ಬಣಕಾರ ಅವರ 'ಎನ್ನೊಳಗಣ ಬಸವಪ್ರಭು' ಕವನ ಸಂಕಲನ ಬಿಡುಗಡೆ, ಭೂಮಿಕಾ ಕೊಣ್ಣೂರ ಅವರಿಂದ ಭರತನಾಟ್ಯ, ಪ್ರತಿಭಾ ಪುರಸ್ಕಾರ, ಭಕ್ತಿಗೀತೆಗಳ ಗಾಯನ ಮತ್ತು ಸಾಧಕರಿಗೆ ಸನ್ಮಾನ ಕಾರ್ಯಕ್ರಮಗಳು ನಡೆದವು.

ಶಿವಾಜಿನಗರದ ಜಂಗಮ ಮಠದ ಚನ್ನಬಸವಾನಂದ ಸ್ವಾಮೀಜಿ, ವೇದಿಕೆಯ ಕಾರ್ಯದರ್ಶಿ ಎಂ.ಎಚ್. ಪಾಟೀಲ್, ಸಮಾಜ ಸೇವಕರಾದ ಎಂ.ಬಿ. ದಯಾನಂದ್, ಎಂ.ಕೆ. ಜಗದೀಶ್, ಉತ್ತರ ಕರ್ನಾಟಕ ಸಂಘಗಳ ಒಕ್ಕೂಟದ ಅಧ್ಯಕ್ಷ ಶಿವಕುಮಾರ್ ಮೇಟಿ, ಲತಾ ಕುಂದರಗಿ, ಅಶೋಕ್ ಎಸ್ ಪಾಟೀಲ್, ಶಿವಗಂಗಾಧರ್, ಹನುಮಂತಪ್ಪ ಮೇಡೆಗಾರ ಹಾಗೂ ಇತರರು ಇದ್ದರು.

ಪದ್ಮಪ್ರಿಯಾಗೆ ಅವಳಿ ಪ್ರಶಸ್ತಿ

ಪದ್ಮಪ್ರಿಯಾ

ಬೆಂಗಳೂರು: ಮೈಸೂರಿನ ಪದ್ಮಪ್ರಿಯಾ ರಮೇಶ್ ಕುಮಾರ್ ಅವರುಬಹ್ರೇನ್‌ನಲ್ಲಿ ನಡೆದ 14 ವರ್ಷದೊಳಗಿನವರ ಏಷ್ಯನ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ 'ಡಬಲ್' ಪ್ರಶಸ್ತಿ ಗೆದ್ದುಕೊಂಡಿದ್ದಾರೆ.

ಭಾರತ ಪ್ರತಿನಿಧಿಸಿದ್ದ ಪದ್ಮಪ್ರಿಯಾ ಬಾಲಕಿಯರ ಸಿಂಗಲ್ಸ್ ಮತ್ತು ಡಬಲ್ಸ್‌ನಲ್ಲಿ ಚಾಂಪಿಯನ್ ಆಗಿದ್ದಾರೆ. ಸಿಂಗಲ್ಸ್ ಫೈನಲ್‌ನಲ್ಲಿ ಪದ್ಮಪ್ರಿಯಾ 6-1, 6-1ರ ನೇರ ಸೆಟ್‌ಗಳಿಂದ ಆತಿಥೇಯ ಬಹ್ರೇನ್‌ನ ಸೋಫಿಯಾ ಬೇಡರ್ ಅವರನ್ನು ಮಣಿಸಿ ಕಿರೀಟ ಮುಡಿಗೇರಿಸಿಕೊಂಡರು.

ಮೊದಲ ಸುತ್ತಿನಲ್ಲಿ ಬೈ ಪಡೆದ ಅವರು 2ನೇ ಸುತ್ತಿನಲ್ಲಿ 6-0, 6-1ರಿಂದ ರಷ್ಯಾದ ವಿಕ್ಟೋರಿಯಾ ಕಾರ್ಪೆಂಕೊ ವಿರುದ್ಧ; ಕ್ವಾರ್ಟರ್ ಫೈನಲ್‌ನಲ್ಲಿ 6-0, 6-0 ಯಿಂದ ಫಿಲಿಪೀನ್ಸ್ ಸಾರಾ ಬೆರ್ಮಾಸ್ ವಿರುದ್ಧ; ಸೆಮಿಫೈನಲ್‌ನಲ್ಲಿ 6-0, 6-1ರಿಂದ ಸೌದಿ ಅರೇಬಿಯಾದ ಫಾತಿಮಾ ಅಲ್ಬಾಜಾರಿ ವಿರುದ್ಧ ಸುಲಭ ಗೆಲುವು ಸಾಧಿಸಿದ್ದರು.

ಡಬಲ್ಸ್‌ನಲ್ಲಿ ರಷ್ಯಾದ ವಿಕ್ಟೋರಿಯಾ ಕಾರ್ಪೆಂಕೊ ಅವರೊಂದಿಗೆ ಕಣಕ್ಕಿಳಿದಿದ್ದ ಪದ್ಮಪ್ರಿಯಾ ಫೈನಲ್‌ನಲ್ಲಿ 6-2, 6-2ರಿಂದ ಸೋಫಿಯಾ ಬೇಡರ್ ಮತ್ತು ಸಾರಾ ಬೆರ್ಮಾಸ್ ಜೋಡಿಯನ್ನು ಮಣಿಸಿದರು.

ನಗರಾಭಿವೃದ್ಧಿ ಇಲಾಖೆ

ಸದೃಢ ನಗರಗಳು ಸುಧಾರಿತ ಜೀವನ

ವರ್ಷ ಎರಡು ಸಾಧನೆ ಹಲವು

ಕರ್ನಾಟಕದ ನವ ನಿರ್ಮಾಣಕ್ಕೆ
ಗ್ಯಾರಂಟಿ ಸರ್ಕಾರ

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ

- ಹುಬ್ಬಳ್ಳಿ- ಧಾರವಾಡ, ಬೆಳಗಾವಿ ಮತ್ತು ಕಲಬುರಗಿ ನಗರಗಳಲ್ಲಿ ರೂ.3,740 ಕೋಟಿ ಮೊತ್ತದ 24x7 ನಿರಂತರ ನೀರು ಸರಬರಾಜು ಯೋಜನೆ
- ಜಲಸಿರಿ ಯೋಜನೆಯಡಿ 8 ನಗರಗಳಲ್ಲಿ ರೂ.2,187 ಕೋಟಿ ಮೊತ್ತದಲ್ಲಿ ಕುಡಿಯುವ ನೀರು ಸರಬರಾಜು/ ಒಳಚರಂಡಿ ಯೋಜನೆ
- 110 ಪಟ್ಟಣಗಳಲ್ಲಿ ರೂ.400.24 ಕೋಟಿಗಳಲ್ಲಿ FSTP ನಿರ್ಮಾಣ ಯೋಜನೆ
- 54 ನಗರ/ ಪಟ್ಟಣಗಳಲ್ಲಿ ರೂ.1,518 ಕೋಟಿ ಮೊತ್ತದಲ್ಲಿ ಒಳಚರಂಡಿ ಯೋಜನೆ
- 268 ಪಟ್ಟಣಗಳಲ್ಲಿ ರೂ.1359 ಕೋಟಿ ಮೊತ್ತದಲ್ಲಿ 927 MLD ಸಾಮರ್ಥ್ಯದ STP ನಿರ್ಮಾಣ ಯೋಜನೆ
- ಸ್ಮಾರ್ಟ್ ಸಿಟಿ ಯೋಜನೆಯಡಿ ರೂ.5,736 ಕೋಟಿ ಮೊತ್ತದ ಕಾಮಗಾರಿಗಳು ಪೂರ್ಣ; ರೂ.617 ಕೋಟಿ ಮೊತ್ತದ ಕಾಮಗಾರಿಗಳು ಪ್ರಗತಿಯಲ್ಲಿ

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

- 13 ಕುಡಿಯುವ ನೀರು ಸರಬರಾಜು ಯೋಜನೆಗೆ ಅಂದಾಜು ಮೊತ್ತ ರೂ.1,271.87 ಕೋಟಿ ವಿನಿಯೋಗ
- 18 ಒಳಚರಂಡಿ ಯೋಜನೆಗಳಿಗೆ ರೂ.476.53 ಕೋಟಿ ಅನುದಾನ
- ಒಟ್ಟು ಅಂದಾಜು ಮೊತ್ತ ರೂ.1,748 ಕೋಟಿಗಳ 31 ಯೋಜನೆಗಳಿಗೆ ಚಾಲನೆ

ಪೌರಾಡಳಿತ ನಿರ್ದೇಶನಾಲಯ

- ಖಾಯಂ ಪೌರಕಾರ್ಮಿಕರಿಗೆ ಗೃಹಭಾಗ್ಯ ಯೋಜನೆಯಡಿಯಲ್ಲಿ ಸ್ವಂತ ನಿವಾಸ
- 197 ಇಂದಿರಾ ಕ್ಯಾಂಟೀನ್‌ಗಳ ಜೊತೆ ಹೆಚ್ಚುವರಿ 186 ಹೊಸ ಕ್ಯಾಂಟೀನ್‌ಗಳ ಅನುಷ್ಠಾನ
- ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆ (ಹಂತ-2) ಅಡಿಯಲ್ಲಿ ಮಹಾನಗರಪಾಲಿಕೆಗಳ ಅಭಿವೃದ್ಧಿಗೆ ರೂ.2,200 ಕೋಟಿ ವಿನಿಯೋಗ
- ಇದುವರೆಗೆ ಇ-ಖಾತಾ 1,47,497, ಬಿ-ಖಾತಾ 1,07,133, 3 ತಿಂಗಳಲ್ಲಿ ಒಟ್ಟು 2,54,630 ಖಾತಾ ವಿತರಿಸಲಾಗಿದೆ
- ರಾಜ್ಯದ 1198 ಪೌರಕಾರ್ಮಿಕರಿಗೆ ವಿಶೇಷ ನೇಮಕಾತಿ ಮೂಲಕ ಖಾಯಮಾತಿ

ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಆಯುಕ್ತಾಲಯ

- 108 ಸ್ಥಳೀಯ ಯೋಜನಾ ಪ್ರದೇಶಗಳ ಮಹಾಯೋಜನೆಗಳಿಗೆ ಅನುಮೋದನೆ
- 69 ನಗರಗಳಲ್ಲಿ ಜಿ.ಐ.ಎಸ್. ಆಧಾರಿತ ಮಹಾಯೋಜನೆ
- ನಗರಾಭಿವೃದ್ಧಿ ಪ್ರಾಧಿಕಾರಗಳು/ ಯೋಜನಾ ಪ್ರಾಧಿಕಾರಗಳ ವ್ಯಾಪ್ತಿಯಲ್ಲಿನ ಭೂ ಉಪಯೋಗ ಬದಲಾವಣೆ, ವಿನ್ಯಾಸ ಅನುಮೋದನೆಗೆ ಇ-ಆಡಳಿತದ ಸಹಯೋಗದೊಂದಿಗೆ ULMS ತಂತ್ರಾಂಶ

ಪ್ರಗತಿಯತ್ತ ಕರ್ನಾಟಕ
ಸಮರ್ಪಣೆ ಸಂಕಲ್ಪ

ಎರಡು ವರ್ಷಗಳ ಸಾಧನೆಯ ಸಮರ್ಪಣೆ ಮತ್ತಷ್ಟು ಜನಪರ ಸೇವೆಯ ಪ್ರತಿಜ್ಞೆ.

ಒಂದು ಲಕ್ಷ ಕುಟುಂಬಗಳಿಗೆ ಕಂದಾಯ ಗ್ರಾಮ ಹಕ್ಕು ಪತ್ರ ಸಮರ್ಪಣೆ.

ಜಿಲ್ಲಾ ಕ್ರೀಡಾಂಗಣ, ಹೊಸಪೇಟೆ
ವಿಜಯನಗರ ಜಿಲ್ಲೆ

20 ಮೇ 2025 | ಬೆಳಿಗ್ಗೆ 11:00 ಗಂಟೆ

ಸರ್ವರಿಗೂ ಆದರದ ಸ್ವಾಗತ

ನಗರ ನೀರು ನೈರ್ಮಲ್ಯ

ಎರಡು ವರ್ಷಗಳ ನಿರಂತರ ಪ್ರಗತಿ



ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರೊಂದಿಗೆ ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆಗಳ ಸಚಿವರಾದ ಶ್ರೀ ಬಿ.ಎಸ್. ಸುರೇಶ್ ಅವರು

ಕರ್ನಾಟಕದ ನವ ನಿರ್ಮಾಣಕ್ಕೆ
ಗ್ಯಾರಂಟಿ ಸರ್ಕಾರ

ಶಕ್ತಿ ಅನ್ನಭಾಗ್ಯ ಗೃಹ ಜ್ಯೋತಿ ಗೃಹಲಕ್ಷ್ಮಿ ಯುವನಿಧಿ

ಸಂಕ್ಷಿಪ್ತ ಸುದ್ದಿ

ನಿಯೋಗದಲ್ಲಿ ತೇಜಸ್ವಿ, ಚೌಟಗೆ ಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾಕಿಸ್ತಾನದ ಭಯೋತ್ಪಾದನೆ ಚಟುವಟಿಕೆ ಮತ್ತು ಆಪರೇಷನ್ ಸಿಂಧೂರ ಕುರಿತು ವಿವಿಧ ರಾಷ್ಟ್ರಗಳಿಗೆ ಮಾಹಿತಿ ನೀಡಲು ತೆರಳಲಿರುವ ಉನ್ನತ ಮಟ್ಟದ ನಿಯೋಗದಲ್ಲಿ ಬೆಂಗಳೂರು ದಕ್ಷಿಣದ ಸಂಸದ ತೇಜಸ್ವಿ ಸೂರ್ಯ ಮತ್ತು ಮಂಗಳೂರು ಸಂಸದ ಕ್ಯಾ. ಬ್ರಿಜೇಶ್ ಚೌಟ ಸೇರಿದ್ದಾರೆ.

ತೇಜಸ್ವಿ ಸೂರ್ಯ

ಬ್ರಿಜೇಶ್ ಚೌಟ

ಕೇಂದ್ರ ಸರ್ಕಾರ 32 ದೇಶಗಳು ಮತ್ತು ಯುರೋಪಿಯನ್ ಒಕ್ಕೂಟಕ್ಕೆ ಭೇಟಿ ನೀಡಲು ಸರ್ವಪಕ್ಷಗಳ ಏಳು ನಿಯೋಗಳನ್ನು ರಚಿಸಿದೆ. ಈ ಭೇಟಿಯು ರಾಜತಾಂತ್ರಿಕ ಪ್ರಯತ್ನದ ಭಾಗವಾಗಿದೆ. ಪ್ರತಿ ತಂಡವು ರಾಜತಾಂತ್ರಿಕರನ್ನು ಒಳಗೊಂಡಿದೆ. ಈ ನಿಯೋಗ ಗಳು ಭಯೋತ್ಪಾದನೆ ಕುರಿತು ಭಾರತದ ದೃಢ ಮತ್ತು ಏಕೀಕೃತ ನಿಲುವನ್ನು ವಿವರಿಸುವ ಮತ್ತು ಗಡಿಯಾಚೆಗಿನ ದಾಳಿಗಳಿಗೆ ನಿರ್ಣಾಯಕವಾಗಿ ಪ್ರತಿಕ್ರಿಯಿಸುವ ಹಕ್ಕನ್ನು ಪುನರುಚ್ಚರಿಸುವ ಗುರಿಯನ್ನು ಹೊಂದಿದೆ.

ತೇಜಸ್ವಿ ಸೂರ್ಯ ಅವರು ಶಶಿತರೂರ್ ಅವರ ತಂಡದಲ್ಲಿ (ಅಮೆರಿಕ ಮತ್ತು ಲ್ಯಾಟಿನ್ ಅಮೆರಿಕ) ಮತ್ತು ಬ್ರಿಜೇಶ್ ಚೌಟ ಅವರು ಕನಿಮೋಳಿ ಅವರ ತಂಡದ (ರಷ್ಯಾ, ಗ್ರೀಸ್, ಸ್ಪೇನ್) ಸದಸ್ಯರಾಗಿದ್ದಾರೆ.

ಪಾಕ್‌ಗೆ ಬೆಂಬಲ ಟರ್ಕಿ ಜತೆಗಿನ ಒಪ್ಪಂದ ಅಮಾನತು

ಮುಂಬೈ (ಪಿಟಿಐ): ಬಾಂಬೆ ಹಾಗೂ ರೂರ್ಕಿಯ ಐಐಟಿ, ಟರ್ಕಿ ಜೊತೆಗಿನ ತಮ್ಮ ಶೈಕ್ಷಣಿಕ ಒಪ್ಪಂದವನ್ನು ಅಮಾನತುಗೊಳಿಸಿವೆ.

‘ಆಪರೇಷನ್ ಸಿಂಧೂರ’ದ ವೇಳೆ ಟರ್ಕಿಯು ಪಾಕಿಸ್ತಾನಕ್ಕೆ ಬೆಂಬಲ ನೀಡಿದ್ದರಿಂದ ಈ ಕ್ರಮ ಕೈಗೊಳ್ಳಲಾಗಿದೆ. ‘ಪ್ರಸಕ್ತ ಸನ್ನಿವೇಶಕ್ಕೆ ಪೂರಕವಾಗಿ ಟರ್ಕಿ ಜೊತೆಗಿನ ಸಂಬಂಧವನ್ನು ಮುಂದಿನ ಸೂಚನೆ ಬರುವವರೆಗೂ ಕಡಿದುಕೊಳ್ಳಲಾಗಿದೆ’ ಎಂದು ಐಐಟಿ ಬಾಂಬೆ ‘ಎಕ್ಸ್’ನಲ್ಲಿ ತಿಳಿಸಿದೆ.

‘ಶೈಕ್ಷಣಿಕ ಆದ್ಯತೆ ಪ್ರತಿಬಿಂಬಿಸುವ, ರಾಷ್ಟ್ರೀಯ ಹಿತಾಸಕ್ತಿ ಎತ್ತಿಹಿಡಿಯುವ ಜಾಗತಿಕ ಸಹಯೋಗ ಬೆಳೆಸಲು ಸಂಸ್ಥೆ ಬದ್ಧವಾಗಿದೆ’ ಎಂದು ರೂರ್ಕಿ ಐಐಟಿ ‘ಎಕ್ಸ್’ನಲ್ಲಿ ಉಲ್ಲೇಖಿಸಿದೆ. ಚಂಡೀಗಢ ವಿಶ್ವವಿದ್ಯಾಲಯದಂತಹ ಖಾಸಗಿ ಶಿಕ್ಷಣ ಸಂಸ್ಥೆಗಳು ಸಹ ಟರ್ಕಿಯ 23 ಹಾಗೂ ಅಜರ್‌ಬೈಜಾನ್‌ನ ವಿಶ್ವವಿದ್ಯಾಲಯಗಳೊಂದಿಗೆ ಶೈಕ್ಷಣಿಕ ಒಪ್ಪಂದವನ್ನು ರದ್ದುಗೊಳಿಸಿವೆ.

ಅಮೆರಿಕದಲ್ಲಿ ಸುಂಟರಗಾಳಿ 27 ಸಾವು

ಸೇಂಟ್ ಲೂಯಿಸ್: ಅಮೆರಿಕದ ಮಧ್ಯಭಾಗದಲ್ಲಿ ಬೀಸಿದ ಸುಂಟರಗಾಳಿಯ ಹೊಡೆತಕ್ಕೆ ಶನಿವಾರ 27 ಮಂದಿ ಮೃತಪಟ್ಟಿದ್ದಾರೆ.

ಕೆಂಟುಕಿಯಲ್ಲಿ 18 ಮಂದಿ ಮೃತಪಟ್ಟಿದ್ದು, ಸಾವಿನ ಸಂಖ್ಯೆ ಮತ್ತಷ್ಟು ಏರಿಕೆಯಾಗುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪ್ರಾಥಮಿಕ ಮಾಹಿತಿ ಪ್ರಕಾರ ಸುಂಟರಗಾಳಿಯು ಇಂಡಿಯಾನ ಮತ್ತು ಕೆಂಟುಕಿಯಲ್ಲಿ ಹೆಚ್ಚಾಗಿ ಬೀಸಿದೆ.

ಲಾರೆಲ್ ಕೌಂಟಿ, ಕೆಂಟುಕಿಯಲ್ಲಿ ತೀವ್ರ ಹಾನಿ ಸಂಭವಿಸಿದ್ದು, 17 ಮಂದಿ ಮೃತಪಟ್ಟಿದ್ದಾರೆ. ಪುಲಸ್ಕಿ ಕೌಂಟಿಯಲ್ಲಿ ಒಬ್ಬರು ಮೃತಪಟ್ಟಿದ್ದು, 10 ಜನರ ಆರೋಗ್ಯ ಸ್ಥಿತಿ ಗಂಭೀರವಾಗಿದೆ. ಲಂಡನ್-ಕಾರ್ಬಿನ್ ವಿಮಾನ ನಿಲ್ದಾಣ ಮತ್ತು ವಿಮಾನ ಸಂಗ್ರಹಗಾರಕ್ಕೆ ಹಾನಿಯಾಗಿದ್ದು, ವಿಮಾನವೊಂದು ಪಲ್ಟಿಯಾಗಿದೆ. ಕೆಲಸಗಾರರಿಗೆ ಗಾಯಗಳಾಗಿಲ್ಲ ಆದರೆ ಹಲವು ಕಟ್ಟಡಗಳಿಗೆ ಹಾನಿಯಾಗಿದೆ ಎಂದು ವಿಮಾನ ನಿಲ್ದಾಣದ ವ್ಯವಸ್ಥಾಪಕ ಮಾಥ್ಯೂ ಸಿಂಗರ್ ಅವರು ತಿಳಿಸಿದ್ದಾರೆ.

ಸೇಂಟ್ ಲೂಯಿಸ್‌ನಲ್ಲಿ ಐವರು ಸೇರಿದಂತೆ ಮಿಸ್ಸೋರಿಯಲ್ಲಿ 7 ಮಂದಿ ಮತ್ತು ಸ್ಕಾಟ್ ಕೌಂಟಿಯಲ್ಲಿ ಇಬ್ಬರು ಮೃತಪಟ್ಟಿದ್ದಾರೆ ಎಂದು ಕೌಂಟಿಯ ಶೆರಿಫ್ ಕಚೇರಿ ತಿಳಿಸಿದೆ. ಆರಂಭಿಕ ಅಂದಾಜಿನ ಪ್ರಕಾರ 5 ಸಾವಿರ ಕಟ್ಟಡಗಳಿಗೆ ಹಾನಿಯಾಗಿದೆ. ಸೇಂಟ್ ಲೂಯಿಸ್‌ನ ಸೆಂಟೆನಿಯಲ್ ಕ್ರಿಶ್ಚಿಯನ್ ಚರ್ಚ್‌ನ ಗೋಪುರ ಕುಸಿದು ಬಿದ್ದಿದ್ದು, ಅದರಡಿ ಮೂವರು ಸಿಲುಕಿದ್ದರು.

ಬಹು ಪಕ್ಷಗಳ ನಿಯೋಗಕ್ಕೆ ಸದಸ್ಯರ ಆಯ್ಕೆ ವಿಚಾರ: ಕಾಂಗ್ರೆಸ್ ಟೀಕೆ

‘ಸರ್ಕಾರದ್ದು ಅಗ್ಗದ ರಾಜಕೀಯ ಆಟ’

ಪ್ರಜಾವಾಣಿ ವಾರ್ತೆ

ನವದೆಹಲಿ: ಭಯೋತ್ಪಾದನೆ ಕುರಿತು ದೇಶದ ನಿಲುವನ್ನು ವಿಶ್ವ ಸಮುದಾಯಕ್ಕೆ ವಿವರಿಸಲು ಸರ್ಕಾರ ಪ್ರಕಟಿಸಿರುವ ಬಹು ಪಕ್ಷಗಳ ಸದಸ್ಯರ ನಿಯೋಗಕ್ಕೆ ಸಂಬಂಧಿಸಿ ಕಾಂಗ್ರೆಸ್‌ಗೆ ಹಿನ್ನಡೆ ಆಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಸರ್ಕಾರದ ಕ್ರಮದಿಂದ ಬೇಸರಗೊಂಡಿರುವ ಕಾಂಗ್ರೆಸ್, ‘ರಾಷ್ಟ್ರೀಯ ಭದ್ರತೆಯಂತಹ ವಿಷಯಗಳಲ್ಲಿ ಸರ್ಕಾರ ಅಗ್ಗದ ರಾಜಕೀಯ ಆಟದಲ್ಲಿ ತೊಡಗಿದೆ’ ಎಂದು ಆರೋಪಿಸಿದೆ.

ಕಾಂಗ್ರೆಸ್ ಶಿಫಾರಸು ಮಾಡಿದ್ದ ನಾಲ್ವರು ಸದಸ್ಯರ ಪೈಕಿ ಕೇವಲ ಒಬ್ಬರ ಹೆಸರನ್ನು ಮಾತ್ರ ಸರ್ಕಾರ ಪರಿಗಣಿಸಿರುವುದು ಹಾಗೂ ತನ್ನ ನಾಯಕತ್ವಕ್ಕೆ ಅಷ್ಟಾಗಿ ಇಷ್ಟವಾಗದ ಇಬ್ಬರು ನಾಯಕರ (ಮಿತ್ರ ಪಕ್ಷಗಳ) ಹೆಸರನ್ನು ಆಯ್ಕೆ ಮಾಡಿರುವುದಕ್ಕೆ ಕಾಂಗ್ರೆಸ್ ಅಸಮಾಧಾನಗೊಂಡಿದೆ.

‘ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರೊಂದಿಗೆ ಸಮಾಲೋಚಿಸಿದ ಬಳಿಕವೂ ಸರ್ಕಾರವು ಪಕ್ಷದ ಶಿಫಾರಸನ್ನು ಕಡೆಗಣಿಸಿರುವುದು ಸರಿಯಿಲ್ಲ. ಇದು ಪಕ್ಷದ ನಾಯಕತ್ವಕ್ಕೆ ಮಾಡಿದ ಅಪಮಾನ ಎಂದು ಕಾಂಗ್ರೆಸ್ ಪರಿಗಣಿಸಿದರೂ, ಬಹು ಪಕ್ಷಗಳ ನಿಯೋಗದಲ್ಲಿ ಆಯ್ಕೆಯಾಗಿರುವ ತನ್ನ ಐವರು ನಾಯಕರನ್ನು ಆ ಕಾರ್ಯ ನಿರ್ವಹಣೆಯಿಂದ ತಡೆಯುವುದಿಲ್ಲ’ ಎಂದು ಅದು ಹೇಳಿದೆ.

ಕಾಂಗ್ರೆಸ್ ತಮ್ಮ ಪಕ್ಷದ ಗೌರವ್ ಗೋಗೊಯಿ, ಆನಂದ ಶರ್ಮಾ, ಸೈಯದ್ ನಾಸೀರ್ ಹುಸೇನ್ ಹಾಗೂ ರಾಜಾ ಬ್ರಾರ್ ಅವರ ಹೆಸರುಗಳನ್ನು ಸೂಚಿಸಿತ್ತು. ಈ ಪೈಕಿ ಆನಂದ ಶರ್ಮಾ ಹೆಸರನ್ನು ಮಾತ್ರ ಸರ್ಕಾರ ಗಣನೆಗೆ ತೆಗೆದುಕೊಂಡು, ಉಳಿದ ಮೂವರ ಹೆಸರನ್ನು ತಿರಸ್ಕರಿಸಿತ್ತು. ಅಲ್ಲದೆ ಪಕ್ಷ ಸೂಚಿಸದೇ ಇದ್ದ ಶಶಿ ತರೂರ್, ಮನೀಶ್ ತಿವಾರಿ, ಸಲ್ಮಾನ್ ಖುರ್ಷಿದ್, ಅಮರ್ ಸಿಂಗ್ ಹೆಸರುಗಳನ್ನು ಆಯ್ಕೆ ಮಾಡಿ, ನಿಯೋಗದ ಭಾಗವಾಗುವಂತೆ ಸರ್ಕಾರ ಉಳಿದವರನ್ನು ಆಹ್ವಾನಿಸಿದೆ. ಏಳು ನಿಯೋಗಗಳಲ್ಲಿ ಒಂದಕ್ಕೆ ತರೂರ್ ಅವರನ್ನು ಮುಖ್ಯಸ್ಥರನ್ನಾಗಿ ನೇಮಿಸಲಾಗಿದೆ.

ಅಲ್ಲದೆ, ಡಿಎಂಕೆ ಮತ್ತು ಎನ್‌ಸಿಪಿ (ಶರದ್ ಪವಾರ್) ಪಕ್ಷಗಳಿಂದ ಕ್ರಮವಾಗಿ ಕನಿಮೊಳಿ ಮತ್ತು ಸುಪ್ರಿಯಾ ಸುಳೆ ಅವರನ್ನು ಸರ್ಕಾರ ನಿಯೋಗಕ್ಕೆ ಆಯ್ಕೆ ಮಾಡಿದೆ. ತಾನು ಶಿಫಾರಸು ಮಾಡಿದ ನಾಯಕರ ಹೆಸರನ್ನು ಪರಿಗಣಿಸದಿರುವ ಸರ್ಕಾರದ ಕ್ರಮವನ್ನು ವಿರೋಧಿಸಿ ಕಾಂಗ್ರೆಸ್ ನಡೆಸಿದ ಪ್ರತಿಭಟನೆಯಲ್ಲಿ ಈ ಇಬ್ಬರೂ ನಾಯಕಿಯರು ಭಾಗವಹಿಸದೇ ಇದ್ದದ್ದು, ಕಾಂಗ್ರೆಸ್‌ನ ಬೇಸರವನ್ನು ಮತ್ತಷ್ಟು ಹೆಚ್ಚಿಸಿದೆ. ನಿಯೋಗಗಳ ಸದಸ್ಯರು ಮತ್ತು ಮುಖ್ಯಸ್ಥರ ಹೆಸರನ್ನು ಸರ್ಕಾರ ಶನಿವಾರ ರಾತ್ರಿ ಪ್ರಕಟಿಸಿತ್ತು. ಅದರ ಬೆನ್ನಲ್ಲೇ, ಕಾಂಗ್ರೆಸ್ ತನ್ನ ಬೇಸರವನ್ನೂ ವ್ಯಕ್ತಪಡಿಸಿತ್ತು.

‘ಗಮನ ಬೇರಡೆ ಸೆಳೆಯಬೇಡಿ’

‘ಭಯೋತ್ಪಾದಕರ ದಾಳಿ, ಸೇನಾ ಸಂಘರ್ಷ ಮತ್ತು ಆ ನಂತರದ ಬೆಳವಣಿಗೆಗಳ ಬಗ್ಗೆ ಚರ್ಚಿಸಲು ಪ್ರಧಾನಿ ನೇತೃತ್ವದಲ್ಲಿ ಸರ್ವ ಪಕ್ಷ ಸಭೆ ಕರೆಯಬೇಕು ಮತ್ತು ಸಂಸತ್ತಿನ ಉಭಯ ಸದನಗಳ ವಿಶೇಷ ಸಭೆ ಕರೆಯಬೇಕು ಎಂಬುದು ಕಾಂಗ್ರೆಸ್‌ನ ಬೇಡಿಕೆ. ಬಹು ಪಕ್ಷ ಸದಸ್ಯರ ನಿಯೋಗಗಳನ್ನು ರಚಿಸುವ ಮೂಲಕ ಸರ್ಕಾರವು ನಮ್ಮ ಗಮನವನ್ನು ಬೇರೆಡೆ ಸೆಳೆಯಲು ಪ್ರಯತ್ನಿಸುತ್ತಿದೆ. ಹಾಗಾಗಬಾರದು’ ಎಂದು ಕಾಂಗ್ರೆಸ್ ಆಗ್ರಹಿಸಿದೆ.



ಜೈರಾಮ್ ರಮೇಶ್

‘ಮೋದಿ ನೇತೃತ್ವದ ಕೇಂದ್ರ ಸರ್ಕಾರವು ರಾಷ್ಟ್ರೀಯ ಗಂಭೀರ ವಿಷಯಗಳಲ್ಲಿ ಅಪ್ರಬುದ್ಧತೆಯಿಂದ ನಡೆದುಕೊಳ್ಳುತ್ತಿದ್ದು, ಅಗ್ಗದ ರಾಜಕೀಯ ಆಟದಲ್ಲಿ ತೊಡಗಿದೆ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಆರೋಪ ಮಾಡಿದ್ದಾರೆ.

‘ದಯನೀಯ ಸ್ಥಿತಿ ಕಾಂಗ್ರೆಸ್‌ಗಿಲ್ಲ’

‘ನಿಯೋಗಕ್ಕೆ ಆಯ್ಕೆ ಆಗಿರುವ ಕಾಂಗ್ರೆಸ್‌ನ ಸಂಸದರು ನಿಯೋಗದ ಜತೆಗೆ ಹೋಗಿ ತಮ್ಮ ಅಮೂಲ್ಯ ಕೊಡುಗೆಗಳನ್ನು ನೀಡಲಿದ್ದಾರೆ’ ಎಂದು ಹೇಳಿದ ಜೈರಾಮ್, ‘ಪ್ರಧಾನಿ ಮತ್ತು ಬಿಜೆಪಿಯಂತೆ ದಯನೀಯ ಸ್ಥಿತಿಗೆ ಪಕ್ಷ ಇಳಿದಿಲ್ಲ’ ಎಂದಿದ್ದಾರೆ.

‘ಕಾಂಗ್ರೆಸ್ ಪಕ್ಷವು ಸಂಸದೀಯ ಪ್ರಜಾಪ್ರಭುತ್ವದ ಸಂಪ್ರದಾಯಗಳನ್ನು ಎತ್ತಿಹಿಡಿಯುವ ನಿಟ್ಟಿನಲ್ಲಿಯೇ ಕೆಲಸ ಮಾಡಿಕೊಂಡು ಬಂದಿದೆ. ಬಿಜೆಪಿಯಂತೆ ರಾಷ್ಟ್ರೀಯ ಭದ್ರತೆಯ ವಿಷಯಗಳಲ್ಲಿ ರಾಜಕೀಯ ವಿಭಜನೆಯಂಥ ಕಾರ್ಯಗಳಲ್ಲಿ ಪಕ್ಷ ತೊಡಗುವುದಿಲ್ಲ’ ಎಂದು ಹೇಳಿದ್ದಾರೆ.

ತಿರಂಗಾ ಯಾತ್ರೆ... ಭಾರತೀಯ ಸೇನೆಯನ್ನು ಬೆಂಬಲಿಸಿ ಮಹಾರಾಷ್ಟ್ರದ ಠಾಣೆ ಜಿಲ್ಲೆಯ ಡೊಂಬಿವಲಿಯಲ್ಲಿ ಭಾನುವಾರ ನಾಗರಿಕರು ತಿರಂಗಾ ಯಾತ್ರೆ ನಡೆಸಿದರು – ಪಿಟಿಐ ಚಿತ್ರ

‘ಸಂಸದರ ನಿಯೋಗವನ್ನು ಇಂಡಿಯಾ ಬಹಿಷ್ಕರಿಸಬೇಕಿತ್ತು’

ಮುಂಬೈ (ಪಿಟಿಐ): ಆಪರೇಷನ್ ಸಿಂಧೂರ ನಂತರ ಕೇಂದ್ರ ಸರ್ಕಾರ ವಿವಿಧ ದೇಶಗಳಿಗೆ ಕಳಿಸುತ್ತಿರುವ ಸರ್ವ ಪಕ್ಷಗಳ ನಿಯೋಗವನ್ನು ‘ಇಂಡಿಯಾ’ ಕೂಟದ (ಕಾಂಗ್ರೆಸ್ ಮತ್ತಿತರ ಪಕ್ಷಗಳ ಮೈತ್ರಿ ಕೂಟ) ಸಂಸದರು ಬಹಿಷ್ಕರಿಸಬೇಕಿತ್ತು ಎಂದು ಶಿವಸೇನಾ (ಯುಬಿಟಿ) ನಾಯಕ ಸಂಜಯ್ ರಾವುತ್ ಹೇಳಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ರಾವುತ್, ‘ಕೇಂದ್ರ ಸರ್ಕಾರದಿಂದಾದ ಪಾಪ ಮತ್ತು ಅಪರಾಧವನ್ನು ನಿಯೋಗ ಸಮರ್ಥಿಸಿಕೊಳ್ಳಬೇಕಿದೆ. ಸರ್ಕಾರದ ಖರ್ಚಿನಲ್ಲಿ ಇಂಥಾ ನಿಯೋಗ ಕಳಿಸುವ ಅಗತ್ಯ ಇರಲಿಲ್ಲ. ಅವರು ಏನು ಮಾಡಬಲ್ಲರು. ವಿದೇಶಗಳಲ್ಲಿ ನಮ್ಮ ರಾಯಭಾರಿಗಳಿದ್ದಾರೆ. ಅವರು ತಮ್ಮ ಕೆಲಸ ಮಾಡುತ್ತಾರೆ’ ಎಂದು ಹೇಳಿದರು.

ಶಿವಸೇನೆ ಸಂಸದ ಶ್ರೀಕಾಂತ್ ಶಿಂಧೆ ಅವರಿಗೆ ನಿಯೋಗವೊಂದನ್ನು ಮುನ್ನಡೆಸುವ ಹೊಣೆ ನೀಡಿದ ಸರ್ಕಾರದ ನಿಲುವನ್ನು ಟೀಕಿಸಿ ‘ಸಂಖ್ಯೆಯ ಕಾರಣಕ್ಕೆ ಆ ಪಕ್ಷ ಅವಕಾಶ ಪಡೆದಿದೆ’ ಎಂದರು.

‘ಪಹಲ್ಗಾಮ್ ಮತ್ತು ಆಪರೇಷನ್ ಸಿಂಧೂರ ನಂತರ ಸಂಸತ್ತಿನ ವಿಶೇಷ ಅಧಿವೇಶನ ಕರೆಯಲು ವಿರೋಧ ಪಕ್ಷಗಳು ಆಗ್ರಹಿಸಿದ್ದವು. ಸರ್ಕಾರ ಚರ್ಚೆ ಮಾಡಲು ಸಿದ್ಧವಿಲ್ಲ. ಅಮೆರಿಕದೊಂದಿಗಿನ ವ್ಯಾಪಾರದ ಕಾರಣಕ್ಕೆ ಸಂಘರ್ಷ ನಿಂತಿದೆ ಎಂದು ಟ್ರಂಪ್ ಹೇಳಿದ್ದಾರೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಜತೆ ಸೇನಾ ಕಾರ್ಯಾಚರಣೆಯನ್ನು ನಿಲ್ಲಿಸುವಂತಹ ಯಾವ ಒಪ್ಪಂದ ಆಯ್ತು..?’ ಎಂದು ರಾವುತ್ ಪ್ರಶ್ನಿಸಿದ್ದಾರೆ.

‘ಕದನ ವಿರಾಮ: ಅಂತಿಮ ವಾಯಿದೆ ಇಲ್ಲ’

ಸೇನೆ ಸ್ಪಷ್ಟನೆ

ನವದೆಹಲಿ(ಪಿಟಿಐ): ‘ಭಾರತ ಮತ್ತು ಪಾಕಿಸ್ತಾನದ ಮಿಲಿಟರಿ ಕಾರ್ಯಾಚರಣೆಗಳ ಮಹಾನಿರ್ದೇಶಕರ (ಡಿಜಿಎಂಒ) ನಡುವೆ ಆಗಿರುವ ಕದನ ವಿರಾಮದ ಒಪ್ಪಂದಕ್ಕೆ ಯಾವುದೇ ಮುಕ್ತಾಯದ ದಿನಾಂಕವಿಲ್ಲ’ ಎಂದು ಭಾರತೀಯ ಸೇನೆ ಭಾನುವಾರ ತಿಳಿಸಿದೆ.

ಕದನ ವಿರಾಮ ಒಪ್ಪಂದವು ಭಾನುವಾರ ಸಂಜೆಗೆ ಕೊನೆಗೊಂಡಿದೆ. ‘ಡಿಜಿಎಂಒಗಳ ನಡುವೆ ಯಾವುದೇ ಮಾತುಕತೆ’ ನಿಗದಿಯಾಗಿಲ್ಲ ಎಂಬ ಮಾಧ್ಯಮ ವರದಿಗಳಿಗೆ ಸೇನೆಯಿಂದ ಈ ಸ್ಪಷ್ಟೀಕರಣ ಬಂದಿದೆ.

‘ಮೇ 10 ರಂದು ಡಿಜಿಎಂಒಗಳು ಹಾಟ್‌ಲೈನ್ ಮೂಲಕ ಮಾತುಕತೆ ನಡೆಸಿದಾಗ ಕದನ ವಿರಾಮ ಎರಡು ದಿನಗಳಿಗೆ ಏರ್ಪಟ್ಟಿತ್ತು. ನಂತರ ಮೇ 12ರಂದು ನಡೆದ ಡಿಜಿಎಂಒ ಸಭೆಯಲ್ಲಿ ಕದನ ವಿರಾಮ ಮುಂದುವರಿಸಲು ನಿರ್ಧರಿಸಲಾಯಿತು. ಅದಕ್ಕೆ ಯಾವುದೇ ಗಡುವು ಇಲ್ಲ’ ಎಂದು ಭಾರತೀಯ ಸೇನೆಯು ಸಂಕ್ಷಿಪ್ತ ವಿವರಣೆಯಲ್ಲಿ ತಿಳಿಸಿದೆ.

ಮೇ 10ರಂದು ಆಗಿರುವ ಕದನ ವಿರಾಮ ಒಪ್ಪಂದಕ್ಕೆ ಅನುಗುಣವಾಗಿ ಗಡಿಯಲ್ಲಿ ‘ಕಟ್ಟೆಚ್ಚರದ ಮಟ್ಟ’ವನ್ನು ತಗ್ಗಿಸುವ ಮತ್ತು ವಿಶ್ವಾಸವನ್ನು ಹೆಚ್ಚಿಸುವ ಕ್ರಮಗಳನ್ನು ಅನುಸರಿಸುವುದಾಗಿಯೂ ಭಾರತೀಯ ಸೇನೆ ಹೇಳಿದೆ.

ಡಿಜಿಎಂಒಗಳ ಮಟ್ಟದ ಮಾತುಕತೆಯಲ್ಲಿ, ಎರಡೂ ಕಡೆಯವರು ಒಂದೇ ಒಂದು ಗುಂಡು ಹಾರಿಸಬಾರದು ಅಥವಾ ಪರಸ್ಪರರ ವಿರುದ್ಧ ಯಾವುದೇ ಆಕ್ರಮಣಕಾರಿ ಮತ್ತು ವಿರೋಧಿ ಕ್ರಮ ಪ್ರಾರಂಭಿಸಬಾರದು ಎಂದು ಎರಡೂ ಕಡೆಯ ಅಧಿಕಾರಿಗಳು ಒಪ್ಪಿಕೊಂಡಿದ್ದಾರೆ.

ಏಪ್ರಿಲ್ 22ರಂದು ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಗೆ ಪ್ರತಿಕ್ರಿಯೆಯಾಗಿ ಭಾರತವು ಆಪರೇಷನ್ ಸಿಂಧೂರ ಅಡಿಯಲ್ಲಿ ಮೇ 7ರಂದು ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿನ ಭಯೋತ್ಪಾದಕ ಮೂಲಸೌಕರ್ಯಗಳ ಮೇಲೆ ನಿಖರ ದಾಳಿಗಳನ್ನು ನಡೆಸಿತ್ತು.

ಭಾರತದ ಕಾರ್ಯಾಚರಣೆಯ ನಂತರ, ಪಾಕಿಸ್ತಾನವು ಮೇ 8, 9 ಮತ್ತು 10ರಂದು ಭಾರತೀಯ ಸೇನಾ ನೆಲೆಗಳ ಮೇಲೆ ದಾಳಿ ಮಾಡಲು ಪ್ರಯತ್ನಿಸಿತು. ಇದಕ್ಕೆ ಬಲವಾದ ಪ್ರತ್ಯುತ್ತರ ನೀಡಿದ ಭಾರತೀಯ ಸೇನೆಯು ಪಾಕಿಸ್ತಾನದ ವಾಯು ನೆಲೆಗಳು, ವಾಯು ರಕ್ಷಣಾ ವ್ಯವಸ್ಥೆ, ಸೇನಾ ಕಮಾಂಡ್ ಮತ್ತು ನಿಯಂತ್ರಣ ಕೇಂದ್ರಗಳು ಹಾಗೂ ರೇಡಾರ್‌ಗಳು ಸೇರಿದಂತೆ ಪ್ರಮುಖ ಮಿಲಿಟರಿ ಸೌಲಭ್ಯಗಳಿಗೆ ಭಾರಿ ಹಾನಿ ಉಂಟುಮಾಡಿತ್ತು.

ಮಣಿಪುರ: ನಾಲ್ವರು ಬಂಡುಕೋರರ ಸೆರೆ

ಇಂಫಾಲ್ (ಪಿಟಿಐ): ಮಣಿಪುರದ ಇಂಫಾಲ್‌ನಲ್ಲಿ ನಿಷೇಧಿತ ಸಂಘಟನೆಗಳಿಗೆ ಸೇರಿದ ನಾಲ್ವರು ಬಂಡುಕೋರರನ್ನು ಭದ್ರತಾ ಪಡೆಗಳು ಬಂಧಿಸಿವೆ. ಪೂರ್ವ ಮತ್ತು ಪಶ್ಚಿಮ ಇಂಫಾಲ್ ಹಾಗೂ ತೌಬಲ್ ಜಿಲ್ಲೆಗಳಲ್ಲಿ ಬಂಧಿತರು ಸುಲಿಗೆ ಮತ್ತು ಹೊಸ ಸದಸ್ಯರನ್ನು ನೇಮಕ ಮಾಡಿಕೊಳ್ಳುವ ಕೃತ್ಯಗಳಲ್ಲಿ ಭಾಗಿಯಾಗಿದ್ದರು ಎಂದು ಭಾನುವಾರ ಪೊಲೀಸರು ತಿಳಿಸಿದ್ದಾರೆ.

ಕಾಂಗಲೇಯಿಪಾಕ್ ಕಮ್ಯುನಿಸ್ಟ್ ಪಾರ್ಟಿ (ಪಿಡಬ್ಲ್ಯುಜಿ), ಕೆವೈಕೆಎಲ್, ಯುಎನ್‌ಎಲ್‌ಎಫ್, ಪೀಪಲ್ಸ್ ಲಿಬರೇಷನ್ ಆರ್ಮಿಯ (ಪಿಎಲ್‌ಎ) ತಲಾ ಒಬ್ಬರು ಸದಸ್ಯರನ್ನು ಸ್ಫೋಟಕಗಳ ಸಮೇತ ಶನಿವಾರ ಬಂಧಿಸಲಾಗಿದೆ.

ಮತ್ತೊಂದೆಡೆ ಬಿಷ್ಣುಪುರ ಜಿಲ್ಲೆಯ ಕುಂಬಿ ಸೇತುಪುರದ ತಪ್ಪಲಿನಲ್ಲಿ ನಡೆದ ಶೋಧದಲ್ಲಿ ಮೂರು ಬಂದೂಕು, ಒಂದು 9 ಎಂಎಂ ಪಿಸ್ತೂಲು, ಐದು ಸ್ಫೋಟಕಗಳು ಸೇರಿದಂತೆ ಹಲವು ವಸ್ತುಗಳು ಪತ್ತೆಯಾಗಿವೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಪೂಂಛ್: ಹಲವರ ಮನೆ ಮೇಲೆ ದಾಳಿ

ಪೂಂಛ್ (ಪಿಟಿಐ): ಭಯೋತ್ಪಾದಕರ ಸಂಪರ್ಕ ಜಾಲವನ್ನು ಕಳಚಿಹಾಕುವ ಉದ್ದೇಶದಿಂದ ಜಮ್ಮು ಮತ್ತು ಕಾಶ್ಮೀರ ಪೊಲೀಸರು ಗಡಿ ಜಿಲ್ಲೆ ಪೂಂಛ್‌ನ ಹಲವು ಪ್ರದೇಶಗಳಲ್ಲಿ ಭಾನುವಾರ ಸರಣಿ ದಾಳಿಗಳನ್ನು ನಡೆಸಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದಿಂದ ಕಾರ್ಯಾಚರಣೆ ಮಾಡುವ ಉಗ್ರರ ಸಂಬಂಧಿಕರು ಮತ್ತು ಭೂಗತವಾಗಿ ಉಗ್ರರ ಪರ ಕೆಲಸ ಮಾಡುವವರ ಮನೆಗಳನ್ನು ಗುರಿಯಾಗಿಸಿ ಶೋಧ ನಡೆದಿದೆ. ಕೆಲವರ ಮನೆಗಳಿಂದ ಎಲೆಕ್ಟ್ರಾನಿಕ್ ಉಪಕರಣ-ಗಳನ್ನು ವಶಕ್ಕೆ ಪಡೆಯಲಾಗಿದೆ. ಸದ್ಯಕ್ಕೆ ಯಾರನ್ನೂ ಬಂಧಿಸಿಲ್ಲ. ಕೆಲವು ಪ್ರದೇಶ-ಗಳಲ್ಲಿ ದಾಳಿ ಮುಂದುವರೆದಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

42 ಶೆಲ್‌ಗಳ ನಾಶ

ಜಮ್ಮು (ಪಿಟಿಐ): ಪೂಂಛ್ ಜಿಲ್ಲೆಯ ಗಡಿ ನಿಯಂತ್ರಣ ರೇಖೆ (ಎಲ್‌ಒಸಿ) ಬಳಿ ಇರುವ ವಿವಿಧ ಗ್ರಾಮಗಳಲ್ಲಿ ಸ್ಫೋಟಗೊಳ್ಳದ 42 ಶೆಲ್‌ಗಳು ಪತ್ತೆಯಾಗಿದ್ದು, ಅವುಗಳನ್ನು ಭದ್ರತಾ ಸಿಬ್ಬಂದಿ ಭಾನುವಾರ ನಾಶಪಡಿಸಿದ್ದಾರೆ.

ಇತ್ತೀಚೆಗೆ ನಡೆದ ಭಾರತ–ಪಾಕಿಸ್ತಾನ ಸಂಘರ್ಷದ ವೇಳೆ ಗಡಿ ಗ್ರಾಮಗಳನ್ನು ಗುರಿಯಾಗಿಸಿ ಶೆಲ್ ದಾಳಿ ನಡೆದಿತ್ತು. ಈ ವೇಳೆ ಸ್ಫೋಟಗೊಳ್ಳದ ಶೆಲ್‌ಗಳು ಕೂಡ ಗಡಿಗ್ರಾಮದ ಒಳಗೆ ಬಿದ್ದಿದ್ದವು. ಅವುಗಳನ್ನು ಈಗ ನಾಶಪಡಿಸಲಾಗಿದೆ.

ಶೆಲ್ ದಾಳಿ ನಡೆದಿದ್ದ ಪ್ರದೇಶಗಳಲ್ಲಿ ಸಹಜಸ್ಥಿತಿ ಮರುಸ್ಥಾಪಿಸಿ ಜನರಿಗೆ ವಾಸಯೋಗ್ಯವಾಗಿಸಲು ಭದ್ರತಾಪಡೆಗಳು ಮುಂದಾಗಿವೆ. ಈ ಕಾರಣದಿಂದ ಗ್ರಾಮಗಳಲ್ಲಿ ಪರಿಶೀಲನೆ ನಡೆಸಿ, ಸ್ಫೋಟಗೊಳ್ಳದ ಶೆಲ್‌ಗಳನ್ನು ಪತ್ತೆಹಚ್ಚಿ ಅವುಗಳನ್ನು ನಾಶಪಡಿಸಲಾಗಿದೆ ಎಂದು ರಕ್ಷಣಾ ವಕ್ತಾರರು ತಿಳಿಸಿದ್ದಾರೆ.

‘ಪಾಕ್‌ಗೆ ಮಾಹಿತಿ ನೀಡುತ್ತಿದ್ದ ಜ್ಯೋತಿ’

ಚಂಡೀಗಢ (ಪಿಟಿಐ): ಬೇಹುಗಾರಿಕೆ ಪ್ರಕರಣದಲ್ಲಿ ಬಂಧನವಾಗಿರುವ ಹರಿಯಾಣದ ಯೂಟ್ಯೂಬರ್ ಜ್ಯೋತಿ ಮಲ್ಹೋತ್ರಾರನ್ನು ಪಾಕಿಸ್ತಾನದ ಗುಪ್ತಚರ ಸಂಸ್ಥೆ ಮಾಹಿತಿದಾ-ರರನ್ನಾಗಿ ಬಳಸಿಕೊಳ್ಳುತ್ತಿತ್ತು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಭಾನುವಾರ ಹೇಳಿದ್ದಾರೆ.

ಜ್ಯೋತಿ

ಹಿಸಾರ್‌ನಲ್ಲಿ ಪತ್ರಕರ್ತರನ್ನು ಉದ್ದೇಶಿಸಿ ಮಾತನಾಡಿದ ಹಿರಿಯ ಪೊಲೀಸ್ ಅಧಿಕಾರಿ ಶಶಾಂಕ್ ಕುಮಾರ್ ಸಾವನ್, ‘ಏಪ್ರಿಲ್ 22ರ ಪಹಲ್ಗಾಮ್ ದಾಳಿಯ ಬಳಿಕ ಭಾರತ ಮತ್ತು ಪಾಕಿಸ್ತಾನ ನಡುವೆ ಸೇನಾ ಬಿಕ್ಕಟ್ಟು ಉದ್ಭವಿಸಿದ್ದ ಸಂದರ್ಭದಲ್ಲಿ ಜ್ಯೋತಿ ಮಲ್ಹೋತ್ರಾ ದೆಹಲಿಯಲ್ಲಿರುವ ಪಾಕಿಸ್ತಾನದ ಹೈಕಮಿಷನ್ ಅಧಿಕಾರಿಯೊಬ್ಬರ ಜೊತೆ ಸಂಪರ್ಕ-ದಲ್ಲಿದ್ದರು’ ಎಂದಿದ್ದಾರೆ.

ಪ್ರಸ್ತುತ ಸಂದರ್ಭದಲ್ಲಿ ಪಾಕಿಸ್ತಾನದ ಜೊತೆ ಹಂಚಿಕೊಂಡಿರಬಹುದಾದ ಸೇನೆ ಮತ್ತು ಭದ್ರತಾ ಕಾರ್ಯಾಚರಣೆಗಳ ಕುರಿತು ಯಾವುದೇ ಮಾಹಿತಿ ಆಕೆ ಬಳಿ ಇಲ್ಲ. ಆದರೆ, ಪಾಕಿಸ್ತಾನದ ಗುಪ್ತಚರದ ಜೊತೆ ಆಕೆ ನೇರ ಸಂಪರ್ಕದಲ್ಲಿದ್ದರು. ಪಾಕಿಸ್ತಾನ ಗುಪ್ತಚರವು ಆಕೆಯನ್ನು ಮಾಹಿತಿ-ದಾರರನ್ನಾಗಿ ಬಳಸಿಕೊಳ್ಳುತ್ತಿತ್ತು. ಆಕೆ ಜೊತೆ ನಂಟು ಹೊಂದಿರುವ ಇತರ ಯೂಟ್ಯೂಬರ್ ಗಳು ಪಾಕ್ ಗುಪ್ತಚರದೊಂದಿಗೆ ಸಂಪರ್ಕದಲ್ಲಿದ್ದರು. ಇದೂ ಒಂದು ರೀತಿಯ ಯುದ್ಧ ಎಂದಿದ್ದಾರೆ.

21ರಿಂದ ನಿಯೋಗಗಳ ಭೇಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಾಕಿಸ್ತಾನದ ಭಯೋತ್ಪಾದನೆ ಕುರಿತು ವಿಶ್ವ ಸಮುದಾಯಕ್ಕೆ ತಿಳಿಸಲು ಕೇಂದ್ರ ಸರ್ಕಾರ ರಚಿಸಿರುವ ಸರ್ವಪಕ್ಷಗಳ ಸದಸ್ಯರ ಏಳು ನಿಯೋಗಗಳು ಮೇ 21ರಿಂದ ವಿವಿಧ ದೇಶಗಳಿಗೆ ಪ್ರವಾಸ ಕೈಗೊಳ್ಳಲಿವೆ.

8 ಹಿರಿಯ ರಾಜತಾಂತ್ರಿಕ ಅಧಿಕಾರಿಗಳು ಸೇರಿದಂತೆ 59 ಸದಸ್ಯರು ಇರುವ 7 ನಿಯೋಗಗಳು ಯುರೋಪ್ ಒಕ್ಕೂಟ ಹಾಗೂ 32 ದೇಶಗಳಿಗೆ ತೆರಳಲಿವೆ.

ಜೆಡಿಯು ಸಂಸದ ಸಂಜಯ್ ಝಾ ಮತ್ತು ಶಿವಸೇನಾ (ಏಕನಾಥ ಶಿಂದೆ ಬಣ) ಸಂಸದ ಶ್ರೀಕಾಂತ ಶಿಂದೆ ನೇತೃತ್ವದ ನಿಯೋಗಗಳು ಮೇ 21ರಂದು ವಿದೇಶ ಪ್ರವಾಸ ಆರಂಭಿಸಲಿವೆ. ಸಂಜಯ್ ಝಾ ಅವರ ನಿಯೋಗವು, ಜಪಾನ್, ಇಂಡೋನೇಷ್ಯಾ, ಮಲೇಷ್ಯಾ, ದಕ್ಷಿಣ ಕೊರಿಯಾ ಹಾಗೂ ಸಿಂಗಪುರ ದೇಶಗಳಿಗೆ ತೆರಳಲಿದೆ. ಇನ್ನು ಶಿಂದೆ ನೇತೃತ್ವದ ನಿಯೋಗವು, ಯುಎಇ, ಲಿಬೇರಿಯಾ, ಕಾಂಗೊ ಮತ್ತು ಸೀರಾ ಲಿಯೊನ್ ದೇಶಗಳಿಗೆ ತೆರಳಲಿದೆ.

ಡಿಎಂಕೆ ಸಂಸದೆ ಕನಿಮೊಳಿ ನೇತೃತ್ವದ ನಿಯೋಗವು ಮೇ 22ರಂದು ರಷ್ಯಾದಿಂದ ಪ್ರವಾಸ ಆರಂಭಿಸಿ, ಜೂನ್ 7ರವರೆಗೆ ಲಟ್ವಿಯಾ, ಸ್ಲೊವೇನಿಯಾ, ಗ್ರೀಸ್ ಮತ್ತು ಸ್ಪೇನ್ ದೇಶಗಳಿಗೆ ತೆರಳಲಿದೆ. ಎನ್‌ಸಿಪಿ (ಶರದ್ ಪವಾರ್ ಬಣ) ಸಂಸದೆ ಸುಪ್ರಿಯಾ ಸುಳೆ ಅವರ ನಿಯೋಗವು, ಮೇ 24ರಂದು ಈಜಿಪ್ಟ್‌ಗೆ ಭೇಟಿ ನೀಡಿ, ಬಳಿಕ ಇಥಿಯೊಪಿಯಾ ಮತ್ತು ದಕ್ಷಿಣ ಆಫ್ರಿಕಾದ ದೇಶಗಳ ಪ್ರತಿನಿಧಿಗಳಿಗೆ ಭಯೋತ್ಪಾದನೆ ಕುರಿತು ಭಾರತದ ನಿಲುವು ತಿಳಿಸಲಿದೆ.

ಕಾಂಗ್ರೆಸ್ ಸಂಸದ ಶಶಿ ತರೂರ್ ನೇತೃತ್ವದ ನಿಯೋಗವು, ಮೇ 24ರಿಂದ ಅಮೆರಿಕ, ಕೊಲಂಬಿಯಾ ದೇಶಗಳಿಗೆ ಭೇಟಿ ನೀಡಲಿದೆ. ಬಿಜೆಪಿ ಸಂಸದ ರವಿಶಂಕರ್ ಪ್ರಸಾದ್ ಅವರ ನಿಯೋಗ, ಮೇ 24ರಿಂದ ಪ್ರವಾಸ ಆರಂಭಿಸಿ ಬ್ರಿಟನ್, ಜರ್ಮನಿ, ಫ್ರಾನ್ಸ್, ಯುರೋಪ್ ಒಕ್ಕೂಟ ಮತ್ತು ಡೆನ್ಮಾರ್ಕ್ ದೇಶಗಳಿಗೆ ಭೇಟಿ ನೀಡಲಿದೆ. ಬೈಜಯಂತ್ ಪಾಂಡ ಅವರ ನಿಯೋಗವು ಮೇ 24ರಂದು ಸೌದಿ ಅರೇಬಿಯಾ, ಕುವೈತ್, ಬಹ್ರೇನ್ ಮೊದಲಾದ ದೇಶಗಳಿಗೆ ಭೇಟಿ ನೀಡಲಿದೆ.

ಸುದ್ದಿ 2 ನಿಮಿಷ

ವಿಪಕ್ಷಗಳ ವೈಫಲ್ಯ ಬಿಜೆಪಿಯ ಗೆಲುವಿಗೆ ಕಾರಣ: ಒವೈಸಿ

ಹೈದರಾಬಾದ್ (ಪಿಟಿಐ): ವಿಪಕ್ಷಗಳು ವಿಫಲವಾಗಿರುವುದರಿಂದ ಬಿಜೆಪಿಯು ನಿರಂತರವಾಗಿ ಚುನಾವಣೆಯಲ್ಲಿ ಗೆಲುವು ಸಾಧಿಸುತ್ತಿದೆ ಎಂದು ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಒವೈಸಿ ಹೇಳಿದ್ದಾರೆ.

ಪಿಟಿಐ ಸುದ್ದಿ ಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಒವೈಸಿ, ‘ಬಿಜೆಪಿಯು ಹಿಂದೂ ಮತಗಳನ್ನು ಕ್ರೋಢೀಕರಿಸಿಕೊಂಡಿದೆ. ಅದರ ಬಳಿ ಬಹುತೇಕ ಶೇ 50ರಷ್ಟು ಹಿಂದೂ ಮತಗಳಿವೆ. ಹೀಗಾಗಿ ಅದು ಚುನಾವಣೆಯಲ್ಲಿ ಗೆಲುವು ಸಾಧಿಸುತ್ತಿದೆ’ ಎಂದಿದ್ದಾರೆ.

ಅಲ್ಲದೇ ‘ನಮ್ಮ ಪಕ್ಷವು ಹೆಚ್ಚಿನ ಪ್ರಮಾಣದ ಮುಸಲ್ಮಾನರ ಮತಗಳನ್ನು ಒಳಗೊಂಡಿದೆ. ಹೀಗಾಗಿ ನಮ್ಮ ಮೇಲಿನ ದ್ವೇಷದಿಂದ ಇತರ ವಿಪಕ್ಷಗಳು ನನ್ನನ್ನು ದೂಷಿಸುವ ಮತ್ತು ಬಿಜೆಪಿಯ ‘ಬೀ ಟೀಮ್’ ಎಂದು ಕರೆಯುವ ಪ್ರಯತ್ನ ಮಾಡುತ್ತಿವೆ‘ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ಮುಸ್ಲಿಮರ ಮತಗಳನ್ನು ಲಘುವಾಗಿ ಪರಿಗಣಿಸಿರುವ ವಿಪಕ್ಷಗಳು, ಅವರ ಬಗ್ಗೆ ಗಮನ ಕೊಡುತ್ತಿಲ್ಲ. ಸಮಾಜದ ಪ್ರತಿಯೊಂದು ವರ್ಗವು ರಾಜಕೀಯ ನಾಯಕತ್ವ ಹೊಂದುವುದು ಸ್ವೀಕಾರಾರ್ಹ-ವಾಗಿದೆ. ಆದರೆ ಮುಸ್ಲಿಮರು ರಾಜಕೀಯ ಧ್ವನಿ, ನಾಯಕತ್ವ ಹೊಂದಿರುವುದು ಬಿಎಸ್‌ಪಿ, ಎಸ್‌ಪಿ ಹಾಗೂ ಬಿಜೆಪಿ ಸೇರಿದಂತೆ ಹಲವು ಪಕ್ಷಗಳಿಗೆ ಬೇಡವಾಗಿದೆ. ಯಾದವ ನಾಯಕನಾಗುತ್ತಾನೆ. ಮುಸಲ್ಮಾನ ಭಿಕ್ಷುಕನಾಗುತ್ತಾನೆ. ಇದು ಯಾವ ನ್ಯಾಯ?’ ಎಂದರು.

ಬೆಂಗಳೂರು ಐಐಎಸ್‌ಸಿ ಮೇಲಿನ ದಾಳಿ ಸೂತ್ರಧಾರಿ ಖಾಲಿದ್ ಹತ್ಯೆ

ನವದೆಹಲಿ(ಪಿಟಿಐ): ಬೆಂಗಳೂರಿನ ಐಐಎಸ್‌ಸಿ ಮತ್ತು ಆರ್‌ಎಸ್‌ಎಸ್ ಪ್ರಧಾನ ಕಚೇರಿ ಮೇಲಿನ ಭಯೋತ್ಪಾದಕ ದಾಳಿಯ ಪ್ರಮುಖ ಸೂತ್ರಧಾರಿ, ಲಷ್ಕರ್-ಎ-ತಯಬಾದ ಭಯೋತ್ಪಾದಕ ರಝಾವುಲ್ಲಾ ನಿಜಾಮನಿ ಖಾಲಿದ್‌ನನ್ನು ಭಾನುವಾರ ಪಾಕಿಸ್ತಾನದಲ್ಲಿ ಅಪರಿಚಿತರು ಗುಂಡಿಟ್ಟು ಹತ್ಯೆಗೈದಿದ್ದಾರೆ.

ಖಾಲಿದ್ ಅಲಿಯಾಸ್ ಅಬು ಸೈಫುಲ್ಲಾ ಸಿಂಧ್ ಪ್ರಾಂತ್ಯದ ಮಟ್ಲಿಯಲ್ಲಿರುವ ತನ್ನ ಮನೆಯಿಂದ ಮಧ್ಯಾಹ್ನ ಹೊರಗೆ ಹೊರಟಿದ್ದಾಗ ಮೂವರು ಅಪರಿಚಿತ ಬಂಧೂಕುಧಾರಿಗಳು ಗುಂಡಿಟ್ಟು ಹತ್ಯೆ ಮಾಡಿದ್ದಾರೆ ಎಂದು ಪಾಕಿಸ್ತಾನದ ಅಧಿಕಾರಿಗಳು ದೃಢಪಡಿಸಿದ್ದಾರೆ.

ಖಾಲಿದ್ ಪಾಕಿಸ್ತಾನ ಸರ್ಕಾರದ ಭದ್ರತೆಯಲ್ಲಿದ್ದ. 2005ರಲ್ಲಿ ಬೆಂಗಳೂರಿನಲ್ಲಿರುವ ಐಐಎಸ್‌ಸಿ ಮೇಲಿನ ದಾಳಿ, 2006ರಲ್ಲಿ ನಾಗ್ಪುರದಲ್ಲಿರುವ ಆರ್‌ಎಸ್‌ಎಸ್ ಕೇಂದ್ರ ಕಚೇರಿ ಮೇಲಿನ ದಾಳಿ, 2008ರಲ್ಲಿ ಉತ್ತರಪ್ರದೇಶದ ರಾಂಪುರದಲ್ಲಿನ ಸಿಆರ್‌ಪಿಎಫ್ ಶಿಬಿರದ ಮೇಲಿನ ಭಯೋತ್ಪಾದಕ ದಾಳಿಯಲ್ಲೂ ರಝಾವುಲ್ಲಾ ಪ್ರಮುಖ ಸೂತ್ರಧಾರಿಯಾಗಿದ್ದ.

ಐಐಎಸ್‌ಸಿ ಮೇಲಿನ ಉಗ್ರರ ದಾಳಿಯಲ್ಲಿ ಐಐಟಿ ಪ್ರಾಧ್ಯಾಪಕ ಮುನೀಶ್ ಚಂದ್ರ ಪುರಿ ಮೃತಪಟ್ಟು, ಇತರ ನಾಲ್ವರು ಗಾಯಗೊಂಡಿದ್ದರು. ಖಾಲಿದ್ 2000ರ ಆರಂಭದಲ್ಲಿ ನೇಪಾಳದಿಂದ ಲಷ್ಕರ್ ಎ ತಯಬಾ (ಎಲ್‌ಇಟಿ) ಭಯೋತ್ಪಾದಕ ಕಾರ್ಯಾಚರಣೆಗಳನ್ನು ನಡೆಸುತ್ತಿದ್ದ. ವಿನೋದ್ ಕುಮಾರ್, ಮೊಹಮ್ಮದ್ ಸಲೀಂ ಮತ್ತು ರಝಾವುಲ್ಲಾ ಸೇರಿ ಹಲವು ಹೆಸರುಗಳನ್ನು ಇಟ್ಟುಕೊಂಡಿದ್ದ. ಆತ ಭಾರತದಲ್ಲಿ ಅನೇಕ ಭಯೋತ್ಪಾದಕ ದಾಳಿಗಳಲ್ಲಿ ಭಾಗಿಯಾಗಿದ್ದ ಎಂದು ಅಧಿಕಾರಿಗಳು ಹೇಳಿದ್ದಾರೆ.

‘ಪಾಕ್‌ಗಿಂತ ನರಕವೇ ನನ್ನ ಆಯ್ಕೆ’

ನವದೆಹಲಿ (ಪಿಟಿಐ): ‘ಪಾಕಿಸ್ತಾನ ಮತ್ತು ನರಕ ಎರಡರಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳುವ ಸಮಯ ಬಂದರೆ ನಾನು ನರಕವನ್ನೇ ಆಯ್ದುಕೊಳ್ಳುತ್ತೇನೆ’ ಎಂದು ಖ್ಯಾತ ಸಾಹಿತಿ, ಗೀತ ರಚನೆಕಾರ ಜಾವೇದ್ ಅಖ್ತರ್ ಹೇಳಿದ್ದಾರೆ.

ಮುಂಬೈನಲ್ಲಿ ಶನಿವಾರ ಶಿವಸೇನಾ (ಯುಬಿಟಿ) ನಾಯಕ ಸಂಜಯ್ ರಾವುತ್ ಅವರ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ತಮ್ಮನ್ನು ನಾಸ್ತಿಕ ಎಂದು ಗುರುತಿಸಿಕೊಂಡ ಅಖ್ತರ್, ಭಾರತ ಮತ್ತು ಪಾಕಿಸ್ತಾನ ಎರಡೂ ದೇಶಗಳಿಂದಲೂ ತೀವ್ರವಾದಿಗಳು ಪ್ರತಿದಿನ ನನ್ನ ಮೇಲೆ ನಿಂದನೆಗಳ ಸುರಿಮಳೆ ಯನ್ನೇ ಸುರಿಸಿದ್ದಾರೆ. ಅವರಲ್ಲಿ ಒಬ್ಬರು ನನ್ನನ್ನು ನಿಂದಿಸುವುದನ್ನು ನಿಲ್ಲಿಸಿದರೆ, ಅದು ನನಗೆ ಕಳವಳದ ವಿಷಯ’ ಎಂದರು.



ಜಾವೇದ್ ಅಖ್ತರ್

‘ನನ್ನ ಎಕ್ಸ್ ಮತ್ತು ವಾಟ್ಸ್‌ಆ್ಯಪ್ ಖಾತೆಗಳನ್ನು ತೋರಿಸುತ್ತೇನೆ, ಎರಡೂ ಕಡೆಯವರು ನನ್ನನ್ನು ನಿಂದಿಸಿದ್ದಾರೆ. ಒಂದು ಕಡೆಯವರು ನೀವು ಕಾಫಿರ್ (ದೇವರನ್ನು ನಂಬದವ) ನರಕಕ್ಕೇ ಹೋಗುತ್ತೀರಿ ಎನ್ನುತ್ತಾರೆ, ಇನ್ನೊಂದು ಕಡೆಯವರು ‘ನೀವು ಜಿಹಾದಿ, ಪಾಕಿಸ್ತಾನಕ್ಕೆ ನಡೆಯಿರಿ’ ಎಂದು ಜರೆಯುತ್ತಾರೆ. ಹೀಗಾಗಿ ಪಾಕಿಸ್ತಾನ ಮತ್ತು ನರಕ ಎರಡರ ನಡುವೆ ನನ್ನ ಆಯ್ಕೆ ನರಕವೇ ಆಗಿರುತ್ತದೆ’ ಎಂದು ಅಖ್ತರ್ ಹೇಳಿದ್ದಾರೆ.

‘ನಾಗರಿಕರು ಯಾವುದೇ ರಾಜಕೀಯ ಪಕ್ಷದ ಸಿದ್ಧಾಂತ ಒಪ್ಪಿಕೊಳ್ಳಬಾರದು. ಆ ಮೂಲಕ ಅವರು ಸರಿ– ತಪ್ಪುಗಳನ್ನು ನೇರವಾಗಿ ಹೇಳಬಹುದು. ಎಲ್ಲ ಪಕ್ಷಗಳು ನಮ್ಮವು, ಆದರೆ ಯಾವುದೇ ಪಕ್ಷ ನಮ್ಮದಲ್ಲ ಎನ್ನುವ ಮನಸ್ಥಿತಿಯಿರಬೇಕು. ಅಂತಹವರಲ್ಲಿ ನಾನು ಕೂಡ ಒಬ್ಬ’ ಎಂದರು.

‘ದೇಶದಲ್ಲಿ ಸಂವಿಧಾನವೇ ಪರಮೋಚ್ಚ’

ಮುಂಬೈ (ಪಿಟಿಐ): ‘ನ್ಯಾಯಾಂಗ ಅಥವಾ ಕಾರ್ಯಾಂಗ ಶ್ರೇಷ್ಠವಲ್ಲ. ಬದಲಿಗೆ ದೇಶದ ಸಂವಿಧಾನವೇ ಸರ್ವಶ್ರೇಷ್ಠವಾಗಿದ್ದು, ಅದರ ಎಲ್ಲ ಸ್ತಂಭಗಳು ಒಟ್ಟಾಗಿ ಕಾರ್ಯ ನಿರ್ವಹಿಸಬೇಕು’ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಪ್ರತಿಪಾದಿಸಿದ್ದಾರೆ.

ಮಹಾರಾಷ್ಟ್ರ ಮತ್ತು ಗೋವಾದ ಬಾರ್ ಕೌನ್ಸಿಲ್ ಹಮ್ಮಿಕೊಂಡಿದ್ದ ಸನ್ಮಾನ ಕಾರ್ಯಕ್ರಮ ಮತ್ತು ರಾಜ್ಯ ವಕೀಲರ ಸಮಾವೇಶ ಉದ್ದೇಶಿಸಿ ಅವರು ಭಾನುವಾರ ಮಾತನಾಡಿದರು.

ನ್ಯಾ. ಬಿ.ಆರ್. ಗವಾಯಿ

ನ್ಯಾಯಾಂಗ, ಕಾರ್ಯಾಂಗ ಅಥವಾ ಸಂಸತ್ತು ಸರ್ವಶ್ರೇಷ್ಠವಲ್ಲ. ಆದರೆ, ಭಾರತದ ಸಂವಿಧಾನವೇ ಸರ್ವಶ್ರೇಷ್ಠವಾದದ್ದು. ಅದರ ಮೂರು ಅಂಗಗಳಾದ ನ್ಯಾಯಾಂಗ, ಕಾರ್ಯಾಂಗ ಮತ್ತು ಶಾಸಕಾಂಗ ಸಂವಿಧಾನದ ಪ್ರಕಾರ ಕಾರ್ಯ ನಿರ್ವಹಿಸಬೇಕು. ಸಂವಿಧಾನದ ಈ ಮೂರು ಅಂಗಗಳು ಸಮಾನವಾದವು ಎಂದರು.

ಸಂಸತ್ತಿಗೆ ಸಂವಿಧಾನವನ್ನು ತಿದ್ದುಪಡಿ ಮಾಡುವ ಅಧಿಕಾರವಿದೆ. ಆದರೆ, ಸಂವಿಧಾನದ ‘ಮೂಲ ಸ್ವರೂಪ’ವನ್ನು ಮುಟ್ಟಲಾಗದು. ಜೊತೆಗೆ ಆಶ್ರಯದ ಹಕ್ಕು ಸಹ ಶ್ರೇಷ್ಠವಾದದು ಎಂದರು. ಈ ಮೂಲಕ ‘ಬುಲ್ಡೋಜರ್ ನ್ಯಾಯ’ದ ಬಗ್ಗೆ ಪ್ರಸ್ತಾಪಿಸಿದರು.

ದೇಶವು ಕೇವಲ ಬಲಿಷ್ಠ ಆಗುತ್ತಿದೆಯಷ್ಟೇ ಅಲ್ಲದೆ, ಸಾಮಾಜಿಕ ಮತ್ತು ಆರ್ಥಿಕವಾಗಿಯೂ, ಅಭಿವೃದ್ಧಿಯತ್ತ ಸಾಗುತ್ತಿದೆ ಎಂಬುದು ಸಂತಸದ ವಿಚಾರವಾಗಿದ್ದು, ಇದು ಮುಂದುವರಿಯಲಿದೆ ಎಂದರು.

ರಾಜತಾಂತ್ರಿಕ ನಿಯೋಗಕ್ಕೆ ಪಿಪಿಪಿ ಮುಖ್ಯಸ್ಥ ಬಿಲಾವಲ್ ಭುಟ್ಟೊ ನೇತೃತ್ವ

ಭಾರತದ ಬೆನ್ನಲ್ಲೇ ವಿದೇಶಗಳಿಗೆ ಪಾಕ್ ನಿಯೋಗ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನ ಪ್ರಾಯೋಜಿತ ಭಯೋತ್ಪಾದನೆಯ ಮುಖವನ್ನು ಬಹಿರಂಗಪಡಿಸಲು ಮತ್ತು ಭಯೋತ್ಪಾದನೆ ಹತ್ತಿಕ್ಕುವ ತನ್ನ ಸಂಕಲ್ಪವನ್ನು ವಿಶ್ವದ ಮುಂದಿಡಲು ಭಾರತವು ಸರ್ವ ಪಕ್ಷಗಳ ನಿಯೋಗವನ್ನು ವಿವಿಧ ದೇಶಗಳಿಗೆ ಕಳುಹಿಸುವ ರಾಜತಾಂತ್ರಿಕ ಕಾರ್ಯಾಚರಣೆ ಆರಂಭಿಸಿರುವ ಬೆನ್ನಲ್ಲೇ ಪಾಕಿಸ್ತಾನ ಕೂಡ ಇದೇ ಮಾರ್ಗವನ್ನು ಹಿಡಿದಿದೆ.

‘ನಮ್ಮ ದೇಶದ ನಿಲುವನ್ನು ಮನವರಿಕೆ ಮಾಡಿಕೊಡಲು ವಿಶ್ವದ ಪ್ರಮುಖ ರಾಷ್ಟ್ರಗಳಿಗೆ ರಾಜತಾಂತ್ರಿಕ ನಿಯೋಗ ಕಳುಹಿಸುತ್ತೇವೆ’ ಎಂದು ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಶನಿವಾರ ಪ್ರಕಟಿಸಿದ್ದಾರೆ. ಅಲ್ಲದೆ, ನಿಯೋಗದ ನಾಯಕತ್ವವನ್ನು ಬಿಲಾವಲ್ ಭುಟ್ಟೊ ಅವರಿಗೆ ವಹಿಸಿದ್ದಾರೆ.

ಇತ್ತೀಚಿನ ಸಂಘರ್ಷದ ಕುರಿತು ದೇಶದ ನಿಲುವನ್ನು ವ್ಯಕ್ತಪಡಿಸಲು ನಿಯೋಗವು ಶೀಘ್ರದಲ್ಲೇ ಅಮೆರಿಕ, ಬ್ರಿಟನ್, ಬ್ರಸೆಲ್ಸ್, ಫ್ರಾನ್ಸ್ ಮತ್ತು ರಷ್ಯಾಕ್ಕೆ ಭೇಟಿ ನೀಡಲಿದೆ

ಇಶಾಕ್ ಡಾರ್, ಪಾಕಿಸ್ತಾನದ ಉಪ ಪ್ರಧಾನಿ ಮತ್ತು ವಿದೇಶಾಂಗ ಸಚಿವ

ಪಹಲ್ಗಾಮ್ ಭಯೋತ್ಪಾದಕ ದಾಳಿ ಮತ್ತು ‘ಆಪರೇಷನ್ ಸಿಂಧೂರ’ದ ನಂತರ ಭಯೋತ್ಪಾದನೆಯ ವಿರುದ್ಧ ತನ್ನ ಶೂನ್ಯ ಸಹಿಷ್ಣುತೆಯ ಸಂದೇಶವನ್ನು ಜಗತ್ತಿಗೆ ಸಾರಲು ಭಾರತ ಮುಂದಾಗಿದೆ. ಇದಕ್ಕಾಗಿ ಈ ತಿಂಗಳ ಕೊನೆಯಲ್ಲಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಸದಸ್ಯ ರಾಷ್ಟ್ರಗಳು ಸೇರಿ ಪ್ರಮುಖ ಪಾಲುದಾರ ರಾಷ್ಟ್ರಗಳಿಗೆ ಸರ್ವಪಕ್ಷ ನಿಯೋಗಗಳನ್ನು ಕಳುಹಿಸುತ್ತಿದೆ. ಭಾರತ ಸರ್ಕಾರ ಈ ನಿರ್ಧಾರವನ್ನು ಘೋಷಿಸಿದ ಕೆಲವೇ ಗಂಟೆಗಳಲ್ಲಿ ಪಾಕಿಸ್ತಾನವು ತನ್ನ ನಿಯೋಗ ಕಳುಹಿಸುವ ನಿರ್ಧಾರ ಪ್ರಕಟಿಸಿತು.

ಪಾಕಿಸ್ತಾನ ಪೀಪಲ್ಸ್ ಪಾರ್ಟಿ (ಪಿಪಿಪಿ) ಮುಖ್ಯಸ್ಥ ಮತ್ತು ಮಾಜಿ ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೊ ಜರ್ದಾರಿ ಅವರೊಂದಿಗೆ ನಡೆಸಿದ ದೂರವಾಣಿ ಸಂಭಾಷಣೆಯ ನಂತರ ಪ್ರಧಾನಿ ಶೆಹಬಾಜ್ ಈ ನಿರ್ಧಾರ ತೆಗೆದುಕೊಂಡಿದ್ದಾರೆ ಎಂದು ಪ್ರಧಾನಿ ಕಚೇರಿ ಹೇಳಿದೆ.

‘ಭಾರತದ ಅಪಪ್ರಚಾರ ಬಹಿರಂಗ-ಪಡಿಸಲು ಪ್ರಧಾನಿ ಶೆಹಬಾಜ್ ಅವರು ವಿಶ್ವದ ಪ್ರಮುಖ ರಾಜಧಾನಿಗಳಿಗೆ ಉನ್ನತ ಮಟ್ಟದ ರಾಜತಾಂತ್ರಿಕ ನಿಯೋಗವನ್ನು ಕಳುಹಿಸಲು ನಿರ್ಧರಿಸಿದ್ದಾರೆ’ ಎಂದು ಸರ್ಕಾರಿ ಸ್ವಾಮ್ಯದ ‘ರೇಡಿಯೊ ಪಾಕಿಸ್ತಾನ’ ವರದಿ ಮಾಡಿದೆ.

‘ಪ್ರಧಾನಿಯವರು ಮುಂಜಾನೆ ನನ್ನನ್ನು ಸಂಪರ್ಕಿಸಿದರು. ಅಂತರ-ರಾಷ್ಟ್ರೀಯ ವೇದಿಕೆಯಲ್ಲಿ ಶಾಂತಿಗಾಗಿ ಪಾಕಿಸ್ತಾನದ ನಿಲುವು ಮಂಡಿಸಲು ನಿಯೋಗದ ನೇತೃತ್ವ ವಹಿಸುವಂತೆ ವಿನಂತಿಸಿದರು. ಈ ಜವಾಬ್ದಾರಿಯನ್ನು ಸ್ವೀಕರಿಸಲು ಮತ್ತು ಈ ಸವಾಲಿನ ಸಮಯದಲ್ಲಿ ದೇಶಕ್ಕೆ ಸೇವೆ ಸಲ್ಲಿಸಲು ಬದ್ಧತೆ ತೋರುವುದು ನನಗೆ ಗೌರವದ ವಿಚಾರ’ ಎಂದು ಬಿಲಾವಲ್ ಶನಿವಾರ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಪಾಕ್ ನಿಯೋಗದಲ್ಲಿ ಯಾರೆಲ್ಲ?

ಬಿಲಾವಲ್ ಜೊತೆಗೆ ನಿಯೋಗದಲ್ಲಿ ಇಂಧನ ಸಚಿವ ಮುಸಾದಿಕ್ ಮಲಿಕ್, ಪಾಕಿಸ್ತಾನ ಮುಸ್ಲಿಂ ಲೀಗ್-ನವಾಜ್ ನಾಯಕ ಖುರ್ರಾಮ್ ದಸ್ತಗೀರ್ ಖಾನ್, ಸೆನೆಟರ್ ಶೆರಿ ರೆಹಮಾನ್, ಮಾಜಿ ವಿದೇಶಾಂಗ ಸಚಿವೆ ಹೀನಾ ರಬ್ಬಾನಿ ಖರ್, ಮುತ್ತಹಿದಾ ಕ್ವಾಮಿ ಚಳವಳಿಯ ಶಾಸಕ ಫೈಸಲ್ ಸಬ್‌ಜವಾರಿ, ಮಾಜಿ ವಿದೇಶಾಂಗ ಕಾರ್ಯದರ್ಶಿಗಳಾದ ತೆಹ್ಮಿನಾ ಜಂಜುವಾ ಮತ್ತು ಜಲೀಲ್ ಅಬ್ಬಾಸ್ ಜಿಲಾನಿ ಅವರ ಹೆಸರಿದೆ.

ನಿಯೋಗವು ಈ ಪ್ರದೇಶದಲ್ಲಿ ಶಾಂತಿ ಮತ್ತು ಸ್ಥಿರತೆಗಾಗಿ ಪಾಕಿಸ್ತಾನದ ಪ್ರಾಮಾಣಿಕ ಪ್ರಯತ್ನಗಳನ್ನು ಒತ್ತಿಹೇಳುತ್ತದೆ ಎಂದು ಪ್ರಧಾನಿ ಕಚೇರಿ ತಿಳಿಸಿದೆ.

ಶಿಕ್ಷಣ

ಅಹಿಂಸಾ ಫೆಲೋಷಿಪ್

ಅಹಿಂಸಾ ಫೆಲೋಷಿಪ್ ಪದವೀಧರರಿಗಾಗಿ ಮರ್ಸಿ ಫಾರ್ ಅನಿಮಲ್ಸ್ ಇಂಡಿಯಾ ಫೌಂಡೇಷನ್ ನೀಡುತ್ತಿರುವ ಅವಕಾಶ. 8-ತಿಂಗಳ ಪೂರ್ಣಾವಧಿಯ ಈ ಫೆಲೋಷಿಪ್ ಭಾರತದಲ್ಲಿ ಪ್ರಾಣಿ ಸಂರಕ್ಷಣಾ ಕಾನೂನುಗಳನ್ನು ಜಾರಿಗೊಳಿಸಲು ರಾಜ್ಯ ಸರ್ಕಾರಗಳು ಮತ್ತು ಜಿಲ್ಲಾಡಳಿತಗಳೊಂದಿಗೆ ನಿಕಟವಾಗಿ ಕೆಲಸ ಮಾಡಲು ಆಸಕ್ತರಿಗೆ ನೀಡಲಾಗುತ್ತದೆ.

ಅರ್ಹತೆ: 2024ರ ಡಿಸೆಂಬರ್ 31ಕ್ಕೆ 21ರಿಂದ 39 ವರ್ಷಗಳ ವಯೋಮಿತಿಯಲ್ಲಿರುವ ಭಾರತೀಯ ನಾಗರಿಕರಿಗೆ ಮುಕ್ತವಾಗಿದೆ. ಅರ್ಜಿದಾರರು ಯಾವುದೇ ವಿಭಾಗದಲ್ಲಿ ಪದವಿಯನ್ನು ಹೊಂದಿರಬೇಕು. ಇಂಗ್ಲಿಷ್ ಮತ್ತು ಪ್ರಾದೇಶಿಕ ಭಾಷೆಗಳಲ್ಲಿ ಉತ್ತಮ ಸಂವಹನ ಕೌಶಲವಿರಬೇಕು.

ಆರ್ಥಿಕ ಸಹಾಯ: ₹20,000ದ ವರೆಗೆ ಮಾಸಿಕ ಸ್ಟೈಪೆಂಡ್ ಮತ್ತು ಇತರ ಪ್ರಯೋಜನಗಳು

ಅರ್ಜಿ ಸಲ್ಲಿಸಲು ಕೊನೆ ದಿನ: 29-06-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/praja/AAFM1

ವಿದ್ಯಾರ್ಥಿ ವೇತನ ಕೈಪಿಡಿ

ಸ್ಯಾಮ್‌ಸಂಗ್ ಸಾಲ್ವ್ ಫಾರ್ ಟುಮಾರೋ ಇಂಡಿಯಾ

ಸ್ಯಾಮ್‌ಸಂಗ್ ಸಾಲ್ವ್ ಫಾರ್ ಟುಮಾರೋ ಇಂಡಿಯಾ ನೀಡುವ ಸ್ಕಾಲರ್‌ಷಿಪ್ ಇದಾಗಿದೆ.

ಅರ್ಹತೆ: 30 ಮೇ 2025 ರಂತೆ 14 ರಿಂದ 22 ವರ್ಷದೊಳಗಿನ ಭಾರತೀಯ ಪ್ರಜೆಗಳಿಗೆ ಮುಕ್ತವಾಗಿದೆ.

ಆರ್ಥಿಕ ಸಹಾಯ: ₹25,00,000 ವರೆಗಿನ ಅನುದಾನಗಳು ಮತ್ತು ಇತರ ಸವಲತ್ತುಗಳು

ಅರ್ಜಿ ಸಲ್ಲಿಸಲು ಕೊನೆ ದಿನ: 30-06-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/praja/SSTI3

ಬೇಸಿಗೆ ರಜಾ ಉಳಿಯಲಿ ಮಜಾ

ಲಲಿತಾ ಹೊಸಪ್ಯಾಟಿ

ಬೆಂಗಳೂರಿನಲ್ಲಿ ಓದುತ್ತಿರುವ ಸ್ವರಾ ಮತ್ತು ಆಕೆಯ ತಮ್ಮ ಶ್ಲೋಕ್ ಇಬ್ಬರೂ ಬೇಸಿಗೆ ರಜೆ ಬಂದರೆ ಕುಣಿದಾಡುತ್ತಾರೆ. ತೋಟದ ಮನೆಗೆ ಹೋಗೋಣ ಎಂದು ತಾಯಿಯನ್ನು ಪೀಡಿಸುತ್ತಲೇ ಇರುತ್ತಾರೆ. ಮಕ್ಕಳು ಬೇಸಿಗೆ ರಜೆಯಲ್ಲಿ ಯಾವುದಾದರೂ ಬೇಸಿಗೆ ಶಿಬಿರಕ್ಕೆ ಸೇರಬಹುದಾಗಿತ್ತು. ಆದರೆ ಶಿಬಿರಕ್ಕೆ ಹೋಗುವುದಕ್ಕಿಂತ ತೋಟದ ಗುಡಿಸಲಿನ ಮನೆಗೆ ಹೋಗಲು ಇಷ್ಟಪಡುತ್ತಾರೆ. ಅವರಿಗೆ ಆ ಪರಿಸರದಲ್ಲಿ ಇಡೀ ದಿನ ಓಡಾಡುವುದೇ ಖುಷಿ. ದೊಡ್ಡ ಬೇವಿನ ಮರಕ್ಕೆ ಜೋಕಾಲಿ ಕಟ್ಟಿ ಇಡೀ ದಿನ ಜೀಕಿದರೂ ತೃಪ್ತಿ ಇಲ್ಲ. ಚಕ್ಕಡಿ ಹೊಡೆಯುವರಿಲ್ಲದೇ ಕಳಚಿದ ಒಂಟಿ ಗಾಲಿಯೊಂದನ್ನು ಅವರ ತಂದೆ ಗಿಡಕ್ಕೆ ವರೆಗಿಸಿಟ್ಟಿದ್ದಾರೆ. ಬಂಡಿಗೆ ಹಚ್ಚಲು ಪೇಂಟ್ ತಂದಿದ್ದಾರೆ. ಮಕ್ಕಳು ಗಾಲಿಗೆ ಬಣ್ಣ ಹಚ್ಚಿ ಅದಕ್ಕೊಂದು ಹೊಸ ರೂಪ ಕೊಟ್ಟಿದ್ದಾರೆ. ಅಲ್ಲಿರುವ ನೇಗಿಲಿಗೆ, ಹಳೆಯ ವಾಟರ್ ಟ್ಯಾಂಕ್ ಕಂಬಕ್ಕೆ ಬಣ್ಣ ಹಚ್ಚುವ ಕಲಿಕೆ ಮನೆಯಿಂದಲೇ ಸಾಧ್ಯವಾಗಿದೆ.

ಮೊದಲಿದ್ದ ಫೋಟೊ ಬಣ್ಣ ಹಚ್ಚಿದ ಫೋಟೊ ಎರಡನ್ನೂ ಕ್ಲಿಕ್ಕಿಸಿ, ಎರಡರ ವ್ಯತ್ಯಾಸ ಕಂಡು ಅಂದ ಹೆಚ್ಚಾಗಿದ್ದಕ್ಕೆ ಖುಷಿ ಪಡುತ್ತಾರೆ. ಹೊಸ ಕೆಲಸ ಮಾಡಿದ್ದಕ್ಕೆ ಅವರ ಕಣ್ಣಲ್ಲಿ ಹೊಳಪಿದೆ. ಬಣ್ಣ ಹಚ್ಚುವ ಅಕ್ಕ ತಮ್ಮಂದಿರಲ್ಲಿಯೇ ಸ್ಪರ್ಧಾ ಮನೋಭಾವ. ಯಾರು ಮೊದಲು ಮುಗಿಸುವರೋ ಅವರಿಗೊಂದು ಪುಟ್ಟ ಬಹುಮಾನವನ್ನೂ ಅವರಮ್ಮ ಇಟ್ಟಿದ್ದಳು.

ಪಂಕಜಾ ಮನೆಯಲ್ಲಿಯೇ ಮಕ್ಕಳು ಬೇಸಿಗೆ ರಜೆಯನ್ನು ಲವಲವಿಕೆಯಿಂದ ಕಳೆಯಲು ತಾನೇ ಒಂದು ಯೋಜನೆ ಸಿದ್ಧಪಡಿಸಿಕೊಂಡಳು. ತಾನು ಕಲಿತ ರಂಗಗೀತೆಗಳನ್ನು ಮನೆಯಲ್ಲಿಯೇ ಅಭ್ಯಾಸ ಮಾಡಿಸಿದಳು. ಮಕ್ಕಳ ಸ್ನೇಹಿತರೂ ಜೊತೆಯಾದರು. ಅವರೆಲ್ಲರಿಗೂ ಒಂದು ನಾಟಕವನ್ನು ಕಲಿತು ಪ್ರದರ್ಶಿಸಿದರು. ಪಂಕಜಾ ಮನೆಯಲ್ಲಿಯೇ ಬೇಸಿಗೆ ರಜೆಯನ್ನು ಸದುಪಯೋಗ ಪಡಿಕೊಂಡ ಪರಿ ಇದು.

ಬೀದರಿನಲ್ಲಿರುವ ಸ್ನೇಹಿತೆ ಭಾರತಿ ತಮ್ಮ ಮೊಮ್ಮಕ್ಕಳನ್ನು ಬೇಸಿಗೆ ಶಿಬಿರಕ್ಕೆ ಕಳಿಸಿಲ್ಲ. ಬೇಸಿಗೆ ರಜೆಯನ್ನು ಅಜ್ಜನೊಂದಿಗೆ ಕಳೆಯುವಂತೆ ಮಾಡುವಲ್ಲಿ ಯಶಸ್ಸು ಕಂಡಿದ್ದಾರೆ. ಅನಾರೋಗ್ಯದಲ್ಲಿರುವ ಅಜ್ಜನೊಂದಿಗೆ ಮಕ್ಕಳು ಮಾತಾನಾಡಿಸುವುದು, ಅವರೊಂದಿಗೆ ಅವರ ಬಾಲ್ಯದ ಸಂಗತಿಗಳನ್ನು ಕೇಳುವುದು. ಪ್ರವಾಸಿ ತಾಣಗಳ ಪರಿಚಯ ಮಾಡಿಕೊಳ್ಳುವುದು. ತಮ್ಮ ಹಿರಿಯರ ಕುರಿತು ಪುಟ್ಟ ಟಿಪ್ಪಣಿ ಮಾಡುವುದು, ಕಥಾ ಪುಸ್ತಕವನ್ನು ಜೋರಾಗಿ ಓದಿ ಇತರರೂ ಆಲಿಸುವಂತೆ ಮಾಡುವುದು. ವಿವಿಧ ಛದ್ಮವೇಷ ಧರಿಸುವುದು. ನಾಟಕಗಳ ಡೈಲಾಗ್ ಹೇಳುವುದು, ತಮಗೆ ಬೇಕಾದ ಹೊಸ ತಿಂಡಿ ತಿನಿಸಿಗಳನ್ನು ಮಾಡಲು ಅಜ್ಜಿಗೂ ತಾಯಿಗೂ ಅಡುಗೆ ಮನೆಯಲ್ಲಿ ಸಹಕರಿಸುವುದು. ಹಣ್ಣುಗಳನ್ನು ತರಕಾರಿಗಳನ್ನು ತೊಳೆಯುವುದು ಮಾಡಿ, ತಿಂಡಿಯನ್ನು ಊಟವನ್ನು ಒಂದೇ ಪಂಕ್ತಿಯಲ್ಲಿ ಸೇವಿಸುತ್ತಾ, ಪರಸ್ಪರ ನಕ್ಕು ನಲಿಯುತ್ತಿದ್ದಾರೆ. ಸಹಕಾರ, ಸಭ್ಯತೆ, ಸಂಬಂಧಗಳಲ್ಲಿಯ ವಿಶ್ವಾಸ, ಪ್ರೀತಿ, ಪ್ರೇಮ, ಹಿರಿಯರನ್ನು ಗೌರವಿಸುವ ಗುಣಗಳನ್ನು ಕಲಿಯುವ ಜೊತೆಗೆ ಆತ್ಮವಿಶ್ವಾಸ, ಆತ್ಮಗೌರವಗಳನ್ನು ಸಂಪಾದಿಸಿಕೊಳ್ಳುತ್ತಾರೆ. ಮಕ್ಕಳೆಲ್ಲ ಒಂದು ಕಡೆ ಇದ್ದು ಕೂಡಿ ಆಡುವುದನ್ನು, ನಕ್ಕು ನಗಿಸುವುದನ್ನು ಕಾಣುವ ಕುಟುಂಬದ ಸದಸ್ಯರಿಗೂ ಸಂತೋಷ ತಾನೇ ತಾನಾಗಿ ಇಮ್ಮಡಿಸಿದೆ.

ಮಕ್ಕಳದು ಸದಾ ಜಾಗೃತ ಮನಸ್ಸು ಎಂಬುದು ಒಪ್ಪಿತವಾದರೂ, ಒತ್ತಡವನ್ನ ಹೇರಿದಲ್ಲಿ ಮಗು ಆಸಕ್ತಿ ಕಳೆದುಕೊಳ್ಳುವಂತಾಗುತ್ತದೆ. ಎಂಟು ವರ್ಷದವರೆಗಿನ ಕಲಿಕಾ ಶಿಕ್ಷಣದಲ್ಲಿ ಶಾಲಾ ಶಿಕ್ಷಣದ ಜೊತೆಗೆ ಕುಟುಂಬ ಸಮುದಾಯ ಹಾಗೂ ಸಮಾಜದಿಂದ ದೊರೆಯುವ ಅನೌಪಚಾರಿಕ ಶಿಕ್ಷಣವೂ ಅಷ್ಟೇ ಮುಖ್ಯವಾಗಿರುತ್ತದೆ.

ಮಗುವೊಂದು ಬೆಳೆದು ದೊಡ್ಡವನಾಗುವವರೆಗೂ ಅಪ್ಪ ಅಮ್ಮ ಮತ್ತು ಕುಟುಂಬದೊಂದಿಗೆ ಕಾಲ ಕಳೆಯುವುದು ಮುಖ್ಯ. ಪರೀಕ್ಷೆ ನಂತರ ಮಕ್ಕಳಿಗೆ ಒಂದಿಷ್ಟು ವಿರಾಮ ಸಿಗಲು ಬೇಸಿಗೆ ರಜೆ ಸದವಕಾಶ. ಹೀಗಾಗಿ ಪಾಲಕರು ಈ ಅವಕಾಶವನ್ನು ಸಂಪೂರ್ಣ ಉಪಯೋಗಿಸಿಕೊಳ್ಳಬೇಕು. ತಮ್ಮ ಸ್ವಂತದ ಊರುಗಳಿಗೆ ಕರೆದುಕೊಂಡು ಹೋಗುವುದು. ಅಲ್ಲಿರುವ ಐತಿಹಾಸಿಕ ತಾಣಗಳನ್ನು ಪರಿಚಯಿಸುವುದು, ಮಕ್ಕಳೊಂದಿಗೆ ಕೂತು ಹರಟೆ ಹೊಡೆಯುವುದು. ಹಳೆಯ ಆಲ್ಬಂಗಳನ್ನು ತೋರಿಸಿ ಪರಿಚಯಿಸುವುದು. ಇಷ್ಟದ ಆಟಗಳನ್ನು ಮನೆಯೊಳಗೆ ಆಡಿಸುವುದು. ಸಣ್ಣ ಮಕ್ಕಳಿದ್ದರೆ ಗಿಡಗಳಿಗೆ ನೀರು ಹಾಕಿಸುವುದು, ಹೂವುಗಳನ್ನು ಕೊಯ್ದು ಇಡುವಂತೆ ಮಾಡುವುದು. ಬಟ್ಟೆಗಳನ್ನು ನೀಟಾಗಿ ಮಡಚಿ ಇಡಲು ಕಲಿಸುವುದು. ಅಷ್ಟೇ ಅಲ್ಲದೆ ತಾವೇ ಬಿಡುವು ಮಾಡಿಕೊಂಡು ಕಥೆಗಳನ್ನು ಮಕ್ಕಳಿಗೆ ಓದಿ ಹೇಳುವುದು ಮಾಡಬೇಕು.

ಜಾನ್ ಡ್ಯೂಯಿ ಎಂಬುವವರ ಪ್ರಕಾರ ಶಿಕ್ಷಣ ಎಂದರೆ ಪ್ರಕ್ರಿಯೆ. ಈ ಪ್ರಕ್ರಿಯೆ ಅಂಶಗಳ ಉದ್ದೇಶವೇ ಪರಸ್ಪರ ಪರಿಚಯಿಸುವುದು. ಒಡನಾಟ ಹೊಂದುವುದು. ಹೊಂದಾಣಿಕೆಯನ್ನು ಕಲಿಯುವುದು. ಕೃಷಿ ಕೆಲಸದಲ್ಲಿರುವ ಅಜ್ಜ ಅಜ್ಜಿ ಇದ್ದರೆ ಮನೆಯಲ್ಲಿಯೇ ಇರುವ ದವಸ, ಧಾನ್ಯ, ಕೃಷಿ ಉಪಕರಣಗಳು, ಮತ್ತು ಗಿಡಗಳ ಹೆಸರು ಮತ್ತು ಕೆರೆಕಟ್ಟೆ, ನದಿ, ಹಳ್ಳಗಳ ಪರಿಚಯ ಮಾಡಿಕೊಡುವುದೂ ಕಲಿಕೆಯೆ. ರೊಟ್ಟಿ ತಿನ್ನುವ ಮಗುವೊಂದು ಜೋಳವನ್ನೇ ನೋಡದ ಕಾರಣ ಪಾಕೇಟ್‌ನಲ್ಲಿಟ್ಟ ದವಸ-ಧಾನ್ಯಗಳ ಪರಿಚಯ ಮಾಡುವಲ್ಲಿ ಹಿಂಜರಿಯುವಂತಾಗುತ್ತದೆ.

ಮಕ್ಕಳಲ್ಲಿರುವ ಅಂತಃಶಕ್ತಿಯನ್ನು ವಿಕಸನಗೊಳಿಸುವಲ್ಲಿ ಕುಟುಂಬವೂ ಬಹುಮುಖ್ಯ. ಶಿಕ್ಷಣ ಚಿಂತಕರು ಹೇಳಿದಂತೆ ಪಂಚಶೀಲ ಗುಣಗಳಾದ ಸ್ವಚ್ಛತೆ, ಪ್ರಾಮಾಣಿಕತೆ, ಸಮತೆ, ಸಹಕಾರ, ದುಡಿಮೆ ಈ ಗುಣಗಳನ್ನು ಬೋಧನೆಯಿಂದ ಕಲಿಯುವುದಕ್ಕಿಂತ ಅನುಭವಜನ್ಯವಾಗಿ ಕಲಿಯಲು ಬೇಸಿಗೆ ರಜೆ ಒಂದು ದೊಡ್ಡ ಅವಕಾಶ. ❖

CMR UNIVERSITY
Private University Estd in Karnataka State by Act No. 45 of 2013
BENGALURU | RECOGNISED BY UGC

CREATE THE FUTURE

APPLY NOW!

SCHOOL OF ARCHITECTURE
B.Arch.

SCHOOL OF ENGINEERING & TECHNOLOGY
B.Tech. | CSE • CSE (AI & ML) • CSE (Data Science)
• Computer Engg.* (With specialisation in AI & ML, Internet of Things)
• CST* (With specialisation in AI & ML, Internet of Things) • IT • ECE
M.Tech. (For Regular and Professionals) • CSE • AI
Ph.D. CSE (AI & ML, Networking & Cloud Computing, Analytics, Cyber Security, Data Science & Internet of Things)
• ECE • Mechanical Engineering

SCHOOL OF DESIGN
B.Des. | Communication Design • Product Design
• Fashion Design • Interior Design
B.Sc. | Sound Engineering • Visual Effects & Animation

SCHOOL OF LIBERAL STUDIES
B.A. (Major + Minor)
B.Sc. | Psychology
M.Sc. | Psychology • Clinical • Counselling
• Human Resource Development & Management
Ph.D. | Psychology

SCHOOL OF ECONOMICS & COMMERCE
B.Com. | International Accounting & Finance (ACCA, UK)
• Professional - CA Integrated • Data Science
• Certified Management Accountant (US CMA)
Ph.D. | Economics • Commerce

SCHOOL OF LEGAL STUDIES
B.A., LL.B. (Hons)
B.B.A., LL.B. (Hons)
LL.B.
LL.M. | Constitutional Law • Commercial Law • Criminal Law

SCHOOL OF SCIENCE & COMPUTER STUDIES
BCA | Cloud Computing • Data Science
• Game Development • AI & ML NEW
B.Sc. | IT
M.Sc. | IT in Data Science
MCA
Ph.D. | Computer Application

SCHOOL OF MANAGEMENT
BBA | Digital Marketing • Business Analytics
• Fintech NEW • Data Science NEW
• Logistics & Supply Chain Management NEW
• Tourism & Hospitality Management NEW
MBA with Dual Specialisation in
• Marketing • HR • Finance• Business Analytics
• Digital Marketing • Supply Chain Management
MBA with Specialisation in
Business Analytics & Business Intelligence
MBA | Technology Management NEW
Executive MB | Product Leadership
Ph.D. | Management

ADMISSIONS OPEN FOR AY 2025-26

Up to 100% Scholarship available for eligible candidates* *T&C apply

LIMITED SEATS AT CONCESSIONAL FEE
• Semester-wise payment option
• Interest-free education loan (EMI option*)
• Hostel facility for boys & girls
*T&C apply

CET codes: B.Tech. - E257 | B.Arch. - E245
PGCET code: MBA (City Campus) - B150
MBA (OMBR Campus) - B149 | MBA (Lakeside Campus) - B395 | MCA (OMBR Campus) - C527
MCA (Lakeside Campus) - C521
COMEDK code: Engineering - E187 | Architecture - E187A

We honour JEE, COMEDK, CUET, KCET and other state / national-level tests.
Direct admission for CUET students

CELEBRATING 25 YEARS CMRIT CMR INSTITUTE OF TECHNOLOGY, BENGALURU.
NAAC GRADE A++ ACCREDITED INSTITUTION
CMR INSTITUTE OF TECHNOLOGY

CMRIT OPEN DAY 2025
CMRIT invites students and parents to the OPEN DAY
Date: 24th May 2025 | Timings: 9:00 am to 4:00 pm
Venue: #132, AECS Layout, IT Park Road, Bengaluru 560037

• Permanently affiliated to VTU
• Approved by AICTE • NIRF Ranked
• Recognised by the Govt. of Karnataka

B.E. | CSE • CSE (AI & ML) • AI & DS • AI & ML
CSE (Data Science) • ISE • ECE
MBA | MCA
Ph.D.
• CSE • ECE • Physics • Mathematics • Chemistry
• Business Administration • Computer Applications

B.E : CET code - E097 | ComedK code - E032
PGCET code : MCA - C420MC | MBA - B151MB
www.cmrit.ac.in
admission@cmrit.ac.in
SCAN FOR DETAILS

93429 00666
admissions@cmr.edu.in
www.cmr.edu.in

Lakeside Campus: Off Hennur-Bagalur Main Road, Chagalahatti, Bengaluru - 562 149
City Campus: #2, 3rd Cross, 6th A Main, HRBR Layout, Bengaluru - 560 043
OMBR Campus: No.5, Bhuvanagiri, OMBR Layout, Bengaluru - 560 043

S.R. EDUCATIONAL TRUST (R.) Since: 1998 SILVER JUBILEE 25 YEARS

ಎಸ್.ಆರ್. ಸಮೂಹ ಶಿಕ್ಷಣ ಸಂಸ್ಥೆ ಹೆಬ್ರಿ
ಉಡುಪಿ ರೋಡ್, ಹೆಬ್ರಿ ತಾಲೂಕು

ಎಸ್.ಆರ್. ಪದವಿ ಪೂರ್ವ ಕಾಲೇಜು ಹೆಬ್ರಿ (Residential)
ಎಸ್.ಆರ್. ಪಬ್ಲಿಕ್ ಸ್ಕೂಲ್ ಹೆಬ್ರಿ CBSE- (Residential)
ಎಸ್.ಆರ್. ಆಂಗ್ಲ ಮಾಧ್ಯಮ ಪ್ರೌಢಶಾಲೆ ಹೆಬ್ರಿ (Residential)

ಆಗುಂಬೆಯಿಂದ ಮಣಿಪಾಲಕ್ಕೆ ಹೋಗುವ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತೆ ಹೆಬ್ರಿಯ ಕಿನ್ನಿಗುಡ್ಡೆ ಎಂಬಲ್ಲಿ ಎಲ್‌ಕೆಜಿಯಿಂದ ಪಿಯುಸಿವರೆಗೆ 2500ಕ್ಕೂ ಹೆಚ್ಚು ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಅತ್ಯುತ್ತಮ ಗುಣಮಟ್ಟದ ಶಿಕ್ಷಣ ನೀಡುತ್ತಿದೆ. ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಹಾಸ್ಟೆಲ್ ವ್ಯವಸ್ಥೆಯಿದ್ದು, ಅತ್ಯಾಧುನಿಕ ಪ್ರಯೋಗಾಲಯಗಳನ್ನು, ಸಭಾಂಗಣವನ್ನು ಸುಸಜ್ಜಿತ ಕಟ್ಟಡಗಳನ್ನು ಹೊಂದಿರುವ ಈ ಸಂಸ್ಥೆ ಕಳೆದ 26 ವರ್ಷದಿಂದ ರಾಜ್ಯದ, ದೇಶದ ನಾನಾ ಕಡೆಯ ವಿದ್ಯಾರ್ಥಿಗಳಿಗೆ ಮೌಲ್ಯಯುತ ಶಿಕ್ಷಣ ನೀಡುವಲ್ಲಿ ಯಶಸ್ವಿಯಾಗಿದೆ. ಈಗಾಗಲೇ ಅನೇಕ ವೈದ್ಯಕೀಯ, ಇಂಜಿನಿಯರಿಂಗ್ ದಾಖಲಾತಿಯನ್ನು ಸಂಸ್ಥೆಯ ವಿದ್ಯಾರ್ಥಿಗಳು ಪಡೆದಿರುವುದು ಹೆಗ್ಗಳಿಕೆ. ಇದಲ್ಲದೆ ಇಲ್ಲಿನ ವಿದ್ಯಾರ್ಥಿಗಳು ದೇಶದ ನಾನಾ ಕಡೆಯ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಾದ ಕೆ.ಎಂ.ಸಿ ಮಣಿಪಾಲ, ಆರ್.ವಿ. ಇಂಜಿನಿಯರಿಂಗ್ ಕಾಲೇಜ್ ಬೆಂಗಳೂರು, ಏಮ್ಸ್ ದೆಹಲಿ, ಎಜೆ ಮಂಗಳೂರು, ಜಿಪ್ಮರ್ ಛಂಡೀಗರ್, ಮೊದಲಾದೆಡೆ ದಾಖಲಾತಿಯನ್ನು ಪಡೆದಿದ್ದು ಪ್ರಸ್ತುತ ವೈದ್ಯರಾಗಿ, ಇಂಜಿನಿಯರಾಗಿ, ಸಿಎ ಆಗಿ ನೌಕಾ ಸೇನೆಯಲ್ಲಿ ಹಾಗೂ ಇನ್ನಿತರ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

S.R. PUBLIC SCHOOL
CBSE (Residential)
We provide NTSE/NEET/JEE Foundation Classes from 6th to 9th Std.

100% Result in CBSE FOR THE PAST 15 YEARS

S.R.ENGLISH MEDIUM HIGH SCHOOL
STATE SYLLABUS (Residential)
100% Result in SSLC FOR THE PAST 17 YEARS

S.R.PU College (Residential)
SCIENCE: PCMB/PCMCs
Integrated Classes for NEET/JEE (Main) KCT
COMMERCE: EBAS/EBACs
(With CA/CS Foundation Classes)
LANGUAGE
English, Kannada, Hindi, Sanskrit

Over 150 students secured admission to reputed engineering institutions such as RV College of Engineering, MSRIT, NMAMIT Nitte, NIE Mysore and others. Additionally, more than 85 students gained admission to MBBS programs through KCET/NEET.

SCIENCE

CHIRANTHANA U S (9th Rank in State), HOSANAGARA SHIMOGA, P-98, C-99, M-100, B-100
ABHIJNYA N (10th Rank in State), MUDRADY, P-98, C-100, M-100, B-98
CHIRANTH M A, HOSANAGARA, P-97, C-97, M-98, Cs-99
CHINMAY B S, THIRTHAHALLI, P-97, C-99, M-99, B-96
DIVYA S, SHIVAPURA, P-98, C-95, M-95, B-100
E BHUVAN PATEL, HOSANAGARA, P-96, C-98, M-97, Cs-98
DIGANTH C P, THIRTHAHALLI, P-97, C-96, M-100, Cs-95
SRINIDHI, SHIVAPURA, P-96, C-95, M-100, B-98
AARUSH E P, THIRTHAHALLI, E-94, B-95, A-94, B-97
DHANUSH, HILIYANA, P-93, C-98, M-94, B-96

ABSTRACT
Total Appeared - 221
Distinction - 115
First Class - 103

COMMERCE

ANANYA (5th Rank in State), MADAMAKKI, HEBRI, E-100, B-100, A-100, S-100
SHEKHAR MAHESH KUNDUR, BYADAGI, E-99, B-100, A-97, S-100
SHRIRAKSHA, BELVE, E-97, B-100, A-99, S-100
SHRAVYA, CHARA HEBRI, E-99, B-100, A-98, S-100
SAISHRUTHI, CHARA HEBRI, E-99, B-97, A-96, S-100
AMULYA R SHETTY, CHARA, E-98, S-100, A-95, Cs-97
MARELLA JOHNSON, RAICHURU, E-95, B-94, A-99, Cs-96
BELAGERE RANGA P, HIRIYUR, CHITHRADURGA, E-98, B-95, A-99, S-99

S.R. PUBLIC SCHOOL (CBSE)
Grade X Annual Examination 2024-25 Result

1 AMULYA, SHIVAPURA 95.00%
1 VISHWAS C H, HOSUR 95.00%
2 SAMEEKSHA G NAIK, HADIMANE BELANJE 93.80%
2 SHRUTHI PRABHU, HEBRI 93.80%
3 RISHITA S SHETTY, ALBADI, ARDI 93.60%
MANOHAR N, BANGALORE 93.00%
PADMAPRASAD G, PERDOOR 92.00%
ANUSHKA V, SHEDIMANE 90.20%
SAMARTH L, SHIVMOGGA 90.00%

100% Result for the Past 15 years
ABSTRACT
Total Appeared - 112
Distinction - 25
First Class - 84

ADMISSION OPEN
Contact for PUC: 9448373109/9448604417/9844142425, 9448724251,
for CBSE/State School: 9448373109/9448604417/8277194408

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ಚಿಂತೆಯೇ ಮುಪ್ಪು, ಸಂತೋಷವೇ ಯೌವನ.

–ಬೀಚಿ

ಮಸೂದೆಗೆ ಅಂಕಿತ: ರಾಷ್ಟ್ರಪತಿ ಎತ್ತಿರುವ ಪ್ರಶ್ನೆಗಳು ರಾಜಕೀಯಪ್ರೇರಿತ

ರಾಜ್ಯಪಾಲರು ಮತ್ತು ರಾಷ್ಟ್ರಪತಿಯವರು ರಾಜ್ಯಗಳ ಮಸೂದೆಗಳಿಗೆ ಅಂಕಿತ ಹಾಕುವುದಕ್ಕೆ ಕಾಲಮಿತಿ ನಿಗದಿಪಡಿಸಿ ಸುಪ್ರೀಂ ಕೋರ್ಟ್ ಏಪ್ರಿಲ್‌ನಲ್ಲಿ ನೀಡಿದ ತೀರ್ಪಿಗೆ ಸಂಬಂಧಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಕೆಲವು ಪ್ರಶ್ನೆಗಳನ್ನು ಕೇಳಿದ್ದಾರೆ. ತೀರ್ಪಿಗೆ ಸಂಬಂಧಿಸಿ ಕೇಂದ್ರ ಸರ್ಕಾರಕ್ಕೆ ಕೆಲವು ಸ್ಪಷ್ಟನೆ ಬೇಕಾಗಿದೆ ಎಂಬುದು ಇದರಿಂದ ಮೇಲ್ನೋಟಕ್ಕೆ ತಿಳಿಯುತ್ತದೆ. ರಾಜ್ಯಪಾಲರ ಅಧಿಕಾರ, ರಾಜ್ಯಪಾಲರು ಮತ್ತು ರಾಷ್ಟ್ರಪತಿಯವರಿಗೆ ಮಸೂದೆಗೆ ಅಂಕಿತ ನೀಡಲು ನ್ಯಾಯಾಲಯ ನೀಡಿದ ಕಾಲಮಿತಿ, ರಾಷ್ಟ್ರಪತಿಯವರ ಅಧಿಕಾರದಂತಹ ಹಲವು ವಿಚಾರಗಳಿಗೆ ಸಂಬಂಧಿಸಿ 14 ಪ್ರಶ್ನೆಗಳನ್ನು ಕೇಳಲಾಗಿದೆ. ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ ಅವರು 10 ಮಸೂದೆಗಳನ್ನು ಅನಿರ್ದಿಷ್ಟಾವಧಿಗೆ ತಡೆಹಿಡಿದಿರುವುದು ತಪ್ಪು ಮತ್ತು ಕಾನೂನುಬಾಹಿರ ಎಂದು ಸುಪ್ರೀಂ ಕೋರ್ಟ್ ಹೇಳಿತ್ತು. ಆ ಮಸೂದೆಗಳಿಗೆ ರಾಜ್ಯಪಾಲರ ಅಂಕಿತ ದೊರೆತಿದೆ ಎಂದು ಭಾವಿಸಬೇಕು ಎಂದು ಕೋರ್ಟ್ ಹೇಳಿದೆ. ಈ ತೀರ್ಪಿನ ಕುರಿತು ಕೇಂದ್ರ ಸರ್ಕಾರವು ತನ್ನ ನಿಲುವನ್ನು ಸ್ಪಷ್ಟಪಡಿಸಿಲ್ಲ. ಆದರೆ, ರಾಷ್ಟ್ರಪತಿಯವರ ಪ್ರಶ್ನೆಗಳನ್ನು ಗಮನಿಸಿದರೆ ಕೇಂದ್ರ ಸರ್ಕಾರವು ತೀರ್ಪನ್ನು ಒಪ್ಪಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಈ ಪ್ರಶ್ನೆಗಳಿಗೆ ಸಂಬಂಧಿಸಿ ಪ್ರಕ್ರಿಯಾತ್ಮಕ, ಕಾನೂನಾತ್ಮಕ ಮತ್ತು ಇತರ ಅಂಶಗಳು ಎದ್ದು ಕಾಣುತ್ತವೆ. ಆದರೆ, ರಾಷ್ಟ್ರಪತಿ ಎತ್ತಿರುವ ಪ್ರಶ್ನೆಗಳು ಮೂಲಭೂತವಾಗಿ ರಾಜಕೀಯ ನೆಲೆಯವು. ರಾಜಕೀಯವಾಗಿ ಬಿಜೆಪಿಯನ್ನು ವಿರೋಧಿಸುವ ಪಕ್ಷಗಳ ಆಳ್ವಿಕೆ ಇರುವ ರಾಜ್ಯಗಳ ರಾಜ್ಯಪಾಲರು ಮಸೂದೆಗಳನ್ನು ಅನಿರ್ದಿಷ್ಟ ಅವಧಿಗೆ ತಡೆಹಿಡಿಯುವುದು ಈ ತೀರ್ಪಿನಿಂದಾಗಿ ಅಸಾಧ್ಯವಾಗಿದೆ. ಹಾಗೆಯೇ ರಾಷ್ಟ್ರಪತಿಯವರನ್ನೂ ಈ ವ್ಯಾಪ್ತಿಗೆ ತರಲಾಗಿದೆ. ಈ ರಾಜಕಾರಣಕ್ಕೆ ಅನುಗುಣವಾಗಿ ಪ್ರಶ್ನೆಗಳನ್ನು ರೂಪಿಸಲಾಗಿದೆ, ಇದು ಕೇಂದ್ರ ಸರ್ಕಾರದ ರಾಜಕಾರಣವೂ ಹೌದು.

ತೀರ್ಪನ್ನು ಮರುಪರಿಶೀಲನೆಗೆ ಒಳಪಡಿಸಬೇಕು ಎಂದು ಸರ್ಕಾರವು ನ್ಯಾಯಾಲಯವನ್ನು ಕೋರಿಲ್ಲ. ಬದಲಿಗೆ ಕೋರ್ಟ್ ಮುಂದೆ ರಾಷ್ಟ್ರಪತಿಯವರು ಪ್ರಶ್ನೆಗಳನ್ನು ಇರಿಸಿದ್ದಾರೆ

ರಾಷ್ಟ್ರಪತಿಯವರ ಪ್ರಶ್ನೆಗಳನ್ನು ನ್ಯಾಯಾಲಯವು ಪರಿಗಣನೆಗೆ ತೆಗೆದುಕೊಳ್ಳಬಹುದು. ಆದರೆ, ನ್ಯಾಯಾಲಯ ನೀಡಿರುವ ತೀರ್ಪು ರಾಜ್ಯಪಾಲರು ಸ್ವೇಚ್ಛೆಯಿಂದ ವರ್ತಿಸುವುದಕ್ಕೆ ಕಡಿವಾಣ ಹಾಕಿ ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸಿದೆ. ರಾಜ್ಯಪಾಲರಿಗೆ ಪರಮಾಧಿಕಾರ ಇಲ್ಲ ಎಂದು ನ್ಯಾಯಾಲಯ ಘೋಷಿಸಿದೆ. ರಾಜ್ಯಪಾಲರ ಹುದ್ದೆಗಿಂತ ಚುನಾಯಿತ ಸರ್ಕಾರಕ್ಕೆ ಹೆಚ್ಚಿನ ಅಧಿಕಾರ ಇದೆ ಎಂದೂ ಹೇಳಿದೆ. ರಾಜ್ಯಪಾಲರಿಗೆ ಕಾಲಮಿತಿ ಹೇರಬಹುದು ಎಂಬ ಅಂಶ ಸಂವಿಧಾನದಲ್ಲಿ ಇಲ್ಲ. ಹಾಗಾಗಿ, ಕಾಲಮಿತಿ ಹೇರಬಹುದೇ ಎಂಬುದನ್ನು ನ್ಯಾಯಾಲಯವು ಪರಿಶೀಲನೆಗೆ ಒಳಪಡಿಸಬೇಕು. ರಾಷ್ಟ್ರಪತಿಯವರ ಅಧಿಕಾರಗಳು ಮತ್ತು ಸ್ಥಾನವನ್ನು ತೀರ್ಪು ದುರ್ಬಲಗೊಳಿಸಿದೆಯೇ ಎಂಬುದನ್ನೂ ಪರಿಶೀಲನೆಗೆ ಒಳಪಡಿಸಬೇಕಿದೆ. ಸಂಬಂಧಪಟ್ಟ ಇತರ ಅಂಶಗಳನ್ನು ಕೂಡ ಪರಿಶೀಲಿಸಬೇಕು.

ತೀರ್ಪನ್ನು ಮರುಪರಿಶೀಲನೆಗೆ ಒಳಪಡಿಸಬೇಕು ಎಂದು ಸರ್ಕಾರವು ನ್ಯಾಯಾಲಯವನ್ನು ಕೋರಿಲ್ಲ. ಬದಲಿಗೆ ಕೋರ್ಟ್ ಮುಂದೆ ರಾಷ್ಟ್ರಪತಿಯವರು ಪ್ರಶ್ನೆಗಳನ್ನು ಇರಿಸಿದ್ದಾರೆ. ಮರುಪರಿಶೀಲನೆ ಅರ್ಜಿಯನ್ನು ತೀರ್ಪು ನೀಡಿದ ಪೀಠವೇ ವಿಚಾರಣೆ ನಡೆಸುತ್ತದೆ. ಸಾಮಾನ್ಯವಾಗಿ ತನ್ನ ಹಿಂದಿನ ತೀರ್ಪಿಗೆ ಪೀಠವು ಬದ್ಧವಾಗಿರುತ್ತದೆ. ರಾಷ್ಟ್ರಪತಿಯವರು ಎತ್ತಿರುವ ಪ್ರಶ್ನೆಗಳಿಗೆ ನ್ಯಾಯಾಲಯವು ಪ್ರತಿಕ್ರಿಯೆ ನೀಡಲೇಬೇಕು ಎಂದೇನಿಲ್ಲ. ಬಾಬರಿ ಮಸೀದಿ ವಿವಾದ ಕುರಿತಂತೆ ಅಭಿಪ್ರಾಯ ವ್ಯಕ್ತಪಡಿಸಲು ಈ ಹಿಂದೊಮ್ಮೆ ನ್ಯಾಯಾಲಯ ನಿರಾಕರಿಸಿತ್ತು. ನ್ಯಾಯಾಲಯದ ಅಭಿಪ್ರಾಯಕ್ಕೆ ಸರ್ಕಾರ ಅಥವಾ ಸಂಸತ್ತು ಬದ್ಧವಾಗಿರಬೇಕಿಲ್ಲ. ರಾಷ್ಟ್ರಪತಿಯವರು ಎತ್ತಿರುವ ಪ್ರಶ್ನೆಗಳ ಕುರಿತು ನ್ಯಾಯಾಲಯದ ಅಭಿಮತ ಏನೇ ಆಗಿದ್ದರೂ ಅದು ತೀರ್ಪಿನ ಮೇಲೆ ಪರಿಣಾಮ ಬೀರುವುದಿಲ್ಲ. ತೀರ್ಪು ಊರ್ಜಿತವಾಗಿಯೇ ಇರುತ್ತದೆ. ಹಾಗಾಗಿ, ರಾಷ್ಟ್ರಪತಿಯವರ ಪ್ರಶ್ನೆಗಳು ಅಸ್ಪಷ್ಟವಾಗಿಯೇ ಉಳಿಯುತ್ತವೆ ಮತ್ತು ಪ್ರಶ್ನೆಗಳನ್ನು ಎತ್ತಿರುವುದು ರಾಜಕೀಯಪ್ರೇರಿತ ಎಂಬ ಸಂದೇಹಕ್ಕೆ ಪುಷ್ಟಿ ಕೊಡುತ್ತದೆ. ರಾಷ್ಟ್ರಪತಿಯವರು ಎತ್ತಿರುವ ಎಲ್ಲ ಪ್ರಶ್ನೆಗಳಿಗೂ ಏಪ್ರಿಲ್‌ನ ತೀರ್ಪಿನಲ್ಲಿ ಅಥವಾ ನ್ಯಾಯಾಲಯವು ಈ ಹಿಂದೆ ನೀಡಿದ್ದ ತೀರ್ಪಿನಲ್ಲಿ ಉತ್ತರ ಕೊಡಲಾಗಿದೆ ಎಂಬುದನ್ನೂ ಗಮನಿಸಬೇಕು.

ದಿನದ ಟ್ವೀಟ್

ಎಷ್ಟು ಕಲಿತರೂ ಒಳ್ಳೆಯದು

ಮಕ್ಕಳಿಗೆ ಆಟ, ಪಾಠದ ಜೊತೆ ಹಣದ ಮಹತ್ವ ತಿಳಿಸುವುದು ಎಲ್ಲ ಪೋಷಕರ ಕರ್ತವ್ಯ. ಮಕ್ಕಳಿಗೆ ಹಣ ಗಳಿಸುವುದು ಹೇಗೆ, ಹಣ ಉಳಿಸುವುದು ಹೇಗೆ, ಹಣ ಬೆಳೆಸುವುದು ಹೇಗೆ ಅನ್ನುವುದನ್ನು ಚಿಕ್ಕ ವಯಸ್ಸಿನಿಂದ ತಿಳಿಸಬೇಕು. ನನ್ನ ಮಕ್ಕಳಿಗೆ ತಿಂಗಳಿಗೆ ಇಷ್ಟು ಅಂತ ಪಾಕೆಟ್ ಮನಿ ಕೊಟ್ಟು ಅದನ್ನು ಹೂಡಿಕೆ ಮಾಡುವತ್ತ ಅವರನ್ನು ತಯಾರು ಮಾಡುತ್ತಿದ್ದೇನೆ... ಗಣಿತ, ವಿಜ್ಞಾನ, ಎಂಜಿನಿಯರಿಂಗ್, ಹಣಕಾಸು, ಆರ್ಥಿಕತೆ ಮುಂತಾದವು ಎಲ್ಲ ಕಾಲಕ್ಕೂ ಪ್ರಸ್ತುತ. ಎಷ್ಟು ಕಲಿತರೂ ಒಳ್ಳೆಯದೇ.

ಅಮರನಾಥ ಶಿವಶಂಕರ್, ಐ.ಟಿ. ಉದ್ಯೋಗಿ

ಕಿಡಿನುಡಿ

ಎರಡು ವರ್ಷಗಳ ಸರ್ಕಾರದ ಸಾಧನೆ ಏನು, ಯಾವುದಾದರೂ ಅಣೆಕಟ್ಟೆ ಕಟ್ಟಿದ್ದಾರಾ, ಕಟ್ಟಿರುವ ಅಣೆಕಟ್ಟೆಯ ಎತ್ತರ ಜಾಸ್ತಿ ಮಾಡಿದ್ದಾರಾ? ಗೇಟ್ ರಿಪೇರಿಯೂ ಸಾಧ್ಯವಾಗಿಲ್ಲ. ಯಾವ ಪುರುಷಾರ್ಥಕ್ಕೆ ಸಾಧನಾ ಸಮಾವೇಶ...? ಸಮಾವೇಶ ಮುಗಿದ ಬಳಿಕ ಸರ್ಕಾರ ಉಳಿಯುವುದು ಅನುಮಾನ.

ಆರ್. ಅಶೋಕ, ವಿಧಾನಸಭೆಯ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಶುಕ್ರವಾರ, 19-5-2000

• ಕಾವೇರಿ ಪ್ರಾಧಿಕಾರದ ಸಭೆ ಮುಂದಕ್ಕೆ

ಬೆಂಗಳೂರು: ರಾಜ್ಯದ ಮುಖ್ಯಮಂತ್ರಿ ಜೊತೆ ಚರ್ಚಿಸದೆ ಹಾಗೂ ಸಾಕಷ್ಟು ಕಾಲಾವಕಾಶ ಕೊಡದೆ ಕೇಂದ್ರ ಸರ್ಕಾರ ದೆಹಲಿಯಲ್ಲಿ ನಾಳೆ ಕರೆದಿರುವ ಕಾವೇರಿ ನದಿ ನೀರಿನ ಪ್ರಾಧಿಕಾರದ ಸಭೆಯಲ್ಲಿ ಭಾಗವಹಿಸದಿರಲು ಕರ್ನಾಟಕ ನಿರ್ಧರಿಸಿದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ನಾಳಿನ ಸಭೆಯನ್ನು ಮುಂದೂಡಿದೆ.

ಮುಖ್ಯಮಂತ್ರಿಗಳ ಜೊತೆ ಸಮಾಲೋಚನೆ ನಡೆಸದೆ ಕೇಂದ್ರ ಸರ್ಕಾರ ಏಕಪಕ್ಷೀಯವಾಗಿ ನಾಳಿನ ಸಭೆಯನ್ನು ನಿಗದಿಪಡಿಸಿರುವುದನ್ನು ಕಾವೇರಿ ಹಾಗೂ ಕೃಷ್ಣಾ ನದಿ ನೀರಿನ ಸಮಸ್ಯೆ ಬಗ್ಗೆ ಚರ್ಚಿಸಲು ಇಂದು ನಡೆದ ಸರ್ವಪಕ್ಷಗಳ ನಾಯಕರ ಸಭೆಯಲ್ಲಿ ತೀವ್ರವಾಗಿ ಆಕ್ಷೇಪಿಸಲಾಯಿತು.

• ಮುಂಬೈನಲ್ಲಿ ಧಾರಾಕಾರ ಮಳೆಗೆ ಮೂವರ ಬಲಿ

ಮುಂಬೈ (ಪಿಟಿಐ/ಯುಎನ್‌ಐ): ಮುಂಬೈ ಮಹಾನಗರದಲ್ಲಿ ನಿನ್ನೆ ರಾತ್ರಿಯಿಂದೀಚೆಗೆ ಸುರಿಯುತ್ತಿರುವ ಭಾರಿ ಮಳೆಗೆ ಎರಡು ಕಡೆಗಳಲ್ಲಿ ಗೋಡೆಗಳು ಕುಸಿದು ಒಟ್ಟು ಮೂವರು ಸತ್ತಿದ್ದಾರೆ.

ಸತತವಾಗಿ ನಾಲ್ಕು ದಿನಗಳಿಂದ ಇಲ್ಲಿ ಮಳೆ ಬರುತ್ತಿದೆ. ಆದರೆ ನಿನ್ನೆಯಿಂದೀಚೆಗೆ ಮಳೆಯ ಆರ್ಭಟ ಇನ್ನಷ್ಟು ಜೋರಾಗಿದ್ದು ಜನಜೀವನ ಸಂಪೂರ್ಣವಾಗಿ ಅಸ್ತವ್ಯಸ್ತಗೊಂಡಿದೆ. ಮಳೆಯಿಂದಾಗಿ ಮುಂಬೈ ವಾಸಿಗಳಿಗೆ ರೈಲು ಹಾಗೂ ಬಸ್ ಸಂಚಾರ ದುಸ್ತರವಾಗಿ ಪರಿಣಮಿಸಿದೆ.

50 ವರ್ಷಗಳ ಹಿಂದೆ

ಸೋಮವಾರ, 19-5-1975

• ನಾಯಕತ್ವ ಪ್ರಶ್ನೆ: ದೆಹಲಿ ಮಾತುಕತೆ ಬಗ್ಗೆ ಅರಸು ತೃಪ್ತಿ

ಬೆಂಗಳೂರು: ರಾಜ್ಯದ ರಾಜಕೀಯ ಪರಿಸ್ಥಿತಿ, ಅದರಲ್ಲೂ ನಾಯಕತ್ವದ ಪ್ರಶ್ನೆ ಕುರಿತು ದೆಹಲಿಯಲ್ಲಿ ಕೇಂದ್ರದ ನಾಯಕರೊಡನೆ ನಡೆಸಿದ ಮಾತುಕತೆಯಿಂದ ತಮಗೆ ಸಂತೃಪ್ತಿಯಾಗಿದೆಯೆಂಬ ಸೂಚನೆಯನ್ನು ಮುಖ್ಯಮಂತ್ರಿ ದೇವರಾಜ ಅರಸು ಅವರು ಇಂದು ಇಲ್ಲಿ ನೀಡಿದರು.

ದೆಹಲಿಗೆ ಐದು ದಿನಗಳ ಭೇಟಿಯ ನಂತರ ಇಂದು ನಗರಕ್ಕೆ ಹಿಂದಿರುಗಿದ ಮುಖ್ಯಮಂತ್ರಿಯವರು ತಾವು ದೆಹಲಿಗೆ ತೆರಳುವ ಮುನ್ನ ಸಂಶಯದ ವಾತಾವರಣ ನಿರ್ಮಾಣವಾಗಿದ್ದು ಏನೇನೋ ವದಂತಿಗಳನ್ನು ಹರಡಲಾಗಿತ್ತೆಂದು ಹೇಳಿ 'ದೆಹಲಿಗೆ ಹೋದಮೇಲೆ ಈ ವದಂತಿಗಳಿಗೆ ಆಧಾರವಿಲ್ಲವೆಂದು ಗೊತ್ತಾಯಿತು' ಎಂದರು.

• ರಾಜ್ಯದಲ್ಲಿ ಮೂವರ ಸಮಿತಿ ರಚನೆ

ಬೆಂಗಳೂರು: ಕರ್ನಾಟಕದಲ್ಲಿ ಚಳವಳಿ ಸಂಘಟಿಸಲು ಸರ್ವೋದಯ ನಾಯಕ ಜಯಪ್ರಕಾಶ ನಾರಾಯಣ್ ಅವರು ಮೂವರ ವ್ಯವಸ್ಥಾ ಸಮಿತಿಯೊಂದನ್ನು ರಚಿಸಿದ್ದಾರೆ.

ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕೆ.ಎಸ್. ಹೆಗ್ಡೆಯವರು ಸಂಚಾಲಕರಾಗಿರುವ ಈ ಸಮಿತಿಯಲ್ಲಿ ಕಡಿದಾಳ್ ಮಂಜಪ್ಪ ಮತ್ತು ಪಿ. ವೆಂಕೋಬರಾವ್ ಅವರು ಸದಸ್ಯರು. ರಾಜ್ಯದಲ್ಲಿ 4 ದಿನಗಳ ಪ್ರವಾಸದ ನಂತರ ನಗರ ಬಿಡುವ ಮುನ್ನ ಜಯಪ್ರಕಾಶ ನಾರಾಯಣ್ ಅವರು ಈ ಸಮಿತಿ ರಚನೆ ಪ್ರಕಟಿಸಿದರು.

ಜಾತಿ ಜನಗಣತಿ: ಸಮಗ್ರ ಚಿತ್ರಣ ಒದಗಿಸುವ ಬಗೆಯಲ್ಲಿ ನಡೆಸಬೇಕು

ಸಾಮಾಜಿಕ ನ್ಯಾಯಕ್ಕೆ ಹೊಸ ಭಾಷ್ಯ

ವಿಶ್ಲೇಷಣೆ

ಯೋಗೇಂದ್ರ ಯಾದವ್

ಸಾಮಾಜಿಕ ನ್ಯಾಯ ಕುರಿತ ನೀತಿಗಳು ಹಾಗೂ ಅದರ ಸುತ್ತಲಿನ ರಾಜಕಾರಣದಲ್ಲಿ ಹೊಸದೊಂದು ಮಜಲು ಸೃಷ್ಟಿಯಾಗುವ ಸೂಚನೆಯನ್ನು ಜಾತಿ ಜನಗಣತಿಯ ಘೋಷಣೆಯು ನೀಡಿದೆ. ಸರ್ಕಾರದ ನಾಟಕೀಯ ಘೋಷಣೆಯು ಸೃಷ್ಟಿಸಿದ ಬಿರುಗಾಳಿಯು ತಗ್ಗಿದ ಬಳಿಕ 'ಜಾತಿ ಚರ್ಚೆ'ಯು ಹೊಸ ಆಯಾಮಗಳತ್ತ ತೆರೆದುಕೊಳ್ಳಲಿದೆ. ಈಗ ಸರ್ವೋಚ್ಚ ನಾಯಕನ ತಾಳ ಬದಲಾಗಿದೆ; ಜಾತಿ ಜನಗಣತಿಯಂತಹ ನೇರಾನೇರ ಚಿಂತನೆಯೊಂದನ್ನು ವಿರೂಪಗೊಳಿಸಿದ ಸುಳ್ಳುಗಳ ಸರಮಾಲೆ, ಅರ್ಧಸತ್ಯಗಳು ಮತ್ತು ನೆಪಗಳೆಲ್ಲವೂ ಮರೆಯಾಗಬೇಕು. ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) ಅವರ ಗಣತಿ ಮಾಡದೆಯೇ ಕಾನೂನುಬದ್ಧ ರಕ್ಷಣೆ ಕೊಡುವುದಕ್ಕೆ ಸಂಬಂಧಿಸಿ ಮೂರು ದಶಕಗಳಿಂದ ಇರುವ ಅಸಂಗತ ಸ್ಥಿತಿ ಕೊನೆಯಾಗಬೇಕು.

ನರೇಂದ್ರ ಮೋದಿ ನೇತೃತ್ವದ ಸರ್ಕಾರದ ನಿರ್ಧಾರಕ್ಕೆ ಕಾರಣಗಳೇನು ಎಂಬ ಚರ್ಚೆ ಬಹುಕಾಲ ಇರುವುದಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ಕಾರಗಳು ಕೈಗೊಳ್ಳುವ ಎಲ್ಲ ಮಹತ್ವದ ನಿರ್ಧಾರಗಳೂ ರಾಜಕೀಯ ನಿರ್ಧಾರಗಳೇ ಆಗಿರುತ್ತವೆ. ಜಾತಿ ಜನಗಣತಿ ನಡೆಸಲೇಬೇಕು ಎಂಬ ರಾಹುಲ್ ಗಾಂಧಿ ಅವರ ಪ್ರತಿಪಾದನೆಯು ಸವರ್ಣೀಯರಲ್ಲದ ತನ್ನ ದೊಡ್ಡ ಮತಬ್ಯಾಂಕ್‌ಗೆ ಬೆದರಿಕೆಯಾಗಿ ಪರಿಣಮಿಸಬಹುದು ಎಂಬುದು ಬಿಜೆಪಿಗೆ ಅರ್ಥವಾಗಿದೆ. ಜಾತಿ ಜನಗಣತಿ ನಡೆಯದಿರಲು ಕಾಂಗ್ರೆಸ್ ಪಕ್ಷವೇ ಕಾರಣ ಎಂದು ಅಶ್ವಿನಿ ವೈಷ್ಣವ್ ಮಾಡಿರುವ ಆರೋಪಕ್ಕೆ ಹೆಚ್ಚಿನ ಗಮನ ನೀಡುವ ಅಗತ್ಯವಿಲ್ಲ. ಈ ಆರೋಪವು ಈಗಾಗಲೇ ತಿರುಗುಬಾಣವಾಗಿದೆ. ಜಾತಿ ಜನಗಣತಿಯ ಪ್ರಸ್ತಾವವನ್ನು ಹೂತು ಹಾಕಿದ 'ಮೂಲ ಪಾಪ' ಮಾಡಿದ್ದು 2000ದಲ್ಲಿ ಇದ್ದ ವಾಜಪೇಯಿ ನೇತೃತ್ವದ ಸರ್ಕಾರ. 2011ರ ಜನಗಣತಿಯಿಂದ ಜಾತಿ ಜನಗಣತಿಯನ್ನು ಬೇರ್ಪಡಿಸಿದ್ದರ ಹೊಣೆಯು ಆಗಿನ ಕಾಂಗ್ರೆಸ್ ನೇತೃತ್ವದ ಸರ್ಕಾರದ್ದು. ಸಾಮಾಜಿಕ-ಆರ್ಥಿಕ ಜಾತಿ ಜನಗಣತಿಯ ದತ್ತಾಂಶವನ್ನು ಮುಚ್ಚಿಟ್ಟದ್ದರ ಹೊಣೆಯು ಬಿಜೆಪಿ ಸರ್ಕಾರದ್ದಾಗಿದೆ.

ಚಾರಿತ್ರಿಕವಾಗಿ ಯೋಚನೆ ಮಾಡುವುದಾದರೆ, ಇದರ ಶ್ರೇಯವು ಸಾಮಾಜಿಕ ನ್ಯಾಯ ಚಳವಳಿಗೆ ಸಲ್ಲಬೇಕು. ವಿಶೇಷವಾಗಿ, ರಾಮಮನೋಹರ ಲೋಹಿಯಾ ಅಥವಾ ಜಾತಿ ಜನಗಣತಿಯ ಪ್ರತಿಪಾದಕರಾದ ಕರ್ಪೂರಿ ಠಾಕೂರ್ ಅಥವಾ ಮಧು ಲಿಮಯೆ ಅಥವಾ ಜಾತಿ ಜನಗಣತಿಯನ್ನು ತಮ್ಮ ಜೀವನದ ಧ್ಯೇಯವಾಗಿಸಿದ ಶರದ್ ಪವಾರ್ ಅವರಿಗೆ ಶ್ರೇಯ ಸಲ್ಲಬೇಕು. ನೀತಿಗೆ ಸಂಬಂಧಿಸಿ ಈ ಚಿಂತನೆಯು ಎದ್ದು ಕಾಣುವಂತೆ ಮಾಡಿದ್ದರ ಶ್ರೇಯವು ಆರ್‌ಜೆಡಿ-ಜೆಡಿಯು ನೇತೃತ್ವದ ಬಿಹಾರದ ಈ ಹಿಂದಿನ ಸರ್ಕಾರಕ್ಕೆ ಮತ್ತು ತೆಲಂಗಾಣದ ಈಗಿನ ಸರ್ಕಾರಕ್ಕೆ ಸಲ್ಲಬೇಕು. ಅದೇ ರೀತಿಯಲ್ಲಿ ರಾಜಕೀಯವಾಗಿ ನೋಡುವುದಾದರೆ ಇದರ ಶ್ರೇಯವು ರಾಹುಲ್ ಗಾಂಧಿ ಅವರಿಗೆ ಸಲ್ಲಬೇಕು. ರಾಹುಲ್ ಗಾಂಧಿ ಅವರು ಜಾತಿ ಜನಗಣತಿಯನ್ನು ತಮ್ಮ ವೈಯಕ್ತಿಕ ಕಾರ್ಯಸೂಚಿಯಾಗಿ ಮಾಡಿಕೊಂಡಿದ್ದಲ್ಲದೆ, ಕಾಂಗ್ರೆಸ್ ಪಕ್ಷದ ಪ್ರಧಾನ ಬೇಡಿಕೆಯನ್ನಾಗಿಯೂ ಪರಿವರ್ತಿಸದೇ ಇದ್ದಿದ್ದರೆ ಸಾಮಾಜಿಕ ನ್ಯಾಯ ಚಳವಳಿಯ ಇತಿಹಾಸ ಮತ್ತು ರಾಜ್ಯ ಮಟ್ಟದ ಪೂರ್ವನಿದರ್ಶನಗಳಿಂದ ಹೆಚ್ಚಿನ ಫಲ ದೊರೆಯುತ್ತಿರಲಿಲ್ಲ. ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕನಾಗಿ ಇದು ಅವರಿಗೆ ಸಿಕ್ಕ ಮಹತ್ವದ ಮೊದಲ ಜಯ.

ಜಾತಿ ಜನಗಣತಿ ನಡೆಸುವಾಗ ಮೂರು ವಿಚಾರಗಳ ಕುರಿತು ಎಚ್ಚರ ವಹಿಸಬೇಕು. ಮೊದಲನೆಯದಾಗಿ, ಅಧಿಕಾರಿಶಾಹಿಯ ಪಿತೂರಿಯಿಂದ ಎಚ್ಚರವಾಗಿರಬೇಕು ಎಂದು 2011ರ ಎಡವಟ್ಟು ನಮಗೆ ಪಾಠ ಕಲಿಸಿದೆ: ಜಾತಿ ಜನಗಣತಿಯು ಮುಂದಿನ ಜನಗಣತಿಯ ಅವಿಭಾಜ್ಯ ಅಂಗವಾಗಿರಬೇಕೇ ವಿನಾ ಪರ್ಯಾಯ ಚಟುವಟಿಕೆ ಅಲ್ಲ. ಎರಡನೆಯದಾಗಿ, ಜಾತಿ ಜನಗಣತಿಯು ಸಮಗ್ರವಾಗಿ ಎಲ್ಲವನ್ನೂ ಒಳಗೊಂಡಿರಬೇಕೇ ವಿನಾ ಭಾಗಶಃ ಅಲ್ಲ. 'ಮೀಸಲು ವರ್ಗಗಳು– ಎಸ್‌ಸಿ, ಎಸ್‌ಟಿ ಮತ್ತು ಒಬಿಸಿಗೆ ಸೀಮಿತವಾಗಿರಬಾರದು. 'ಸಾಮಾನ್ಯ ವರ್ಗ'ದಲ್ಲಿ ಬರುವ ಎಲ್ಲ ಜಾತಿಗಳ ವಿವರಗಳನ್ನೂ ದಾಖಲಿಸಬೇಕು. ಈ ಮೂಲಕ ಯಾವ ಜಾತಿಯವರು ಎಷ್ಟು ಸೌಲಭ್ಯ ಪಡೆದುಕೊಂಡಿದ್ದಾರೆ ಎಂಬ ಸಂಪೂರ್ಣ ವಿವರ ಲಭ್ಯವಾಗುತ್ತದೆ. ಮೂರನೆಯದಾಗಿ, ರಾಷ್ಟ್ರೀಯ ಜನಸಂಖ್ಯೆ ನೋಂದಣಿಗೆ ಜನಗಣತಿಯನ್ನು ಜೋಡಿಸುವ ಯಾವುದೇ ಪ್ರಯತ್ನ ನಡೆಸಬಾರದು. ಅಂತಹ ಯಾವುದೇ ತಂತ್ರ ಇಡೀ ಪ್ರಕ್ರಿಯೆಯನ್ನು ಹಾದಿ ತಪ್ಪಿಸಬಹುದು.

ಸಂಪನ್ಮೂಲಗಳು ಮತ್ತು ಅವಕಾಶಗಳ ಜಾತಿವಾರು ಸಮಗ್ರ ಚಿತ್ರಣ ಒದಗಿಸುವಂತೆ ಜನಗಣತಿಯನ್ನು ವಿಸ್ತರಿಸಬೇಕು ಎಂಬುದು ಇನ್ನೊಂದು ಗಂಭೀರವಾದ ಬೇಡಿಕೆ. ಈವರೆಗೆ, ಪ್ರತಿ ವ್ಯಕ್ತಿಯ ಕೆಲವು ಮೂಲಭೂತ ಮಾಹಿತಿ, ಕುಟುಂಬದ ಕೆಲವು ಮಾಹಿತಿಯ (ಮನೆಯ ಮಾದರಿ, ಮೂಲಸೌಕರ್ಯಗಳು ಮತ್ತು ಆಸ್ತಿ) ಜೊತೆಗೆ ಭಾಷೆ, ಧರ್ಮ ಮತ್ತು ಜಾತಿ ವರ್ಗದ ದತ್ತಾಂಶವನ್ನು ಸಂಗ್ರಹಿಸಲಾಗುತ್ತಿತ್ತು. ಜಾತಿ ಜನಗಣತಿ ಎಂದರೆ, ಪ್ರತಿ ವ್ಯಕ್ತಿಯ ಜಾತಿಯನ್ನು ನಿಖರವಾಗಿ ದಾಖಲಿಸಬೇಕು (ಎಸ್‌ಸಿ, ಎಸ್‌ಟಿ ಎಂದಷ್ಟೇ ಅಲ್ಲ). ಜನಗಣತಿಯಲ್ಲಿ ಪ್ರತಿ ಜಾತಿಯ ಸಮಾಜೋ-ಆರ್ಥಿಕ ಮತ್ತು ಶೈಕ್ಷಣಿಕ ಚಿತ್ರಣವನ್ನು ಪಡೆಯುವುದಕ್ಕಾಗಿ– ಜಮೀನು ಮಾಲೀಕತ್ವ, ವಾಣಿಜ್ಯ ಸಂಸ್ಥೆಯ ಮಾಲೀಕತ್ವ, ಸರ್ಕಾರಿ ನೌಕರಿ, ವೃತ್ತಿ ಇತ್ಯಾದಿ– ಬೇಕಾದ ದತ್ತಾಂಶಗಳನ್ನು ಸಂಗ್ರಹಿಸಲಾಗುತ್ತಿರಲಿಲ್ಲ. ಅದೃಷ್ಟವಶಾತ್, 2011ರಲ್ಲಿ ನಡೆಸಲಾದ ಸಮಾಜೋ-ಆರ್ಥಿಕ ಮತ್ತು ಜಾತಿ ಜನಗಣತಿಯಲ್ಲಿ (ಎಸ್‌ಇಸಿಸಿ) ಈ ಎಲ್ಲ ಮಾಹಿತಿಯನ್ನು ಸಂಗ್ರಹಿಸಲಾಗಿತ್ತು. ಜನಗಣತಿ ಮಾದರಿಯನ್ನು ಈಗ ಪರಿಷ್ಕರಿಸಬೇಕಿದ್ದು, ಎಸ್‌ಇಸಿಸಿಯಲ್ಲಿ ಇರುವ ಈ ಎಲ್ಲ ಪ್ರಶ್ನೆಗಳನ್ನು ಸೇರಿಸಿಕೊಳ್ಳಬೇಕಿದೆ.



ಭಾರಿ ಮೌಲ್ಯದ ಕಂಪನಿಗಳು ಅಥವಾ ಉದ್ಯಮಗಳ ಮಾಲೀಕತ್ವ ಅಥವಾ ನಿರ್ದೇಶಕ ಸ್ಥಾನ, ಉನ್ನತ ಮಟ್ಟದ ಸರ್ಕಾರಿ ಹುದ್ದೆಗಳು, ಖಾಸಗಿ ವಲಯದಲ್ಲಿ ಉನ್ನತ ಹುದ್ದೆಗಳು, ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ, ರಾಜಕೀಯ ನಾಯಕತ್ವದ ಸ್ಥಾನಗಳು ಮುಂತಾದ ಮಾಹಿತಿಯನ್ನು ಯಾವ ಸಮೀಕ್ಷೆಯೂ ಒಳಗೊಳ್ಳುವುದಿಲ್ಲ. ಆಸ್ತಿಗಳು, ಸೌಲಭ್ಯಗಳು, ಸಂಪನ್ಮೂಲಗಳು, ಅವಕಾಶಗಳು ಮತ್ತು ಹುದ್ದೆಗಳ ಜಾತಿವಾರು ಪಟ್ಟಿ ತಯಾರಿಸಲು ಪೂರಕ ದತ್ತಾಂಶ ಸಂಗ್ರಹ ಅಗತ್ಯವಿದೆ. ಭಾರತೀಯ ಆರ್ಥಿಕ ಸಮೀಕ್ಷೆ, ಕೃಷಿ ಸಮೀಕ್ಷೆ, ಅಖಿಲ ಭಾರತ ಉನ್ನತ ಶಿಕ್ಷಣ ಸಮೀಕ್ಷೆ, ಕುಟುಂಬದ ಗ್ರಾಹಕ ವೆಚ್ಚ ಸಮೀಕ್ಷೆ, ಎನ್‌ಎಸ್‌ಎಸ್‌ಒ ನಡೆಸುವ ಕಾರ್ಮಿಕ ಬಲ ಸಮೀಕ್ಷೆಯು ಜಾತಿಯನ್ನೂ ಒಳಗೊಳ್ಳಬೇಕು.

ಸಾಮಾಜಿಕ ನ್ಯಾಯಕ್ಕಾಗಿ ಕೈಗೊಳ್ಳಬೇಕಾದ ಕ್ರಮಗಳ ಒಟ್ಟು ಹಂದರವನ್ನು ಸುಧಾರಿಸುವುದು ಅಂತಿಮ ಹಂತವಾಗಿದೆ. ಜಾತಿ ಜನಗಣತಿ ಎಂಬುದು ರೋಗ ಪತ್ತೆ ಪ್ರಕ್ರಿಯೆ ಮಾತ್ರ. ಜಾತಿ ಜನಗಣತಿ ದತ್ತಾಂಶದ ಆಧಾರದಲ್ಲಿ ರೋಗಕ್ಕೆ ಚಿಕಿತ್ಸೆ ನೀಡದೇ ಇದ್ದರೆ ಅದರಿಂದ ಯಾವ ಉಪಯೋಗವೂ ಇಲ್ಲ.

ಎಸ್‌ಸಿ, ಎಸ್‌ಟಿ ಮತ್ತು ಒಬಿಸಿಯೊಳಗೆ ಕೆಲವು ಜಾತಿಗಳಿಗೆ ಒಳಮೀಸಲು ನೀಡಬೇಕೇ ಎಂಬುದಕ್ಕೆ ದತ್ತಾಂಶ ಆಧಾರಿತವಾಗಿ ನಿರ್ಧಾರ ಕೈಗೊಳ್ಳಲು ಜಾತಿ ಜನಗಣತಿಯು ನೆರವಾಗಬೇಕು. ಜಾತಿ ಗುಂಪುಗಳ ಒಳಗೆ ಮತ್ತು ಜಾತಿಗಳ ನಡುವೆ ಸಂಪನ್ಮೂಲ ಮತ್ತು ಅವಕಾಶಗಳ ಹಂಚಿಕೆಯಲ್ಲಿ ಭಾರಿ ವ್ಯತ್ಯಾಸವಿದ್ದರೆ ಅದನ್ನು ಸರಿಪಡಿಸುವ ರೀತಿಯಲ್ಲಿ ಮೀಸಲಾತಿಯನ್ನು ಪರಿಷ್ಕರಿಸಬೇಕು. ಹಾಗಾದರೆ, ಒಬಿಸಿಗೆ ಇರುವ ಶೇ 27ರ ಮೀಸಲಾತಿ ಹೆಚ್ಚಳವಾಗಬೇಕಾಗುತ್ತದೆ. ಏಕೆಂದರೆ, ಈ ಸಮುದಾಯಗಳ ಜನಸಂಖ್ಯೆಯು ಶೇ 45ಕ್ಕಿಂತಲೂ ಹೆಚ್ಚು ಇದೆ. ಅದಕ್ಕಾಗಿ ನ್ಯಾಯಾಂಗವು ಹಾಕಿರುವ ಮೀಸಲಾತಿಯು ಶೇ 50ರಷ್ಟನ್ನು ಮೀರುವಂತಿಲ್ಲ ಎಂಬ ನಿಯಮವನ್ನು ಉಲ್ಲಂಘಿಸಬೇಕಾಗುತ್ತದೆ.

ಖಾಸಗಿ ವಲಯದಲ್ಲಿ ಗಣನೀಯವಾದ ವ್ಯತ್ಯಾಸ ಇದ್ದರೆ ಅಲ್ಲಿನ ಹುದ್ದೆಗಳು, ವಿಶ್ವವಿದ್ಯಾಲಯಗಳು, ಕಾಲೇಜುಗಳಲ್ಲಿ ಮೀಸಲಾತಿ ಬೇಕು ಎಂಬ ಬೇಡಿಕೆ ಬರಬಹುದು. ಈಗ, ಸಾಮಾಜಿಕ ನ್ಯಾಯದ ಪರವಾಗಿ ಇತರ ಎಲ್ಲರಿಗಿಂತ ಹೆಚ್ಚು ಇರುವುದಾಗಿ ಬಿಜೆಪಿ ಹೇಳಿಕೊಳ್ಳುತ್ತಿದೆ. ಅದು ಹೌದಾದರೆ, ಕಾಂಗ್ರೆಸ್ ಎತ್ತಿರುವ ಪ್ರಶ್ನೆಗಳಿಗೆ ಬಿಜೆಪಿ ಉತ್ತರಿಸಬೇಕಿದೆ: ಮೀಸಲಾತಿಯ ಶೇ 50ರ ಮಿತಿಯನ್ನು ಮೀರಲು ಸರ್ಕಾರ ಸಿದ್ಧವಿದೆಯೇ? ಖಾಸಗಿ ವಲಯದಲ್ಲಿ ಮೀಸಲಾತಿ ಕಲ್ಪಿಸಲಾಗುವುದೇ?

ಸಾಮಾಜಿಕ ನ್ಯಾಯಕ್ಕೆ ಸಂಬಂಧಿಸಿದ ರಾಜಕಾರಣವು ಎರಡು ದಶಕಗಳಿಂದ ಸ್ಥಗಿತಗೊಂಡಿದೆ. ಸಾಮಾಜಿಕ ನ್ಯಾಯ ಚಳವಳಿಯು ಸ್ಥಗಿತವಾಗಿದೆ, ವಿಭಜನೆಗೊಂಡಿದೆ, ದುರ್ಬಲವಾಗಿದೆ, ರಕ್ಷಣಾತ್ಮಕವಾಗಿದೆ ಮತ್ತು ಆಂತರಿಕ ಸವಾಲುಗಳ ನಿರಾಕರಣೆಯಲ್ಲಿ ತೊಡಗಿದೆ. ಜಾತಿ ಜನಗಣತಿ ನಡೆಸಲಾಗುವುದು ಎಂಬ ಘೋಷಣೆಯು ಸಾಮಾಜಿಕ ನ್ಯಾಯಕ್ಕಾಗಿ ಕೈಗೊಳ್ಳುವ ಕ್ರಮಗಳನ್ನು ಸರ್ಕಾರಿ ವಲಯದ ಆಚೆಗೂ ವಿಸ್ತರಿಸಲು, ಈ ಕ್ರಮಗಳನ್ನು ಮೀಸಲಾತಿಯ ಆಚೆಗೂ ವಿಸ್ತರಿಸಲು ಇರುವ ಅವಕಾಶ. ಜಾತಿಯ ಏಕ ಆಯಾಮವನ್ನು ಮೀರಿ ಮಾನದಂಡವನ್ನು ಪರಿಷ್ಕರಿಸಲು ಇರುವ ಅವಕಾಶ.

ಚುರುಮುರಿ

ಬೇಹುಗಾರಿಕೆ!

• ಬಿ.ಎನ್. ಮಲ್ಲೇಶ್

'ರೀ... ಆ ಕಡೆಮನಿ ಕೊಟ್ರೇಶಿ ಮಗಳು ಓಡಿ ಹೋಗಿದ್ದಲ್ಲ, ಯಾವುದೋ ಹುಡುಗನ್ನ ಮದುವಿ ಮಾಡ್ಕಂಡು ಬೆಂಗ್ಳೂರಾಗದಾಳಂತೆ...' ಮಡದಿ ಪಿಸುಗುಟ್ಟಿದಾಗ 'ಹೌದಾ? ನಿಂಗ್ಯಾರು ಹೇಳಿದ್ರು' ಎಂದೆ.

'ಯಾರರೆ ಹೇಳ್ಲಿ, ಸುದ್ದಿ ಅಂತೂ ಖರೆ, ಬೇಕಾದ್ರೆ ಫ್ಯಾಕ್ಟ್ ಚೆಕ್ ಮಾಡ್ಕಳಿ' ಎಂದು ಸವಾಲು ಹಾಕಿದಳು.

ಎರಡು ದಿನ ಕಳೆದಿರಲಿಲ್ಲ, 'ರೀ... ನಮ್ಮೂರ ಎಮ್ಮೆಲ್ಲೆ ಮನೇಲಿ ನೋಟು ಎಣಿಸೋ ಮೆಶಿನ್ ಅದಾವಂತೆ...' ಮಡದಿ ಕಾಫಿ ಕೊಡುತ್ತ ಹೇಳಿದಾಗ 'ಹೌದಾ? ನಿಂಗೆಂಗೆ ಗೊತ್ತಾತು' ಎಂದೆ.

'ಹೆಂಗೋ ಗೊತ್ತಾತು, ಅದಿರ್ಲಿ ನಿಮ್ ಆಫೀಸಿನಾಗೆ ಪರ್ಮೇಶಿ ಅಂತ ಅದಾರಾ?'

'ಅದಾನೆ, ವಸೂಲಿ ಗಿರಾಕಿ, ಯಾಕೆ?'

'ಅವರೆಂಡ್ತಿಗೆ ಡೈಮಂಡ್ ರಿಂಗ್ ಕೊಡಿಸ್ಯಾರಂತೆ, ಆ್ಯನಿವರ್ಸರಿಗೆ...'

'ಹೌದಾ? ಅವನೆಂಡ್ತಿ ನಿನ್ ಕಿಟ್ಟಿ ಫ್ರೆಂಡಾ?'

'ಇಲ್ಲಪ್ಪ, ಅವರ ಪರಿಚಯಾನೇ ನಂಗಿಲ್ಲ' ಎಂದಳು. ಮತ್ತೆ ಇದೆಲ್ಲ ಹೆಂಗೆ... ತಲೆ ಕೆರೆದುಕೊಂಡೆ.

ಒಂದು ದಿನ ಬೆಡ್ ರೂಂಗೆ ನುಗ್ಗಿ ಬಂದವಳೇ 'ರೀ... ನಿಮ್ ಫ್ರೆಂಡ್ ಹೆಲ್ತ್ ಆಫೀಸರ್ ಮನಿ ಮೇಲೆ ಲೋಕಾಯುಕ್ತ ರೇಡಾತಂತೆ. ಅವನೆಂಡ್ತಿ ಒಡವಿನೆಲ್ಲ ಚೀಲದಾಗೆ ಕಟ್ಟಿ ಪಕ್ಕದ ಮನಿ ನೀರಿನ ಟ್ಯಾಂಕ್‌ಗೆ ಹಾಕಿದ್ಲಂತೆ. ಅವರು ಹೋದ ಮೇಲೆ ವಾಪಸ್ ತಗಂಡ್ಲಂತೆ...' ಮಡದಿ ವರದಿ ಒಪ್ಪಿಸಿದಳು.

'ಹೌದಾ? ಇದನ್ನೆಲ್ಲ ನಿಂಗೆ ಯಾರು ಹೇಳ್ತಾರೆ? ಹೇಳಿದ್ರೆ ಒಂದು ಸೀರಿ ಕೊಡುಸ್ತೀನಿ' ಎಂದೆ.

'ಗ್ಯಾರಂಟನಾ? ಇನ್ಯಾರು ಹೇಳ್ತಾರ್ರೀ... ನಮ್ ಮನಿ ಕೆಲಸದಾಕಿ...'

'ಸರಿ ಹೋತು, ಅಲ್ಲೇ ಅವಳು ಅವರ ಮನಿ ಸುದ್ದಿನೆಲ್ಲ ನಮಗೆ ಹೇಳಿದಂಗೆ ನಮ್ಮನಿ ಕತಿನೆಲ್ಲ ಅವರಿಗೆ ಹೇಳಲ್ಲ ಅಂತ ಏನು ಗ್ಯಾರಂಟಿ? ಅಕೀನ ಪಾಕಿಸ್ತಾನಕ್ಕೆ ಕಳಿಸೋದು ಚಲೋ...' ಎಂದೆ.

'ಪಾಕಿಸ್ತಾನಕ್ಕಾ? ಯಾಕೆ?'

'ಬೇಹುಗಾರಿಕೆ ಮಾಡಾಕೆ. ಪಾಕಿಸ್ತಾನದ ರಹಸ್ಯನೆಲ್ಲ ಭಾರತಕ್ಕೆ ಕಳಿಸಾಕೆ...'

ಮಡದಿ ಪಿಟಿಕ್ಕನ್ನಲಿಲ್ಲ.

ಸಂಗತ

ಫಲಿತಾಂಶ: ಶಿಕ್ಷಕರಷ್ಟೇ ಹೊಣೆಯೇ?

ಇಂಗ್ಲಿಷ್ ಮಾಧ್ಯಮದ ಹಾಗೂ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳ ನಡುವೆ ಒಂದೇ ರೀತಿಯ ಫಲಿತಾಂಶವನ್ನು ನಿರೀಕ್ಷಿಸಲು ಸಾಧ್ಯವಿಲ್ಲ

• ಗಿರಿಜಾಶಂಕರ್ ಜಿ.ಎಸ್. ಇಡೇಹಳ್ಳಿ

ವಿದ್ಯಾರ್ಥಿಗಳ ಜೀವನದಲ್ಲಿ ಎಸ್‌ಎಸ್‌ಎಲ್‌ಸಿ ಪ್ರಮುಖ ಘಟ್ಟ. ಆದರೆ ಅದನ್ನು ಫಲಿತಾಂಶದ ಮೂಲಕವೇ ಅಳೆಯುವುದು ಎಷ್ಟು ಸರಿ? ಪರೀಕ್ಷೆಯಲ್ಲಿ ಉನ್ನತ ದರ್ಜೆಯಲ್ಲಿ ಉತ್ತೀರ್ಣನಾದರೆ, 'ಯಾರು ಹೆತ್ತ ಪುಣ್ಯಾತ್ಮನಪ್ಪ ನೀನು' ಅಂತಾರೆ. ಫೇಲಾದರೆ 'ಯಾರಲೇ ನಿನಗೆ ಪಾಠ ಮಾಡಿದ್ದು' ಅಂತಾರೆ. ಯಶಸ್ಸಿಗೆ ತಂದೆ-ತಾಯಿ ಕಾರಣ, ವೈಫಲ್ಯಕ್ಕೆ ಬಡಪಾಯಿ ಮೇಷ್ಟ್ರು ಕಾರಣ ಎನ್ನುವ ಮನೋಭಾವ ಅನೇಕರಲ್ಲಿದೆ.

ಪ್ರತೀ ಮಗು ತನ್ನದೇ ಆದ ಬೌದ್ಧಿಕ ಸಾಮರ್ಥ್ಯ ಹೊಂದಿರುತ್ತದೆ. ಆನುವಂಶೀಯ ಕಾರಣದಿಂದ ಮತ್ತು ಮನೆಯ ಪರಿಸರದ ಕಾರಣದಿಂದ ಮಕ್ಕಳ ಕಲಿಕಾ ಸಾಮರ್ಥ್ಯ ಬದಲಾಗುತ್ತದೆ. ಒಂದೇ ಶಾಲೆಯಲ್ಲಿ, ಒಂದೇ ತರಗತಿಯಲ್ಲಿ ಓದುವ ಒಂದೇ ವಯಸ್ಸಿನ ಎಲ್ಲ ಮಕ್ಕಳು ಒಂದೇ ರೀತಿಯ ಬುದ್ಧಿಶಕ್ತಿಯನ್ನು ಹೊಂದಿರಲು ಸಾಧ್ಯವಿಲ್ಲ. ಇಂಗ್ಲಿಷ್ ಮಾಧ್ಯಮದ ಹಾಗೂ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳ ನಡುವೆ ಒಂದೇ ರೀತಿಯ ಫಲಿತಾಂಶವನ್ನು ನಿರೀಕ್ಷಿಸಲೂ ಸಾಧ್ಯವಿಲ್ಲ.

ಇಂಗ್ಲಿಷ್ ಮಾಧ್ಯಮದ ಬಹುಪಾಲು ಶಾಲೆಗಳ ಫಲಿತಾಂಶವು ಸಹಜವಾಗಿಯೇ ಶೇಕಡ 90ಕ್ಕಿಂತ ಹೆಚ್ಚಿರುತ್ತದೆ. ಪೋಷಕರು ತಮ್ಮ ಮಗ ಅಭ್ಯಾಸದಲ್ಲಿ ಮುಂದಿದ್ದಾನೆ ಎಂದರೆ ಅವನನ್ನು ಇಂಗ್ಲಿಷ್ ಮಾಧ್ಯಮಕ್ಕೆ ಸೇರಿಸುತ್ತಾರೆ. ಇಲ್ಲಿ ವಿದ್ಯಾರ್ಥಿಗಳ ಪೋಷಕರು ಸಹ ಹೆಚ್ಚಿನ ಜವಾಬ್ದಾರಿಯನ್ನು ತೆಗೆದುಕೊಂಡು ತಮ್ಮ ಮಕ್ಕಳ ಭವಿಷ್ಯ ಉತ್ತಮಪಡಿಸಲು ಶ್ರಮಿಸುತ್ತಾರೆ. ಕನ್ನಡ ಮಾಧ್ಯಮ ಶಾಲೆಗಳ ಸ್ಥಿತಿ, ಅಲ್ಲಿ ಕಲಿಯಲು ಬರುವ ವಿದ್ಯಾರ್ಥಿಗಳ ಹಿನ್ನೆಲೆ ಇದಕ್ಕಿಂತ ಭಿನ್ನವಾಗಿರುತ್ತದೆ.

ಒಂದು ಶಾಲೆಯಲ್ಲಿನ ಮಕ್ಕಳ ಸಾಧನೆ ಅತ್ಯುತ್ತಮವಾಗಿದ್ದರೆ ಮತ್ತು ಆ ಶಾಲೆ ಅನುದಾನರಹಿತ ಶಾಲೆಯಾಗಿದ್ದರಂತೂ ಫಲಿತಾಂಶದ ಶ್ರೇಯ ಪೂರ್ತಿ ಆ ಶಾಲೆಗೇ ಹೋಗುತ್ತದೆ. ಎಲ್ಲರೂ ಆ ಶಾಲೆಯನ್ನು ಹಾಡಿ ಹೊಗಳುತ್ತಾರೆ. ಅದೇ ಸರ್ಕಾರಿ, ಅನುದಾನಿತ ಶಾಲೆಯ ಕನ್ನಡ ಮಾಧ್ಯಮದ ಮಕ್ಕಳು ಉನ್ನತ ದರ್ಜೆಯಲ್ಲಿ ಉತ್ತೀರ್ಣರಾದರೆ ಅದರ ಸಂಪೂರ್ಣ ಶ್ರೇಯ ಮಕ್ಕಳಿಗೆ ದಕ್ಕುತ್ತದೆ; ಶಾಲೆಗಳಿಗಲ್ಲ. 'ಕನ್ನಡ ಮಾಧ್ಯಮ ಶಾಲೆಯಲ್ಲಿ ಓದಿ ಎಷ್ಟು ಅಂಕ ತೆಗೆದಿದ್ದಾನೆ, ನೋಡಿ!' ಎಂಬ ವಿಶೇಷ ಪ್ರಶಂಸೆ ಆ ವಿದ್ಯಾರ್ಥಿಗೆ. ಶಾಲೆ, ಶಿಕ್ಷಕರು ಇಲ್ಲಿ ನಗಣ್ಯ. ಕನ್ನಡ ಮಾಧ್ಯಮದಲ್ಲಿ ಹಲವು ಕೊರತೆಗಳ ನಡುವೆಯೂ ಸ್ವಂತ ಪರಿಶ್ರಮದಿಂದ ಮಕ್ಕಳು ಉತ್ತಮ ಸಾಧನೆ ಮಾಡಿದ್ದಾರೆ ಎಂಬಂತೆ ಚಿತ್ರಿಸುವುದು ಇದರ ಉದ್ದೇಶ.

ಸೌಲಭ್ಯಗಳ ದೃಷ್ಟಿಯಿಂದ ಹೇಳುವುದಾದರೆ ಸರ್ಕಾರಿ ಶಾಲೆಗಳಿಗಿಂತ ಖಾಸಗಿ ಶಾಲೆಗಳು ಬಹಳ ಮುಂದಿವೆ. ಇವೆಲ್ಲ ಪೋಷಕರನ್ನು ಸಹಜವಾಗಿಯೇ ಸೆಳೆಯುತ್ತವೆ. ಈ ಶಾಲೆಗಳಲ್ಲಿ ಬೋಧನೆ ಕೂಡ ಪರಿಣಾಮಕಾರಿ ಆಗಿರಬಹುದು. ಆದರೆ, ಇಲ್ಲಿ ಮುಖ್ಯವಾಗುವುದು ಅಲ್ಲಿಗೆ ಪ್ರವೇಶ ಪಡೆಯುವ ಮಕ್ಕಳ ಸಾಮರ್ಥ್ಯ. ಇಲ್ಲಿಗೆ ಸೇರುವ ಮಕ್ಕಳು ಓದಿನಲ್ಲಿ ಚುರುಕಾಗಿರುತ್ತಾರೆ. ಶಾಲೆಯಲ್ಲಿ ಕಲಿಕೆಗೆ ಸಂಬಂಧಿಸಿದಂತೆ ಒಂದಷ್ಟು ನೆರವು ಸಿಕ್ಕರೆ ಸಾಕು, ಸಾಮರ್ಥ್ಯವನ್ನು ತಮ್ಮಷ್ಟಕ್ಕೆ ತಾವೇ ಉತ್ತಮಪಡಿಸಿಕೊಳ್ಳುತ್ತಾರೆ.

ಇಂಗ್ಲಿಷ್ ಮಾಧ್ಯಮದ ಖಾಸಗಿ ಶಾಲೆಗಳಲ್ಲಿ ಬಹುತೇಕವು ಒಂದು ಹಂತದ ಬುದ್ಧಿವಂತಿಕೆಗಿಂತ ಕೆಳಮಟ್ಟದ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವುದಿಲ್ಲ. ಶಾಲಾ ಪ್ರವೇಶ ಪರೀಕ್ಷೆಯಲ್ಲಿ ಅರ್ಹತೆ ಪಡೆದರೆ ಮಾತ್ರ ದಾಖಲಾತಿ. ಇಲ್ಲಿ ಓದಲೇಬೇಕೆಂದು ಯಾರಾದರೂ ವಿದ್ಯಾರ್ಥಿ ಒತ್ತಡ ತಂದರೆ ಕೆಲವು ಷರತ್ತುಗಳು ಅನ್ವಯವಾಗುತ್ತವೆ. ಡೊನೇಷನ್ ಪಡೆದು ಸೇರಿಸಿಕೊಳ್ಳುವ ಶಾಲೆ ಆ ವಿದ್ಯಾರ್ಥಿಯ ಪ್ರಗತಿ ಒಂದು ವರ್ಷದಲ್ಲಿ ಸುಧಾರಣೆ ಆಗದಿದ್ದರೆ ವರ್ಗಾವಣೆ ಪತ್ರವನ್ನು ಕೊಟ್ಟು ಬೇರೆ ಶಾಲೆಗೆ ಕಳುಹಿಸಲು ಹಿಂಜರಿಯುವುದಿಲ್ಲ. ಹೀಗಾಗಿ ಬುದ್ಧಿವಂತ ಮಕ್ಕಳನ್ನೇ ಸೇರಿಸಿಕೊಂಡು ಶೇ 100ರಷ್ಟು ಫಲಿತಾಂಶ ಪಡೆಯುವುದರಲ್ಲಿ ಹೆಚ್ಚುಗಾರಿಕೆ ಏನಿದೆ?

ಆದರೆ ಕನ್ನಡ ಮಾಧ್ಯಮಕ್ಕೆ ಬರುವ ಮಕ್ಕಳ ಸ್ಥಿತಿ ಇದಕ್ಕೆ ಭಿನ್ನ. ಓದಿನಲ್ಲಿ ಚುರುಕಾಗಿರುವ ಮಕ್ಕಳಲ್ಲಿ ಶೇ 90ರಷ್ಟು ಮಂದಿ ಇಂಗ್ಲಿಷ್ ಮಾಧ್ಯಮ ಶಾಲೆ ಸೇರುತ್ತಾರೆ. ಇನ್ನುಳಿದ ಶೇ 10ರಷ್ಟು ಮಕ್ಕಳು ಹಾಗೂ ಕಲಿಕೆಯಲ್ಲಿ ಹಿಂದುಳಿದ ಮಕ್ಕಳು ಕನ್ನಡ ಮಾಧ್ಯಮ ಶಾಲೆ ಸೇರುತ್ತಾರೆ. ಹೀಗಿದ್ದರೂ ಇದನ್ನು ಸವಾಲಾಗಿ ಸ್ವೀಕರಿಸಿರುವ ಶಿಕ್ಷಕರು ಯಾವುದೇ ನೆಪ ಹೇಳಿ ಹಿಮ್ಮೆಟ್ಟಿಲ್ಲ.

ಕನ್ನಡ ಮಾಧ್ಯಮದಲ್ಲಿ ಓದುತ್ತಿರುವ ವಿದ್ಯಾರ್ಥಿಗಳೆಲ್ಲ ದಡ್ಡರು ಎನ್ನುತ್ತಿಲ್ಲ. ಇಂಗ್ಲಿಷ್ ಮಾಧ್ಯಮದ ವಿದ್ಯಾರ್ಥಿಗಳಿಗೆ ಹೋಲಿಸಿದರೆ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು ಮನೆಯ ಪರಿಸರ, ಪೋಷಕರ ನಿರ್ಲಕ್ಷ್ಯದಿಂದ ಕಲಿಕೆಯಲ್ಲಿ ಹಿಂದುಳಿಯುವ ಪರಿಸ್ಥಿತಿ ಇದೆ. ಇಷ್ಟೆಲ್ಲಾ ಮಿತಿಗಳ ನಡುವೆಯೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶಕ್ಕೆ ನೇರವಾಗಿ ಶಿಕ್ಷಕರನ್ನು ಹೊಣೆಗಾರರನ್ನಾಗಿ ಮಾಡಲಾಗುತ್ತಿದೆ.

ಕನ್ನಡ ಮಾಧ್ಯಮ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಉಚಿತವಾಗಿ ನೀಡುವ ಕೆಲವು ವ್ಯವಸ್ಥೆಗಳನ್ನು ಶಾಲೆಗಳ ಗುಣಾತ್ಮಕತೆಯೊಂದಿಗೆ ಹೋಲಿಸಿ ನೋಡುವ ಪರಿಪಾಟ ಬೆಳೆದಿದೆ. ಆದರೆ ಇಂತಹ ಸೂಕ್ಷ್ಮಗಳನ್ನು ಗಮನಿಸದ ಸಮಾಜ ಮತ್ತು ಇಲಾಖೆ ಎಲ್ಲದಕ್ಕೂ ಬೋಧಕ ವರ್ಗವನ್ನೇ ಹೊಣೆ ಮಾಡುತ್ತಿದೆ. ಬುದ್ಧಿವಂತರನ್ನು ಆಯ್ಕೆ ಮಾಡಿಕೊಂಡು ಶೇ 100ರಷ್ಟು ಫಲಿತಾಂಶ ಪಡೆಯುವ ಶಾಲೆಗಳ ನಡುವೆ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳೊಂದಿಗೆ ಶೇ 50ರಷ್ಟು ಫಲಿತಾಂಶ ನೀಡುವ ಶಾಲೆಗಳು ಹೆಚ್ಚು ಗೌರವಕ್ಕೆ ಪಾತ್ರವಾಗಬೇಕು.

ವಾಚಕರ ವಾಣಿ

ವ್ಹೀಲಿಂಗ್: ಇನ್ನಷ್ಟು ಕಠಿಣ ಕಾನೂನು ಬೇಕು

ರಾಜ್ಯದಲ್ಲಿ ಹೆಚ್ಚುತ್ತಿರುವ ವಾಹನಗಳಿಂದ ನಿತ್ಯವೂ ಉಂಟಾಗುತ್ತಿರುವ ವಿವಿಧ ಪ್ರಕಾರದ ಮಾಲಿನ್ಯಗಳನ್ನು ತಡೆಯಲು ನಮ್ಮಿಂದ ಇನ್ನೂ ಸಾಧ್ಯವಾಗಿಲ್ಲ. ಈ ಮಧ್ಯೆ, ದ್ವಿಚಕ್ರ ವಾಹನಗಳನ್ನು ಬಳಸಿ ವ್ಹೀಲಿಂಗ್ ಮಾಡುವವರ ಸಂಖ್ಯೆ ಹೆಚ್ಚುತ್ತಲೇ ಇದೆ. ಅದರಲ್ಲೂ ರೀಲ್ಸ್‌ಗಾಗಿ ವ್ಹೀಲಿಂಗ್ ಮಾಡುವ ಶಾಲಾ ಮಕ್ಕಳು ಹಾಗೂ ಯುವಕರ ಹುಚ್ಚಾಟ ನಿಯಂತ್ರಣಕ್ಕೆ ಬರುತ್ತಿಲ್ಲ. ಬೈಕುಗಳಲ್ಲಿ ತುಸು ಮಾರ್ಪಾಡು ಮಾಡಿಕೊಂಡು, ಅವುಗಳಿಂದ ಕರ್ಕಶ ಸದ್ದು ಬರುವಂತೆ ಮಾಡಿಕೊಂಡು ವ್ಹೀಲಿಂಗ್ ಮಾಡುವವರು ಇದ್ದಾರೆ. ವ್ಹೀಲಿಂಗ್ ಹುಚ್ಚಾಟದಿಂದ ಅಮಾಯಕರು ಬಲಿಯಾಗುತ್ತಿದ್ದಾರೆ. ದ್ವಿಚಕ್ರ ವಾಹನ ಓಡಿಸುವ ಹಲವರಲ್ಲಿ ವಾಹನ ಚಾಲನಾ ಪರವಾನಗಿ ಕೂಡ ಇರುವುದಿಲ್ಲ. ವ್ಹೀಲಿಂಗ್ ಸಮಸ್ಯೆಯ ಕುರಿತಾಗಿ ಹೈಕೋರ್ಟ್ ಕಳವಳ ವ್ಯಕ್ತಪಡಿಸಿರುವುದು ಸಮಸ್ಯೆಯ ತೀವ್ರತೆಯ ಮೇಲೆ ಬೆಳಕು ಚೆಲ್ಲುತ್ತದೆ. ಇದರ ನಿಯಂತ್ರಣಕ್ಕೆ ಸರ್ಕಾರ ಇನ್ನಷ್ಟು ಕಠಿಣವಾದ ಕಾನೂನು ಜಾರಿಗೊಳಿಸಬೇಕು.

ಸುರೇಂದ್ರ ಪೈ, ಭಟ್ಕಳ

ಪೋಷಕರು ಕೈಜೋಡಿಸಬೇಕು

ಸಿಬಿಎಸ್‌ಇ ಪಠ್ಯಕ್ರಮ ಪಾಲಿಸುವ ಶಾಲೆಗಳಲ್ಲಿ 'ಮಧುಮೇಹ ಫಲಕ' ಅಳವಡಿಸಿ, ಸಕ್ಕರೆಯುಕ್ತ ತಿನಿಸುಗಳ ಸೇವನೆಯನ್ನು ಕಡಿಮೆ ಮಾಡಲು ಮಕ್ಕಳಲ್ಲಿ ಜಾಗೃತಿ ಮೂಡಿಸಲು ಮುಂದಾಗಿರುವುದು ಶ್ಲಾಘನೀಯ. ಸಕ್ಕರೆ ಹಾಗೂ ಆರೋಗ್ಯಕ್ಕೆ ಹಾನಿಕರವಾಗುವ ಅಂಶಗಳನ್ನು ಹೊಂದಿರುವ ಇನ್ನಿತರ ಪದಾರ್ಥಗಳ ಸೇವನೆಯಿಂದಾಗಿ ಮಕ್ಕಳಲ್ಲಿ ಅಕಾಲಿಕ ಬೊಜ್ಜು, ಮಧುಮೇಹದಂತಹ ತೊಂದರೆಗಳು ತೀವ್ರಗತಿಯಲ್ಲಿ ಏರುತ್ತಿವೆ. ನಮ್ಮ ದೇಶವು ಮಧುಮೇಹದ ಜಾಗತಿಕ ರಾಜಧಾನಿ ಎಂಬ ಕುಖ್ಯಾತಿ ಗಳಿಸುತ್ತಿದೆ. ಆರ್ಥಿಕ ಲಾಭವನ್ನೇ ಪ್ರಮುಖ ಗುರಿ ಇಟ್ಟುಕೊಂಡು ಸಾಮಾಜಿಕ ಬದ್ಧತೆ ಇಲ್ಲದ ಇಂತಹ ಪದಾರ್ಥಗಳ ತಯಾರಕರು ಆಕರ್ಷಕ ಜಾಹೀರಾತುಗಳ ಮೂಲಕ ಮಕ್ಕಳನ್ನು ತಮ್ಮತ್ತ ಸೆಳೆಯುತ್ತಿದ್ದಾರೆ. ಇಂತಹ ಪ್ರಭಾವಿ ಕಾರ್ಯತಂತ್ರದ ಎದುರು ಈಗ ಉದ್ದೇಶಿಸಿರುವ 'ಮಧುಮೇಹ ಫಲಕ'ಗಳು ಹೆಚ್ಚು ಪರಿಣಾಮಕಾರಿ ಆಗುವುದಿಲ್ಲ. ಇದರ ಜೊತೆಗೆ ಮಕ್ಕಳ ಪೋಷಕರೂ ಕೈಜೋಡಿಸಬೇಕು.

ಎ.ಜೆ. ಜಾವೀದ್, ಹಾಸನ

ತ್ರಿಭಾಷಾ ಕಲಿಕೆ ಈಗ ಹೊರೆ

ಸೂರ್ಯ ಹೆಬ್ಬಾರ ಬರೆದಿರುವ 'ದ್ವಿಭಾಷಾ ನೀತಿಯಿಂದ ಮಕ್ಕಳಿಗೆ ವಂಚನೆ' ಎಂಬ ಪತ್ರದಲ್ಲಿ (ವಾ.ವಾ., ಮೇ 17) ಅವರ ಸಂಸ್ಕೃತ ವ್ಯಾಮೋಹ ಹಾಗೂ ಹಲವು ಗೊಂದಲಗಳು ಕಾಣುತ್ತವೆ. ಹಂಪ ನಾಗರಾಜಯ್ಯ ಅವರು ಹೇಳಿರುವ, 'ಸಂಸ್ಕೃತದ ಹೊಡೆತ ತಪ್ಪಿಸಿ ಮಾತೃಭಾಷೆಯನ್ನು ಬೆಳೆಸಬೇಕು' ಎಂಬ ಮಾತು ಅಕ್ಷರಶಃ ಸಮರ್ಥನೀಯ. ಅದಕ್ಕೆ ಪ್ರತಿಯಾಗಿ ಹೆಬ್ಬಾರರು, 'ಮಾತೃಭಾಷೆ ಗಟ್ಟಿಯಾಗಿ ನಿಲ್ಲಬೇಕಾದರೆ ಸಂಸ್ಕೃತ ಜ್ಞಾನ ಅಗತ್ಯ ಎಂಬುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ' ಎಂದು ಹೇಳಿರುವುದನ್ನು, ಇಂದಿನ ಕನ್ನಡ ಭಾಷೆ ಮತ್ತು ಸಾಹಿತ್ಯದ ವಿಪುಲವಾದ ಬೆಳವಣಿಗೆ ಹಾಗೂ ಪ್ರಬುದ್ಧ ಸ್ಥಿತಿಯನ್ನು ಗಮನಿಸಿದಾಗ ಒಪ್ಪಲು ಸಾಧ್ಯವಿಲ್ಲ. ಸಂಸ್ಕೃತ ಭಾಷೆಯಿಂದ ಕನ್ನಡವು ಅಪಾರವಾದ ಪದಸಂಪತ್ತನ್ನು ಪಡೆದುಕೊಂಡಿದ್ದರೂ ಅದು ತನ್ನ ಅಸ್ಮಿತೆಯನ್ನು ಕಳೆದುಕೊಳ್ಳದೆ ಗಟ್ಟಿಯಾಗಿ ನೆಲೆನಿಂತಿದೆ.

ಜಾಗತಿಕ ಭಾಷೆ ಎನಿಸಿಕೊಂಡಿರುವ ಇಂಗ್ಲಿಷ್, ಅದೆಷ್ಟೋ ಭಾಷೆಗಳ ಪದಗಳನ್ನು ತನ್ನಲ್ಲಿ ಜೀರ್ಣಿಸಿಕೊಂಡಿದೆ. ಕನ್ನಡದ ಮಾತುಗಳಲ್ಲಿ ಇಂಗ್ಲಿಷ್ ಪದಗಳೂ ಬಹಳ ಇವೆ. ಹಾಗೆಯೇ ಒಂದು ಕಾಲದಲ್ಲಿ ಸಂಸ್ಕೃತದ ಪದಗಳೂ ಕನ್ನಡದಲ್ಲಿ ಸೇರಿಕೊಂಡಿವೆ. ಆದರೆ ಎಷ್ಟು ಮಂದಿಗೆ ಸಂಸ್ಕೃತದ ಜ್ಞಾನ ಇದೆ? ಸಂಸ್ಕೃತದ ಪದಗಳ ಪರಿಚಯ ಬೇರೆ ಮತ್ತು ಸಂಸ್ಕೃತದ ಜ್ಞಾನ ಬೇರೆ. ಕನ್ನಡದಲ್ಲಿ ಸೇರಿರುವ ಸಂಸ್ಕೃತ ಪದಗಳು ಕನ್ನಡದ ಪದಗಳೇ ಆಗಿಬಿಟ್ಟಿವೆ. ಹೀಗಾಗಿ ಈಗ ಕನ್ನಡಿಗರು ಹೊಸದಾಗಿ ಸಂಸ್ಕೃತದ ಜ್ಞಾನವನ್ನು ಪಡೆಯುವ ಅಗತ್ಯವಿಲ್ಲ. ಇಂದು ಶಾಲೆಗಳಲ್ಲಿ ಕಲಿಯಬೇಕಾದ ವಿಷಯಗಳು ಹಲವು. ಆದ್ದರಿಂದ ತ್ರಿಭಾಷಾ ಪದ್ಧತಿ ಕೂಡ ಈಗ ಹೊರೆಯಾಗುತ್ತದೆ. ನಮ್ಮ ಮಾತೃಭಾಷೆಯ ಜೊತೆಗೆ ಅನಿವಾರ್ಯವಾಗಿರುವ ಇಂಗ್ಲಿಷನ್ನು ಕಲಿತರೆ ಸಾಕು. ಹೀಗಾಗಿ ದ್ವಿಭಾಷಾ ಪದ್ಧತಿಯೇ ಉತ್ತಮ.

ಉತ್ತರ ಭಾರತದ ಅನೇಕ ಭಾಷೆಗಳಿಗೆ ಸಂಸ್ಕೃತವು ಮೂಲ. ಆದರೆ ದಕ್ಷಿಣ ಭಾರತದ ಕನ್ನಡ, ತಮಿಳು, ತೆಲುಗು, ಮಲಯಾಳ ಮುಂತಾದ ಸೋದರ (ದ್ರಾವಿಡ) ಭಾಷೆಗಳಿಗೆ ಸಂಸ್ಕೃತವು ಮೂಲವಲ್ಲ. ಇದನ್ನು ಎಲ್ಲ ಭಾಷಾ ವಿಜ್ಞಾನಿಗಳೂ ಒಪ್ಪುತ್ತಾರೆ. ಸಂಸ್ಕೃತವು ಇಂಡೊ ಆರ್ಯನ್ ಭಾಷಾ ವರ್ಗಕ್ಕೆ ಸೇರಿದ, ಪ್ರಾಚೀನ ಭಾರತದಲ್ಲಿ ಹೆಚ್ಚು ಪ್ರಚಲಿತವಿದ್ದ ಭಾಷೆ. ಆದರೆ ಅದು ಜನಭಾಷೆ ಆಗಿರಲಿಲ್ಲ. ವೇದೋಪನಿಷತ್ತುಗಳನ್ನು, ಸಂಸ್ಕೃತ ಸಾಹಿತ್ಯವನ್ನು ಅರಿಯುವ ಬಯಕೆಯುಳ್ಳವರು ಸಂಸ್ಕೃತವನ್ನು ಕಲಿಯಬಹುದು. ಸಂಸ್ಕೃತ ಕಲಿಯುವುದನ್ನು ಯಾರೂ ಬೇಡ ಎನ್ನುವುದಿಲ್ಲ. ಆದರೆ ಕನ್ನಡಕ್ಕೆ ಮಾರಕವಾಗುವ ರೀತಿಯಲ್ಲಿ ಹಿಂದಿ ಮತ್ತು ಸಂಸ್ಕೃತಕ್ಕೆ ಆದ್ಯತೆ ಕೊಡುವುದು ನ್ಯಾಯವಲ್ಲ.

ಪು.ಸೂ. ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

ಸರ್ಕಾರಿ ಶಾಲೆ: ಆಧುನಿಕ ವಿಧಾನ

ಕಾಲದ ಬದಲಾವಣೆಗೆ ಅನುಗುಣವಾಗಿ ಕಲಿಕಾ ಶೈಲಿಯ ಬದಲಾವಣೆ ಅನಿವಾರ್ಯ. ವಿದ್ಯಾರ್ಥಿಗಳ ಕೌಶಲಗಳ ಬೆಳವಣಿಗೆ ಕಾಲದ ಅಗತ್ಯ. ಒಂದೇ ಪಠ್ಯಕ್ರಮ, ಒಂದೇ ಪಠ್ಯಪುಸ್ತಕ, ಒಂದೇ ಪಾಠವನ್ನು ತಾಳಮೇಳವಿಲ್ಲದೆ ಕಂಠಪಾಠ ಮಾಡಿಸುವ ಶೈಲಿಯಿಂದ ಹೊರಬಂದು, ಆಧುನಿಕ ಕಲಿಕೆಯ ವಿಧಾನಗಳನ್ನು ಅಳವಡಿಸಿ, ವಿದ್ಯಾರ್ಥಿಗಳ ಜೊತೆ ಚರ್ಚೆ ಮಾಡಿ ಅವರ ಚಿಂತನಾ ಶಕ್ತಿ, ಅಭಿಪ್ರಾಯ ರೂಪಿಸಿಕೊಳ್ಳುವ ಶಕ್ತಿ ಮತ್ತು ಅವರ ಸಂವಹನ ಕೌಶಲಗಳನ್ನು ಬೆಳೆಸಬೇಕು. ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಕಡಿಮೆ ಆಗುತ್ತಿರುವ ಈ ಹೊತ್ತಿನಲ್ಲಿ ಇಂತಹ ಬದಲಾವಣೆಗಳು ಅಗತ್ಯ.

ಬಿಲಾಲ್ ಕುದ್ದುಪದವು, ಮಂಗಳೂರು

ಹಾವೇರಿ–ಶಿರಸಿ ರಸ್ತೆ ದುರಸ್ತಿ ಆಗಲಿ

ಹಾವೇರಿಯಿಂದ ಶಿರಸಿಗೆ ಸಾಗುವ ರಸ್ತೆಯು ಕೆಲವು ಕಡೆಗಳಲ್ಲಿ ತೀರಾ ಹಾಳಾಗಿದೆ. ಈ ರಸ್ತೆಯು ಹಾವೇರಿ ಮತ್ತು ಶಿರಸಿಯವರಿಗೆ ಮಾತ್ರವೇ ಮುಖ್ಯವಲ್ಲ. ಬೆಂಗಳೂರಿನಿಂದ ಉತ್ತರ ಕನ್ನಡದ ಶಿರಸಿ, ಕುಮಟಾ, ಗೋಕರ್ಣ ಕಡೆಗೆ ಸಾಗುವ ಹಲವರಿಗೆ ಇದು ಬಹಳ ಮುಖ್ಯವಾದ ಮಾರ್ಗ. ಇದನ್ನು ಸಂಬಂಧಪಟ್ಟವರು ಆದಷ್ಟು ಬೇಗ ಸರಿಪಡಿಸಬೇಕು.

ವೆಂಕಟರಮಣ, ಶಿರಸಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಜನಸಂಖ್ಯೆ ಕುಸಿತ

ಉತ್ತರ –ದಕ್ಷಿಣ ಅಂತರ



ದಕ್ಷಿಣದ ರಾಜ್ಯಗಳಲ್ಲಿ ಜನಸಂಖ್ಯೆ ಕಡಿಮೆ ಆಗುತ್ತಿದೆ ಎನ್ನುವ ಆತಂಕ ವ್ಯಾಪಕವಾಗುತ್ತಿರುವಾಗಲೇ, ಅದನ್ನು ಸಮರ್ಥಿಸುವ ಮತ್ತೊಂದು ವರದಿ ಬಿಡುಗಡೆಯಾಗಿದೆ. ಮಾದರಿ ನೋಂದಣಿ ವ್ಯವಸ್ಥೆಯ (ಎಸ್‌ಆರ್‌ಎಸ್) ಸಾಂಖ್ಯಿಕ ವರದಿಯನ್ನು (2021) ಭಾರತದ ರಿಜಿಸ್ಟ್ರಾರ್ ಜನರಲ್ ಮತ್ತು ಜನಗಣತಿ ಆಯುಕ್ತರ ಕಚೇರಿ ಬಿಡುಗಡೆ ಮಾಡಿದೆ. ದೇಶದ 13 ದೊಡ್ಡ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ರಾಷ್ಟ್ರೀಯ ಸರಾಸರಿ ಕುಸಿತಕ್ಕಿಂತ ಹೆಚ್ಚಿನ ವೇಗದಲ್ಲಿ ಶಿಶು ಜನನ ಪ್ರಮಾಣ ಕುಸಿಯುತ್ತಿದೆ ಎಂದು ವರದಿ ಹೇಳುತ್ತಿದೆ. ತಮಿಳುನಾಡು, ಕೇರಳ, ದೆಹಲಿ ರಾಜ್ಯಗಳಲ್ಲಿ ಈ ಪ್ರಮಾಣ ರಾಷ್ಟ್ರೀಯ ಸರಾಸರಿಗಿಂತ ದುಪ್ಪಟ್ಟಾಗಿದೆ. ಜನನ ಪ್ರಮಾಣವು ತ್ವರಿತವಾಗಿ ಕುಸಿಯುತ್ತಿರುವ ರಾಜ್ಯಗಳಲ್ಲಿ ಕರ್ನಾಟಕವೂ ಸೇರಿದಂತೆ ದಕ್ಷಿಣದ ಎಲ್ಲ ರಾಜ್ಯಗಳೂ ಸ್ಥಾನ ಪಡೆದಿವೆ

ದಕ್ಷಿಣದ 5 ರಾಜ್ಯಗಳಲ್ಲಿ ಶಿಶು ಜನನ ಪ್ರಮಾಣ ಗಣನೀಯ ಕುಸಿತ

ಪ್ರಜಾವಾಣಿ ವಾರ್ತೆ

ಮಾದರಿ ನೋಂದಣಿ ವ್ಯವಸ್ಥೆ (ಎಸ್‌ಆರ್‌ಎಸ್), ಜನಸಂಖ್ಯೆಯ ಸ್ವರೂಪಕ್ಕೆ ಸಂಬಂಧಿಸಿದ ದೇಶದ ಅತಿ ದೊಡ್ಡ ಸಮೀಕ್ಷೆಯಾಗಿದೆ. ಇದು ಜನನ, ಮರಣ ಪ್ರಮಾಣಗಳ ವಾರ್ಷಿಕ ಅಂದಾಜು ಸೇರಿದಂತೆ ಹಲವು ಮಾಹಿತಿ ನೀಡುತ್ತದೆ. ಇತ್ತೀಚೆಗೆ ಬಿಡುಗಡೆ ಆಗಿರುವ ಎಸ್‌ಆರ್‌ಎಸ್–21 ದೇಶದಲ್ಲಿ ಜನಸಂಖ್ಯೆಯ ಏರಿಳಿತದ ಪ್ರವೃತ್ತಿಗಳನ್ನು ತೋರಿಸುತ್ತದೆ.

ಎಸ್‌ಆರ್‌ಎಸ್ ದತ್ತಾಂಶದ ಪ್ರಕಾರ, ಅಖಿಲ ಭಾರತ ಶಿಶು ಜನನ ಪ್ರಮಾಣವು (ಕ್ರೂಡ್ ಬರ್ಥ್ ರೇಟ್– ಒಂದು ನಿರ್ದಿಷ್ಟ ಅವಧಿಯಲ್ಲಿ ಪ್ರತಿ ಸಾವಿರ ಜನಸಂಖ್ಯೆಗೆ ಜನನ ಪ್ರಮಾಣ) 2021ರಲ್ಲಿ 19.3 ಆಗಿತ್ತು. 2016ರಿಂದ 2021ರವರೆಗೆ ಪ್ರತಿ ವರ್ಷ ಜನನ ಪ್ರಮಾಣವು ಶೇ 1.12ರಷ್ಟು ಕುಸಿಯುತ್ತಲೇ ಬಂದಿದೆ.

13 ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿ ಕುಸಿತದ ಪ್ರಮಾಣವು ರಾಷ್ಟ್ರೀಯ ಸರಾಸರಿಗಿಂತಲೂ (ಶೇ 1.12) ಹೆಚ್ಚಾಗಿದೆ. 2016–21ರ ನಡುವೆ ತಮಿಳುನಾಡಿನಲ್ಲಿ ಪ್ರತಿವರ್ಷ ಕುಸಿತದ ಪ್ರಮಾಣವು ಶೇ 2.35ರಷ್ಟು ಆಗಿದೆ. ದೆಹಲಿಯಲ್ಲಿ ಈ ಪ್ರಮಾಣ ಶೇ 2.23 ಇದ್ದರೆ, ಕೇರಳದಲ್ಲಿ ಶೇ 2.05ರಷ್ಟು ಇದೆ. ಈ ಪಟ್ಟಿಯಲ್ಲಿ ದಕ್ಷಿಣದ ಇತರ ರಾಜ್ಯಗಳಾದ ತೆಲಂಗಾಣ (ಶೇ 1.67), ಕರ್ನಾಟಕ (ಶೇ 1.65) ಮತ್ತು ಆಂಧ್ರಪ್ರದೇಶ ಕೂಡ (ಶೇ 1.26) ಸ್ಥಾನ ಪಡೆದಿವೆ.

ದಕ್ಷಿಣದ ರಾಜ್ಯಗಳ ಜತೆಗೆ, ದೇಶದ ಇತರ ಕೆಲವು ರಾಜ್ಯಗಳಲ್ಲೂ ಜನನ ಪ್ರಮಾಣವು ರಾಷ್ಟ್ರೀಯ ಸರಾಸರಿಗಿಂತ ಹೆಚ್ಚು ಕುಸಿದಿದೆ. ಮಹಾರಾಷ್ಟ್ರ (ಶೇ 1.57), ಗುಜರಾತ್ (ಶೇ 1.24), ಒಡಿಶಾ (ಶೇ 1.34), ಹಿಮಾಚಲ ಪ್ರದೇಶ (ಶೇ 1.29), ಹರಿಯಾಣ (ಶೇ 1.21), ಜಮ್ಮು ಮತ್ತು ಕಾಶ್ಮೀರ (ಶೇ 1.47) ಮತ್ತು ಪಂಜಾಬ್ ರಾಜ್ಯಗಳಲ್ಲಿಯೂ ಶಿಶು ಜನನ ಪ್ರಮಾಣದಲ್ಲಿ ಕುಸಿತ ಆಗಿದೆ.

ದಕ್ಷಿಣ ರಾಜ್ಯಗಳಲ್ಲಿ ಜನನ ಪ್ರಮಾಣ



ದಕ್ಷಿಣಕ್ಕೆ ಹೋಲಿಸಿದರೆ ಉತ್ತರದ ರಾಜ್ಯಗಳಲ್ಲಿ ಶಿಶು ಜನನ ಪ್ರಮಾಣ ಹೆಚ್ಚೇನೂ ಕಡಿಮೆ ಆಗಿಲ್ಲ. ಈ ಪೈಕಿ ಅತಿ ಕಡಿಮೆ ಕುಸಿತ ಉಂಟಾಗಿರುವುದು ರಾಜಸ್ಥಾನ (0.48 %), ಬಿಹಾರ (ಶೇ 0.86), ಛತ್ತೀಸಗಢ (ಶೇ 0.98), ಜಾರ್ಖಂಡ್ (ಶೇ 0.98) ರಾಜ್ಯಗಳಲ್ಲಿ. ಅಸ್ಸಾಂ (ಶೇ 1.05), ಮಧ್ಯಪ್ರದೇಶ (1.05), ಪಶ್ಚಿಮ ಬಂಗಾಳ (ಶೇ 1.08), ಉತ್ತರ ಪ್ರದೇಶ (1.09) ರಾಜ್ಯಗಳಲ್ಲಿಯೂ ಶಿಶು ಜನನ ಪ್ರಮಾಣದಲ್ಲಿ ಕುಸಿತ ಉಂಟಾಗಿದೆ. ಈ ಅವಧಿಯಲ್ಲಿ ಶಿಶು ಜನನ ಪ್ರಮಾಣವು ಹೆಚ್ಚಳವಾಗಿರುವ ಏಕೈಕ ರಾಜ್ಯ ಉತ್ತರಾಖಂಡ ಆಗಿದೆ.

ಉತ್ತರದ ರಾಜ್ಯಗಳಲ್ಲಿ ಮಹಿಳೆಯರ ಸಾಕ್ಷರತಾ ಪ್ರಮಾಣ ಕಡಿಮೆ ಇರುವುದು, ಗ್ರಾಮೀಣ ಭಾಗದಲ್ಲಿ ಆರೋಗ್ಯ ಸೇವಾ ಸೌಕರ್ಯಗಳು ಸಮರ್ಪಕವಾಗಿ ಇಲ್ಲದಿರುವುದು, ಚಿಕ್ಕವಯಸ್ಸಿನಲ್ಲೇ ಮದುವೆ ಆಗುವುದು ಸೇರಿದಂತೆ ಹಲವು ರೀತಿಯ ಸಾಂಸ್ಕೃತಿಕ, ಸಾಮಾಜಿಕ ಅಂಶಗಳು ಜನನ ಪ್ರಮಾಣ ಹೆಚ್ಚಾಗಿರುವುದಕ್ಕೆ ಕಾರಣ.

ಟಿಎಫ್‌ಆರ್ ಕುಸಿತ: ದಕ್ಷಿಣದ ಐದು ರಾಜ್ಯಗಳಲ್ಲಿ ಒಟ್ಟು ಫಲವಂತಿಕೆ ದರವು (ಟಿಎಫ್‌ಆರ್) ಒಬ್ಬ ಮಹಿಳೆಗೆ 1.5 ಮತ್ತು 1.6 ಮಕ್ಕಳಷ್ಟು ಇದೆ. ಜನಸಂಖ್ಯೆಯ ಮಟ್ಟ ಕಾಯ್ದುಕೊಳ್ಳಲು 2.1ರಷ್ಟು ಫಲವಂತಿಕೆ ದರ ಅಗತ್ಯವಿದ್ದು, ದಕ್ಷಿಣದ ರಾಜ್ಯಗಳಲ್ಲಿ ಈ ಪ್ರಮಾಣ ಕಡಿಮೆ ಇದೆ.

ಭಾರತದ ಒಟ್ಟಾರೆ ಟಿಎಫ್‌ಆರ್ 2.0 ಆಗಿದ್ದು, ಜನಸಂಖ್ಯೆ ಮಟ್ಟ ಕಾಯ್ದುಕೊಳ್ಳಲು ಅಗತ್ಯವಾದ ಪ್ರಮಾಣಕ್ಕಿಂತ ಸ್ವಲ್ಪ ಕಡಿಮೆ ಇದೆ. ಆದರೆ, ದಕ್ಷಿಣ ರಾಜ್ಯಗಳಲ್ಲಿ ಮಾತ್ರ ಟಿಎಫ್‌ಆರ್ ತೀರಾ ಕಡಿಮೆ ಇದೆ. ಕರ್ನಾಟಕದ ಟಿಆರ್‌ಎಫ್ 1.6 ಆಗಿದ್ದರೆ, ತೆಲಂಗಾಣ 1.6, ತಮಿಳುನಾಡು 1.5, ಕೇರಳ 1.5 ಮತ್ತು ಆಂಧ್ರಪ್ರದೇಶ 1.5 ಟಿಆರ್‌ಎಫ್ ಹೊಂದಿವೆ.

ಆದರೆ, ಉತ್ತರದ ರಾಜ್ಯಗಳ ಟಿಆರ್‌ಎಫ್ ಪ್ರಮಾಣ ರಾಷ್ಟ್ರೀಯ ಸರಾಸರಿಗಿಂತ ಹೆಚ್ಚಾಗಿದೆ. ಬಿಹಾರ 3.0 ಟಿಆರ್‌ಎಫ್ ಹೊಂದಿದ್ದರೆ, ಉತ್ತರ ಪ್ರದೇಶ 2.7, ಮಧ್ಯಪ್ರದೇಶ 2.6, ಜಾರ್ಖಂಡ್ 2.3 ಮತ್ತು ರಾಜಸ್ಥಾನ 2.4 ಟಿಆರ್‌ಎಫ್ ಹೊಂದಿವೆ.

ದಕ್ಷಿಣದ ರಾಜ್ಯಗಳಲ್ಲಿ ದಶಕಗಳಿಂದ ಮಹಿಳೆಯರ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಲಾಗುತ್ತಿದ್ದು, ಅದರ ಪರಿಣಾಮವಾಗಿ ಮಹಿಳಾ ಸಾಕ್ಷರತೆ ಪ್ರಮಾಣ ಹೆಚ್ಚಾಗಿದೆ. ಜತೆಗೆ, ಮಹಿಳಾ ಉದ್ಯೋಗಿಗಳ ಸಂಖ್ಯೆಯೂ ಹೆಚ್ಚಾಗಿದೆ. ಆರೋಗ್ಯ ಸೇವಾ ವ್ಯವಸ್ಥೆ ಉತ್ತಮವಾಗಿರುವುದು, ತಡವಾಗಿ ವಿವಾಹವಾಗುವುದು ಫಲವಂತಿಕೆ ದರ ಕಡಿಮೆ ಇರಲು ಕಾರಣ ಎಂದು ವಿಶ್ಲೇಷಿಸಲಾಗುತ್ತಿದೆ. ದಕ್ಷಿಣ ರಾಜ್ಯಗಳಲ್ಲಿ ಶಿಶುಗಳ ಲಿಂಗಾನುಪಾತ ಕೂಡ ಕಡಿಮೆ ಇರುವುದು ಗಮನಾರ್ಹ; ಗ್ರಾಮೀಣ ಮತ್ತು ನಗರಗಳ ನಡುವಿನ ಅಂತರವೂ ತೀರಾ ಕಡಿಮೆ ಆಗಿದೆ.

ಶಿಶು ಜನನ ಪ್ರಮಾಣ, ಫಲವಂತಿಕೆ ದರ ಮುಂತಾದ ಅಂಶಗಳಲ್ಲಿ ಉತ್ತರ ಮತ್ತು ದಕ್ಷಿಣದ ರಾಜ್ಯಗಳ ನಡುವಿನ ವ್ಯತ್ಯಾಸವು ಗೆರೆ ಎಳೆದಷ್ಟು ಸ್ಪಷ್ಟವಾಗಿ ಕಾಣುತ್ತಿದೆ. ಇದು ದೇಶದ ಎರಡು ಭಾಗಗಳಲ್ಲಿನ ಜನಸಂಖ್ಯಾ ಸ್ವರೂಪಕ್ಕೆ ಕನ್ನಡಿ ಹಿಡಿಯುತ್ತಿದೆ. ಜನಸಂಖ್ಯೆಯ ಕುಸಿತವು ದಕ್ಷಿಣದಲ್ಲಿ ದೀರ್ಘಕಾಲದ ಸಾಮಾಜಿಕ ಮತ್ತು ಆರ್ಥಿಕ ಪರಿಣಾಮಗಳನ್ನು ಉಂಟುಮಾಡಲಿದೆ ಎನ್ನುವ ಆತಂಕ ವ್ಯಕ್ತವಾಗಿದೆ.

ಜನನ ಪ್ರಮಾಣ: ಯಾವ ವರ್ಷ, ಎಷ್ಟು?

ಭಾರತ



ರಾಜ್ಯದಲ್ಲಿ ಶೇ 8ರಷ್ಟು ಕುಸಿತ

ರಾಜ್ಯದಲ್ಲಿ 2016–2021ರ ನಡುವೆ ಶಿಶು ಜನನ ಪ್ರಮಾಣ ಒಟ್ಟು ಶೇ 8ರಷ್ಟು ಕುಸಿತ ಕಂಡಿದೆ. 2016ರಲ್ಲಿ ಒಟ್ಟಾರೆ ಜನನ ಪ್ರಮಾಣ 17.6ರಷ್ಟಿತ್ತು. 2021ರ ಹೊತ್ತಿಗೆ ಅದು 16.2ಕ್ಕೆ ಇಳಿಕೆ ಕಂಡಿದೆ.

ಗ್ರಾಮೀಣ ಭಾಗದಲ್ಲಿ ಜನನ ಪ್ರಮಾಣ ಶೇ 7.03ರಷ್ಟು ಕುಸಿತ ಕಂಡಿದ್ದರೆ, ನಗರ ಪ್ರದೇಶದಲ್ಲಿ ಶೇ 8.64ರಷ್ಟು ಕಡಿಮೆಯಾಗಿದೆ. ಆರು ವರ್ಷಗಳಲ್ಲಿ ವಾರ್ಷಿಕವಾಗಿ ಸರಾಸರಿ ಶೇ 1.65ರಷ್ಟು ಕುಸಿತವಾಗಿದೆ.

ಕರ್ನಾಟಕ



ಪರಿಣಾಮವೇನು?

- ಜನಸಂಖ್ಯಾ ಸ್ವರೂಪದಲ್ಲಿ ಸಮತೋಲನ ಕಾಯ್ದುಕೊಳ್ಳಬೇಕಾದರೆ ಫಲವಂತಿಕೆ ದರ ಮತ್ತು ಶಿಶು ಜನನ ಪ್ರಮಾಣ ಉತ್ತಮವಾಗಿರುವುದು ಅಗತ್ಯ
- ಜನಸಂಖ್ಯೆ ಕುಸಿತವು ದೇಶದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಯ ಮೇಲೆ ಪರಿಣಾಮ ಬೀರುತ್ತದೆ
- ಜನನ ಪ್ರಮಾಣ ಕುಸಿಯುತ್ತಾ ಹೋದರೆ ದೇಶದಲ್ಲಿ ಹೆಚ್ಚು ವಯಸ್ಸಿನವರ ಸಂಖ್ಯೆ ಹೆಚ್ಚಾಗುತ್ತದೆ. ಇದು ಕಾರ್ಮಿಕ ಬಲವನ್ನು ಕುಸಿಯುವಂತೆ ಮಾಡುತ್ತದೆ. ಇದರಿಂದ ಉದ್ದಿಮೆಗಳಿಗೆ ಕಾರ್ಮಿಕರ ಕೊರತೆ ಉಂಟಾಗುತ್ತದೆ
- ಹೆಚ್ಚಿನ ಸಂಖ್ಯೆಯಲ್ಲಿರುವ ಹಿರಿಯ ವಯಸ್ಸಿನವರು, ಕಡಿಮೆ ಸಂಖ್ಯೆಯಲ್ಲಿರುವ ಚಿಕ್ಕ ವಯೋಮಾನದವರ ಮೇಲೆ ಹೆಚ್ಚು ಅವಲಂಬಿಸಬೇಕಾಗಿ ಬರುತ್ತದೆ
- ಸಾಮಾಜಿಕ ಭದ್ರತಾ ವ್ಯವಸ್ಥೆಯ ಮೇಲೂ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಸರ್ಕಾರವು ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಸಂಪನ್ಮೂಲಗಳನ್ನು ವ್ಯಯಿಸಬೇಕಾಗುತ್ತದೆ
- ಪ್ರಾಂತ್ಯವಾರು ತಾರತಮ್ಯವನ್ನೂ ಕಾರಣಬಹುದು (ಉದಾ: ಉತ್ತರ ಭಾರತ ಮತ್ತು ದಕ್ಷಿಣ ಭಾರತ)
- ಲಿಂಗಾನುಪಾತದಲ್ಲಿ ವ್ಯತ್ಯಾಸ ಉಂಟಾಗಬಹುದು

2021ರ ಸಮೀಕ್ಷೆಯ ಪ್ರಮುಖ ಅಂಶಗಳು

- ಪ್ರತಿ 1,000 ಜನಸಂಖ್ಯೆಗೆ 19.3 ಮಕ್ಕಳು ಜನಿಸುತ್ತಾರೆ
- ಪ್ರತಿ 1,000 ಜನಸಂಖ್ಯೆಗೆ 7.5 ಸಾವು ಸಂಭವಿಸುತ್ತದೆ
- ಜನಿಸಿದ ಪ್ರತಿ 1,000 ಶಿಶುಗಳಲ್ಲಿ 27 ಶಿಶುಗಳು ಮೃತಪಡುತ್ತವೆ. ಶಿಶು ಮರಣ ಪ್ರಮಾಣ ಗಣನೀಯವಾಗಿ ಇಳಿಕೆಯಾಗಿದೆ. 2014ರಲ್ಲಿ ಈ ಪ್ರಮಾಣ 39 ಇತ್ತು
- ಪ್ರತಿ ಲಕ್ಷ ಹೆರಿಗೆಗೆ 93 ಮಂದಿ ತಾಯಂದಿರು ಮೃತಪಡುತ್ತಿದ್ದಾರೆ. ಹಿಂದಿನ ಅಂಕಿ ಅಂಶಗಳಿಗೆ ಹೋಲಿಸಿದರೆ ಈ ಪ್ರಮಾಣದಲ್ಲೂ ಇಳಿಕೆಯಾಗಿದೆ.
- ಫಲವಂತಿಕೆ ದರ ಸ್ಥಿರವಾಗಿದೆ (2.0)
- 2021ರಲ್ಲಿ ಬಿಹಾರದಲ್ಲಿ ಅತಿ ಹೆಚ್ಚು ಅಂದರೆ, 25.6ರಷ್ಟು ಶಿಶು ಜನನ ಪ್ರಮಾಣ ದಾಖಲಾಗಿದೆ. ಅತಿ ಕಡಿಮೆ ಜನನ ಪ್ರಮಾಣ ಅಂಡಮಾನ್ ಮತ್ತು ನಿಕೋಬಾರ್ ದ್ವೀಪ ಸಮೂಹದಲ್ಲಿ (10.6) ವರದಿಯಾಗಿದೆ
- ಛತ್ತೀಸಗಢದಲ್ಲಿ ಅತಿ ಹೆಚ್ಚು ಅಂದರೆ 10.1ರಷ್ಟು ಮರಣ ಪ್ರಮಾಣ ದಾಖಲಾಗಿದೆ. ದೆಹಲಿ ಮತ್ತು ಚಂಡೀಗಢದಲ್ಲಿ ಅತಿ ಕಡಿಮೆ (5.4) ವರದಿಯಾಗಿದೆ
- ಅತಿ ಹೆಚ್ಚು ಶಿಶು ಮರಣ ಪ್ರಮಾಣ (41) ಮಧ್ಯ ಪ್ರದೇಶದಲ್ಲಿ ದಾಖಲಾಗಿದ್ದರೆ, ಮಣಿಪುರ, ಮಿಜೋರಾಂ ಮತ್ತು ಸಿಕ್ಕಿಂನಲ್ಲಿ ಅತಿ ಕಡಿಮೆ (4) ಶಿಶು ಮರಣ ಪ್ರಮಾಣ ದಾಖಲಾಗಿದೆ
- ಲಿಂಗಾನುಪಾತ ಸುಧಾರಣೆ ಕಂಡಿದ್ದು, ಪ್ರತಿ ಸಾವಿರ ಪುರುಷರಿಗೆ 913 ಮಹಿಳೆಯರಿದ್ದಾರೆ

ಸಮೀಕ್ಷೆ ಹೇಗೆ?

ನಗರ, ಗ್ರಾಮೀಣ ಪ್ರದೇಶಗಳ ಜನಸಂಖ್ಯೆಗೆ ಅನುಗುಣವಾಗಿ ನಿರ್ದಿಷ್ಟ ಘಟಕಗಳನ್ನಾಗಿ (ಯುನಿಟ್) ಮಾಡಿ ನಂತರ ಸಮೀಕ್ಷೆ ನಡೆಸಲಾಗಿದೆ. ಗ್ರಾಮೀಣ ಭಾಗದಲ್ಲಿ 4,959 ಮತ್ತು ನಗರ ಪ್ರದೇಶದಲ್ಲಿ 3,883 ಸೇರಿದಂತೆ ಒಟ್ಟು 8,842 ಮಾದರಿ ಘಟಕಗಳನ್ನು ಗುರುತಿಸಿ, ಸಮೀಕ್ಷೆ ನಡೆಸಲಾಗಿದೆ. ಒಟ್ಟು 84.45 ಲಕ್ಷ ಮಂದಿ ಈ ಸಮೀಕ್ಷೆಯ ಭಾಗವಾಗಿದ್ದಾರೆ. ಗ್ರಾಮೀಣ ಭಾಗದಲ್ಲಿ 61.44 ಲಕ್ಷ ಮತ್ತು ನಗರ ಪ್ರದೇಶದಲ್ಲಿ 23.01 ಲಕ್ಷದಷ್ಟು ಮಾದರಿ ಜನಸಂಖ್ಯೆಯನ್ನು ಈ ಸಮೀಕ್ಷೆ ಒಳಗೊಂಡಿದೆ.

ಆಧಾರ: ಕೇಂದ್ರ ಗೃಹ ಇಲಾಖೆಯ ಮಾದರಿ ನೋಂದಣಿ ವ್ಯವಸ್ಥೆಯ ಸಾಂಖ್ಯಿಕ ವರದಿ– 2021, ಪಿಐಬಿ ಪತ್ರಿಕಾ ಹೇಳಿಕೆ, ನ್ಯಾಷನಲ್ ಲೈಬ್ರೆರಿ ಆಫ್ ಮೆಡಿಸಿನ್ ವೆಬ್‌ಸೈಟ್

ರಾಷ್ಟ್ರೀಯ

‘ಸಿಂಧೂರ ಕಾರ್ಯಾಚರಣೆ’ ಪೋಸ್ಟ್: ಪ್ರೊಫೆಸರ್ ಬಂಧನ

ಪ್ರಜಾವಾಣಿ ವಾರ್ತೆ

ಸೋನಿಪತ್ (ಪಿಟಿಐ): ಕರ್ನಲ್ ಸೋಫಿಯಾ ಖುರೇಷಿ ಹಾಗೂ ವಿಂಗ್ ಕಮಾಂಡರ್ ವ್ಯೋಮಿಕಾ ಸಿಂಗ್ ಅವರ ಕುರಿತು ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಮಾಡಿದ್ದಕ್ಕಾಗಿ ಅಶೋಕ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಅಲಿ ಖಾನ್ ಮಹಮೂದಾಬಾದ್ ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಭಾನುವಾರ ತಿಳಿಸಿದರು.

‘ಇಬ್ಬರೂ ಅಧಿಕಾರಿಗಳು ‘ಆಪರೇಷನ್ ಸಿಂಧೂರ’ ಕುರಿತು ಮಾಧ್ಯಮಗಳಿಗೆ ಮಾಹಿತಿ ನೀಡಿರುವುದು ‘ಕಣ್ಣುಕಟ್ಟು’ ಮಾತ್ರ. ಇದು ವಾಸ್ತವದಲ್ಲಿಯೂ ಸಾಧ್ಯವಾಗಬೇಕು. ಇಲ್ಲದಿದ್ದರೆ ಅದು ಕೇವಲ ಬೂಟಾಟಿಕೆ ಆಗುತ್ತದೆ’ ಎಂದು ಸಾಮಾಜಿಕ ಮಾಧ್ಯಮದಲ್ಲಿ ಮೇ 7ರಂದು ಖಾನ್ ಪೋಸ್ಟ್ ಮಾಡಿದ್ದರು.

ದೇಶದ ಸಾರ್ವಭೌಮತೆ ಮತ್ತು ಸಮಗ್ರತೆಗೆ ಧಕ್ಕೆ ಸೇರಿದಂತೆ ವಿವಿಧ ಆರೋಪಗಳಡಿ ಖಾನ್ ವಿರುದ್ಧ ಎರಡು ಎಫ್‌ಐಆರ್ ದಾಖಲಾಗಿವೆ. ಇವರು ವಿಶ್ವವಿದ್ಯಾಲಯದಲ್ಲಿ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿದ್ದಾರೆ.

ಅಲಿ ಖಾನ್ ಅವರ ಹೇಳಿಕೆಯನ್ನು ಖಂಡಿಸಿ ಹರಿಯಾಣ ರಾಜ್ಯ ಮಹಿಳಾ ಆಯೋಗವು ಮೇ 12ರಂದು ಅವರಿಗೆ ನೋಟಿಸ್ ನೀಡಿತ್ತು. ಮಹಿಳಾ ಅಧಿಕಾರಿಗಳು, ದೇಶದ ಸಶಸ್ತ್ರ ಪಡೆಗಳ ವಿರುದ್ಧ ಈ ರೀತಿಯ ಹೇಳಿಕೆ ನೀಡುವುದು ಕಳವಳಕಾರಿಯಾಗಿದೆ ಎಂದು ಹೇಳಿತ್ತು.

> ಕರ್ನಲ್ ಸೋಫಿಯಾ ಅವರನ್ನು ಶ್ಲಾಘಿಸುವ ಬಲಪಂಥೀಯ ಜನರು, ಗುಂಪು ಹಲ್ಲೆಗಳು ಹಾಗೂ ಬುಲ್ಡೋಜರ್ ಕ್ರಮದ ಸಂತ್ರಸ್ತರಿಗೆ ರಕ್ಷಣೆ ನೀಡುವಂತೆಯೂ ಒತ್ತಾಯಿಸಬೇಕು
>
> **ಅಲಿ ಖಾನ್ ಮಹಮೂದಾಬಾದ್,** ಸಹಾಯಕ ಪ್ರಾಧ್ಯಾಪಕ (ಸಾಮಾಜಿಕ ಮಾಧ್ಯಮದಲ್ಲಿ ಬರೆದುಕೊಂಡಿರುವುದು)

ಆಯೋಗದ ಅಧ್ಯಕ್ಷರಾದ ರೇಣು ಭಾಟಿಯಾ ಹಾಗೂ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರಾಗಿರುವ ಸ್ಥಳೀಯ ಸರಪಂಚರೊಬ್ಬರು ನೀಡಿರುವ ದೂರು ಆಧರಿಸಿ ಎಫ್‌ಐಆರ್ ದಾಖಲಿಸಲಾಗಿದೆ.

‘ಪ್ರೊಫೆಸರ್ ಖಾನ್ ಅವರನ್ನು ಪೊಲೀಸರು ಬಂಧಿಸಿರುವ ವಿಷಯ ತಿಳಿಯಿತು. ಪ್ರಕರಣಕ್ಕೆ ಸಂಬಂಧಿಸಿದ ಮಾಹಿತಿ ಪಡೆಯುತ್ತಿದ್ದೇವೆ. ತನಿಖೆಯಲ್ಲಿ ಪೊಲೀಸರಿಗೆ ನಾವು ಸಹಕಾರ ನೀಡುತ್ತೇವೆ’ ಎಂದು ಅಶೋಕ ವಿಶ್ವವಿದ್ಯಾಲಯ ತಿಳಿಸಿದೆ.

ಅಧಿಕಾರ ವ್ಯಾಪ್ತಿ ಮೀರಿದ ಮಹಿಳಾ ಆಯೋಗ: ಪ್ರೊಫೆಸರ್ ಖಾನ್

ಹರಿಯಾಣ ಮಹಿಳಾ ಆಯೋಗದ ನೋಟಿಸ್‌ಗೆ ಪ್ರತಿಕ್ರಿಯಿಸಿದ್ದ ಖಾನ್ ‘ಮಹಿಳಾ ಆಯೋಗವು ತನ್ನ ಅಧಿಕಾರ ವ್ಯಾಪ್ತಿಯನ್ನು ಮೀರಿದೆ. ನನ್ನ ಹೇಳಿಕೆಯನ್ನು ತಪ್ಪಾಗಿ ಓದಿ, ಅರ್ಥೈಸಿಕೊಂಡಿದೆ. ನನ್ನ ಹೇಳಿಕೆಯನ್ನು ಅದು ಸಂಪೂರ್ಣವಾಗಿ ತಲೆಕೆಳಗಾಗಿಸಿದೆ’ ಎಂದು ಹೇಳಿದ್ದರು.

‘ಶಾಂತಿ ಮತ್ತು ಸೌಹಾರ್ದವನ್ನು ಉತ್ತೇಜಿಸಲು ಹಾಗೂ ಸಶಸ್ತ್ರ ಪಡೆಗಳನ್ನು ಶ್ಲಾಘಿಸಲು ನನ್ನ ವಾಕ್ ಸ್ವಾತಂತ್ರ್ಯದ ಮೂಲಭೂತ ಹಕ್ಕನ್ನು ಚಲಾಯಿಸಿದ್ದೇನೆ. ದೇಶವನ್ನು ಅಸ್ಥಿರಗೊಳಿಸಲು ಮತ್ತು ದ್ವೇಷ ಹರಡಲು ಯತ್ನಿಸುವವರು ನನ್ನ ಹೇಳಿಕೆಯನ್ನು ಟೀಕಿಸುತ್ತಿದ್ದಾರೆ’ ಎಂದಿದ್ದರು.

ಒವೈಸಿ, ಮಹುವಾ ಖಂಡನೆ

ಸಿಪಿಎಂ, ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಒವೈಸಿ ಹಾಗೂ ತೃಣಮೂಲ ಕಾಂಗ್ರೆಸ್ ಸಂಸದೆ ಮಹುವಾ ಮೊಯಿತ್ರಾ ಅವರು ಖಾನ್ ಅವರ ಬಂಧನವನ್ನು ಖಂಡಿಸಿದ್ದಾರೆ.

‘ಖಾನ್ ಅವರ ಪೋಸ್ಟ್ ದೇಶದ್ರೋಹ ಅಥವಾ ಮಹಿಳಾ ವಿರೋಧಿಯಾಗಿಲ್ಲ. ಬಿಜೆಪಿ ಕಾರ್ಯಕರ್ತನ ದೂರಿನ ಮೇರೆಗೆ ಹರಿಯಾಣ ಪೊಲೀಸರು ಅವರನ್ನು ಬಂಧಿಸಿದ್ದಾರೆ’ ಎಂದು ಒವೈಸಿ ಹೇಳಿದ್ದಾರೆ. ಬಂಧನ ಪ್ರಶ್ನಿಸಿ ಕೋರ್ಟ್ ಮೊರೆ ಹೋಗುವುದಾಗಿ ಮಹುವಾ ತಿಳಿಸಿದ್ದಾರೆ.

ಗುಂಡಣ್ಣ

ದೇವರ ಅಡುಗೆ ಮನೆ!

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

ಈ ಜಗತ್ತು ದೇವರ ಅಡುಗೆ ಮನೆ. ಇದು ನಮ್ಮ ಅಡುಗೆ ಮನೆ ಅಲ್ಲ. ದೇವರ ಅಡುಗೆ ಮನೆಯಲ್ಲಿ ಮಸ್ತ್ ಮಸ್ತ್ ಆಹಾರಗಳಿವೆ. ಮಾವಿನ ಹಣ್ಣುಗಳನ್ನೇ ನೋಡಿ, ಎಷ್ಟು ವಿಧಗಳಿವೆ. ಅದರಲ್ಲಿ ಎಷ್ಟು ರುಚಿ ತುಂಬಿಟ್ಟಿದ್ದಾನೆ ದೇವರು. ನೀವು ಸುಮ್ಮನೆ ನಾಲ್ಕು ಕಾಳು ಬೀಜವನ್ನು ಭೂಮಿಯಲ್ಲಿ ಹಾಕಿದರೆ ನಾಲ್ಕು ತಿಂಗಳಿನಲ್ಲಿ ನಾಲ್ಕು ಕ್ವಿಂಟಲ್ ಧಾನ್ಯ ಮನೆಗೆ ಬರುತ್ತದೆ. ಈ ಪವಾಡ ದೇವರ ಅಡುಗೆ ಮನೆಯಲ್ಲಿ ನಡೆಯುವಂತಹದ್ದು. ಅವನ ಅಡುಗೆ ಮನೆಯಲ್ಲಿ ಉಂಡರೆ ಹೆಚ್ಚಾಗುತ್ತದೆ. ನಮ್ಮ ಅಡುಗೆ ಮನೆಯಲ್ಲಿ ಉಂಡರೆ ಖಾಲಿಯಾಗುತ್ತದೆ. ‘ಯಾಕ ಬರ್ತಾರಪ ಉಣ್ಣಾಕ’ ಅಂಥ ನಾವು ಹೇಳುತ್ತೀವಿ. ಅವ ಮಾತ್ರ ‘ಯಾಕ ನಮ್ಮ ಮಕ್ಕಳು ಉಣ್ಣುವಲ್ರು’ ಅಂತ ಹೇಳ್ತಾನೆ. ನಮ್ಮ ಅಡುಗೆ ಮನೆಯಲ್ಲಿ ಅಡುಗೆ ಕೆಟ್ಟಿರ್ತಾವ. ಅವನ ಅಡುಗೆ ಮನೆಯಲ್ಲಿ ಏನಾದರೂ ಕೆಟ್ಟೈತೇನು? ನಮ್ಮ ಅಡುಗೆ ಮನೆಯಲ್ಲಿ ಹೆಚ್ಚುಕಮ್ಮಿ ಆಗಿರ್ತಾವ ಅಷ್ಟೆ. ಯುಟ್ಯೂಬ್, ಟಿವಿಯಲ್ಲಿ ಅಡುಗೆ ಮಾಡೋದು ಹೇಗೆ ಎಂದು ಕಲಿಸುತ್ತಿರುತ್ತಾರೆ. ತಿಳಿ ಸಾರು ಮಾಡೋದು ಹ್ಯಾಂಗೆ ಅಂತಲೂ ಕಲಿಸ್ತಾರ. ದೇವರ ಅಡುಗೆಯನ್ನು ಕಲಿಸಲು ಆಗಲ್ಲ, ಕಲಿಯಲೂ ಆಗಲ್ಲ. ನಮ್ಮ ಮನೆಯಲ್ಲಿ ಎಲ್ಲಾ ವ್ಯವಸ್ಥೆ ಇದ್ದರೂ ಅಡುಗೆ ಕೆಡುತ್ತದೆ. ದೇವರ ಅಡುಗೆ ಮನೆಯಲ್ಲಿ ಆತ ಎಲ್ಲವನ್ನೂ ಬರೀ ಮಣ್ಣಿನಲ್ಲಿ ಬೆಳೆದಿದ್ದಾನೆ. ಈ ಜೀವನ ದೇವರದು ಎಂಬ ಭಾವದಿಂದ ಬದುಕಬೇಕು. ನಂದು ಅನ್ನುವುದನ್ನು ತೆಗೆಯುವುದು. ನಂದು ಎನ್ನುವ ಜಾಗದಲ್ಲಿ ನಿಂದು ಎನ್ನುವುದನ್ನು ಸೇರಿಸಿಬಿಟ್ಟರೆ ಆತ ನಿತ್ಯ ಸುಖಿ.

ಮನುಷ್ಯರಿಗೆ ಸತ್ಸಂಗ ಇರಬೇಕು. ಕಾಡಿನಲ್ಲಿ ಬಿದಿರು ಇರುತ್ತದೆ. ಆ ಬಿದಿರು ಕಟ್ಟಿಗೆ ಆಯುವವನ ಕೈಗೆ ಸಿಕ್ಕರೆ ಸುಟ್ಟು ಬೂದಿಯಾಗುತ್ತದೆ. ಅದೇ ಕೊಳಲು ಮಾಡುವವನ ಕೈಯಲ್ಲಿ ಸಿಕ್ಕರೆ ದೇವರ ಕೈಯಲ್ಲಿ ಊದುವ ಕೊಳಲು ಆಗುತ್ತದೆ. ನಾವು ಯಾರ ಸಂಗ ಮಾಡುತ್ತೇವೆ ಎನ್ನುವುದು ಮುಖ್ಯ. ಯಾವಾಗಲೂ ಒಳ್ಳೆಯವರ ಸಂಗ ಇರಬೇಕು. ಈ ಪ್ರಪಂಚ ಐತಲ್ಲ, ನಮಗೆ ಬಹಳ ತಾಪ ಕೊಡುತ್ತೈತಿ. ಯಾವ ಸಂದರ್ಭದಲ್ಲಿ ಏನು ಮಾಡತ್ತೈತಿ ಅಂತ ಹೇಳಕ್ಕಾಗದು. ಈ ತಾಪ ಕೊಡುವ ಪ್ರಪಂಚದಲ್ಲಿ ತಾಪ ಆಗದ ಹಾಗೆ ಬದುಕಬೇಕಲ್ಲ ಅದಕ್ಕೆ ಸತ್ಸಂಗ ಬೇಕು. ಈಗ ಮನೆಯಲ್ಲಿ ಊಟಕ್ಕೆ ಕುಳಿತಿದ್ದೀರಿ. ಬಿಸಿ ಅನ್ನ ಹಾಕಿಕೊಂಡಿದ್ದೀರಿ. ಬಿಸಿ ಸಾಂಬಾರು ಕೂಡ ಇದೆ. ಹಸಿವೆ ಬಹಳ ಆಗಿದೆ. ತಾಟನಲ್ಲಿ ಅನ್ನ ಹಾಕಿಕೊಂಡು ಬೊಗಸೆಯಲ್ಲಿ ಸಾಂಬಾರು ಹಾಕಿಕೊಳ್ತಿರೇನು? ಬೊಗಸೆಯಲ್ಲಿ ಸಾಂಬಾರು ಹಾಕಿಕೊಂಡರೆ ಕೈ ಸುಡುತ್ತದೆ. ಅದಕ್ಕಾಗಿ ನೀವು ಒಂದು ಸೌಟು ತೆಗೆದುಕೊಂಡು ಅದರಿಂದ ಸಾಂಬಾರು ಹಾಕಿಕೊಳ್ತೀರಿ. ಹಾಗೆಯೇ ಈ ಜಗತ್ತನ್ನು ನಾವು ಅನುಭವಿಸಲೇಬೇಕು. ಅದನ್ನು ಬಿಡಲು ಆಗಲ್ಲ. ಜಗತ್ತು ಎಂದರೆ ಸುಡುವ ಸಾಂಬಾರು ಇದ್ದ ಹಾಗೆ. ಈ ಸಾಂಬಾರು ಸುಡದ ಹಾಗೆ ಬದುಕಬೇಕು ಎಂದರೆ ಶರಣರ ವಚನ ಎಂಬ ಚಮಚವನ್ನು ಬಳಸಬೇಕು. ಆಗ ಬಿಸಿ ನಮಗೆ ತಾಗುವುದಿಲ್ಲ.

ಸದಾ ಸತ್ಯದ ಸ್ಮರಣೆ ಇರಬೇಕು. ಸದ್ವಿಚಾರ ತಲೆಯಲ್ಲಿ, ಸತ್ಕಾರ್ಯ ಕೈಯಲ್ಲಿ, ಸವಿಮಾತು ಬಾಯಲ್ಲಿ, ಸದ್ಭಾವ ಎದೆಯಲ್ಲಿ ಇದ್ದರೆ ಅವನೇ ಶರಣ. ಎದೆಯೊಳಗೆ ದೇವಭಾವ ಇರಬೇಕು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಸೋಮವಾರ ಮೇ 19, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣ ಷಷ್ಠಿ ಗಂ. 6-12 ನಕ್ಷತ್ರ: ಶ್ರವಣ ಗಂ. 19-30 ಯೋಗ: ಶುಕ್ಲ (ಸುಕ್ರ) ಗಂ. 05-53 ನಂತರ ಬ್ರಹ್ಮ ಗಂ 28-36 ಕರಣ: ವಣಜೆ ಗಂ. 6-12, ವೃಷಭ ಮಾಸದ 05ನೇ ದಿನ.
ರಾಹುಕಾಲ: ಬೆಳಿಗ್ಗೆ 07-30 – 09-00
ಸೂರ್ಯೋದಯ: 06-07 **ಸೂರ್ಯಾಸ್ತ:** 06-47
ಮುಸ್ಲಿಂ ದಿನಾಂಕ: 20 ಜುಲ್ಕಾಯಿದ್
ಅದೃಷ್ಟ ಸಂಖ್ಯೆ: 3, 7

ಮೇಷ: ಜಮೀನು ಖರೀದಿ ಅಥವಾ ಗುತ್ತಿಗೆಯಂತಹ ವ್ಯವಹಾರಗಳಿಂದ ಹೆಚ್ಚಿನ ಲಾಭ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಇತರರ ಭಾವನೆಗಳನ್ನು ಗೌರವಿಸುವ ಸೌಜನ್ಯ ಬೆಳೆಸಿಕೊಳ್ಳಿ.

ವೃಷಭ: ಸಮಸ್ಯೆಗಳನ್ನು ಸ್ನೇಹಿತರೊಂದಿಗೆ ಚರ್ಚಿಸಿ ಬಗೆಹರಿಸಿಕೊಳ್ಳಿ. ಪರಿಸ್ಥಿತಿಯನ್ನು ತಪ್ಪಾಗಿ ಅರ್ಥೈಸದೇ ತಾಳ್ಮೆಯಿಂದ ನಿಭಾಯಿಸಿ. ಅರಳಿಮರಕ್ಕೆ ಪ್ರದಕ್ಷಿಣೆ ಹಾಕುವುದರಿಂದ ಪಾಪಗಳು ಪರಿಹಾರವಾಗಲಿವೆ.

ಮಿಥುನ: ಸಹೋದರರು ಅಥವಾ ಸಂಗಾತಿಯ ಜೊತೆಗೆ ಇದ್ದ ದೀರ್ಘಕಾಲದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವಿರಿ. ವಿದ್ಯಾರ್ಥಿಗಳಿಗೆ ವಿದೇಶದಲ್ಲಿ ಉನ್ನತ ಶಿಕ್ಷಣ ಪಡೆಯುವ ಅವಕಾಶ ಸಿಗಲಿದೆ.

ಕರ್ಕಾಟಕ: ಕ್ಷಣಿಕ ಸುಖಕ್ಕೆ ಮಾರುಹೋಗದೆ, ಭವಿಷ್ಯದ ಬಗ್ಗೆ ಗಂಭೀರವಾಗಿ ಆಲೋಚಿಸಿ. ಮಹಿಳೆಯರಿಗೆ ಸ್ವತಂತ್ರ ಉದ್ಯಮದ ಹಾದಿ ಸುಗಮವಾಗುವುದು. ಮಿಶ್ರಫಲ ಅನುಭವಕ್ಕೆ ಬರಲಿದೆ.

ಸಿಂಹ: ಭೌತಶಾಸ್ತ್ರದ ಸಂಶೋಧನೆಯಲ್ಲಿ ತೊಡಗಿರುವವರಿಗೆ ಉತ್ತಮ ಫಲಿತಾಂಶಗಳು ದೊರೆಯಲಿವೆ. ಸಂಜೆ ವೇಳೆಯಲ್ಲಿ ವಾಯುವಿಹಾರ ಮಾಡಿದರೆ ಮನಸ್ಸು ಹಗುರಾಗಿ, ಉತ್ಸಾಹ ಇಮ್ಮಡಿಯಾಗಲಿದೆ.

ಕನ್ಯಾ: ಗುತ್ತಿಗೆದಾರರು, ಮರ–ಮಟ್ಟು ಹಾಗೂ ಕಲ್ಲಿನ ವ್ಯಾಪಾರಿಗಳಿಗೆ ಬಂಡವಾಳದ ದುಪ್ಪಟ್ಟು ಆದಾಯ ಸಿಗುವ ಸಾಧ್ಯತೆ ಇದೆ. ರಾಜಕೀಯ ವ್ಯಕ್ತಿಗಳು ಜನರೊಂದಿಗೆ ಬೆರೆಯುವುದು ಉತ್ತಮ.

ತುಲಾ: ಪರಿಸ್ಥಿತಿಯು ಕಿರಿಕಿರಿ ಉಂಟುಮಾಡಿದರೂ, ಫಲಿತಾಂಶ ಸಕಾರಾತ್ಮಕವಾಗಿಯೇ ಇರುವುದು. ವ್ಯವಹಾರದಲ್ಲಿ ಮೋಸ ಹೋಗುವ ಸಂಭವವಿದ್ದು, ಹೆಚ್ಚಿನ ಜಾಗ್ರತೆ ವಹಿಸಿ.

ವೃಶ್ಚಿಕ: ಬದುಕಿನಲ್ಲಿ ಹೊಸ ವ್ಯಕ್ತಿಯ ಪ್ರವೇಶವಾಗಲಿದ್ದು, ಅವರಿಂದ ಅನಿರೀಕ್ಷಿತ ರೀತಿಯಲ್ಲಿ ಸಹಕಾರ ಸಿಗಲಿದೆ. ಗುರಿ ಈಡೇರಿಕೆಗೆ ಮಾಡಿದ ಪ್ರಯತ್ನಗಳು ನಿಧಾನವಾಗಿಯಾದರೂ ಸಿದ್ಧಿಸಲಿವೆ.

ಧನು: ಕಾರ್ಯಕ್ಷೇತ್ರದಲ್ಲಿ ಸಕ್ರಿಯರಾಗಿ ಮುನ್ನುಗ್ಗಿ. ದುಡಿಮೆಯಿಂದ ಹೆಚ್ಚಿನ ಆದಾಯ ಉಂಟಾಗಲಿದ್ದು, ಆರ್ಥಿಕವಾಗಿ ಅಭಿವೃದ್ಧಿ ಹೊಂದುವಿರಿ. ವಾಣಿಜ್ಯೋದ್ಯಮಿಗಳಿಗೆ ವಿಶೇಷ ದಿನ.

ಮಕರ: ಕೆಲಸದಲ್ಲಿ ಬದಲಾವಣೆ ಕಾಣಲಿದ್ದೀರಿ ಹಾಗೂ ಜೀವನ ಶೈಲಿಯೂ ಕೊಂಚ ಬದಲಾಗಲಿದೆ. ಹಣದ ಮೇಲಿನ ವ್ಯಾಮೋಹವು ಪಶ್ಚಾತ್ತಾಪಕ್ಕೆ ದಾರಿಯಾಗದಂತೆ ಜಾಗ್ರತೆ ವಹಿಸಿ.

ಕುಂಭ: ಪ್ರತಿದಿನ ಅಲ್ಪ ಸಂಪತ್ತನ್ನಾದರೂ ಉಳಿತಾಯ ಮಾಡುವುದನ್ನು ರೂಢಿಸಿಕೊಳ್ಳಿ. ಗುರಿಯತ್ತ ಸಾಗುವ ಬಗ್ಗೆ ಗೊಂದಲಗಳು ನಿವಾರಣೆಯಾಗಲಿವೆ. ಆಪ್ತರ ಕಷ್ಟಗಳಿಗೆ ನೆರವಾಗುವುದು ಒಳ್ಳೆಯದು.

ಮೀನ: ನೆರೆಹೊರೆಯವರ ವೈಷಮ್ಯಗಳು ಅನುಭವಕ್ಕೆ ಬರಲಿವೆ. ಮನೆ ಜಾಗದ ಪಾಲುದಾರಿಕೆ ವಿಷಯದಲ್ಲಿ ಕೆಲವೊಂದು ಬದಲಾವಣೆ ಮಾಡಿಕೊಳ್ಳಬೇಕಾದ ಪರಿಸ್ಥಿತಿ ಬರುವುದು. ಸಂಬಂಧಿಕರಿಂದ ಸಂತಸದ ಸುದ್ದಿ ಬರಲಿದೆ.

ಪದಬಂಧ 6047

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಜರಿಯದೇ ವಹಿಸಿಕೊಂಡಿರುವ ಹೊಣೆಗಾರಿಕೆ (4)
5.ಜಲ ತರುವಾಗಿನ ತೊಡಕು (3)
6.ವೇದೋಕ್ತ ವಿಧಿಗಳನ್ನು ಮಾಡಿಸುವವ (4)
8.ನಲ್ಮೆಯಿಲ್ಲಿ ವಿರಳವಾಗಿ ಬಂದಿದೆ (3)
10.ಕಾಳನ್ನು ಸಂಗ್ರಹಿಸುವಾಗ ನಡೆದ ಯುದ್ಧ (3)
11.ಬೆಂದಕ್ಕಿ ಕಾಳು (3)
12.ಬೆಳ್ಳುಳ್ಳಿಯನ್ನು ಹೀಗೂ ಹೇಳುವರು (3)
14.ಕತ್ತು ಕೊನೆಗಿದ್ದಾಗ ಗೊತ್ತಾಗಿದ್ದು ವಾಸ್ತವ ಸುದ್ದಿ (4)
16.ನನಸಲ್ಲ.. ಇದು ಸ್ವಪ್ನ! (3)
17.ಸೂಕ್ಷ್ಮವಾದ ಎಳೆಯಿದು (4)

ಮೇಲಿಂದ ಕೆಳಕ್ಕೆ
1.ಮಾನವುಳ್ಳ ಒಡೆಯ (4)
2.ಜಟಿಲತೆಯಿಂದ ಸಂಗ್ರಹಿಸಿದ ನೀರು (2)
3.ಪುರಿಯೊಳಗಡಗಿರುವ ಶತ್ರು (2)
4.ಬಹಿರಂಗದ ವಿರುದ್ಧ ಪದ (4)
9.ಮಸ್ತಿಷ್ಕ ಇಲ್ಲಿದೆ (3)
10.ಕಾಲದಲ್ಲಿಯೇ ಕಾಣಿಸಿಕೊಂಡಿರುವ ಇನಿಯ! (3)
11.ಏಟು ಬೀಳದುದು (4)
13.ಅದೇ ತಾನೆ ಅರಳಿದ ಹೂವು (4)
15.ಮೂಗಿನ ಆಭರಣವು ಉಲ್ಟಾ ಪಲ್ಟಾ ಕಾಣುತ್ತಿದೆ (2)
16.ಮುಖ್ಯ ಬೆಳೆಯ ನಡುವೆ ಬೆಳೆಯುವ ಹುಲ್ಲು (2)



6046ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಹವಾಸ 3.ಚಿರಸ್ಥಾಯಿ
4.ಮೀಸಲು 5.ಅಪರೂಪ
7.ಕಣ್ಣೀರು 9.ದವಸ
10.ಜನಾನಾ 11.ಬಿಕ್ಕಲಂ
13.ಮರಕತ 14.ಗವಾಕ್ಷಿ
15.ತಾರುಮಾರು 16.ಕಮಂಡಲು

ಮೇಲಿಂದ ಕೆಳಕ್ಕೆ:
2.ಸಮೀಪ 3.ಚಿಲುಕ
6.ಪರಾವಲಂಬಿ 8.ರುದ್ರನಾಟಕ
12.ಲಂಗರು 13.ಮಕ್ಷಿಕ

ಸುಡೊಕು 6431

			3		8		2	
8		6				5		
	5		4		6		7	
			1		2		4	
		9		3				
6			8		9	2		5
	8		6		1		9	
7		2		8		3		1
	6		2		3		5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6430 ಸುಡೊಕು

2	9	4	1	5	6	7	8	3
6	1	7	3	8	4	5	2	9
8	5	3	7	2	9	4	1	6
3	2	9	5	4	1	6	7	8
7	6	8	2	9	3	1	4	5
5	4	1	6	7	8	9	3	2
1	7	6	8	3	5	2	9	4
4	3	5	9	1	2	8	6	7
9	8	2	4	6	7	3	5	1

ತೆಂಗು ಬೆಳೆಗೆ ರೋಗ ಬಾಧೆ: ಕುಸಿದ ಉತ್ಪಾದನೆ

ಎಳನೀರಿಗೆ ದಾಖಲೆ ಧಾರಣೆ

• ಎಂ.ಆರ್. ಅಶೋಕ್ ಕುಮಾರ್

ಮದ್ದೂರು (ಮಂಡ್ಯ ಜಿಲ್ಲೆ): ಬೇಸಿಗೆಯ ತಾಪ ಹೆಚ್ಚಾಗುತ್ತಿದ್ದಂತೆಯೇ ಎಳನೀರಿನ ದರವೂ ದಾಖಲೆ ಮಟ್ಟಕ್ಕೆ ಏರಿಕೆ ಕಂಡಿದೆ.

ಏಷ್ಯಾದಲ್ಲಿಯೇ ಅತಿದೊಡ್ಡ ಎಳನೀರು ಮಾರುಕಟ್ಟೆಯೆಂದೇ ಹೆಸರಾಗಿರುವ ಮದ್ದೂರಿನ ಎಳನೀರು ಎಪಿಎಂಸಿ ಮಾರುಕಟ್ಟೆಯಲ್ಲಿ ವರ್ತಕರು, ರೈತರಿಂದ ಎಳನೀರು ಒಂದಕ್ಕೆ ₹55ರಿಂದ ₹60 ನೀಡಿ ಖರೀದಿಸುತ್ತಿದ್ದಾರೆ.

ಸಾಮಾನ್ಯವಾಗಿ ಪ್ರತಿವರ್ಷದ ಮಾರ್ಚ್‌ನಿಂದ ಮೇವರೆಗೆ ಇಲ್ಲಿನ ಎಳನೀರಿಗೆ ಬೇಡಿಕೆ ಹೆಚ್ಚಾಗಿರುತ್ತದೆ. ಆದರೆ, ಕಳೆದೆರಡು ವರ್ಷಗಳಿಂದ ಮಳೆಯ ಪ್ರಮಾಣ ಕಡಿಮೆ ಆಗಿರುವುದರಿಂದ ತೆಂಗು ಬೆಳೆಗೆ ಈ ಭಾಗದಲ್ಲಿ ಕಪ್ಪು ತಲೆಹುಳು ಹಾಗೂ ನುಸಿ ಪೀಡೆ ರೋಗದ ಕಾಟ ಹೆಚ್ಚಾಗಿದೆ. ಇದರಿಂದ ಎಳನೀರಿನ ಉತ್ಪಾದನೆ ಕಡಿಮೆಯಾಗಿದ್ದು, ದರ ಏರಿಕೆಯಾಗಿದೆ ಎಂದು ವರ್ತಕರು ಹೇಳುತ್ತಾರೆ.

'2023ರಲ್ಲಿ (ಮೇ ತಿಂಗಳ ಅಂತ್ಯದವರೆಗೆ) ಮಾರುಕಟ್ಟೆಗೆ 10.95 ಕೋಟಿ ಎಳನೀರು, 2024ರಲ್ಲಿ 9.62 ಕೋಟಿ ಎಳನೀರು, ಪ್ರಸಕ್ತ ವರ್ಷದಲ್ಲಿ ಇದುವರೆಗೆ 9.94 ಕೋಟಿ ಎಳನೀರು ತೆಂಗು ಬೆಳೆಗಾರರಿಂದ ಪೂರೈಕೆಯಾಗಿದೆ' ಎಂದು ಎಳನೀರು ಮಾರುಕಟ್ಟೆಯ ಆಡಳಿತಾಧಿಕಾರಿ ಹಾಗೂ ಹೆಚ್ಚುವರಿ ನಿರ್ದೇಶಕ ಮಂಜುನಾಥ್ ಮಾಹಿತಿ ನೀಡಿದರು.

'ಕಳೆದ ವರ್ಷ ಸಾಧಾರಣ ಎಳನೀರು ಒಂದಕ್ಕೆ ₹20ರಿಂದ ₹25, ಮಧ್ಯಮ ಗುಣಮಟ್ಟ ಹಾಗೂ ದಪ್ಪ ಎಳನೀರು ₹30ರಿಂದ ₹35 ಹಾಗೂ ಉತ್ತಮ ಗುಣಮಟ್ಟದ ಎಳನೀರಿಗೆ ₹40ರಿಂದ ₹45 ದರವಿತ್ತು. ಈ ವರ್ಷ ಸಾಧಾರಣ ಗುಣಮಟ್ಟದ ಒಂದು ಎಳನೀರಿಗೆ ₹30 ರಿಂದ ₹35, ಮಧ್ಯಮ ಎಳನೀರು ₹40ರಿಂದ ₹45 ಹಾಗೂ ಉತ್ತಮ ಗುಣಮಟ್ಟದ ಎಳನೀರು ದರ ₹55 ರಿಂದ ₹60ಕ್ಕೆ ಏರಿಕೆಯಾಗುವುದರೊಂದಿಗೆ ಸಾರ್ವಕಾಲಿಕ ದಾಖಲೆ ಮಟ್ಟಕ್ಕೇರಿದೆ' ಎಂದು ಇಲ್ಲಿನ ಮಾರುಕಟ್ಟೆಯ ವರ್ತಕರ ಸಂಘದ ಉಪಾಧ್ಯಕ್ಷ ಉಮೇಶ ತಿಳಿಸಿದರು.

ಇಲ್ಲಿನ ಎಳನೀರು ಪ್ರಮುಖವಾಗಿ ಮಹಾರಾಷ್ಟ್ರ, ಮಧ್ಯಪ್ರದೇಶ, ದೆಹಲಿ, ಜಮ್ಮು ಮತ್ತು ಕಾಶ್ಮೀರ, ಆಂಧ್ರಪ್ರದೇಶ, ಪಂಜಾಬ್, ಉತ್ತರ ಪ್ರದೇಶ, ತಮಿಳುನಾಡು ಸೇರಿ ಹಲವಾರು ರಾಜ್ಯಗಳಿಗೆ ಪೂರೈಕೆಯಾಗುತ್ತದೆ. ಈ ಭಾಗದ ಎಳನೀರು ಅಲ್ಲಿ ಹೆಚ್ಚು ಬೇಡಿಕೆ ಹೊಂದಿದ್ದು, ಪ್ರತಿವರ್ಷ ಕೋಟ್ಯಂತರ ವಹಿವಾಟು ನಡೆಯುತ್ತಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹590
12 ಕ್ಕೆ	₹80
ಮೈಸೂರು	
100ಕ್ಕೆ	₹603

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹253-536
ದ್ವಿತಳಿ (ಬಿ.ವಿ)	₹322-686

ಎಫ್‌ಪಿಐ: ₹18,620 ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ದೇಶದಲ್ಲಿ ಚಿಲ್ಲರೆ ಹಣದುಬ್ಬರದ ಇಳಿಕೆ ಮತ್ತು ಆರ್ಥಿಕತೆಯು ವೇಗ ಪಡೆದಿರುವುದರಿಂದ ಈಕ್ವಿಟಿ ಮಾರುಕಟ್ಟೆಯಲ್ಲಿ ವಿದೇಶಿ ಬಂಡವಾಳದ ಒಳಹರಿವಿನ ಪ್ರಮಾಣ ಹೆಚ್ಚಿದೆ.

ಮೇ ತಿಂಗಳಿನಲ್ಲಿ ಇಲ್ಲಿಯವರೆಗೆ ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ₹18,620 ಕೋಟಿ ಹೂಡಿಕೆ ಮಾಡಿದ್ದಾರೆ.

ವಿದೇಶಿ ಹೂಡಿಕೆದಾರರಿಂದ ಷೇರುಗಳ ಖರೀದಿ ಮುಂದುವರಿಯುವ ನಿರೀಕ್ಷೆಯಿದೆ. ಇದು ಲಾರ್ಜ್‌ಕ್ಯಾಪ್ ಸೂಚ್ಯಂಕವು ಚೇತರಿಕೆ ಕಾಣಲು ನೆರವಾಗಲಿದೆ ಎಂದು ಜಿಯೊಜಿತ್ ಇನ್ವೆಸ್ಟ್‌ಮೆಂಟ್ಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯ್‌ಕುಮಾರ್ ಹೇಳಿದ್ದಾರೆ.

ಪಿಪಿಎಫ್–ಎಫ್‌ಡಿ: ಯಾವುದು ಸೂಕ್ತ?

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ಹೂಡಿಕೆ ಪೋರ್ಟ್‌ಫೋಲಿಯೊ ಅಂತ ಬಂದಾಗ ಹೆಚ್ಚು ರಿಸ್ಕ್ ಇರುವ ಹೂಡಿಕೆಗಳು ಮತ್ತು ಸುರಕ್ಷಿತ ಹೂಡಿಕೆಗಳ ಮಿಶ್ರಣ ಇರಬೇಕು. ರಿಸ್ಕ್ ರಹಿತ ಹೂಡಿಕೆಗಳು ಅಂತ ನೋಡಿದಾಗ ಪಿಪಿಎಫ್ ಮತ್ತು ನಿಶ್ಚಿತ ಠೇವಣಿ (ಫಿಕ್ಸೆಡ್ ಡೆಪಾಸಿಟ್) ವಿಚಾರ ಇಲ್ಲಿ ಬಂದೇ ಬರುತ್ತದೆ. ಈ ಎರಡೂ ಹೂಡಿಕೆಗಳು ಹಣ ತೊಡಗಿಸಿದವರಿಗೆ ನಿಶ್ಚಿತ ಆದಾಯವನ್ನು ತಂದುಕೊಡುತ್ತವೆ.

ಆದರೆ, ಅನೇಕರಿಗೆ ಹೂಡಿಕೆ ಮಾಡಲು ನಿಶ್ಚಿತ ಠೇವಣಿ ಉತ್ತಮವೋ ಅಥವಾ ಪಿಪಿಎಫ್ ಪರಿಗಣಿಸುವುದು ಒಳಿತೋ ಎಂಬ ಪ್ರಶ್ನೆ ಎದುರಾಗುತ್ತದೆ. ಬನ್ನಿ, ಇವೆರಡರ ಪೈಕಿ ನಿಮಗೆ ಒಪ್ಪುವ ಆಯ್ಕೆ ಯಾವುದು ಎಂಬುದನ್ನು ವಿವರವಾಗಿ ನೋಡೋಣ.

ಬಡ್ಡಿ ಲಾಭ: ಪಿಪಿಎಫ್ ಹೂಡಿಕೆಗೆ ಸದ್ಯದ ಬಡ್ಡಿದರ ಶೇ 7.1ರಷ್ಟು ಇದೆ. ಆದರೆ, ಬ್ಯಾಂಕ್ ನಿಶ್ಚಿತ ಠೇವಣಿಯ ಬಡ್ಡಿದರ ಶೇ 6.7ರಿಂದ ಶೇ 8ರ ವರೆಗೂ ಇದೆ. ಬಡ್ಡಿ ಲಾಭ ಅಂತ ಬಂದಾಗ ಹೆಚ್ಚು ಕಡಿಮೆ ಪಿಪಿಎಫ್‌ನಷ್ಟೇ ಅಥವಾ ಅದಕ್ಕಿಂತ ಕೊಂಚ ಹೆಚ್ಚಿನ ಬಡ್ಡಿ ಗಳಿಕೆಯನ್ನು ನಿಶ್ಚಿತ ಠೇವಣಿಗಳು ನೀಡುತ್ತವೆ.

ತೆರಿಗೆ ಅನುಕೂಲ: ಹಳೆಯ ತೆರಿಗೆ ಪದ್ಧತಿಯಲ್ಲಿ ಪಿಪಿಎಫ್‌ನಲ್ಲಿನ ಹೂಡಿಕೆಗೆ ಆದಾಯ ತೆರಿಗೆ ಸೆಕ್ಷನ್ 80ಸಿ ಅಡಿ ತೆರಿಗೆ ವಿನಾಯಿತಿ ಸಿಗುತ್ತದೆ. ಅಲ್ಲದೆ, ಪಿಪಿಎಫ್ ಹೂಡಿಕೆ ಮೆಚ್ಯೂರಿಟಿಗೆ ಬಂದಾಗ ಬಡ್ಡಿ ಗಳಿಕೆ ಮೇಲೆ ಯಾವುದೇ ತೆರಿಗೆ ಕಟ್ಟಬೇಕಿಲ್ಲ. ಈ ನಿಯಮ ಹಳೆಯ ಮತ್ತು ಹೊಸ ತೆರಿಗೆ ಪದ್ಧತಿಯಲ್ಲಿ ಇರುವವರಿಗೆ ಅನ್ವಯಿಸುತ್ತದೆ. ನಿಶ್ಚಿತ ಠೇವಣಿಯಲ್ಲಿನ ಬಡ್ಡಿ ಗಳಿಕೆಗೆ ನಿಮ್ಮ ಆದಾಯ ತೆರಿಗೆ ಸ್ಲ್ಯಾಬ್‌ಗೆ ಅನುಗುಣವಾಗಿ ತೆರಿಗೆ ಕಟ್ಟಬೇಕಾಗುತ್ತದೆ. ತೆರಿಗೆ ಅಂತ ಬಂದಾಗ ಪಿಪಿಎಫ್ ಹೆಚ್ಚು ಅನುಕೂಲ ಒದಗಿಸುತ್ತದೆ.

ಲಾಕಿನ್ ಅವಧಿ: ಪಿಪಿಎಫ್‌ನಲ್ಲಿ ಖಾತೆ ಆರಂಭಿಸಿದ ದಿನದಿಂದ 15 ವರ್ಷಗಳ ಲಾಕಿನ್ ಅವಧಿ ಇರುತ್ತದೆ. ಆದರೆ, ನಿಶ್ಚಿತ ಠೇವಣಿಯಲ್ಲಿ ನಿಮಗೆ ಎಷ್ಟು ವರ್ಷಕ್ಕೆ ಅಗತ್ಯವೋ ಅಷ್ಟು ವರ್ಷಕ್ಕೆ ಡೆಪಾಸಿಟ್ ಮಾಡಲು ಅವಕಾಶ ಇರುತ್ತದೆ. ಒಂದೊಮ್ಮೆ ತುರ್ತಾಗಿ ಹಣದ ಅಗತ್ಯವಿದೆ ಎಂದಾದರೆ ನಗದೀಕರಣ ಸುಲಭ. ಫಿಕ್ಸೆಡ್ ಡೆಪಾಸಿಟ್ ಮುರಿದು ಹಣ ತೆಗೆದುಕೊಳ್ಳಬಹುದು. ಕೆಲ ವರ್ಷಗಳ ನಂತರ ನಿಮಗೆ ಹೂಡಿಕೆ ಮಾಡಿದ ಹಣದ ಅಗತ್ಯವಿದೆ ಎಂದಾದರೆ ಪಿಪಿಎಫ್ ಹೂಡಿಕೆ ನಿಮಗೆ ಒಪ್ಪುವುದಿಲ್ಲ. 15 ವರ್ಷದ ವರೆಗೆ ಹೂಡುತ್ತೇವೆ ಎನ್ನುವವರಿಗೆ ಮಾತ್ರ ಪಿಪಿಎಫ್ ಒಂದು ಉತ್ತಮ ಸುರಕ್ಷಿತ ಹೂಡಿಕೆಯ ಆಯ್ಕೆಯಾಗಿದೆ.

ಕನಿಷ್ಠ ಮತ್ತು ಗರಿಷ್ಠ ಹೂಡಿಕೆ: ಪಿಪಿಎಫ್‌ನಲ್ಲಿ ಒಂದು ವರ್ಷಕ್ಕೆ ಕನಿಷ್ಠ ₹500 ಹಾಗೂ ಗರಿಷ್ಠ ₹1.5 ಲಕ್ಷ ವರೆಗೆ ಹೂಡಿಕೆ ಮಾಡಬಹುದು. ಆದರೆ, ನಿಶ್ಚಿತ ಠೇವಣಿಯಲ್ಲಿ ಇಂತಹ ಯಾವುದೇ ಮಿತಿಗಳಿಲ್ಲ. ನಿಮ್ಮ ಅನುಕೂಲಕ್ಕೆ ತಕ್ಕಂತೆ ನಿಶ್ಚಿತ ಠೇವಣಿ ಮೊತ್ತವನ್ನು ಪರಿಗಣಿಸಬಹುದು.

ಒಂದು ಕೋಟಿ, ಎರಡು ಕೋಟಿ ಅಥವಾ ಅದಕ್ಕಿಂತ ಹೆಚ್ಚು ಹೂಡಿಕೆ ಮಾಡಬೇಕು ಎಂದರೂ ಫಿಕ್ಸೆಡ್‌ನಲ್ಲಿ ಸಾಧ್ಯವಿದೆ. ನಿಮ್ಮ ಬಳಿ ಹೂಡಿಕೆಗೆ ದೊಡ್ಡ ಮೊತ್ತವಿದ್ದರೆ ಪಿಪಿಎಫ್‌ಗಿಂತ ಫಿಕ್ಸೆಡ್ ಸರಿ ಹೊಂದುತ್ತದೆ. ಅಗತ್ಯ ಎನಿಸಿದರೆ ಎರಡರಲ್ಲೂ ಹೂಡಿಕೆಯನ್ನು ಪರಿಗಣಸಬಹುದಾಗಿದೆ.

(ಲೇಖಕಿ: ಚಾರ್ಟರ್ಡ್ ಅಕೌಂಟೆಂಟ್)

ಭರ್ಜರಿ ಜಿಗಿತ ಕಂಡ ಸೂಚ್ಯಂಕಗಳು

ಷೇರುಪೇಟೆ

ಮೇ 16ಕ್ಕೆ ಕೊನೆಗೊಂಡ ವಾರದಲ್ಲಿ ಷೇರು ಸೂಚ್ಯಂಕಗಳು ಉತ್ತಮ ಗಳಿಕೆ ದಾಖಲಿಸಿವೆ. 82,330 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 3.62ರಷ್ಟು ಗಳಿಸಿಕೊಂಡಿದೆ. 25,019 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 4.21ರಷ್ಟು ಜಿಗಿದಿದೆ. ನಿಫ್ಟಿ ಮಿಡ್‌ಕ್ಯಾಪ್ ಸೂಚ್ಯಂಕ ಶೇ 7.21ರಷ್ಟು ಗಳಿಸಿಕೊಂಡಿದ್ದರೆ, ಸ್ಮಾಲ್‌ಕ್ಯಾಪ್ ಸೂಚ್ಯಂಕ ಭರ್ಜರಿ ಶೇ 9.17ರಷ್ಟು ಹೆಚ್ಚಳ ದಾಖಲಿಸಿದೆ.

ವಿದೇಶಿ ಮತ್ತು ದೇಶೀಯ ಸಾಂಸ್ಥಿಕ ಹೂಡಿಕೆದಾರರಿಂದ ಖರೀದಿ ಉತ್ಸಾಹ, ಕಚ್ಚಾ ತೈಲ ಬೆಲೆ ಇಳಿಕೆ, ತಗ್ಗುತ್ತಿರುವ ಹಣದುಬ್ಬರ, ಮತ್ತಷ್ಟು ಬಡ್ಡಿದರ ಇಳಿಕೆಯಾಗಲಿದೆ ಎಂಬ ವಿಶ್ವಾಸ, ಅಮೆರಿಕ–ಚೀನಾ ಮತ್ತು ಭಾರತ–ಅಮೆರಿಕ ನಡುವಿನ ವ್ಯಾಪಾರ ಸಂಬಂಧ ಸುಧಾರಿಸಲಿದೆ ಎಂಬ ಆಶಾಭಾವ ಸೇರಿ ಹಲವು ಅಂಶಗಳು ಮಾರುಕಟ್ಟೆಯ ಸಕಾರಾತ್ಮಕತೆಗೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ವಾರದ ಗಳಿಕೆ ನೋಡಿದಾಗ ನಿಫ್ಟಿ ಡಿಫೆನ್ಸ್ ಶೇ 11, ರಿಯಲ್ ಎಸ್ಟೇಟ್ ಶೇ 10.78, ಲೋಹ ಶೇ 9.28, ಎನರ್ಜಿ ಶೇ 6.98, ಆಟೊ ಶೇ 5.86, ಐಟಿ ಶೇ 5.83, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 5.78, ಫೈನಾನ್ಸ್ ಶೇ 3.81, ಸರ್ವೀಸ್ ಶೇ 3.73, ನಿಫ್ಟಿ ಬ್ಯಾಂಕ್ ಶೇ 3.28, ಫಾರ್ಮಾ ಶೇ 2.66 ಮತ್ತು ಎಫ್‌ಎಂಸಿಜಿ ಶೇ 2.57ರಷ್ಟು ಗಳಿಸಿಕೊಂಡಿವೆ.

ಏರಿಕೆ–ಇಳಿಕೆ: ವಾರದ ಲೆಕ್ಕಾಚಾರದಲ್ಲಿ ನೋಡಿದಾಗ ನಿಫ್ಟಿಯಲ್ಲಿ ಭಾರತ್ ಎಲೆಕ್ಟ್ರಾನಿಕ್ಸ್ ಶೇ 15.25, ಅದಾನಿ ಎಂಟರ್‌ಪ್ರೈಸಸ್ ಶೇ 13.48, ಹೀರೊ ಮೋಟೊಕಾರ್ಪ್ ಶೇ 12.6, ಜಿಯೊ ಫೈನಾನ್ಶಿಯಲ್ ಶೇ 11.53, ಶ್ರೀರಾಮ್ ಫೈನಾನ್ಸ್ ಶೇ 10.67, ಬಜಾಜ್ ಆಟೊ ಶೇ 10.46, ಟಾಟಾ ಸ್ಟೀಲ್ ಶೇ 10.3, ಟ್ರೆಂಟ್ ಶೇ 9.27, ಐಷರ್ ಲಿಮಿಟೆಡ್ ಶೇ 8.28, ಟೆಕ್ ಮಹೀಂದ್ರ ಶೇ 8.23, ಅದಾನಿ ಪೋರ್ಟ್ಸ್ ಶೇ 7.63 ಮತ್ತು ಜೆಎಸ್‌ಡಬ್ಲ್ಯು ಸ್ಟೀಲ್ ಶೇ 7.04ರಷ್ಟು ಗಳಿಸಿಕೊಂಡಿವೆ.

'ಇಂಡಸ್‌ಇಂಡ್ ಬ್ಯಾಂಕ್ ಶೇ 4.31, ಏರ್‌ಟೆಲ್ ಶೇ 1.93, ಸನ್ ಫಾರ್ಮಾ ಶೇ 0.66 ಕೋಟಕ್ ಮಹೀಂದ್ರ ಬ್ಯಾಂಕ್ ಶೇ 0.1ರಷ್ಟು ಕುಸಿದಿವೆ.

ಮುನ್ನೋಟ: ಈ ವಾರ ಪವರ್ ಗ್ರಿಡ್, ಡಿಎಲ್‌ಎಫ್, ಭಾರತ್ ಎಲೆಕ್ಟ್ರಾನಿಕ್ಸ್, ಕರೂರ್ ವೈಶ್ಯ ಬ್ಯಾಂಕ್, ಜೆ.ಕೆ. ಪೇಪರ್, ಡಾಬರ್, ಟೊರೆಂಟ್ ಪವರ್, ಕಾವೇರಿ ಸೀಡ್ ಕಂಪನಿ, ಗುಜರಾತ್ ಗ್ಯಾಸ್, ರೈಟ್ಸ್, ಯುನೈಟೆಡ್ ಸ್ಪಿರಿಟ್ಸ್, ಹಿಂಡಾಲ್ಕೊ ಇಂಡಸ್ಟ್ರೀಸ್, ಫೋರ್ಟಿಸ್ ಹೆಲ್ತ್‌ಕೇರ್, ಎನ್‌ಎಂಡಿಸಿ, ಏಷ್ಯನ್ ಪೇಂಟ್ಸ್, ಐಷರ್, ಎನ್‌ಟಿಪಿಸಿ, ರೈಲ್ ವಿಕಾಸ್ ನಿಗಮ್, ಬಿಇಎಂಎಲ್, ಸುವೆನ್ ಫಾರ್ಮಾ, ಐಟಿಸಿ, ಸನ್ ಫಾರ್ಮಾ, ಅಶೋಕ್ ಲೇಲ್ಯಾಂಡ್, ಜೆಎಸ್‌ಡಬ್ಲ್ಯು ಸ್ಟೀಲ್, ಜೆಕೆ ಸಿಮೆಂಟ್, ಇಂಡಿಗೊ ಪೇಂಟ್ಸ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ವರದಿ ಪ್ರಕಟಿಸುತ್ತಿವೆ. ಉಳಿದಂತೆ ಜಾಗತಿಕ ವಿದ್ಯಮಾನಗಳು ಹಾಗೂ ದೇಶೀಯ ಬೆಳವಣಿಗೆಗಳು ಷೇರುಪೇಟೆಯ ಮೇಲೆ ಪರಿಣಾಮ ಬೀರಲಿವೆ.

EDUCATION CORNER

ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ
ಸರಕಾರದ ಅಂಗೀಕೃತ ಕಂಪ್ಯೂಟರ್, ವಿವಿಧ ಕೋರ್ಸುಗಳನ್ನು ನಡೆಸಲು ಸುವರ್ಣಾಕಾಶ
ಶಾಲೆ ಕಾಲೇಜುಗಳಲ್ಲಿ ಖಾತರಿ ಉದ್ಯೋಗ ಕಲ್ಪಿಸುವ 1 ವರುಷದ
ನರ್ಸರಿ ಟೀಚರ್ಸ್ ಟ್ರೈನಿಂಗ್ ಕೋರ್ಸ್
Diploma in Computer Teachers Training Course
DIPLOMA IN COMPUTER DATA ENTRY OPERATOR
6 ತಿಂಗಳ DIT, DCA, DOA ಇತ್ಯಾದಿ ಕೋರ್ಸುಗಳು [Qual: SSLC/PUC]
ಸರಕಾರದ PM ವಿಶ್ವಕರ್ಮ ಹಾಗೂ ವಿವಿಧ ಕೌಶಲ್ಯ ಯೋಜನೆಯ ಪಾಲುದಾರಿಕಾ ಸಂಸ್ಥೆ
ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ
Empanelled & Recognised by Govt. of India & Karnataka
The RCSS
Mob. 9008419955, 9901520055, 9449198555
Email: info@thercss.co, Web: www.thercss.com

ಖೈಬರ್ ಪಖ್ತುಂಕ್ವಾ ಉಗ್ರರಿಂದ 284 ದಾಳಿ

ಪೇಶಾವರ (ಪಿಟಿಐ): ಪಾಕಿಸ್ತಾನದ ಖೈಬರ್ ಪಖ್ತುಂಕ್ವಾ ಪ್ರಾಂತ್ಯದಲ್ಲಿ ಪ್ರಸಕ್ತ ವರ್ಷದಲ್ಲಿ ಭಯೋತ್ಪಾದನೆಗೆ ಸಂಬಂಧಿಸಿದ ಒಟ್ಟು 284 ದಾಳಿಗಳು ನಡೆದಿವೆ ಎಂದು ಅಧಿಕೃತ ವರದಿ ಭಾನುವಾರ ತಿಳಿಸಿದೆ.

ಇದರಲ್ಲಿ ಅತಿ ಹೆಚ್ಚು ಅಂದರೆ ಉತ್ತರ ವಜೀರಿಸ್ತಾನ್‌ನಲ್ಲಿ 53, ಬನ್ನುದಲ್ಲಿ 35, ದೇರಾ ಇಸ್ಮಾಯಿಲ್ ಖಾನ್ 31, ಪೇಶಾವರದಲ್ಲಿ 13 ಹಾಗೂ ಕುರ್ರಂ ಜಿಲ್ಲೆಯಲ್ಲಿ 8 ಪ್ರಕರಣಗಳು ನಡೆದಿವೆ ಎಂದು ಭಯೋತ್ಪಾದನೆ ನಿಗ್ರಹ ಇಲಾಖೆ ತಿಳಿಸಿದೆ. ದೇರಾ ಇಸ್ಮಾಯಿಲ್ ಖಾನ್‌ನಲ್ಲಿ 67 ಉಗ್ರರು ಸೇರಿದಂತೆ, ಖೈಬರ್ ಪಖ್ತುಂಕ್ವಾ ಪ್ರಾಂತ್ಯದಲ್ಲಿ ಈ ವರ್ಷದಲ್ಲಿ 148 ಉಗ್ರರನ್ನು ಹತ್ಯೆ ಮಾಡಲಾಗಿದೆ. ಭಯೋತ್ಪಾದನೆಗೆ ಸಂಬಂಧಿಸಿದ ಪ್ರಕರಣಗಳಲ್ಲಿ 1,116 ಶಂಕಿತರನ್ನು ಗುರುತಿಸಿದ್ದು, 95 ಜನರನ್ನು ಬಂಧಿಸಲಾಗಿದೆ.

ಪ್ಯಾಕ್ಸ್ ದಿವಾಳಿ ತಡೆಗೆ ಶೀಘ್ರ ಹೊಸ ನೀತಿ ಜಾರಿ: ಅಮಿತ್ ಶಾ

2029ರೊಳಗೆ 2 ಲಕ್ಷ ಹೊಸ ಸಂಘ ಸ್ಥಾಪನೆ

ಅಹಮದಾಬಾದ್ (ಪಿಟಿಐ): ನೋಂದಾಯಿತ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು (ಪ್ಯಾಕ್ಸ್) ಆರ್ಥಿಕ ಸಂಕಷ್ಟದ ಸುಳಿಗೆ ಸಿಲುಕುವುದನ್ನು ತಡೆಯಲು ಸರ್ಕಾರ ಕ್ರಮ ಕೈಗೊಂಡಿದೆ ಎಂದು ಕೇಂದ್ರ ಸಹಕಾರ ಸಚಿವ ಅಮಿತ್ ಶಾ ತಿಳಿಸಿದ್ದಾರೆ.

ಅಮಿತ್ ಶಾ

ಭಾನುವಾರ ನಡೆದ ಸಹಕಾರ ಮಹಾ ಸಮ್ಮೇಳನದಲ್ಲಿ ಮಾತನಾಡಿದ ಅವರು, ಪ್ಯಾಕ್ಸ್‌ಗಳು ಆರ್ಥಿಕವಾಗಿ ದಿವಾಳಿಯಾದರೆ ಆ ಸಮಸ್ಯೆಯ ತ್ವರಿತ ಇತ್ಯರ್ಥ ಹಾಗೂ ಅವುಗಳ ಸ್ಥಾನದಲ್ಲಿ ಹೊಸ ಪ್ಯಾಕ್ಸ್‌ಗಳ ನೋಂದಣಿಗೆ ಸಂಬಂಧಿಸಿದಂತೆ ಸರ್ಕಾರವು ಶೀಘ್ರವೇ ಹೊಸ ನೀತಿಯನ್ನು ಅನುಷ್ಠಾನಗೊಳಿಸಲಿದೆ ಎಂದರು.

2029ರೊಳಗೆ ಹೊಸದಾಗಿ 2 ಲಕ್ಷ ಪ್ಯಾಕ್ಸ್ ಸ್ಥಾಪನೆಗೆ ಗುರಿ ಹೊಂದಲಾಗಿದೆ. ಈ ಸಂಘಗಳಿಗೆ 22 ಬಗೆಯ ವಹಿವಾಟು ನಡೆಸಲು ಅನುಕೂಲ ಕಲ್ಪಿಸಲಾಗುವುದು. ಇದರಿಂದ ನೋಂದಾಯಿತ ಸಂಘಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕುವುದು ತಪ್ಪಲಿದೆ. ಹೊಸ ನೀತಿಯಿಂದ ಮುಂದಿನ ದಿನಗಳಲ್ಲಿ ಯಾವುದೇ ಸಂಘವು ಆರ್ಥಿಕ ಸಂಕಷ್ಟಕ್ಕೆ ಸಿಲುಕುವುದಿಲ್ಲ ಎಂದು ಭರವಸೆ ನೀಡಿದರು.

ಹೈನುಗಾರಿಕೆ ವಲಯದ ಬಲವರ್ಧನೆಗೆ ಸರ್ಕಾರ ಬದ್ಧವಿದೆ. ಇದಕ್ಕೆ ಪೂರಕವಾಗಿ ಸಹಕಾರ ಕಂಪನಿಯೊಂದನ್ನು ಸ್ಥಾಪಿಸುವ ಗುರಿ ಹೊಂದಲಾಗಿದೆ. ಇದರ ಮೂಲಕ ಐಸ್ ಕ್ರೀಮ್, ಗಿಣ್ಣು, ಪನೀರ್ ತಯಾರಿಸಲಾಗುವುದು. ಇದರಿಂದ ಹೈನುಗಾರಿಕೆ ವಲಯದ ಆರ್ಥಿಕತೆಗೆ ಉತ್ತೇಜನ ಸಿಗಲಿದೆ ಎಂದು ಹೇಳಿದರು.

ದೇಶೀಯ ಜವಳಿ ವಲಯಕ್ಕೆ ಬಲ: ಜಿಟಿಆರ್‌ಐ

ಬಾಂಗ್ಲಾ ಸರಕುಗಳಿಗೆ ನಿರ್ಬಂಧ

ನವದೆಹಲಿ (ಪಿಟಿಐ): ಬಾಂಗ್ಲಾದೇಶದ ಕೆಲವು ನಿರ್ದಿಷ್ಟ ಸರಕುಗಳ ಆಮದಿನ ಮೇಲೆ ಕೇಂದ್ರ ಸರ್ಕಾರವು ನಿರ್ಬಂಧ ವಿಧಿಸಿದೆ. ಇದು ದೇಶೀಯ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳ (ಎಂಎಸ್‌ಎಂಇ) ಪ್ರಗತಿಗೆ ನೆರವಾಗಲಿದೆ ಎಂದು ಗ್ಲೋಬಲ್ ಟ್ರೇಡ್ ರಿಸರ್ಚ್ ಇನಿಷಿಯೇಟಿವ್ (ಜಿಟಿಆರ್‌ಐ) ಭಾನುವಾರ ಹೇಳಿದೆ.

ಒಟ್ಟು ₹6,590 ಕೋಟಿ ಮೌಲ್ಯದ ಸರಕುಗಳ ಮೇಲೆ ನಿರ್ಬಂಧ ವಿಧಿಸಲಾಗಿದೆ. ಉಭಯ ದೇಶಗಳ ದ್ವಿಪಕ್ಷೀಯ ಆಮದಿನ ಪೈಕಿ ಈ ಸರಕುಗಳ ಪಾಲು ಶೇ 42ರಷ್ಟಿದೆ. ಇದರಲ್ಲಿ ಪ್ರಮುಖವಾಗಿ ಸಿದ್ಧಉಡುಪು, ಸಂಸ್ಕರಿಸಿದ ಆಹಾರ, ಪ್ಲಾಸ್ಟಿಕ್ ಸೇರಿವೆ. ಆಯ್ದ ಸಮುದ್ರ ಮಾರ್ಗ ಅಥವಾ ಭೂ ಪ್ರದೇಶದಿಂದಲೂ ಇವುಗಳ ಆಮದಿಗೆ ನಿರ್ಬಂಧ ವಿಧಿಸಲಾಗಿದೆ.

ಇತ್ತೀಚೆಗೆ ಬಾಂಗ್ಲಾದೇಶವು ಭಾರತದಿಂದ ಪೂರೈಕೆಯಾಗುತ್ತಿದ್ದ ಹತ್ತಿ ನೂಲು, ಅಕ್ಕಿ, ಇತರೆ ಸರಕುಗಳಿಗೆ ನಿರ್ಬಂಧ ಹೇರಿತ್ತು. ಇದರ ಬೆನ್ನಲ್ಲೇ ಕೇಂದ್ರವು ಈ ನಿರ್ಧಾರ ಕೈಗೊಂಡಿದೆ.

ಬಾಂಗ್ಲಾದೇಶದ ರಫ್ತುದಾರರು ಚೀನಾದಿಂದ ಆಮದು ಮಾಡಿಕೊಳ್ಳುವ ಉಡುಪುಗಳಿಗೆ ಸುಂಕ ವಿನಾಯಿತಿ ಮತ್ತು ರಫ್ತು ಸಬ್ಸಿಡಿಯ ಪ್ರಯೋಜನ ಪಡೆಯುತ್ತಿದ್ದರು. ಇದರಿಂದ ಅವರಿಗೆ ಭಾರತದ ಮಾರುಕಟ್ಟೆಯಲ್ಲಿ ಶೇ 10ರಿಂದ ಶೇ 15ರಷ್ಟು ಲಾಭ ಸಿಗುತ್ತಿತ್ತು. ದೇಶದ ಜವಳಿ ಕಂಪನಿಗಳು ಬಾಂಗ್ಲಾದ ರಫ್ತುದಾರರಿಗೆ ಲಭಿಸುವ ಸ್ಪರ್ಧಾತ್ಮಕ ಪ್ರಯೋಜನದ ಬಗ್ಗೆ ಹಿಂದಿನಿಂದಲೂ ಪ್ರತಿಭಟಿಸುತ್ತಿದ್ದರು ಎಂದು ಜಿಟಿಆರ್‌ಐ ಹೇಳಿದೆ.

'ಸದ್ಯ ವಿಧಿಸಿರುವ ನಿರ್ಬಂಧವು ದೇಶದ ಜವಳಿ ವಲಯಕ್ಕೆ ಹೆಚ್ಚಿನ ಬಲ ನೀಡಲಿದೆ' ಎಂದು ಜಿಟಿಆರ್‌ಐ ಸಂಸ್ಥಾಪಕ ಅಜಯ್ ಶ್ರೀವಾಸ್ತವ ಹೇಳಿದ್ದಾರೆ.

'ಬಾಂಗ್ಲಾದ ಸರಕುಗಳಿಗೆ ನಿರ್ಬಂಧ ಹೇರುವಂತೆ ದೇಶೀಯ ರಫ್ತುದಾರರು ಸರ್ಕಾರಕ್ಕೆ ಒತ್ತಾಯಿಸುತ್ತಿದ್ದರು. ಸರ್ಕಾರ ಕೈಗೊಂಡಿರುವ ನಿರ್ಧಾರದಿಂದ ದೇಶೀಯ ಉದ್ಯಮವು ಹೆಚ್ಚಿನ ಲಾಭ ಪಡೆಯಲಿದೆ' ಎಂದು ಸಿದ್ಧಉಡುಪು ರಫ್ತು ಉತ್ತೇಜನ ಮಂಡಳಿಯ (ಎಇಪಿಸಿ) ಉಪಾಧ್ಯಕ್ಷ ಎ. ಶಕ್ತಿವೇಲ್ ಹೇಳಿದ್ದಾರೆ.

2024–25ರಲ್ಲಿ ಬಾಂಗ್ಲಾ ದೇಶದಿಂದ ಭಾರತಕ್ಕೆ ಒಟ್ಟು ₹5,799 ಕೋಟಿ ಮೌಲ್ಯದ ಸಿದ್ಧಉಡುಪು ಆಮದಾಗಿದೆ. ಇದರ ಹಿಂದಿನ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಆಮದು ಪ್ರಮಾಣದಲ್ಲಿ ಶೇ 13ರಷ್ಟು ಹೆಚ್ಚಳವಾಗಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಭಾವಪೂರ್ಣ ಶ್ರದ್ಧಾಂಜಲಿ
ಅತೀವ ದುಃಖದೊಂದಿಗೆ ನಮ್ಮ ಪ್ರೀತಿಯ
ಡಾ. ಸೀನಪ್ಪನವರು
Rtd. Prof. Fisheries UAS (B)
18.5.2025 ರಂದು ನಿಧನರಾಗಿದ್ದಾರೆ ಎಂದು ತಿಳಿಸುತ್ತಿದ್ದೇವೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಪ್ರಾರ್ಥಿಸೋಣ.
ಅಂತ್ಯಕ್ರಿಯೆ ತಾ. 21.5.2025 ಬುಧವಾರ ಕನಕಪುರದಲ್ಲಿ ನಡೆಸಲಾಗುತ್ತದೆ.

ಸದಾ ನಿಮ್ಮನ್ನು ಸ್ಮರಿಸುವ
4ನೇ ವರ್ಷದ ಪುಣ್ಯಸ್ಮರಣೆ
ಶ್ರೀ ಪಿ.ಎಂ.ಭದ್ರೇಗೌಡ್ರು
ಪರಪ್ಪನ ಅಗ್ರಹಾರ
ಜನನ: 15.05.1945 ನಿಧನ: 19.05.2021
ಸದಾ ನಿಮ್ಮನ್ನು ಸ್ಮರಿಸುವ ಹಾಗೂ ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ಕೋರುವ.
ಪತ್ನಿ, ಮಕ್ಕಳು, ಸೊಸೆಯಂದಿರು, ಸಹೋದರಿಯರು, ಅಳಿಯಂದಿರು, ಮೊಮ್ಮಕ್ಕಳು, ಕುಟುಂಬವರ್ಗದವರು ಮತ್ತು ಸ್ನೇಹಿತರು ಹಾಗೂ ಗ್ರಾಮಸ್ಥರು

ಸವಿನೆನಪು
ಶ್ರೀಮತಿ ಕೆ. ರಾಮಕ್ಕನವರು
ನಿಧನ ದಿನಾಂಕ: 19–05–2020
ನೀವು ನಮ್ಮನ್ನು ಅಗಲಿ ಇಂದಿಗೆ ಐದು ವರ್ಷ ಕಳೆದರೂ ನಿಮ್ಮ ಸವಿನೆನಪು ನಮ್ಮಗಳ ಹೃದಯದಲ್ಲಿ ಚಿರಸ್ಮರಣೀಯವಾಗಿ ಉಳಿದಿದೆ.
ನಿಮ್ಮ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನು ಕರುಣಿಸಲೆಂದು ಸದಾ ಪ್ರಾರ್ಥಿಸುವ:
ಪತಿ ಶ್ರೀ ಸಿ. ಮುನಿಸೊಣ್ಣಪ್ಪನವರು, ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು ಹಾಗೂ ಸೊಸೆ ಮತ್ತು ಬಂಧು–ಮಿತ್ರರು.
ನಂ.31, "ಖುಷಿ ನಿಲಯ" ವಿದ್ಯಾನಗರ ಬಡಾವಣೆ, ಥಣಿಸಂದ್ರ ಡಾ. ಎಸ್.ಆರ್.ಕೆ ನಗರ, ಬೆಂಗಳೂರು–77.

ಪಾಲಿಸಲೇಬೇಕಾದ ಅನಿವಾರ್ಯಕ್ಕೆ ಸಿಲುಕಿದ ಪಾಕಿಸ್ತಾನ

11 ಹೊಸ ಷರತ್ತು ವಿಧಿಸಿದ ಐಎಂಎಫ್

ಇಸ್ಲಾಮಾಬಾದ್ (ಪಿಟಿಐ): ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ತನ್ನ ಸಾಲದ ನೆರವಿನ ಮುಂದಿನ ಕಂತನ್ನು ಬಿಡುಗಡೆ ಮಾಡಲು ಪಾಕಿಸ್ತಾನಕ್ಕೆ 11 ಹೊಸ ಷರತ್ತುಗಳನ್ನು ವಿಧಿಸಿದೆ.

ಹೊಸ ಷರತ್ತುಗಳಲ್ಲಿ 17.6 ಲಕ್ಷ ಕೋಟಿ ಪಾಕಿಸ್ತಾನಿ ರೂಪಾಯಿಗಳ (₹5.34 ಲಕ್ಷ ಕೋಟಿ –ಭಾರತೀಯ ರೂಪಾಯಿ) ಹೊಸ ಬಜೆಟ್‌ಗೆ ಸಂಸತ್ತಿನ ಅನುಮೋದನೆ ಪಡೆಯುವುದು, ವಿದ್ಯುತ್ ಬಿಲ್ ಬಾಕಿ ಮೇಲೆ ಹೆಚ್ಚುವರಿ ಶುಲ್ಕ ಹೆಚ್ಚಿಸುವುದು ಮತ್ತು ಮೂರು ವರ್ಷಕ್ಕಿಂತ ಹಳೆಯದಾದ ಬಳಸಿದ ಕಾರುಗಳ ಆಮದು ಮೇಲಿನ ನಿರ್ಬಂಧಗಳನ್ನು ತೆಗೆದುಹಾಕುವುದು ಸೇರಿವೆ.

ಭಾರತದ ಜೊತೆಗಿನ ಸಂಘರ್ಷ ಮುಂದುವರಿದರೆ ಅಥವಾ ಇನ್ನಷ್ಟು ತೀವ್ರಗೊಂಡರೆ, ಆರ್ಥಿಕತೆಯು ಇನ್ನಷ್ಟು ಅಪಾಯಕ್ಕೆ ಒಳಗಾಗಬಹುದು. ಸುಧಾರಣಾ ಕ್ರಮಗಳು ಹಾದಿತಪ್ಪಬಹುದು ಎಂದು ಐಎಂಎಫ್ ಹೇಳಿರುವುದಾಗಿ 'ದಿ ಎಕ್ಸ್‌ಪ್ರೆಸ್ ಟ್ರಿಬ್ಯೂನ್' ಪತ್ರಿಕೆ ವರದಿ ಮಾಡಿದೆ.

ಪಾಕಿಸ್ತಾನಕ್ಕೆ ಈಗ ವಿಧಿಸಿರುವ 11 ಹೊಸ ಷರತ್ತುಗಳು ಸೇರಿ ಒಟ್ಟು ಷರತ್ತುಗಳ ಸಂಖ್ಯೆ 50ಕ್ಕೆ ಏರಿಕೆಯಾಗಿವೆ ಎಂದು ಪತ್ರಿಕೆಯ ವರದಿ ಹೇಳಿದೆ.

ಐಎಂಎಫ್ ವರದಿಯು ಪಾಕಿಸ್ತಾನದ ಒಟ್ಟು ಬಜೆಟ್ ಗಾತ್ರವನ್ನು ₹5.34 ಲಕ್ಷ ಕೋಟಿ ಎಂದು ತೋರಿಸಿದೆ. ಇದರಲ್ಲಿ ಅಭಿವೃದ್ಧಿ ವೆಚ್ಚಕ್ಕಾಗಿ 1.07 ಲಕ್ಷ ಕೋಟಿ ರೂಪಾಯಿ (₹32,474 ಕೋಟಿ) ಮೀಸಲಿಡಲಾಗಿದೆ. ಹಾಗೆಯೇ ಮುಂದಿನ ಹಣಕಾಸು ವರ್ಷದ ರಕ್ಷಣಾ ಬಜೆಟ್ ಅನ್ನು 2.414 ಲಕ್ಷ ಕೋಟಿ ರೂಪಾಯಿ (₹73,265 ಕೋಟಿ) ಎಂದು ತೋರಿಸಿದೆ. ಕಳೆದ ಬಾರಿಗೆ ಹೋಲಿಸಿದರೆ 252 ಶತಕೋಟಿ ರೂಪಾಯಿ (₹7,648 ಕೋಟಿ) ಅಥವಾ ಶೇ 12ರಷ್ಟು ಹೆಚ್ಚಳವಾಗಿದೆ. ಐಎಂಎಫ್‌ನ ಅಂದಾಜಿಗೆ ಹೋಲಿಸಿದರೆ, ಈ ತಿಂಗಳ ಆರಂಭದಲ್ಲಿ ಭಾರತದೊಂದಿಗಿನ ಸಂಘರ್ಷದ ನಂತರ ಪಾಕಿಸ್ತಾನ ಸರ್ಕಾರವು 2.5 ಲಕ್ಷ ಕೋಟಿ (₹75,875 ಕೋಟಿ) ರೂಪಾಯಿಗಿಂತಲೂ ಹೆಚ್ಚು ಅಥವಾ ಶೇಕಡಾ 18ರಷ್ಟು ಹೆಚ್ಚಿನ ಬಜೆಟ್ ಅನ್ನು ರಕ್ಷಣೆಗೆ ನಿಗದಿಪಡಿಸುವ ಸೂಚನೆ ನೀಡಿದೆ.

ಪ್ರಮುಖ ಷರತ್ತುಗಳು

- 2025ರ ಜೂನ್ ಅಂತ್ಯದ ವೇಳೆಗೆ ಸಾಲ ನೆರವಿನ ಯೋಜನೆಯ ಗುರಿಗಳನ್ನು ಸಾಧಿಸಲು ಐಎಂಎಫ್ ಒಪ್ಪಂದಕ್ಕೆ ಅನುಗುಣವಾಗಿ 2026ರ ಸಾಲಿನ ಬಜೆಟ್‌ಗೆ ಸಂಸತ್ತಿನ ಅನುಮೋದನೆ ಪಡೆಯಬೇಕು
- ಐಎಂಫ್ ಮೌಲ್ಯಮಾಪನ ಮಾನದಂಡದಂತೆ ಆಡಳಿತಕ್ಕೆ ಸಂಬಂಧಿಸಿದಂತೆ ಕ್ರಿಯಾ ಯೋಜನೆ ರೂಪಿಸಬೇಕು
- 2028ರಿಂದ ಸಾಂಸ್ಥಿಕ ಮತ್ತು ನಿಯಂತ್ರಕ ವಾತಾವರಣ ರೂಪಿಸುವ ಸಲುವಾಗಿ, 2027ರಿಂದಲೇ ಅನ್ವಯವಾಗುವಂತೆ ಹಣಕಾಸು ವಲಯದ ಕಾರ್ಯತಂತ್ರ ರೂಪಿಸಲು ಯೋಜನೆ ಸಿದ್ಧಪಡಿಸಬೇಕು
- ಹೊಸ ಕೃಷಿ ಆದಾಯ ತೆರಿಗೆ ಕಾನೂನುಗಳನ್ನು ಜಾರಿಗೆ ತರುವ ನಾಲ್ಕು ಪ್ರಾಂತ್ಯಗಳ ಮೇಲೆ ಹೊಸ ಷರತ್ತುಗಳನ್ನು ವಿಧಿಸಲಾಗಿದೆ. ತೆರಿಗೆದಾರರ ಗುರುತಿಸುವಿಕೆ ಮತ್ತು ನೋಂದಣಿ, ಪ್ರಚಾರ ಅಭಿಯಾನ ಮತ್ತು ಅನುಸರಣೆಗೆ ಯೋಜನೆ ಸಿದ್ಧಪಡಿಸಬೇಕು
- ಇಂಧನ ಕ್ಷೇತ್ರದ ಸುಧಾರಣೆಗೆ ಕ್ರಮ ತೆಗೆದುಕೊಳ್ಳಬೇಕು. 2026ರ ಫೆಬ್ರುವರಿ 15ರೊಳಗೆ ಇಂಧನ ಶುಲ್ಕಗಳನ್ನು ಪರಿಷ್ಕರಿಸಿ ಸುಗ್ರೀವಾಜ್ಞೆ ಹೊರಡಿಸಬೇಕು. ಇದನ್ನು ಮೇ ಅಂತ್ಯದ ವೇಳೆಗೆ ಶಾಶ್ವತ ಕಾನೂನಾಗಿ ಪರಿವರ್ತಿಸಬೇಕು. ಜೂನ್ ವೇಳೆಗೆ ಪ್ರಸ್ತುತ ವಿದ್ಯುತ್ ಬಿಲ್ ಮೇಲಿನ ಸೇವಾ ಶುಲ್ಕವನ್ನು ಪ್ರತಿ ಯೂನಿಟ್‌ಗೆ ಇರುವ ಗರಿಷ್ಠ 3.21 ರೂಪಾಯಿ ಮಿತಿ ತೆಗೆದುಹಾಕಬೇಕು
- ವಿಶೇಷ ತಂತ್ರಜ್ಞಾನ ವಲಯಗಳು, ಇತರ ಕೈಗಾರಿಕಾ ಪಾರ್ಕ್‌ಗಳು ಮತ್ತು ಇನ್ನಿತರ ವಲಯಗಳಿಗೆ ಸಂಬಂಧಿಸಿದ ಎಲ್ಲ ಸಬ್ಸಿಡಿಗಳನ್ನು 2035ರ ವೇಳೆಗೆ ಸಂಪೂರ್ಣ ತೆಗೆದುಹಾಕಬೇಕು. ಇದಕ್ಕಾಗಿ ಈ ವರ್ಷದ ಅಂತ್ಯದೊಳಗೆ ವರದಿ ಸಿದ್ಧಪಡಿಸಬೇಕು
- ಅಂತಿಮವಾಗಿ, ಗ್ರಾಹಕ ಸ್ನೇಹಿ ಸ್ಥಿತಿಯಲ್ಲಿ, ಬಳಸಿದ ಮೋಟಾರು ವಾಹನಗಳ ವಾಣಿಜ್ಯ ಆಮದಿನ ಮೇಲಿನ ಎಲ್ಲಾ ನಿರ್ಬಂಧಗಳನ್ನು ತೆಗೆದುಹಾಕಲು ಅಗತ್ಯವಿರುವ ಮಸೂದೆಗಳನ್ನು ಸಂಸತ್ತಿನಲ್ಲಿ ಮಂಡಿಸಬೇಕು

17 ಮಂದಿಗೆ 'ಸಂಸದ ರತ್ನ' ಪ್ರಶಸ್ತಿ

ನವದೆಹಲಿ (ಪಿಟಿಐ): ಸುಪ್ರಿಯಾ ಸುಳೆ, ರವಿಕಿಶನ್ ಸೇರಿದಂತೆ 17 ಸಂಸದರು ಹಾಗೂ ಎರಡು ಸಂಸದೀಯ ಸಮಿತಿಗಳನ್ನು 'ಸಂಸದ ರತ್ನ–2025' ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಸುಪ್ರಿಯಾ ಸುಳೆ (ಎನ್‌ಸಿಪಿ- ಶರದ್ ಪವಾರ್ ಬಣ), ಎನ್.ಕೆ. ಪ್ರೇಮಚಂದ್ರನ್ (ಆರ್‌ಎಸ್‌ಪಿ), ಶ್ರೀರಂಗ ಅಪ್ಪ ಬಾರ್ನೆ ಹಾಗೂ ಭರ್ತೃಹರಿ ಮಹತಾಬ್ (ಬಿಜೆಪಿ) ಅವರು 'ಸಂಸದೀಯ ಪ್ರಜಾಪ್ರಭುತ್ವಕ್ಕೆ ನೀಡಿರುವ ಸುಸ್ಥಿರ ಕೊಡುಗೆ'ಗಾಗಿ ಆಯ್ಕೆಯಾಗಿದ್ದಾರೆ.

ಈ ನಾಲ್ವರು 16, 17ನೇ ಲೋಕ ಸಭೆಯಲ್ಲೂ ಉತ್ತಮ ಸಾಧನೆ ಮಾಡಿದ್ದರು ಎಂದು ಪ್ರಶಸ್ತಿ ಸ್ಥಾಪಿಸಿರುವ ಪ್ರೈಮ್ ಪಾಯಿಂಟ್ ಫೌಂಡೇಷನ್ ತಿಳಿಸಿದೆ.

ಬಿಜೆಪಿ ಸಂಸದರಾದ ಸ್ಮಿತಾ ವಾಘ್, ಮೇಧಾ ಕುಲಕರ್ಣಿ, ಪ್ರವೀಣ್ ಪಟೇಲ್, ರವಿಕಿಶನ್, ನಿಶಿಕಾಂತ್ ದುಬೆ, ಬಿದ್ಯುತ್ ಬರನ್ ಮಹಾತೊ, ಪಿ.ಪಿ. ಚೌಧರಿ, ಮದನ್ ರಾಥೋಡ್, ದಿಲೀಪ್ ಸೈಕಿಯಾ, ಶಿವಸೇನಾ–ಉದ್ಧವ್ ಬಣದ ಅರವಿಂದ ಸಾವಂತ್, ಶಿಂದೆ ಬಣದ ನರೇಶ್ ಗಣಪತ್ ಮಹಸ್ಕೆ, ಕಾಂಗ್ರೆಸ್‌ನ ವರ್ಷಾ ಗಾಯಕ್ವಾಡ್ ಹಾಗೂ ಡಿಎಂಕೆಯ ಸಿ.ಎನ್. ಅಣ್ಣಾದೊರೈ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಹಣಕಾಸು ಮತ್ತು ಕೃಷಿ ಇಲಾಖೆಯ ಎರಡು ಸ್ಥಾಯಿ ಸಮಿತಿಗಳು ಪ್ರಶಸ್ತಿಗೆ ಆಯ್ಕೆಯಾಗಿವೆ. ಮಹತಾಬ್ ಹಣಕಾಸು ಸಮಿತಿಗೆ ಹಾಗೂ ಚರಣ್‌ಜಿತ್ ಸಿಂಗ್ ಚನ್ನಿ ಕೃಷಿ ಸ್ಥಾಯಿ ಸಮಿತಿಗೆ ಅಧ್ಯಕ್ಷರಾಗಿದ್ದಾರೆ.

ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗದ (ಎನ್‌ಸಿಬಿಸಿ) ಅಧ್ಯಕ್ಷ ಹಂಸರಾಜ್ ಅಹಿರ್ ನೇತೃತ್ವದ ತೀರ್ಪುಗಾರರ ಸಮಿತಿಯು ಈ ಆಯ್ಕೆ ಮಾಡಿದೆ.

ಗುಂಡೇಟಿಗೆ ಹಸು ಕಳ್ಳನ ಸಾವು

ಲಖನೌ (ಪಿಟಿಐ): ಉತ್ತರ ಪ್ರದೇಶದ ಜೌನ್‌ಪುರ ಜಿಲ್ಲೆಯಲ್ಲಿ ಗೋವು ಕಳ್ಳಸಾಗಣೆದಾರರು ಮತ್ತು ಪೊಲೀಸರ ನಡುವೆ ನಡೆದ ಗುಂಡಿನ ಚಕಮಕಿ ವೇಳೆ ಗೋವು ಕಳ್ಳ ಎನ್ನಲಾದ ಸಲ್ಮಾನ್ ಅವರು ಸಾವಿಗೀಡಾಗಿದ್ದಾರೆ. ಈ ಸಂಬಂಧ ಇಬ್ಬರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೇ 15ರಂದು ಮುಂಜಾನೆ ಪರಾವ್‌ಗಂಜ್ ಠಾಣೆಯ ಕಾನ್‌ಸ್ಟೆಬಲ್ ಪ್ರತಿಮಾ ಸಿಂಗ್ ಮತ್ತು ಇಬ್ಬರು ಸಿಬ್ಬಂದಿ ಕರ್ತವ್ಯದಲ್ಲಿದ್ದಾಗ ಆರೋಪಿಗಳು ಗೋವು ಸಾಗಿಸುತ್ತಿದ್ದ ವಾಹನದಿಂದ ಡಿಕ್ಕಿ ಹೊಡೆದು ಪರಾರಿಯಾಗಿದ್ದರು. ಸಿಂಗ್‌ಗೆ ಗಂಭೀರ ಗಾಯಗಳಾಗಿದ್ದವು. ಘಟನೆ ನಂತರ ಜಿಲ್ಲೆಯಾದ್ಯಂತ ಗೋವು ಕಳ್ಳಸಾಗಣೆದಾರರ ಮೇಲೆ ನಿಗಾ ಇಡಲಾಗಿತ್ತು.

ಶನಿವಾರ ರಾತ್ರಿ ಖುಜ್ಜಿ ಪ್ರದೇಶದಲ್ಲಿ ಇನ್‌ಸ್ಪೆಕ್ಟರ್ ಸತ್ಯಪ್ರಕಾಶ್ ಸಿಂಗ್ ತಂಡ ವಾರಾಣಸಿ–ಆಜಮ್‌ಗಢ ರಸ್ತೆಯಲ್ಲಿ ತೆರಳುತ್ತಿದ್ದ ವಾಹನ ತಡೆದಿದ್ದರು. ಹೆಡ್ ಕಾನ್‌ಸ್ಟೆಬಲ್ ದುರ್ಗೇಶ್ ಕುಮಾರ್ ಸಿಂಗ್ ಎಂಬುವರಿಗೆ ಡಿಕ್ಕಿ ಹೊಡೆಸಿ ಆರೋಪಿಗಳು ಪರಾರಿಯಾಗಿದ್ದರು. ದುರ್ಗೇಶ್ ಆಸ್ಪತ್ರೆಯಲ್ಲಿ ಪ್ರಾಣ ಬಿಟ್ಟಿದ್ದರು. ಆರೋಪಿಗಳ ಪತ್ತೆಗೆ ವಿಶೇಷ ತಂಡ ರಚಿಸಲಾಗಿತ್ತು ಎಂದು ಡಿಜಿಪಿ ಪ್ರಶಾಂತ ಕುಮಾರ್ ತಿಳಿಸಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಭವಿಷ್ಯ
Astrology
(ಪ್ರೇಮ ಭವಿಷ್ಯ) LOVE BREAKUP ಸ್ತ್ರೀಲೈಂಗಿಕ ಸಂಭೋಗ ವಶೀಕರಣ ಶತ್ರುಉಚ್ಚಾಟನೆ ಶತ್ರುಸ್ತಂಭನ ಶತ್ರುಸರ್ವನಾಶ ಇಷ್ಟಪಟ್ಟವರು ನಿಮ್ಮಂತೆ ಆಗಲು ಗಂಡಹೆಂಡತಿ ಸಮಸ್ಯೆ ಪರಿಹಾರಕ್ಕೆ ಮಂಜುನಾಥ್ ಭಟ್ 9663243202

ಪುರುಷ ಸಹಾಯಕರು ತಕ್ಷಣ ಬೇಕಾಗಿದ್ದಾರೆ. ರಾಮನಗರ ಬಳಿಯಿರುವ ರೆಸಾರ್ಟ್‌ಗೆ ಊಟ ವಸತಿಯೊಂದಿಗೆ. ಉತ್ತಮ ಸಂಬಳ. ಸಂಪರ್ಕಿಸಿ: 9663497356/ 8884811114

Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000 ರಿಂದ 20,000,ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 6366625808, 6366627808.

ಉದ್ಯೋಗಾವಕಾಶ
General
ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ. 14,000-18,000. 8951315839, 7022770052

Wanted
ಲೇಡಿಸ್ ಬ್ಯೂಟಿ ಪಾರ್ಲರ್ ನಲಿ ಲೇಡಿಸ್ ಬ್ಯೂಟಿಷಿಯನ್ಸ್ ಬೇಕಾಗಿದ್ದರೆ. ತಿಂಗಳಿಗೆ ವೇತನ 10000/- Full ಟೈಮ್ & Part ಟೈಮ್ ಶೇಷಾದ್ರಿಪುರಂ ಬೆಂಗಳೂರು, ಸಂಪರ್ಕಿಸಿ: 7349494852

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
@50/-* PER WORDS
www.dhclassifieds.com
ಬುಕ್ ಮಾಡಿ
ಹೆಸರು ಬದಲಾವಣೆ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 7795158424
+91 9731810277 | +91 9900428036
*Conditions apply

ಶಾಂತಿ ಮಾತುಕತೆ ಬೆನ್ನಲ್ಲೇ ರಷ್ಯಾ ದಾಳಿ: ಮಹಿಳೆ ಸಾವು

ಉಕ್ರೇನ್ ಮೇಲೆ 273 ಡ್ರೋನ್ ದಾಳಿ

ಕೀವ್ (ರಾಯಿಟರ್ಸ್): ರಷ್ಯಾ ಮತ್ತು ಉಕ್ರೇನ್ ನಡುವೆ ಶಾಂತಿ ಮಾತುಕತೆ ನಡೆದಿರುವ ಬೆನ್ನಲ್ಲೇ, ಉಕ್ರೇನ್‌ನ ಪ್ರಮುಖ ಸ್ಥಳಗಳನ್ನು ಗುರಿಯಾಗಿಸಿ ರಷ್ಯಾ 273 ಡ್ರೋನ್‌ಗಳನ್ನು ಉಡಾಯಿಸಿದೆ.

ಈ ಘಟನೆಯಲ್ಲಿ ಒಬ್ಬ ಮಹಿಳೆ ಮೃತಪಟ್ಟಿದ್ದು, ನಾಲ್ಕು ವರ್ಷದ ಮಗು ಸೇರಿದಂತೆ ಕನಿಷ್ಠ ಮೂವರು ಗಾಯಗೊಂಡಿದ್ದಾರೆ ಎಂದು ಉಕ್ರೇನ್ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಮತ್ತು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರೊಂದಿಗೆ ಕದನ ವಿರಾಮಕ್ಕೆ ಸಂಬಂಧಿಸಿ ಮಾತುಕತೆ ನಡೆಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೋಮವಾರ ಹೇಳಿದ್ದರು. ಇದರ ಬೆನ್ನಲ್ಲೇ, ರಷ್ಯಾ ಡ್ರೋನ್ ದಾಳಿ ನಡೆಸಿದೆ.

ಉಕ್ರೇನ್ ರಾಜಧಾನಿ ಕೀವ್ ಪ್ರಾಂತ್ಯ, ನಿಪ್ರೋಪೆಟ್ರೋವಸ್ಕ್ ಮತ್ತು ದೇಶದ ಪೂರ್ವಭಾಗದಲ್ಲಿರುವ ಡೊನೆಟ್‌ಸ್ಕ್ ಪ್ರಾಂತ್ಯಗಳನ್ನು ಗುರಿಯಾಗಿಸಿಕೊಂಡು ರಷ್ಯಾ 273 ಡ್ರೋನ್‌ಗಳನ್ನು ಉಡಾಯಿಸಿದೆ ಎಂದು ಉಕ್ರೇನ್ ವಾಯುಪಡೆ ತಿಳಿಸಿದೆ.

ಉಕ್ರೇನ್ ಮೇಲೆ ಯುದ್ಧ ಆರಂಭವಾದಾಗಿನಿಂದಲೂ ಈವರೆಗೆ ರಷ್ಯಾ ನಡೆಸಿದ ಅತಿದೊಡ್ಡ ಡ್ರೋನ್ ದಾಳಿ ಇದಾಗಿದೆ ಎಂದು ವಾಯುಪಡೆ ತಿಳಿಸಿದೆ.

ಶುಕ್ರವಾರ ಮೊದಲ ಬಾರಿಗೆ ಇಸ್ತಾಂಬುಲ್‌ನಲ್ಲಿ ರಷ್ಯಾ ಮತ್ತು ಉಕ್ರೇನ್ ಮಧ್ಯೆ ನೇರ ಮಾತುಕತೆ ನಡೆದಿತ್ತು. 90 ನಿಮಿಷಗಳ ಮಾತುಕತೆಯಲ್ಲಿ ಉಭಯ ರಾಷ್ಟ್ರಗಳು ಪರಸ್ಪರ 1,000 ಯುದ್ಧ ಕೈದಿಗಳನ್ನು ವಿನಿಮಯ ಮಾಡಿಕೊಳ್ಳುವ ಒಪ್ಪಂದಕ್ಕೆ ಬಂದಿದ್ದವು.

ಉಕ್ರೇನ್ ರಾಜಧಾನಿ ಕೀವ್ ಪ್ರಾಂತ್ಯದ ಮೇಲೆ ರಷ್ಯಾ ಎಸಗಿದ ಡ್ರೋನ್ ದಾಳಿಯಲ್ಲಿ ಸಂಪೂರ್ಣವಾಗಿ ಸುಟ್ಟುಹೋಗಿರುವ ಕಾರುಗಳು ಎಎಫ್‌ಪಿ ಚಿತ್ರ

ಇಸ್ರೇಲ್ ದಾಳಿ 103 ಸಾವು

ದೀರ್ ಅಲ್–ಬಲಾಹ್ (ಗಾಜಾ ಪಟ್ಟಿ), (ಎಪಿ): ಗಾಜಾಪಟ್ಟಿಯಲ್ಲಿ ಶನಿವಾರ ರಾತ್ರಿ ಹಾಗೂ ಭಾನುವಾರ ಇಸ್ರೇಲ್ ನಡೆಸಿದ ದಾಳಿಯಲ್ಲಿ ಕನಿಷ್ಠ 103 ಮಂದಿ ಮೃತಪಟ್ಟಿದ್ದಾರೆ.

ಇಸ್ರೇಲ್ ತನ್ನ ದಾಳಿಯನ್ನು ತೀವ್ರಗೊಳಿಸಿದ್ದರಿಂದ, ಉತ್ತರ ಗಾಜಾದಲ್ಲಿನ ಪ್ರಮುಖ ಆಸ್ಪತ್ರೆಯೊಂದನ್ನು ಮುಚ್ಚಲಾಗಿದೆ.

ದಕ್ಷಿಣದ ಖಾನ್ ಯೂನಿಸ್ ನಗರವೂ ಸೇರಿದಂತೆ ಸುತ್ತಮುತ್ತಲಿನ ಪ್ರದೇಶದ ಮೇಲೆ ನಡೆದ ವಾಯುದಾಳಿಯಲ್ಲಿ 48ಕ್ಕೂ ಹೆಚ್ಚು ಜನರು ಅಸುನೀಗಿದ್ದಾರೆ.

ಉತ್ತರ ಗಾಜಾದ ಜಬಲಿಯಾ ನಿರಾಶ್ರಿತರ ಶಿಬಿರದ ಮೇಲೆ ನಡೆದ ದಾಳಿಯಲ್ಲಿ ಒಂದೇ ಕುಟುಂಬದ 9 ಜನರು ಮೃತಪಟ್ಟಿದ್ದಾರೆ ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ.



ಟಾಮ್ ಕ್ರೂಸ್‌ಗೆ ಬಾಲಿವುಡ್ ಸಿನಿಮಾ ಆಸೆ!

ಹಾಲಿವುಡ್ ನಟ ಟಾಮ್ ಕ್ರೂಸ್ ನಟನೆಯ 'ಮಿಷನ್ ಇಂಪಾಸಿಬಲ್: ದಿ ಫೈನಲ್ ರೆಕನಿಂಗ್' ಭಾರತದಲ್ಲಿ ತೆರೆಕಂಡು ಯಶಸ್ವಿ ಪ್ರದರ್ಶನ ಕಾಣುತ್ತಿದೆ. ಇದರ ಬೆನ್ನಲೇ ಕ್ರೂಸ್ ಬಾಲಿವುಡ್ ಶೈಲಿಯ ಸಿನಿಮಾ ಮಾಡುವ ಇಂಗಿತ ವ್ಯಕ್ತಪಡಿಸಿದ್ದಾರೆ.

ಪಾತ್ರದಲ್ಲಿ ಗಟ್ಟಿತನವಿರಬೇಕು

'ಛೂ ಮಂತರ್' ಚಿತ್ರದಲ್ಲಿ ಶರಣ್‌ಗೆ ಜೋಡಿಯಾಗಿದ್ದ ಮೇಘನಾ ಗಾಂವ್ಕರ್ ಹೊಸ ಸಿನಿಮಾವೊಂದನ್ನು ಒಪ್ಪಿಕೊಂಡಿದ್ದಾರೆ. ಗುರುರಾಜ್ ಕುಲಕರ್ಣಿ ನಿರ್ದೇಶನದ ಇನ್ನೂ ಹೆಸರಿಡದ ಚಿತ್ರದಲ್ಲಿ ನಟಿಸುತ್ತಿರುವ ಅವರು ತಮ್ಮ ಸಿನಿಪಯಣದ ಕುರಿತು ಮಾತನಾಡಿದ್ದಾರೆ...

'ಗುರುರಾಜ್ ಕುಲಕರ್ಣಿ ಅವರ ಹಿಂದಿನ ಚಿತ್ರ 'ದಿ ಜಡ್ಜ್‌ಮೆಂಟ್'ನಲ್ಲಿ ನಟಿಸಿದ್ದೆ. ಹೀಗಾಗಿ ಅವರು ತಮ್ಮ ಹೊಸ ಚಿತ್ರದಲ್ಲಿ ಅವಕಾಶ ನೀಡಿದ್ದಾರೆ. ಕಥೆಯ ಒಂದೆಳೆಯೊಂದಿಗೆ ನನ್ನ ಪಾತ್ರದ ಬಗ್ಗೆಯಷ್ಟೇ ಹೇಳಿದ್ದಾರೆ. ಪೊಲೀಸ್ ಅಧಿಕಾರಿಯಾಗಿರುತ್ತೇನೆ. ಚಿತ್ರದಲ್ಲಿ ಬಹಳ ಮಹತ್ವ ಹೊಂದಿರುವ ಪಾತ್ರ. ಇದಕ್ಕಿಂತ ಹೆಚ್ಚು ವಿವರ ಈಗಲೇ ನೀಡಲು ಸಾಧ್ಯವಿಲ್ಲ. ಜೂನ್ ಅಂತ್ಯದಿಂದ ಚಿತ್ರೀಕರಣ ಪ್ರಾರಂಭವಾಗಲಿದೆ' ಎಂದು ಮಾತು ಪ್ರಾರಂಭಿಸಿದರು ಮೇಘನಾ.

ಖಾಸಗಿ ವಾಹಿನಿಗಳಲ್ಲಿ ನಿರೂಪಕಿಯಾಗಿ ಚಿತ್ರರಂಗ ಪ್ರವೇಶಿಸಿದ ಮೇಘನಾ ಹತ್ತಕ್ಕಿಂತ ಹೆಚ್ಚು ಚಿತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಈ ವರ್ಷ ತೆರೆಕಂಡ ಶರಣ್ ಅಭಿನಯದ 'ಛೂ ಮಂತರ್' ಚಿತ್ರದಲ್ಲಿ ಅವರು ಕಾಣಿಸಿಕೊಂಡಿದ್ದರು. ರಮೇಶ್ ಅರವಿಂದ್ ನಟನೆಯ 'ಶಿವಾಜಿ ಸೂರತ್ಕಲ್-2' ಚಿತ್ರದಲ್ಲಿಯೂ ಪ್ರಮುಖ ಪಾತ್ರದಲ್ಲಿದ್ದರು.

'ಮತ್ತೊಂದು ಚಿತ್ರದ ಚಿತ್ರೀಕರಣ ನಡೆಯುತ್ತಿದೆ. ಈ ಬಗ್ಗೆ ಚಿತ್ರತಂಡದಿಂದಲೇ ಅಧಿಕೃತ ಘೋಷಣೆ ಹೊರಬರಲಿದೆ. ನನಗೆ ಅವಕಾಶಗಳು ಕಡಿಮೆಯಾಗಿಲ್ಲ. ಆದರೆ ನಾನು ಗಟ್ಟಿತನವಿರುವ ಪಾತ್ರಗಳನ್ನು ಮಾತ್ರ ಒಪ್ಪಿಕೊಳ್ಳುತ್ತೇನೆ. ಹತ್ತು ಚಿತ್ರಗಳ ಆಫರ್ ಬಂದರೆ ಅದರಲ್ಲಿ ಎರಡನ್ನು ಮಾತ್ರ ಒಪ್ಪಿಕೊಳ್ಳುತ್ತೇನೆ. ನನಗೆ ಸರಿಹೊಂದುವ ತಂಡಗಳ ಜತೆ ಮಾತ್ರ ಕೆಲಸ ಮಾಡುತ್ತೇನೆ. ಉತ್ತಮ ಸಂಭಾವನೆ ಕೂಡ ಇರಬೇಕು. ಹೀಗಾಗಿ ನನಗೆ ಚಿತ್ರಗಳು ಕಡಿಮೆ. ಈತನಕ ಮಾಡಿದ ಚಿತ್ರಗಳೆಲ್ಲವೂ ಜನಕ್ಕೆ ತಲುಪಿದೆ ಎಂಬ ಖುಷಿಯಿದೆ' ಎಂದರು.

ಹಲವು ಭಾಷೆಗಳಲ್ಲಿ ಸಿನಿಮಾ

ಗುರುರಾಜ್ ಕುಲಕರ್ಣಿ

ಈ ಹಿಂದೆ 'ಆಕ್ಸಿಡೆಂಟ್', 'ಲಾಸ್ಟ್ ಬಸ್' ಮೊದಲಾದ ಚಿತ್ರಗಳನ್ನು ನಿರ್ದೇಶಿಸಿದ್ದ ಗುರುರಾಜ್ ಬಿ ಕುಲಕರ್ಣಿ ಮತ್ತೊಂದು ಚಿತ್ರಕ್ಕೆ ಸಿದ್ಧತೆ ನಡೆಸಿದ್ದು, ಪಾತ್ರವರ್ಗದ ಹುಡುಕಾಟದಲ್ಲಿದ್ದಾರೆ. ತಮ್ಮದೇ ಜಿ9 ಕಮ್ಯೂನಿಕೇಷನ್ ಮೀಡಿಯಾ ಮತ್ತು ಎಂಟರ್‌ಟೈನ್‌ಮೆಂಟ್ ಮೂಲಕ ಹೊಸ ಸಿನಿಮಾ ನಿರ್ಮಿಸುತ್ತಿದ್ದಾರೆ.

'ಒಂದು ಕೌಟುಂಬಿಕ ಕಥೆ ಹೊಂದಿರುವ ಮನರಂಜನೆ ಚಿತ್ರ. ಕನ್ನಡ ಮಾತ್ರವಲ್ಲದೆ ಚೈನಿಸ್, ಫ್ರೆಂಚ್ ಮೊದಲಾದ ಭಾಷೆಗಳಲ್ಲಿ ಈ ಸಿನಿಮಾ ನಿರ್ಮಿಸಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಿನಿಮಾ ತಲುಪಿಸುವ ಆಲೋಚನೆಯಿದೆ. ಈ ನಿಟ್ಟಿನಲ್ಲಿ ಕೆಲ ನಿರ್ಮಾಣ ಸಂಸ್ಥೆಗಳ ಜತೆ ಮಾತುಕತೆ ನಡೆಸುತ್ತಿರುವೆ. 'ಜಡ್ಜ್‌ಮೆಂಟ್' ಚಿತ್ರದ ಬಳಿಕ ಕೆಲವೇ ನಟರು ಈಗಲೂ ನನ್ನೊಂದಿಗೆ ಸಂಪರ್ಕದಲ್ಲಿದ್ದಾರೆ. ಅವರೆಲ್ಲರೂ ಈ ಚಿತ್ರದಲ್ಲಿಯೂ ಇರುತ್ತಾರೆ. ಒಂದು ಹಂತದ ಚಿತ್ರೀಕರಣ ಮುಗಿಸಿ ಚಿತ್ರದ ಶೀರ್ಷಿಕೆ ಘೋಷಿಸುವ ಆಲೋಚನೆಯಿದೆ' ಎನ್ನುತ್ತಾರೆ ಗುರುರಾಜ್.

ಕಾಲೇಜ್ ಕಲಾವಿದನ ಹಾಡು

ಕಾಲೇಜು ಕ್ಯಾಂಪಸ್‌ನಲ್ಲಿ ನಡೆಯುವ ಪ್ರೇಮಕಥೆಯನ್ನು ಹೊಂದಿರುವ ಚಿತ್ರ 'ಕಾಲೇಜ್ ಕಲಾವಿದ'. ಬಿಡುಗಡೆಗೆ ಸಿದ್ಧವಿರುವ ಈ ಚಿತ್ರದ ಹಾಡುಗಳು ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ. ಸಂಜಯ್ ಮಳವಳ್ಳಿ ಈ ಚಿತ್ರಕ್ಕೆ ಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ.

ನಟ ರಮೇಶ್ ಅರವಿಂದ್ 'ಸಿಂಗಾರ ನೀನೆ' ಹಾಡು ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು. ಚಿತ್ರತಂಡ 'ಹೊಂಟಾಯ್ತು ಹಮ್ಮೀರಾ' ಎಂಬ ಮತ್ತೊಂದು ಹಾಡನ್ನು ಬೈಕ್ ವ್ಲಾಗರ್‌ಗಳಿಂದ ಬಿಡುಗಡೆ ಮಾಡಿಸಿದೆ.

'ಸಿನಿಮಾ ರಂಗದಲ್ಲಿ ಸುಮಾರು ವರ್ಷಗಳಿಂದ ಕೆಲಸ ಮಾಡಿಕೊಂಡು ಬಂದಿರುವೆ. ಹಲವಾರು ಸಿನಿಮಾಗಳಲ್ಲಿ ಬರಹಗಾರನಾಗಿ, ಸಹ ನಿರ್ದೇಶಕನಾಗಿ ಕೆಲಸ ಮಾಡಿರುವೆ. ಪ್ರೇಮ ಕಥೆಯೊಂದಿಗೆ ಕಾಲೇಜು ದಿನಗಳ ಸುಂದರ ಅನುಭವ ಕಟ್ಟಿಕೊಡುವ ಚಿತ್ರವಿದು. ಚಿತ್ರೀಕರಣ ಮುಗಿದು ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿವೆ' ಎಂದು ಮಾಹಿತಿ ನೀಡಿದರು ನಿರ್ದೇಶಕರು.

ಗಜಾನನ ಫಿಲ್ಮ್ಸ್ ಬ್ಯಾನರ್‌ನಲ್ಲಿ ತರುಣ್ ಶರ್ಮಾ ನಿರ್ಮಾಣ ಮಾಡಿದ್ದಾರೆ. ಸಾಕಷ್ಟು ಧಾರಾವಾಹಿಗಳಲ್ಲಿ ನಟಿಸಿರುವ ಆರವ್ ಸೂರ್ಯ ನಾಯಕರಾಗಿ ಕಾಣಿಸಿಕೊಂಡಿದ್ದಾರೆ. ಅವರಿಗೆ ಚೈತ್ರ ಲೋಕನಾಥ್ ಜೋಡಿಯಾಗಿದ್ದಾರೆ. ಹುಲಿ ಕಾರ್ತಿಕ್, ಹರಿಣಿ ಶ್ರೀಕಾಂತ್, ರಮೇಶ್ ಭಟ್ ಮುಂತಾದವರು ಚಿತ್ರದಲ್ಲಿದ್ದಾರೆ.

ಸುರಾಜ್ ಜೋಯಿಸ್ ಸಂಗೀತ, ಆನಂದ್ ಸುಂದರೇಶ ಛಾಯಾಚಿತ್ರಗ್ರಹಣ, ಮಹೇಶ್ ಗಂಗಾವತಿ ಸಂಕಲನವಿದೆ.

> ಸಾರಿಕಾ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಕಾಲೇಜು ಕಲಿಕೆಗೆ ಕಾಸರಗೋಡಿನಿಂದ ಬೆಂಗಳೂರಿಗೆ ಬಂದಿರುತ್ತೇನೆ.
> ಚೈತ್ರ ಲೋಕನಾಥ್

ಚೈತ್ರ ಲೋಕನಾಥ್

'ವೆಂಕಟೇಶ'ನ ಪ್ರೇಮಕಥೆ

ಚಿತ್ರದ ಪೋಸ್ಟರ್

ಬಹುತೇಕ ಹೊಸಬರಿಂದಲೇ ಕೂಡಿರುವ 'ನಮೋ ವೆಂಕಟೇಶ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ವಿಜಯ್ ಭಾರದ್ವಾಜ್ ಕಥೆ ಬರೆದು ನಿರ್ದೇಶಿಸಿದ್ದಾರೆ.

'ಟಿ. ಎನ್. ಸೀತಾರಾಮ್ ಜತೆ ಕೆಲಸ ಮಾಡಿದ್ದೆ. ಪರಿಪೂರ್ಣ ನಿರ್ದೇಶಕನಾಗಿ ಮೊದಲ ಚಿತ್ರ. ಈ ಸಿನಿಮಾಕ್ಕೂ ಪುರಾಣ, ಪುಣ್ಯಕಥೆಗಳಲ್ಲಿ ಬರುವ 'ವೆಂಕಟೇಶ'ನಿಗೂ ಯಾವುದೇ ಸಂಬಂಧವಿಲ್ಲ. ಇದು ಇಂದಿನ ಕಾಲದ ಕಥೆಯನ್ನು ಹೊಂದಿರುವ ಹಾಸ್ಯಮಯ ಚಿತ್ರ. ಪ್ರೇಮಕಥೆ ಹೊಂದಿರುವ ರೊಮ್ಯಾಂಟಿಕ್-ಕಾಮಿಡಿ ಶೈಲಿಯ ಚಿತ್ರವಿದು. ಎರಡು ಬೇರೆ, ಬೇರೆ ತಲೆಮಾರುಗಳಿಗೆ ಸೇರಿದ ವ್ಯಕ್ತಿಗಳ ಸುತ್ತ ಸುತ್ತುವ ಕಥೆ. ಒಂದು ತಲೆಮಾರಿನ ಆಲೋಚನೆ ಇನ್ನೊಂದು ತಲೆಮಾರಿನ ಮೇಲೆ ಹೇಗೆ ಪರಿಣಾಮ ಬೀರುತ್ತದೆ? ಇದರಿಂದ ಏನೆಲ್ಲ ಆಗುತ್ತದೆ ಎಂಬುದನ್ನು ಚಿತ್ರದಲ್ಲಿ ಹೇಳಿದ್ದೇವೆ. ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿದ್ದು ಶೀಘ್ರದಲ್ಲಿ ಚಿತ್ರ ತೆರೆಗೆ ಬರಲಿದೆ' ಎಂದರು ನಿರ್ದೇಶಕರು.

ಆರುಶ್ ಪಿಕ್ಚರ್ಸ್ ಅಡಿಯಲ್ಲಿ ಶ್ರೀನಿವಾಸ ಗೆಜ್ಜಲಗೆರೆ ಬಂಡವಾಳ ಹೂಡಿದ್ದಾರೆ. ನಿರ್ದೇಶಕರೇ ನಾಯಕನಾಗಿಯೂ ಕಾಣಿಸಿಕೊಂಡಿದ್ದಾರೆ. 'ಗಟ್ಟಿಮೇಳ' ಧಾರಾವಾಹಿಯ ಅನ್ವಿತಾ ಸಾಗರ್ ನಾಯಕಿ. ಶ್ಯಾಮ್ ಸುಂದರ್, ನಾಗರಾಜ ರಾವ್, ರವಿಕುಮಾರ್, ದೀಪಾ, ಮಂಜುನಾಥ್ ಹೆಗಡೆ ಮುಂತಾದವರು ಚಿತ್ರದಲ್ಲಿದ್ದಾರೆ.

ಚಿತ್ರದಲ್ಲಿ ಒಟ್ಟು ಐದು ಹಾಡುಗಳಿದ್ದು, ಶರತ್ ಆರೋಹಣ ಸಂಗೀತ ಸಂಯೋಜಿಸಿದ್ದಾರೆ. ಹಿರಿಯ ಸಂಗೀತ ನಿರ್ದೇಶಕ ವಿ. ಮನೋಹರ್ ಚಿತ್ರದ ಶೀರ್ಷಿಕೆ ವಿನ್ಯಾಸದ ಜತೆಗೆ ಸಾಹಿತ್ಯ ಬರೆದಿದ್ದಾರೆ. ನಿರಂಜನ್ ದಾಸ್ ಮತ್ತು ವಿನೋದ್ ಲೋಕಣ್ಣನವರ್ ಛಾಯಾಚಿತ್ರಗ್ರಹಣವಿದ್ದು, ಸಮೀರ್ ನಗರದ್ ಸಂಕಲನವಿದೆ. ಮೈಸೂರು, ಚಿಕ್ಕಮಗಳೂರಿನ ಬಾಳೂರು, ಕೊಟ್ಟಿಗೆಹಾರ, ದೇವರಮನೆ, ಬಣಕಲ್ ಮುಂತಾದೆಡೆ ಚಿತ್ರೀಕರಣ ನಡೆಸಲಾಗಿದೆ.

ಕಕ್ಷೆ ಸೇರಲು ಪಿಎಸ್‌ಎಲ್‌ವಿ ವಿಫಲ

ಒಂದನೇ ಪುಟದಿಂದ...

'ಮೂರನೇ ಹಂತದಲ್ಲಿ ಮೇಲೇರಲು ವಿಫಲವಾದ ರಾಕೆಟ್‌ನಲ್ಲಿ ಕಂಡುಬಂದ ಸಮಸ್ಯೆಯ ಬಗ್ಗೆ ವಿಶ್ಲೇಷಿಸಲಾಗುವುದು. ಈ ಬಗ್ಗೆ ಆದಷ್ಟು ಬೇಗ ಮಾಹಿತಿ ನೀಡಲಾಗುವುದು' ಎಂದು ಇಸ್ರೊ ಅಧ್ಯಕ್ಷ ನಾರಾಯಣನ್ ಹೇಳಿದರು.

ಉಪಯೋಗ ಏನಿತ್ತು?

- ಸಿಂಥೆಟಿಕ್ ಅಪಾರ್ಚರ್ ಪೇಲೋಡ್ (ಭೂಮಿಯ ಮೇಲ್ಮೈಯ ಅತ್ಯುನ್ನತ ಗುಣಮಟ್ಟದ ಚಿತ್ರ ತೆಗೆಯುವ ಉಪಕರಣ) ಅನ್ನು ಈ ಉಪಗ್ರಹದಲ್ಲಿ ಅಳವಡಿಸಲಾಗಿತ್ತು. ಈ ಉಪಕರಣವು ಎಲ್ಲ ಹವಾಮಾನದಲ್ಲಿಯೂ ಕಾರ್ಯನಿರ್ವಹಿಸುವ ಸಾಮರ್ಥ್ಯ ಹೊಂದಿತ್ತು
- ಕೃಷಿ, ಅರಣ್ಯ ಪ್ರದೇಶಗಳ ಮೇಲೆ ನಿಗಾ ಇರಿಸುವುದು, ವಿಪತ್ತು ನಿರ್ವಹಣೆ, ನಗರಾಭಿವೃದ್ಧಿ ಮತ್ತು ರಾಷ್ಟ್ರೀಯ ಭದ್ರತೆಯಲ್ಲಿ ಈ ಉಪಕರಣವು ಸಹಾಯಕವಾಗುತ್ತಿತ್ತು

ಅವಶೇಷಮುಕ್ತ ಬಾಹ್ಯಾಕಾಶ

ಈ ಕಾರ್ಯಾಚರಣೆಯಿಂದಾಗಿ ಬಾಹ್ಯಾಕಾಶದಲ್ಲಿ ಯಾವುದೇ ಅವಶೇಷಗಳು ಉಳಿಯದಂತೆ ಮಾಡುವ ಗುರಿ ಹಾಕಿಕೊಳ್ಳಲಾಗಿತ್ತು. ಸಾಮಾನ್ಯವಾಗಿ ಉಪಗ್ರಹಗಳ ಅವಧಿ ಮುಗಿದ ಬಳಿಕವೂ ಅವಶೇಷಗಳು ಕಕ್ಷೆಯಲ್ಲಿಯೇ ತಿರುಗುತ್ತಿರುತ್ತವೆ. ಆದರೆ, ಕೆಲಸ ಮುಗಿದ ಬಳಿಕ ಎರಡು ವರ್ಷಗಳಲ್ಲಿ ಈ ಉಪಗ್ರಹವು ಸಮುದ್ರ ಸೇರುವಂತೆ ಈ ಕಾರ್ಯಾಚರಣೆಯಲ್ಲಿ ಪೂರ್ವ ನಿಗದಿ ಮಾಡಲಾಗಿತ್ತು. ಉಪಗ್ರಹದಲ್ಲಿ ಹೆಚ್ಚುವರಿ ಇಂಧನವನ್ನೂ ಇರಿಸಲಾಗಿತ್ತು.

ಘನ ಇಂಧನ ಎಂಜಿನ್ ವಿಫಲ

ಕಕ್ಷೆ ಸೇರುವ ಪ್ರಕ್ರಿಯೆಯ ಮೂರನೇ ಹಂತದಲ್ಲಿ ಘನಸ್ಥಿತಿಯಲ್ಲಿರುವ ಇಂಧನ ಮತ್ತು ದಹನಾನುಕೂಲಿ ಅನಿಲ ಮಿಶ್ರಣದಿಂದ ಕಾರ್ಯನಿರ್ವಹಿಸುವ ಎಂಜಿನ್ (ಸಾಲಿಡ್ ಮೋಟರ್ ಎಂಜಿನ್) ಬಳಸಲಾಗಿದೆ. ಈ ಎಂಜಿನ್ ಚಾಲೂ ಆದ ನಂತರ, ಅದು ಅಗತ್ಯ ಪ್ರಮಾಣದಷ್ಟು ಶಕ್ತಿಯನ್ನು ಉತ್ಪಾದಿಸಲಿಲ್ಲ. ಹೀಗಾಗಿ ಕಾರ್ಯಾಚರಣೆ ಪೂರ್ಣಗೊಳ್ಳಲಿಲ್ಲ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಇಸ್ರೊದ ಮಾಜಿ ಅಧ್ಯಕ್ಷ ಎಸ್. ಸೋಮನಾಥ, 'ಘನ ಇಂಧನ ಎಂಜಿನ್ ಅಭಿವೃದ್ಧಿಪಡಿಸುವಲ್ಲಿ ಯಾವೆಲ್ಲ ಸವಾಲುಗಳನ್ನು ಎದುರಿಸಲಾಗಿದೆ ಎಂಬುದು ತಿಳಿದಿದೆ. ಹಲವು ವೈಫಲ್ಯಗಳನ್ನೂ ಅನುಭವಿಸಿದ್ದೇವೆ. ಸಾಮಾನ್ಯವಾಗಿ ಇಂಥ ಹಂತದಲ್ಲಿ ಎಂಜಿನ್ ವಿಫಲವಾಗುವುದಿಲ್ಲ. ಅದೇನೇ ಇದ್ದರೂ, ಈ ಬಾರಿ ಎದುರಿಸಿದ ಸಮಸ್ಯೆ ಏನು, ಅದನ್ನು ಮೀರುವುದು ಹೇಗೆ ಎನ್ನುವ ಬಗ್ಗೆ ವಿಮರ್ಶೆ ನಡೆಯಲಿದೆ ಎಂಬ ವಿಶ್ವಾಸವಿದೆ' ಎಂದು 'ಎಕ್ಸ್'ನಲ್ಲಿ ಬರೆದುಕೊಂಡಿದ್ದಾರೆ.

'ಬಿಜೆಪಿಗೆ ಅಧಿಕಾರ ತಪ್ಪಿಸಿದ್ದಕ್ಕೆ ಬಂಧನ'

ಮುಂಬೈ (ಪಿಟಿಐ): '2019ರಲ್ಲಿ ಬಿಜೆಪಿಯು ಮಹಾರಾಷ್ಟ್ರದಲ್ಲಿ ಅಧಿಕಾರ ಹಿಡಿಯುವುದನ್ನು ತಪ್ಪಿಸಿದ ಒಂದೇ ಒಂದು ಕಾರಣಕ್ಕೆ ನನ್ನನ್ನು ಜಾರಿ ನಿರ್ದೇಶನಾಲಯದ ಮೂಲಕ ಹಣ ಅಕ್ರಮ ವರ್ಗಾವಣೆ ಆರೋಪ ಹೊರಿಸಿ ಬಂಧಿಸಲಾಗಿತ್ತು' ಎಂದು ಶಿವಸೇನಾ (ಯುಬಿಟಿ) ನಾಯಕ ಸಂಜಯ್ ರಾವುತ್ ಆರೋಪಿಸಿದ್ದಾರೆ.

ಸಂಜಯ್ ರಾವುತ್

2022ರಲ್ಲಿ ಇ.ಡಿ.ಯಿಂದ ಬಂಧಿತರಾಗಿದ್ದ ರಾವುತ್ ಜೈಲಿನಲ್ಲಿ ತಮಗಾದ ಅನುಭವಗಳ ಕುರಿತು ಬರೆದಿರುವ 'ನರಕದಲ್ಲಿ ಸ್ವರ್ಗ' (ನರ್ಕಾರ್‌ತಲಾ ಸ್ವರ್ಗ್) ಪುಸ್ತಕದಲ್ಲಿ, 'ಉದ್ಧವ್ ಠಾಕ್ರೆ ನೇತೃತ್ವದ ಮಹಾ ವಿಕಾಸ ಅಘಾಡಿ ಸರ್ಕಾರಕ್ಕೆ ನಾನು 'ರಕ್ಷಾ ಕವಚ'ದಂತಿದ್ದೆ ಎಂಬ ಕಾರಣಕ್ಕೆ ನನ್ನ ಮೇಲೆ ಕ್ರಮ ಜರುಗಿಸಿದರು' ಎಂದು ಹೇಳಿದ್ದಾರೆ.

'ಬಹುಮತದ ಸರ್ಕಾರ ಕೆಡವಲು ಆಪರೇಷನ್ ಕಮಲದಿಂದ ಆಗುವುದಿಲ್ಲ ಎಂದು ಗೊತ್ತಾಗಿ ಕೇಂದ್ರದ ತನಿಖಾ ಸಂಸ್ಥೆಗಳನ್ನು ರಾಜಕೀಯವಾಗಿ ಬಳಸಿಕೊಳ್ಳಲಾಗಿದೆ' ಎಂದು ಆರೋಪಿಸಿದ್ದಾರೆ.

ಪೆನಾಲ್ಟಿ ಶೂಟೌಟ್‌ನಲ್ಲಿ ಗೆದ್ದ ಆತಿಥೇಯ ತಂಡ: ಬಾಂಗ್ಲಾದೇಶಕ್ಕೆ ನಿರಾಸೆ

ಸ್ಯಾಫ್ ಫುಟ್‌ಬಾಲ್: ಭಾರತ ಚಾಂಪಿಯನ್

ಯುಪಿಯಾ (ಅರುಣಾಚಲ ಪ್ರದೇಶ) (ಪಿಟಿಐ): ಆತಿಥೇಯ ಭಾರತ ತಂಡವು ಭಾನುವಾರ ನಡೆದ ಸ್ಯಾಫ್ 19 ವರ್ಷದೊಳಗಿನವರ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಫೈನಲ್‌ನಲ್ಲಿ ಬಾಂಗ್ಲಾದೇಶ ತಂಡವನ್ನು ಮಣಿಸಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು.

ನಿಗದಿತ ಅವಧಿಯಲ್ಲಿ ಪಂದ್ಯವು 1-1ರಿಂದ ಸಮಬಲಗೊಂಡಿತ್ತು. ನಂತರ ಪೆನಾಲ್ಟಿ ಶೂಟೌಟ್‌ನಲ್ಲಿ ಭಾರತ ತಂಡವು 4-3ರಿಂದ ಗೆಲುವು ಸಾಧಿಸಿ, ಸತತ ಎರಡನೇ ಬಾರಿ ಚಾಂಪಿಯನ್ ಆಯಿತು.

ಪೆನಾಲ್ಟಿ ಶೂಟೌಟ್‌ನಲ್ಲಿ ಭಾರತದ ಆರಂಭ ಉತ್ತಮವಾಗಿರಲಿಲ್ಲ. ಒಂದು ಹಂತದಲ್ಲಿ ಆತಿಥೇಯರು 2-3 ಹಿನ್ನಡೆಯಲ್ಲಿದ್ದರು. ಆದರೆ, ಕೊನೆಯ ಕ್ಷಣದಲ್ಲಿ ಭಾರತದ ಗೋಲ್‌ಕೀಪರ್ ಸೂರಜ್ ಸಿಂಗ್ ಉತ್ತಮ ಆಟ ಪ್ರದರ್ಶಿಸಿದರು. ಎದುರಾಳಿ ತಂಡದ ಎರಡು ಪ್ರಯತ್ನವನ್ನು ವಿಫಲಗೊಳಿಸಿ, ಗೆಲುವಿನಲ್ಲಿ ಮಹತ್ವದ ಪಾತ್ರ ವಹಿಸಿದರು.

ಬಿಬ್ಲಿಯಾನೊ ಫೆರ್ನಾಂಡಿಸ್ ಮಾರ್ಗದರ್ಶನದ ಭಾರತ ತಂಡವು ಪಂದ್ಯದ ಎರಡನೇ ನಿಮಿಷದಲ್ಲೇ ಮುನ್ನಡೆ ಸಾಧಿಸಿತು. ಸಿಂಗಮಯುಂ ಶಮಿ ಅವರು ಅಮೋಘ ರೀತಿಯಲ್ಲಿ ಚೆಂಡನ್ನು ಗುರಿ ಸೇರಿಸಿದರು. 61ನೇ ನಿಮಿಷದಲ್ಲಿ ಬಾಂಗ್ಲಾದೇಶದ ಜಾಯ್ ಅಹಮ್ಮದ್ ಗೋಲು ದಾಖಲಿಸಿದರು. ಹೀಗಾಗಿ, ಉಭಯ ತಂಡಗಳ ಸ್ಕೋರ್ ಸಮಬಲಗೊಂಡಿತು. ನಂತರದಲ್ಲಿ ಎರಡೂ ತಂಡಗಳು ಮೇಲುಗೈ ಸಾಧಿಸಲು ಪ್ರಯತ್ನಿಸಿದರೂ ಸಫಲವಾಗಲಿಲ್ಲ.

ಸ್ಯಾಫ್ 19 ವರ್ಷದೊಳಗಿನವರ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಪ್ರಶಸ್ತಿ ಗೆದ್ದ ಭಾರತ ತಂಡದ ಆಟಗಾರರು ಟ್ರೋಫಿಯೊಂದಿಗೆ ಸಂಭ್ರಮಿಸಿದರು ಎಕ್ಸ್ ಚಿತ್ರ

ವಿರಾಟ್ ಕೊಹ್ಲಿಗೆ ಭಾರತರತ್ನ ನೀಡಿ: ಸುರೇಶ್ ರೈನಾ

ಬೆಂಗಳೂರು: ಭಾರತ ಕ್ರಿಕೆಟ್ ತಂಡದ ಚಾಂಪಿಯನ್ ಬ್ಯಾಟರ್ ವಿರಾಟ್ ಕೊಹ್ಲಿ ಅವರಿಗೆ ಭಾರತರತ್ನ ನೀಡಬೇಕು ಎಂದು ಮಾಜಿ ಕ್ರಿಕೆಟಿಗ ಸುರೇಶ್ ರೈನಾ ಅಭಿಪ್ರಾಯಪಟ್ಟಿದ್ದಾರೆ.

ವಿರಾಟ್ ಈಚೆಗಷ್ಟೇ ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಘೋಷಿಸಿದ್ದರು. ಹೋದ ವರ್ಷ ಟಿ20 ಮಾದರಿಯಿಂದಲೂ ನಿವೃತ್ತಿ ಪಡೆದಿದ್ದರು.

'ವಿರಾಟ್ ಅವರು ಹಲವಾರು ಅಮೋಘ ಸಾಧನೆಗಳನ್ನು ಮಾಡಿದ್ದಾರೆ. ಅವರು ಕ್ರಿಕೆಟ್ ಕ್ಷೇತ್ರಕ್ಕೆ ನೀಡಿರುವ ಕಾಣಿಕೆಗಳನ್ನು ಪರಿಗಣಿಸಬೇಕು. ಭಾರತ ಸರ್ಕಾರವು ದೇಶದ ಅತ್ಯುನ್ನತ ಗೌರವವಾದ ಭಾರತರತ್ನವನ್ನು ಕೊಹ್ಲಿಗೆ ನೀಡಬೇಕು' ಎಂದು ರೈನಾ ಅವರು ಸ್ಟಾರ್ ಸ್ಪೋರ್ಟ್ಸ್ ವಾಹಿನಿಯ ಕಾರ್ಯಕ್ರಮದಲ್ಲಿ ಹೇಳಿದ್ದಾರೆ.

ವಿರಾಟ್ ಅವರಿಗೆ ಬೀಳ್ಕೊಡುಗೆ ಪಂದ್ಯವನ್ನು ಆಯೋಜಿಸಬೇಕು ಎಂದೂ ಅವರು ಆಗ್ರಹಿಸಿದ್ದಾರೆ.

ವಿಶ್ವ ಟಿಟಿ: ಮಣಿಕಾ, ಠಕ್ಕರ್ ಶುಭಾರಂಭ

ದೋಹಾ (ಪಿಟಿಐ): ಭಾರತದ ಮಣಿಕಾ ಬಾತ್ರಾ ಮತ್ತು ಮಾನವ್ ಠಕ್ಕರ್ ಅವರು ಇಲ್ಲಿ ನಡೆಯುತ್ತಿರುವ ವಿಶ್ವ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಶುಭಾರಂಭ ಮಾಡಿದರು.

ಮಹಿಳೆಯರ ಸಿಂಗಲ್ಸ್‌ನಲ್ಲಿ 22ನೇ ಶ್ರೇಯಾಂಕದ ಮಣಿಕಾ ಮೊದಲ ಸುತ್ತಿನಲ್ಲಿ 4-0 (11-5, 11-6, 11-8, 11-2) ಯಿಂದ ನೈಜೀರಿಯಾದ ಫಾತಿಮಾ ಬೆಲ್ಲೊ ಅವರನ್ನು ಮಣಿಸಿ ಎರಡನೇ ಸುತ್ತು ಪ್ರವೇಶಿಸಿದರು.

ಭಾರತದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ ಮಾನವ್ ಆರಂಭಿಕ ಸುತ್ತಿನಲ್ಲಿ 4-1 (11-3, 11-8, 6-11, 11-7, 14-12) ರಿಂದ ನ್ಯೂಜಿಲೆಂಡ್‌ನ ತಿಮೋಥಿ ಚೋಯ್ ಅವರನ್ನು ಸೋಲಿಸಿದರು.

ಪುರುಷರ ಡಬಲ್ಸ್‌ನಲ್ಲಿ ಒಂಬತ್ತನೇ ಶ್ರೇಯಾಂಕದ ಮಾನುಷ್ ಶಾ ಮತ್ತು ದಿಯಾ ಚಿತಳೆ ಜೋಡಿಯು ಶುಭಾರಂಭ ಮಾಡಿತು. ಭಾರತದ ಆಟಗಾರರು 3-0 (11-2, 11-7, 11-6) ಯಿಂದ ಅಲ್ಜೀರಿಯಾದ ಮೆಹದಿ ಬೌಲೌಸ್ಸಾ ಮತ್ತು ಮಲಿಸ್ಸಾ ನಸ್ರಿ ವಿರುದ್ಧ ಗೆಲುವು ಸಾಧಿಸಿದರು.

ಭಾಂಬ್ರಿ– ಗ್ಯಾಲವೆ ರನ್ನರ್ಸ್ ಅಪ್

ನವದೆಹಲಿ (ಪಿಟಿಐ): ಭಾರತದ ಯುಕಿ ಭಾಂಬ್ರಿ ಮತ್ತು ಅವರ ಅಮೆರಿಕದ ಜೊತೆಗಾರ ರಾಬರ್ಟ್ ಗ್ಯಾಲವೆ ಅವರು ಫ್ರಾನ್ಸ್‌ನ ಬೋರ್ಡೌನಲ್ಲಿ ನಡೆದ ಎಟಿಪಿ ಚಾಲೆಂಜರ್ ಟೆನಿಸ್ ಟೂರ್ನಿಯಲ್ಲಿ ರನ್ನರ್ಸ್ ಅಪ್ ಆದರು.

ಭಾನುವಾರ ನಡೆದ ರೋಚಕ ಫೈನಲ್ ಹಣಾಹಣಿಯಲ್ಲಿ ಎರಡನೇ ಶ್ರೇಯಾಂಕದ ಭಾಂಬ್ರಿ– ಗ್ಯಾಲವೆ ಜೋಡಿಯು 6-7(1), 6-7(2)ರಿಂದ ನಾಲ್ಕನೇ ಶ್ರೇಯಾಂಕದ ಫ್ರಾನ್ಸಿಸ್ಕೊ ಕ್ಯಾಬ್ರಲ್ (ಪೋರ್ಚುಗಲ್) ಮತ್ತು ಲ್ಯೂಕಾಸ್ ಮಿಡ್ಲರ್ (ಆಸ್ಟ್ರಿಯಾ) ಜೋಡಿಗೆ ಶರಣಾಯಿತು.

ಇದಕ್ಕೂ ಮೊದಲು ಇಂಡೊ–ಅಮೆರಿಕ ಜೋಡಿಯು 6–3, 7(7)–6 ರಿಂದ ಬ್ರೆಜಿಲ್‌ನ ರಫೇಲ್ ಮಾಟೊಸ್–ಮಾರ್ಸೆಲೊ ಮೆಲೊ ಜೋಡಿಯನ್ನು ಹಿಮ್ಮೆಟ್ಟಿಸಿತು.

ಬೆಂಕಿ ಅವಘಡ: 17 ಮಂದಿ ಸಾವು

ಒಂದನೇ ಪುಟದಿಂದ...

'ಕಟ್ಟಡದಲ್ಲಿ ಭಾರಿ ಹೊಗೆ ಎದ್ದಿದ್ದ ಕಾರಣ ಅಗ್ನಿ ಶಾಮಕ ಸಿಬ್ಬಂದಿ ಆಮ್ಲಜನಕ ಮಾಸ್ಕ್‌ಗಳನ್ನು ಧರಿಸಿದ್ದರು. ಮನೆ ಒಳಗೆ ಹೋಗುತ್ತಿದ್ದಂತೆಯೇ ಬೆಂಕಿಯ ಕೆನ್ನಾಲಿಗೆಯು ಮೈಮೇಲೆ ಎರಗುತ್ತಿತ್ತು' ಎಂದು ನಾಗಿ ರೆಡ್ಡಿ ತಿಳಿಸಿದರು.

ಪರಿಹಾರ ಘೋಷಣೆ: ಘಟನೆ ಕುರಿತು ಪ್ರತಿಕ್ರಿಯಿಸಿದರುವ ಪ್ರಧಾನಿ ನರೇಂದ್ರ ಮೋದಿ, ಮೃತರ ಕುಟುಂಬಕ್ಕೆ ₹2 ಲಕ್ಷ ಮತ್ತು ಗಾಯಾಳುಗಳಿಗೆ ₹50 ಸಾವಿರ ಪರಿಹಾರ ಘೋಷಣೆ ಮಾಡಿದ್ದಾರೆ. ಅಂತೆಯೇ ರಾಜ್ಯ ಸರ್ಕಾರ ಕೂಡ ಪರಿಹಾರ ಘೋಷಿಸಿದ್ದು, ಮೃತರ ಕುಟುಂಬಕ್ಕೆ ₹5 ಲಕ್ಷ ನೀಡುವುದಾಗಿ ಹೇಳಿದೆ.

'ಅದೊಂದು ಭಯಾನಕ ದೃಶ್ಯ'

'ಭಾನುವಾರ ಇಲ್ಲಿ ವ್ಯಾಪಾರ ಜೋರಾಗಿರುತ್ತದೆ. ಅದಕ್ಕಾಗಿಯೇ ನಾವು ಸ್ನೇಹಿತರು ಬೆಳಿಗ್ಗೆ 6.10ರ ಸುಮಾರಿಗೆ ಅಂಗಡಿ ಇಡುವುದಕ್ಕೆ ಇದೇ ರಸ್ತೆಯಲ್ಲಿ ತೆರಳುತ್ತಿದ್ದೆವು. ಈ ಮನೆಯ ಹತ್ತಿರ ಬರುತ್ತಿದ್ದಂತೆಯೇ ಮಹಿಳೆಯೊಬ್ಬರು ಬೆಂಕಿ ಹೊತ್ತಿಕೊಂಡಿದೆ ಎಂದು ಜೋರಾಗಿ ಕೂಗಿದ್ದು ಕೇಳಿಸಿತು. ಬೆಂಕಿ ತೀವ್ರವಾಗಿತ್ತು. ಕಟ್ಟಡದ ಹಿಂಬದಿಯಿಂದ ಮನೆ ಒಳಗೆ ಹೋಗಲು ಯತ್ನಿಸಿದೆವು' ಎಂದು ಪ್ರತ್ಯಕ್ಷದರ್ಶಿ ಜಾಹಿದ್ ವಿವರಿಸಿದರು.

'ಮನೆ ಒಳಗೆ ಹೋಗುತ್ತಿದ್ದಂತೆಯೇ ಭಯಾನಕ ದೃಶ್ಯ ಕಂಡೆವು. ಏಳು ಮಂದಿ ನೆಲದಲ್ಲಿ ಸತ್ತು ಬಿದ್ದಿದ್ದರು. ಆರು ಮಂದಿ ಇನ್ನೊಂದು ಕೋಣೆಯಲ್ಲಿದ್ದರು. ಭಾರಿ ಬೆಂಕಿ ಇದ್ದಿದ್ದರಿಂದ ನಾವು ಯಾರನ್ನೂ ಉಳಿಸಲು ಸಾಧ್ಯವಾಗಲಿಲ್ಲ. ಸತ್ತು ಬಿದ್ದಿದ್ದ ಪುಟ್ಟ ಮಕ್ಕಳ ಮೇಲೆ ಮಹಿಳೆಯೊಬ್ಬರ ಮೃತದೇಹವೊಂದು ಬಿದ್ದಿತ್ತು. ಹೊತ್ತಿ ಉರಿಯುತ್ತಿದ್ದ ಬೆಂಕಿಯ ಮಧ್ಯೆಯೂ ಒಳಗೆ ಹೋಗಿ ಸಹಾಯ ಮಾಡಿದೆವು. ಕೆಲವು ಹೊತ್ತಿನ ಬಳಿಕ ಅಗ್ನಿ ಶಾಮಕ ಸಿಬ್ಬಂದಿ ಬಂದರು' ಎಂದು ಹೇಳಿದರು.

ಜಾಹೀದ್ ಅವರೊಂದಿಗೆ ಅಲ್ಲಿದ್ದ ಸ್ಥಳೀಯರು ಸೇರಿ 13 ಮೃತದೇಹಗಳನ್ನು ಹೊರತೆಗೆದಿದ್ದರು. ಅಗ್ನಿ ಶಾಮಕ ಸಿಬ್ಬಂದಿ ಸ್ಥಳಕ್ಕೆ ಬಂದ ಬಳಿಕ ಎರಡನೇ ಅಂತಸ್ತಿನಲ್ಲಿದ್ದ ನಾಲ್ವರನ್ನು ಏಣಿ ಹಾಕಿ ಕೆಳಗಿಳಿಸಿದರು. ಹೊಗೆ ಹೊರ ಹೋಗಲು ಸಿಬ್ಬಂದಿಯು ಮನೆಯ ಗೋಡೆ ಒಡೆದರು.

> ಘಟನೆ ಬಗ್ಗೆ ತನಿಖೆ ನಡೆಸಲಾಗುವುದು. ಅಗ್ನಿ ಅವಘಡಕ್ಕೆ ಪಿತೂರಿ ನಡೆಸಲಾಗಿದೆ ಎಂಬುದಕ್ಕೆ ಯಾವುದೇ ಸಾಕ್ಷ್ಯ ಇಲ್ಲ
> **ಪೊನ್ನಂ ಪ್ರಭಾಕರ್,** ಸಾರಿಗೆ ಸಚಿವ

> ಬೆಂಕಿ ಹೊತ್ತಿಕೊಂಡಾಗ ಅಗ್ನಿ ಶಾಮಕ ದಳದವರಿಗೆ ಕರೆ ಮಾಡಿದರೂ ಸಿಬ್ಬಂದಿಯು ತಡವಾಗಿ ಬಂದಿದ್ದಾರೆ ಎನ್ನುವ ಮಾಹಿತಿ ಇದೆ
> **ಜಿ. ಕಿಶನ್ ರೆಡ್ಡಿ,** ಕೇಂದ್ರ ಸಚಿವ

> ಮಾಹಿತಿ ಬಂದ ತಕ್ಷಣದಲ್ಲಿಯೇ ಅಗ್ನಿ ಶಾಮಕ ಸಿಬ್ಬಂದಿ ಘಟನಾ ಸ್ಥಳಕ್ಕೆ ತೆರಳಿ, ಕ್ಷಿಪ್ರವಾಗಿ ಕಾರ್ಯನಿರ್ವಹಿಸಿದ್ದಾರೆ
> **ಭಟ್ಟಿ ವಿಕ್ರಮಾರ್ಕ ಮಲ್ಲು,** ತೆಲಂಗಾಣ ಉಪಮುಖ್ಯಮಂತ್ರಿ

ಪ್ಯಾನ್ ಇಲ್ಲದೆ ಆಸ್ತಿ ನೋಂದಣಿ ಇಲ್ಲ

ಒಂದನೇ ಪುಟದಿಂದ...

'ಆಸ್ತಿ ಖರೀದಿ ವಿವರವನ್ನು ಆದಾಯ ತೆರಿಗೆ ಇಲಾಖೆಗೆ ಸಲ್ಲಿಸುವುದು ಬಹಳ ಹಿಂದಿನಿಂದಲೇ ಜಾರಿಯಲ್ಲಿದೆ. ಆದರೆ ಇಲಾಖೆಯ ಅಧಿಕಾರಿಗಳು ಈ ವಿವರವನ್ನು ಸಲ್ಲಿಸುತ್ತಿರಲಿಲ್ಲ. ಈ ಸಂಬಂಧ ಆದಾಯ ತೆರಿಗೆ ಇಲಾಖೆಯಿಂದ ಪದೇ–ಪದೇ ಆಕ್ಷೇಪ ಪತ್ರ ಬಂದಿತ್ತು. ಹೀಗಾಗಿ ಇದನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರಲಾಗುತ್ತಿದೆ. ಆದಾಯ ತೆರಿಗೆ ವಂಚನೆ ಪ್ರಕರಣಗಳಿಗೂ ಇದರಿಂದ ತಡೆ ಬೀಳಲಿದೆ' ಎಂದು ಇಲಾಖೆಯ ಉನ್ನತ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಸೋಲಾಪುರ: ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದ ಅವಘಡ

ಅಗ್ನಿ ದುರಂತ; 8 ಮಂದಿ ಸಾವು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಸೆಂಟ್ರಲ್ ಟೆಕ್ಸ್‌ಟೈಲ್ ಮಿಲ್ ಟವೆಲ್ ಕಾರ್ಖಾನೆಯಲ್ಲಿ ಅವಘಡ
- ಕಾರ್ಖಾನೆಯ ಮಾಲೀಕ, ಕಾರ್ಮಿಕ ಕುಟುಂಬದವರ ಸಾವು

ಸೋಲಾಪುರ: ನಗರದ ಅಕ್ಕಲಕೋಟ ರಸ್ತೆಯಲ್ಲಿರುವ ಔದ್ಯೋಗಿಕ ವಸಾಹತುವಿನಲ್ಲಿರುವ ಸೆಂಟ್ರಲ್ ಟೆಕ್ಸ್‌ಟೈಲ್ ಮಿಲ್ ಟವೆಲ್ ಕಾರ್ಖಾನೆಯಲ್ಲಿ ಭಾನುವಾರ ನಸುಕಿನಲ್ಲಿ ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದ ಹೊತ್ತಿಕೊಂಡ ಬೆಂಕಿಯಲ್ಲಿ ಮಾಲೀಕ ಹಾಗೂ ಕಾರ್ಮಿಕ ಕುಟುಂಬದ ಎಂಟು ಜನರು ಮೃತಪಟ್ಟಿದ್ದಾರೆ.

ಕಾರ್ಖಾನೆಯ ಮಾಲೀಕ ಉಸ್ಮಾನ್ ಮನ್ಸೂರಿ, ಅನಸ್ ಮನ್ಸೂರಿ (26), ಸಿಫಾ ಮನ್ಸೂರಿ(24), ಇಸೂಫ(1), ಕಾರ್ಮಿಕ ಕುಟುಂಬದ ಮೆಹತಾಬ ಬಾಗವಾನ್, ಪತ್ನಿ ಆಯಿಶಾ ಬಾಗವಾನ್, ಮಗ ಸಲ್ಮಾನ್ ಬಾಗವಾನ್, ಮಗಳು ಹೀನಾ ಶೇಖ ಮೃತರು.

ಬೆಳಗಿನಜಾವ 3.30ಕ್ಕೆ ಬೆಂಕಿ ಕಾಣಿಸಿಕೊಂಡಿದ್ದು ಕಾವಲುಗಾರನ ಗಮನಕ್ಕೆ ಬರುತ್ತಿದ್ದಂತೆ ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಿದ್ದಾರೆ. ತಕ್ಷಣ ಅಗ್ನಿಶಾಮಕ ದಳ ಘಟನಾ ಸ್ಥಳಕ್ಕೆ ಧಾವಿಸಿದೆ. ಆದರೆ ಕಾರ್ಖಾನೆ ಒಳಗೆ ಹೋಗಲು ರಸ್ತೆ ಕಿರಿದಾಗಿ ಇದ್ದಿದ್ದರಿಂದ ಅಡಚಣೆಯಾಯಿತು. ಅಷ್ಟರಲ್ಲಿ ಬೆಂಕಿ ವ್ಯಾಪಕವಾಗಿ ಹೊತ್ತಿಕೊಂಡಿದ್ದರಿಂದ ಒಳಗಿದ್ದವರನ್ನು ಹೊರ ತರಲು ಸಾಧ್ಯ ಆಗಲಿಲ್ಲ. 'ಬೆಂಕಿ ನಿಯಂತ್ರಿಸಲು ಸುಮಾರು 5ರಿಂದ 6 ಗಂಟೆ ಹರಸಾಹಸ ಪಡಬೇಕಾಯಿತು' ಎಂದು ಅಗ್ನಿಶಾಮಕ ದಳದವರು ತಿಳಿಸಿದ್ದಾರೆ.

ಕಾರ್ಖಾನೆಯಲ್ಲಿ ಟವೆಲ್, ಇನ್ನಿತರ ವಸ್ತುಗಳನ್ನು ತಯಾರಿಸಲಾಗುತ್ತಿತ್ತು.

'ಚಿನ್ನಸ್ವಾಮಿ ಫಾಲ್ಸ್..ಎಂಥ ಮಳೆ..'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇದು ಚಿನ್ನಸ್ವಾಮಿ ಫಾಲ್ಸ್..ಎಂಥ ಮಳೆ ಮಾರ್ರೆ..'

ಶನಿವಾರ ರಾತ್ರಿ ನಗರದಲ್ಲಿ ಸುರಿದ ಮಳೆಯಿಂದಾಗಿ ರಸ್ತೆಗಳಲ್ಲಿ ಅಪಾರ ಪ್ರಮಾಣದ ನೀರು ತುಂಬಿದ್ದು ಹೌದು. ಆದರೆ, ಐಪಿಎಲ್ ಪಂದ್ಯ ಆಯೋಜನೆಗೊಂಡಿದ್ದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸೇರಿದ್ದ ಕ್ರಿಕೆಟ್‌ಪ್ರಿಯರಿಗೆ 'ಜಲಪಾತ' ದರ್ಶನವಾಯಿತು.

ಸಂಜೆ ಆರಂಭವಾದ ಮಳೆ ರಾತ್ರಿ ಸುಮಾರು 11ರವರೆಗೂ ಸುರಿಯುತ್ತಲೇ ಇತ್ತು. ಇದರಿಂದಾಗಿ ಪಂದ್ಯವನ್ನು ರದ್ದುಗೊಳಿಸಲಾಯಿತು. ರಾತ್ರಿ 10.24ಕ್ಕೆ ರದ್ದು ಮಾಡಿದ ಘೋಷಣೆ ಹೊರಬೀಳುವವರೆಗೂ ಪ್ರೇಕ್ಷಕರ ಗ್ಯಾಲರಿಯಲ್ಲಿದ್ದ ಅಭಿಮಾನಿಗಳು ಹೊರಹೋಗಿರಲಿಲ್ಲ. ಆದರೆ, ಕೆಲವು ಗ್ಯಾಲರಿಯ ಮೇಲ್ಛಾವಣಿಗಳು ಸೋರುತ್ತಿದ್ದವು. ಇಂತಹ ಒಂದು ದೃಶ್ಯವನ್ನು ಇನ್ಸ್ಟಾಗ್ರಾಮ್‌ನಲ್ಲಿ ಪೋಸ್ಟ್ ಮಾಡಿರುವ (@269signoff) ಪ್ರೇಕ್ಷಕರ ಮಾತುಗಳು ಹರಿದಾಡುತ್ತಿವೆ. 'ಎಂಟ್ರಿಗೆ ₹4400 ಕೊಟ್ಟು ಫಾಲ್ಸ್ ನೋಡಲು ಬಂದಿದ್ದೇವೆ' ಎಂದೂ ಅವರು ಹೇಳುತ್ತಾರೆ.

ಮಳೆ ನಿಂತ 45 ನಿಮಿಷಗಳ ಅವಧಿಯಲ್ಲಿಯೇ ಮೈದಾನವನ್ನು ಆಟಕ್ಕೆ ಸಜ್ಜುಗೊಳಿಸಬಹುದಾದ ಸಬ್ ಏರ್ ವ್ಯವಸ್ಥೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿದೆ. ಆದ್ದರಿಂದ ಮಳೆ ನಿಂತು ಪಂದ್ಯ ಆರಂಭವಾಗುತ್ತದೆ ಎನ್ನುವ ನಿರೀಕ್ಷೆಯಲ್ಲಿಯೇ ಬಹುತೇಕರು ತಮ್ಮ ಜಾಗ ಬಿಟ್ಟು ಕದಲಿರಲಿಲ್ಲ.

'ದುಬಾರಿ ಟಿಕೆಟ್‌ಗಳನ್ನು ಕಷ್ಟಪಟ್ಟು ಖರೀದಿಸಿ ಬಂದಿದ್ದೇವೆ. ಮಳೆಯಿಂದ ಪಂದ್ಯ ನಡೆಯಲಿಲ್ಲ. ಆದರೆ ಮಳೆ, ಚಳಿಯಿಂದ ರಕ್ಷಿಸಿಕೊಳ್ಳಲು ಸರಿಯಾದ ವ್ಯವಸ್ಥೆ ಕಲ್ಪಿಸಬೇಕು. ಬಹಳಷ್ಟು ಕಡೆ ಚಾವಣಿಗಳು ಮುರಿದುಹೋಗಿವೆ. ದುರಸ್ತಿ ಮಾಡಿಸಬೇಕಲ್ಲವೇ' ಎಂದು ಬಿ.ಟಿ.ಎಂ ಬಡಾವಣೆಯಿಂದ ಬಂದಿದ್ದ ವಸಂತ್ ವೈ.ಎಸ್. ಪ್ರಶ್ನಿಸುತ್ತಾರೆ.

ಅಭಿಮಾನಿಗಳ ಸಂಭ್ರಮ: ಈಚೆಗಷ್ಟೇ ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಹೇಳಿದ ವಿರಾಟ್ ಕೊಹ್ಲಿ ಅವರ ಗೌರವಕ್ಕಾಗಿ ಅಭಿಮಾನಿಗಳು ಬಿಳಿ ಪೋಷಾಕು ಧರಿಸಿ ಕ್ರೀಡಾಂಗಣಕ್ಕೆ ಬಂದಿದ್ದರು. ಈ ಸಂದರ್ಭದಲ್ಲಿ ಕೆಲವು ಅಭಿಮಾನಿಗಳು ಆಸಕ್ತಿಕರ ವಿಡಿಯೊಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ.

ಕ್ರೀಡಾಂಗಣದ ಮೇಲಿಂದ ಬೆಳ್ಳಕ್ಕಿಗಳ ಹಿಂಡು ಹಾರಿ ಹೋಗುವ ದೃಶ್ಯ ತುಣುಕನ್ನು ಇನ್ಸ್ಟಾಗ್ರಾಮ್‌ನಲ್ಲಿ (@siliconcity.bengaluru) ಹಾಕಿರುವ ಪ್ರೇಕ್ಷಕರೊಬ್ಬರು 'ಪ್ರಕೃತಿ ಕೂಡ ಶ್ವೇತವರ್ಣಕ್ಕೆ ತಿರುಗಿದೆ. ಕಿಂಗ್ ಕೊಹ್ಲಿಗೆ ಗೌರವವಂದನೆ ಸಲ್ಲಿಸುತ್ತಿದೆ' ಎಂದು ಬರೆದಿದ್ದಾರೆ.

ಮಳೆಯನ್ನೂ ಲೆಕ್ಕಿಸದೇ ಕ್ರೀಡಾಂಗಣದಲ್ಲಿಯೇ ಸುಮಾರು ಆರೇಳು ತಾಸು ಕಾದಿದ್ದ ಅಭಿಮಾನಿಗಳಿಗೆ ಆರ್‌ಸಿಬಿ ತಂಡದ ನಾಯಕ ರಜತ್ ಪಾಟೀದಾರ್ ಮತ್ತು ಕೋಲ್ಕತ್ತ ನೈಟ್ ರೈಡರ್ಸ್ ತಂಡದವರು ಎಕ್ಸ್‌ನಲ್ಲಿ ಕೃತಜ್ಞತೆ ಸಲ್ಲಿಸಿದ್ದಾರೆ.

ವಿರಾಟ್ ಕೊಹ್ಲಿ ಚಿತ್ರವಿರುವ ಪೋಷಾಕು ಧರಿಸಿದ್ದ ಅಭಿಮಾನಿಗಳು ಪ್ರಜಾವಾಣಿ ಚಿತ್ರ

ಟಿಕೆಟ್ ಹಣ ಮರುಪಾವತಿ

ಶನಿವಾರ ಸುರಿದ ಮಳೆಯಿಂದಾಗಿ ಆರ್‌ಸಿಬಿ ಮತ್ತು ಕೋಲ್ಕತ್ತ ನೈಟ್ ರೈಡರ್ಸ್ ನಡುವಣ ಪಂದ್ಯವು ರದ್ದಾಗಿದ್ದರಿಂದ ಪ್ರೇಕ್ಷಕರಿಗೆ ಟಿಕೆಟ್ ಹಣವನ್ನು ಮರು ಪಾವತಿಸಲಾಗುವುದು ಎಂದು ಆರ್‌ಸಿಬಿ ತಿಳಿಸಿದೆ.

'ಆನ್‌ಲೈನ್ ಮೂಲಕ ಪಡೆದ ಟಿಕೆಟ್‌ಗಳ ಮೌಲ್ಯವನ್ನು ಆಯಾ ಅಧಿಕೃತ ಖಾತೆಗಳಿಗೆ ಮರುಪಾವತಿ ಮಾಡಲಾಗುವುದು. ಹತ್ತು ದಿನಗಳ ಅವಧಿಯಲ್ಲಿ ಈ ಪ್ರಕ್ರಿಯೆ ನಡೆಯಲಿದೆ. ಮೇ 31ರೊಳಗೆ ಮರುಪಾವತಿ ಲಭಿಸದಿದ್ದರೆ ಇಮೇಲ್ refund@ticketgenie.in ಮೂಲಕ ಸಂಪರ್ಕಿಸಬೇಕು. ಇನ್ನುಳಿದ ಮುದ್ರಿತ ಟಿಕೆಟ್‌ಗಳನ್ನು ಖರೀದಿಸಿದ ಸ್ಥಾನಗಳಲ್ಲಿಯೇ ಮರಳಿಕೊಟ್ಟು ಹಣ ಪಡೆಯಬಹುದಾಗಿದೆ ಎಂದು ಆರ್‌ಸಿಬಿ 'ಎಕ್ಸ್'ನಲ್ಲಿ ಪ್ರಕಟಿಸಿದೆ. ಹೆಚ್ಚಿನ ಮಾಹಿತಿಗೆ rcbtickets@ticketgenie.in ಇಮೇಲ್ ಮಾಡಬಹುದು ಎಂದೂ ತಿಳಿಸಿದೆ.

ರಾಹುಲ್ ಶತಕ • ಸಾಯಿ–ಗಿಲ್ ಅಜೇಯ ಜೊತೆಯಾಟ • ಆರ್‌ಸಿಬಿ, ಕಿಂಗ್ಸ್‌ಗೆ ಸಿಹಿಸುದ್ದಿ

ಪ್ಲೇ ಆಫ್‌ಗೆ ಗುಜರಾತ್ ಲಗ್ಗೆ

ನವದೆಹಲಿ (ಪಿಟಿಐ): ದೇಶದ ರಾಜಧಾನಿಯ ಅಂಗಳದಲ್ಲಿ ಭಾನುವಾರ ರಾತ್ರಿ ಎರಡು ಚೆಂದದ ಶತಕಗಳು ದಾಖಲಾದವು. ಅದರಲ್ಲಿ ಒಂದು ಕನ್ನಡಿಗ ಕೆ.ಎಲ್. ರಾಹುಲ್, ಮತ್ತೊಂದನ್ನು ತಮಿಳುನಾಡಿನ ಸಾಯಿ ಸುದರ್ಶನ್ ದಾಖಲಿಸಿದರು.

ಅಂತಿಮವಾಗಿ ಸಾಯಿ ಶತಕದ ಬಲದಿಂದ ಗುಜರಾತ್ ಟೈಟನ್ಸ್ ತಂಡವು 10 ವಿಕೆಟ್‌ಗಳಿಂದ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಜಯಿಸಿತು. ಡೆಲ್ಲಿ ತಂಡದ ಪಾಲಿಗೆ ರಾಹುಲ್ ಶತಕ ಮಾತ್ರ ಸಿಹಿನೆನಪಾಗಿ ದಾಖಲಾಯಿತು.

ಶುಭಮನ್ ಗಿಲ್ ನಾಯಕತ್ವದ ಬಳಗವು ಈ ಗೆಲುವಿನೊಂದಿಗೆ ಒಟ್ಟು 18 ಅಂಕಗಳಿಸಿ ಪ್ಲೇಆಫ್‌ಗೆ ಲಗ್ಗೆ ಇಟ್ಟಿತು. ತಲಾ 17 ಅಂಕ ಗಳಿಸಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಪಂಜಾಬ್ ಕಿಂಗ್ಸ್ ತಂಡಗಳೂ ಪ್ಲೇಆಫ್ ಪ್ರವೇಶಿಸಿದವು. ಈ ಸುತ್ತಿಗೆ ಪ್ರವೇಶಿಸುವ ನಾಲ್ಕನೇ ತಂಡ ನಿರ್ಧಾರವಾಗಬೇಕಿದೆ. ಅದಕ್ಕಾಗಿ ಮುಂಬೈ ಇಂಡಿಯನ್ಸ್, ಡೆಲ್ಲಿ ಕ್ಯಾಪಿಟಲ್ಸ್ ಮತ್ತು ಲಖನೌ ಸೂಪರ್ ಜೈಂಟ್ಸ್ ತಂಡಗಳು ಸ್ಪರ್ಧೆಯಲ್ಲಿವೆ.

ರಾಹುಲ್ –ಸಾಯಿ ಜಿದ್ದಾಜಿದ್ದಿ: ಅರುಣ್ ಜೇಟ್ಲಿ ಕ್ರೀಡಾಂಗಣ ದಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ಟಾಸ್ ಗೆದ್ದ ಟೈಟನ್ಸ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭಿಕ ಬ್ಯಾಟರ್ ರಾಹುಲ್ (ಔಟಾಗದೇ 112; 65ಎ) ಅವರ ಶತಕದ ಬಲದಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಗುಜರಾತ್ ಟೈಟನ್ಸ್ ವಿರುದ್ಧ 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 199 ರನ್ ಗಳಿಸಿತು.

ಇದಕ್ಕುತ್ತರವಾಗಿ ಟೈಟನ್ಸ್ ತಂಡವು 19 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 205 ರನ್ ಗಳಿಸಿತು. ಸಾಯಿ (ಅಜೇಯ 108; 61ಎ, 4x12, 6x4) ಮತ್ತು ಶುಭಮನ್ ಗಿಲ್ (ಔಟಾಗದೇ 93; 53ಎ, 4x3, 6x7) ಅವರು ತಂಡವನ್ನು ಗೆಲುವಿನ ದಡ ಸೇರಿಸಿದರು.

ಬ್ಯಾಟಿಂಗ್‌ಗೆ ಇಳಿದ ಆತಿಥೇಯ ತಂಡಕ್ಕೆ ಉತ್ತಮ ಆರಂಭ ದೊರೆಯಲಿಲ್ಲ. ಫಾಫ್ ಡುಪ್ಲೆಸಿ ಕೇವಲ 5 ರನ್ ಗಳಿಸಿ, ಅರ್ಷದ್ ಖಾನ್ ಎಸೆತದಲ್ಲಿ ಔಟಾದರು. ಈ ಸಮಯದಲ್ಲಿ ರಾಹುಲ್ ತಾಳ್ಮೆಯಿಂದ ಆಡಿದರು. ಅವರಿಗೆ ಅಭಿಷೇಕ್ ಪೊರೆಲ್ (30; 19ಎ, 4x1, 6x3) ಉತ್ತಮ ಜೊತೆ ನೀಡಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ ಇಬ್ಬರೂ 90 (52ಎ) ರನ್ ಕಲೆಹಾಕಿದರು.

60 ಎಸೆತಗಳಲ್ಲಿ ಶತಕದ ಗಡಿ ದಾಟಿದರು. ಕರ್ನಾಟಕ ತಂಡದಲ್ಲಿ ತಮ್ಮೊಂದಿಗೆ ಆಡುವ ವೇಗಿ ಪ್ರಸಿದ್ಧ ಕೃಷ್ಣ ಅವರು ಹಾಕಿದ 19ನೇ ಓವರ್‌ನಲ್ಲಿ ಬೌಂಡರಿ ಗಳಿಸಿ ಶತಕ ಪೂರೈಸಿದ್ದು ವಿಶೇಷ. ರಾಹುಲ್ ಅವರಿಗೆ ಐಪಿಎಲ್‌ನಲ್ಲಿ ಇದು 5ನೇ ಶತಕವಾಗಿದೆ. 2022ರ ಐಪಿಎಲ್‌ನಲ್ಲಿ ಅವರು ತಮ್ಮ ನಾಲ್ಕನೇ ಶತಕ ದಾಖಲಿಸಿದ್ದರು.

ಟೂರ್ನಿಯುದ್ದಕ್ಕೂ ಅಮೋಘ ಬ್ಯಾಟಿಂಗ್ ಪ್ರದರ್ಶಿಸುತ್ತಿರುವ ತಮಿಳುನಾಡಿನ ಆಟಗಾರ ಸಾಯಿ ಪ್ರಸಕ್ತ ಐಪಿಎಲ್‌ನಲ್ಲಿ ತಮ್ಮ ಮೊದಲ ಶತಕ ದಾಖಲಿಸಿದರು. 56 ಎಸೆತಗಳಲ್ಲಿ 100ರ ಗಡಿ ದಾಟಿದರು. ಒಂದು ಡಜನ್ ಬೌಂಡರಿ ಹೊಡೆದ ಸಾಯಿ, ಮೂರು ಅಮೋಘ ಸಿಕ್ಸರ್‌ಗಳನ್ನೆತ್ತಿದರು. ಗಿಲ್ ಅವರು ಈ ಟೂರ್ನಿಯಲ್ಲಿ ಎರಡನೇ ಸಲ 90ಕ್ಕಿಂತ ಹೆಚ್ಚು ಮೊತ್ತವನ್ನು ದಾಖಲಿಸಿದರು.

ಸಂಕ್ಷಿಪ್ತ ಸ್ಕೋರು: ಡೆಲ್ಲಿ ಕ್ಯಾಪಿಟಲ್ಸ್: 20 ಓವರ್‌ಗಳಲ್ಲಿ 3ಕ್ಕೆ 199 (ಕೆ.ಎಲ್. ರಾಹುಲ್ ಔಟಾಗದೇ 112, ಅಭಿಷೇಕ್ ಪೊರೆಲ್ 30, ಅಕ್ಷರ್ ಪಟೇಲ್ 25, ಅರ್ಷದ್ ಖಾನ್ 7ಕ್ಕೆ1, ಪ್ರಸಿದ್ಧಕೃಷ್ಣ 40ಕ್ಕೆ1, ಆರ್. ಸಾಯಿಕಿಶೋರ್ 47ಕ್ಕೆ1) ಗುಜರಾತ್ ಟೈಟನ್ಸ್: 19 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 205 (ಸಾಯಿ ಸುದರ್ಶನ್ ಔಟಾಗದೇ 108, ಶುಭಮನ್ ಗಿಲ್ ಔಟಾಗದೇ 93) ಫಲಿತಾಂಶ: ಗುಜರಾತ್ ಟೈಟನ್ಸ್ ತಂಡಕ್ಕೆ 10 ವಿಕೆಟ್‌ಗಳ ಜಯ. ಪಂದ್ಯದ ಆಟಗಾರ: ಸಾಯಿ ಸುದರ್ಶನ್



ಟಿ20 ಕ್ರಿಕೆಟ್‌ನಲ್ಲಿ ವೇಗದ 8000 ರನ್ (ಇನಿಂಗ್ಸ್‌ಗಳಲ್ಲಿ)

ಇನಿಂಗ್ಸ್	ಆಟಗಾರ
213	ಕ್ರಿಸ್ ಗೇಲ್
218	ಬಾಬರ್ ಆಜಂ
224	ಕೆ.ಎಲ್. ರಾಹುಲ್
243	ವಿರಾಟ್ ಕೊಹ್ಲಿ
244	ಮೊಹಮ್ಮದ್ ರಿಜ್ವಾನ್

ಅಜೇಯ ಶತಕಗಳು (ಐಪಿಎಲ್)

ಶತಕ	ಆಟಗಾರ
5	ಕೆ.ಎಲ್. ರಾಹುಲ್
4	ವಿರಾಟ್ ಕೊಹ್ಲಿ
4	ಕ್ರಿಸ್ ಗೇಲ್

ಮೊದಲ ವಿಕೆಟ್‌ಗೆ ಗರಿಷ್ಠ ರನ್ ಜೊತೆಯಾಟ (ಐಪಿಎಲ್)

ರನ್	ಆಟಗಾರರು	ತಂಡ	ಎದುರಾಳಿ	ವರ್ಷ
210*	ಕೆ.ಎಲ್.ರಾಹುಲ್–ಕ್ವಿಂಟನ್ ಡಿಕಾಕ್	ಎಲ್‌ಎಸ್‌ಜಿ	ಕೆಕೆಆರ್	2022
210	ಶುಭಮನ್ ಗಿಲ್–ಸಾಯಿ ಸುದರ್ಶನ್	ಜಿಟಿ	ಸಿಎಸ್‌ಕೆ	2024
205*	ಶುಭಮನ್ ಗಿಲ್–ಸಾಯಿ ಸುದರ್ಶನ್	ಜಿಟಿ	ಡಿಸಿ	2025

ಡೆಲ್ಲಿ ಕ್ಯಾಪಿಟಲ್ಸ್ ಬ್ಯಾಟರ್ ಕೆ.ಎಲ್. ರಾಹುಲ್ ಆಟದ ಸೊಬಗು –ಪಿಟಿಐ ಚಿತ್ರಗಳು

ಕಿಂಗ್ಸ್ ಆಟಕ್ಕೆ ಶರಣಾದ ರಾಯಲ್ಸ್

ಹರಪ್ರೀತ್ ಬ್ರಾರ್ ಕೈಚಳಕ • ನೇಹಲ್–ಶಶಾಂಕ್ ಮಿಂಚು

ಜೈಪುರ (ಪಿಟಿಐ): ಎಡಗೈ ಸ್ಪಿನ್ನರ್ ಹರಪ್ರೀತ್ ಬ್ರಾರ್ ಅವರ ಕೈಚಳಕದಿಂದ ಪಂಜಾಬ್ ಕಿಂಗ್ಸ್ ತಂಡವು ಐಪಿಎಲ್ ಟೂರ್ನಿಯ ಪ್ಲೇ ಆಫ್ ಹಂತದ ಸನಿಹಕ್ಕೆ ಬಂದು ನಿಂತಿತು.

ಭಾನುವಾರ ಇಲ್ಲಿ ನಡೆದ ಪಂದ್ಯದಲ್ಲಿ ಬ್ರಾರ್ (22ಕ್ಕೆ3) ಅವರ ಪರಿಣಾಮಕಾರಿ ದಾಳಿಯಿಂದ ಪಂಜಾಬ್ ತಂಡವು 10 ರನ್ ಅಂತರದಿಂದ ರಾಜಸ್ಥಾನ ರಾಯಲ್ಸ್ ವಿರುದ್ಧ ಜಯಿಸಿತು.

ಸವಾಯಿ ಮಾನಸಿಂಗ್ ಕ್ರೀಡಾಂಗಣ ದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಕಿಂಗ್ಸ್ ತಂಡವು 20 ಓವರ್‌ಗಳಲ್ಲಿ 7ಕ್ಕೆ 219 ರನ್ ಗಳಿಸಿತು. ನೇಹಲ್ ವಧೇರಾ (70; 37ಎ, 4x5, 6x5) ಮತ್ತು ಶಶಾಂಕ್ ಸಿಂಗ್ (ಅಜೇಯ 59; 30ಎ, 4x5, 6x3) ಅವರ ಅರ್ಧ ಶತಕಗಳ ಬಲದಿಂದ ತಂಡವು ದೊಡ್ಡ ಮೊತ್ತ ಪೇರಿಸಿತು.

ಗುರಿ ಬೆನ್ನಟ್ಟಿದ ರಾಜಸ್ಥಾನ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 209 ರನ್ ಗಳಿಸಿತು. ತಂಡದ ಆರಂಭಿಕ ಬ್ಯಾಟರ್ ಯಶಸ್ವಿ ಜೈಸ್ವಾಲ್ (50; 25ಎ, 4x9, 6x1) ಮತ್ತು ಧ್ರುವ ಜುರೇಲ್ (53; 31ಎ, 4x3, 6x4) ಅವರಿಬ್ಬರ ಪ್ರಯತ್ನಕ್ಕೆ ಗೆಲುವಿನ ಫಲ ಸಿಗಲಿಲ್ಲ.

ಬ್ರಾರ್ ಕೈಚಳಕ: ಕಿಂಗ್ಸ್ ನಾಯಕ ಶ್ರೇಯಸ್ ಅಯ್ಯರ್ ಅವರಿಗೆ ಸಬ್‌ಸ್ಟಿಟ್ಯೂಟ್ ಆಗಿ ಕಣಕ್ಕಿಳಿದ ಬ್ರಾರ್ ಪಂದ್ಯ ಶ್ರೇಷ್ಠ ಗೌರವದೊಂದಿಗೆ ಮರಳಿದರು. ತಮ್ಮ ಕೈಬೆರಳಿಗೆ ಗಾಯವಾಗಿದ್ದರಿಂದ ಶ್ರೇಯಸ್ ವಿಶ್ರಾಂತಿ ಪಡೆದರು.

ರಾಜಸ್ಥಾನ ತಂಡದ ಆರಂಭಿಕ ಬ್ಯಾಟರ್, 14 ವರ್ಷದ ವೈಭವ್ ಸೂರ್ಯವಂಶಿ (40; 15ಎಸೆತ, 4x4, 6x4), ಯಶಸ್ವಿ ಮತ್ತು ಮಧ್ಯಮ ಕ್ರಮಾಂಕದ ಬ್ಯಾಟರ್ ರಿಯಾನ್ ಪರಾಗ್ ಅವರ ವಿಕೆಟ್‌ಗಳನ್ನು ಬ್ರಾರ್ ಗಳಿಸಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ ಯಶಸ್ವಿ ಮತ್ತು ವೈಭವ್ ಕೇವಲ 29 ಎಸೆತಗಳಲ್ಲಿ 76 ರನ್ ಸೇರಿಸಿದರು. ಐದನೇ ಓವರ್ ಬೌಲಿಂಗ್ ಮಾಡಿದ ಬ್ರಾರ್ ಎಸೆತದ ತಿರುವು ಅಂದಾಜಿಸುವಲ್ಲಿ ಎಡವಿದ ವೈಭವ್ ಅವರು ಝೇವಿಯರ್ ಬಾರ್ಟ್‌ಲೆಟ್ ಅವರಿಗೆ ಕ್ಯಾಚಿತ್ತರು.

ತಮ್ಮ ಎರಡನೇ ಸ್ಪೆಲ್‌ನಲ್ಲಿ ಬ್ರಾರ್ ಪಂದ್ಯಕ್ಕೆ ತಿರುವು ನೀಡುವಲ್ಲಿ ಯಶಸ್ವಿಯಾದರು. ಅಮೋಘವಾಗಿ ಬ್ಯಾಟಿಂಗ್ ಮಾಡುತ್ತಿದ್ದ ಯಶಸ್ವಿ ಆಟಕ್ಕೆ ಕಡಿವಾಣ ಹಾಕಿದರು. ಅರ್ಧಶತಕ ಗಳಿಸಿದ ಯಶಸ್ವಿ ಅವರ ವಿಕೆಟ್ ಪಡೆದ ಹರಪ್ರೀತ್, ಇನ್ನೊಂದು ಓವರ್‌ನಲ್ಲಿ ಪರಾಗ್ ಅವರನ್ನು ಕ್ಲೀನ್ ಬೌಲ್ಡ್ ಮಾಡಿದರು. ಈ ನಡುವೆಯೂ ಬೀಸಾಟವಾಡುತ್ತಿದ್ದ ಧ್ರುವ ಜುರೇಲ್ ಜಯದ ಭರವಸೆಯನ್ನು ಜೀವಂತವಾಗಿಟ್ಟಿದ್ದರು. ಆದರೆ ಕೊನೆಯ ಓವರ್‌ನಲ್ಲಿ ಮಾರ್ಕೊ ಯಾನ್ಸೆನ್ ಎಸೆತದಲ್ಲಿ ಮಿಚೆಲ್ ಓವನ್‌ಗೆ ಕ್ಯಾಚಿತ್ತ ಧ್ರುವ ನಿರ್ಗಮಿಸಿದರು.

ನೇಹಲ್, ಶಶಾಂಕ್ ಆಟ: ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಪಂಜಾಬ್ ತಂಡದ ಆರಂಭ ಉತ್ತಮವಾಗಿರಲಿಲ್ಲ. ತುಷಾರ್ ದೇಶಪಾಂಡೆ (37ಕ್ಕೆ2) ಅವರ ನಿಖರ ದಾಳಿಯಿಂದಾಗಿ ಅಗ್ರಕ್ರಮಾಂಕದ ಬ್ಯಾಟರ್‌ಗಳು ಬೇಗನೆ ನಿರ್ಗಮಿಸಿದರು. ಇದರಿಂದಾಗಿ ತಂಡದ ಮೊತ್ತವು 34 ರನ್‌ಗಳಾಗುವಷ್ಟರಲ್ಲಿ 3 ವಿಕೆಟ್‌ಗಳು ಪತನವಾದವು. ಈ ಸಂದರ್ಭದಲ್ಲಿ ನೇಹಲ್ ಮತ್ತು ನಾಯಕ ಶ್ರೇಯಸ್ (30; 25ಎ, 4x5) ಇನಿಂಗ್ಸ್‌ಗೆ ಮರುಜೀವ ತುಂಬಿದರು. 4ನೇ ವಿಕೆಟ್ ಜೊತೆಯಾಟದಲ್ಲಿ 67 (44ಎ) ರನ್ ಸೇರಿಸಿದರು. ಶ್ರೇಯಸ್ ವಿಕೆಟ್ ಗಳಿಸಿದ ರಿಯಾನ್ ಪರಾಗ್ ಅವರು ಜೊತೆಯಾಟವನ್ನು ಮುರಿದರು.

ನೇಹಲ್ ಜೊತೆಗೂಡಿದ ಶಶಾಂಕ್ ಅವರ ವೇಗದ ಆಟಕ್ಕೆ ಬೌಲರ್‌ಗಳು ಬಸವಳಿದರು. ಇಬ್ಬರೂ ಸೇರಿ 33 ಎಸೆತಗಳಲ್ಲಿ 58 ರನ್ ಗಳಿಸಿದರು. ಆಕಾಶ್ ಮಧ್ವಾಲ್ ಅವರ ಎಸೆತದಲ್ಲಿ ನೇಹಲ್ ಔಟಾದಾಗ ಇನಿಂಗ್ಸ್‌ನಲ್ಲಿ ನಾಲ್ಕು ಓವರ್‌ಗಳು ಬಾಕಿಯಿದ್ದವು. ಶಶಾಂಕ್ ಅವರೊಂದಿಗೆ ಸೇರಿಕೊಂಡ ಅಫ್ಗನ್ ಆಟಗಾರ ಅಜ್ಮತ್‌ವುಲ್ಲಾ ಒಮರ್‌ಝೈ (ಔಟಾಗದೇ 21, 9ಎ) ಅವರಿಬ್ಬರ ಆಟ ರಂಗೇರಿತು. ಇಬ್ಬರೂ 60 ರನ್‌ಗಳನ್ನು ಸೂರೆ ಮಾಡಿದರು.

ಸಂಕ್ಷಿಪ್ತ ಸ್ಕೋರ್: ಪಂಜಾಬ್ ಕಿಂಗ್ಸ್: 20 ಓವರ್‌ಗಳಲ್ಲಿ 5ಕ್ಕೆ 219 (ನೇಹಲ್ ವಧೇರಾ 70, ಶ್ರೇಯಸ್ ಅಯ್ಯರ್ 30, ಶಶಾಂಕ್ ಸಿಂಗ್ ಔಟಾಗದೇ 59; ತುಷಾರ್ ದೇಶಪಾಂಡೆ 37ಕ್ಕೆ 2, ರಿಯಾನ್ ಪರಾಗ್ 26ಕ್ಕೆ 1). ರಾಜಸ್ಥಾನ ರಾಯಲ್ಸ್: 20 ಓವರ್‌ಗಳಲ್ಲಿ 7ಕ್ಕೆ 209 (ಯಶಸ್ವಿ ಜೈಸ್ವಾಲ್ 50, ವೈಭವ್ ಸೂರ್ಯವಂಶಿ 40, ಧ್ರುವ ಜುರೇಲ್ 53; ಮಾರ್ಕೊ ಯಾನ್ಸೆನ್ 41ಕ್ಕೆ 2, ಹರಪ್ರೀತ್ ಬ್ರಾರ್ 22ಕ್ಕೆ 3, ಅಜ್ಮತ್‌ವುಲ್ಲಾ ಒಮರ್‌ಜೈ 44ಕ್ಕೆ 2). ಪಂದ್ಯದ ಆಟಗಾರ: ಹರಪ್ರೀತ್ ಬ್ರಾರ್.

ಪಂಜಾಬ್ ಕಿಂಗ್ಸ್ ತಂಡದ ಬೌಲರ್ ಹರಪ್ರೀತ್ ಬ್ರಾರ್ (ಎಡ) ಅವರನ್ನು ಸಹ ಆಟಗಾರರು ಅಭಿನಂದಿಸಿದರು –ಪಿಟಿಐ ಚಿತ್ರ

ಐಪಿಎಲ್: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
ಗುಜರಾತ್ ಟೈಟನ್ಸ್	12	9	3	18	0.795
ರಾಯಲ್ ಚಾಲೆಂಜರ್ಸ್ ಬೆಂಗಳೂರು	12	8	3	17	0.482
ಪಂಜಾಬ್ ಕಿಂಗ್ಸ್	12	8	3	17	0.389
ಮುಂಬೈ ಇಂಡಿಯನ್ಸ್	12	7	5	14	1.156
ಡೆಲ್ಲಿ ಕ್ಯಾಪಿಟಲ್ಸ್	12	6	5	13	0.260
ಕೋಲ್ಕತ್ತ ನೈಟ್ ರೈಡರ್ಸ್	13	5	6	12	0.193
ಲಖನೌ ಸೂಪರ್ ಜೈಂಟ್ಸ್	11	5	6	10	-0.469
ಸನ್‌ರೈಸರ್ಸ್ ಹೈದರಾಬಾದ್	11	3	7	7	-1.192
ರಾಜಸ್ಥಾನ ರಾಯಲ್ಸ್	13	3	10	6	-0.701
ಚೆನ್ನೈ ಸೂಪರ್ ಕಿಂಗ್ಸ್	12	3	9	6	-0.992

ಆರೆಂಜ್ ಕ್ಯಾಪ್
ಸಾಯಿ ಸುದರ್ಶನ್ (ಜಿಟಿ) 617 ರನ್

ಪರ್ಪಲ್ ಕ್ಯಾಪ್
ಪ್ರಸಿದ್ಧ ಕೃಷ್ಣ (ಜಿಟಿ) 21 ವಿಕೆಟ್

ಸೂಪರ್ ಜೈಂಟ್ಸ್‌ಗೆ ಸನ್‌ರೈಸರ್ಸ್ ಹೈದರಾಬಾದ್ ಸವಾಲು ಇಂದು

ಲಖನೌ (ಪಿಟಿಐ): ಈ ಸಲ ಐಪಿಎಲ್‌ನಲ್ಲಿ ಪ್ಲೇ ಆಫ್ ಪ್ರವೇಶದ ಚಿಕ್ಕ ಅವಕಾಶವೊಂದನ್ನು ಉಳಿಸಿಕೊಂಡಿರುವ ಲಖನೌ ಸೂಪರ್ ಜೈಂಟ್ಸ್ ತಂಡವು ಸೋಮವಾರ ಸನ್‌ರೈಸರ್ಸ್ ಹೈದರಾಬಾದ್ ಎದುರು ಕಣಕ್ಕಿಳಿಯಲಿದೆ.

ರಿಷಭ್ ಪಂತ್

ಲಖನೌ ತಂಡವು ತನ್ನ ಪಾಲಿಗೆ ಉಳಿದಿರುವ 3 ಪಂದ್ಯಗಳಲ್ಲಿಯೂ ಗೆದ್ದರೆ ಒಟ್ಟು 16 ಅಂಕಗಳನ್ನು ಗಳಿಸುತ್ತದೆ. ಅದರೊಂದಿಗೆ ನೆಟ್ ರನ್‌ರೇಟ್ ಕೂಡ ಉತ್ತಮಪಡಿಸಿಕೊಳ್ಳಬೇಕು. ಅದೃಷ್ಟವೂ ಜೊತೆಯಾಗಬೇಕು.

ಆದರೆ ಈ ಮೂರು ಹಣಾಹಣಿಗಳಲ್ಲಿ ಒಂದರಲ್ಲಿ ಸೋತರೂ ಲಖನೌ ತಂಡದ ಪ್ಲೇ ಆಫ್ ಅವಕಾಶದ ಬಾಗಿಲು ಮುಚ್ಚುತ್ತದೆ. ಇದೆಲ್ಲದರೊಂದಿಗೆ ಪಂತ್ ಅವರಿಗೆ ತಮ್ಮ ಬ್ಯಾಟಿಂಗ್ ಲಯಕ್ಕೆ ಮರಳುವ ಸವಾಲು ಕೂಡ ಇದೆ. ನಿಕೊಲಸ್ ಪೂರನ್, ಏಡನ್ ಮರ್ಕರಂ (348 ರನ್), ಆಯುಷ್ ಬಡೋಣಿ (326 ರನ್) ಹಾಗೂ ಡೇವಿಡ್ ಮಿಲ್ಲರ್ (160 ರನ್) ಅವರು ಕೂಡ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಡಿದರೆ ಬ್ಯಾಟಿಂಗ್ ವಿಭಾಗ ಬಲಗೊಳ್ಳಲಿದೆ.

ಶಾರ್ದೂಲ್ ಠಾಕೂರ್, ಆವೇಶ್ ಖಾನ್ (10 ವಿಕೆಟ್), ಸ್ಪಿನ್ನರ್ ದಿಗ್ವೇಶ್ ಸಿಂಗ್ ರಾಠಿ (12 ವಿಕೆಟ್), ರವಿ ಬಿಷ್ಣೋಯಿ ಅವರು ಸನ್‌ರೈಸರ್ಸ್ ತಂಡದ ಸ್ಫೋಟಕ ಶೈಲಿಯ ಬ್ಯಾಟರ್‌ಗಳನ್ನು ಕಟ್ಟಿಹಾಕುವಲ್ಲಿ ಯಶಸ್ವಿಯಾದರೆ ಆತಿಥೇಯರಿಗೆ ಗೆಲುವು ಒಲಿಯಬಹುದು.

ಪ್ಯಾಟ್ ಕಮಿನ್ಸ್ ನಾಯಕತ್ವದ ಸನ್‌ರೈಸರ್ಸ್ ತಂಡದ ಅಭಿಷೇಕ್ ಶರ್ಮಾ (311 ರನ್), ಇಶಾನ್ ಕಿಶನ್, ಟ್ರಾವಿಸ್ ಹೆಡ್, ನಿತೀಶ್ ಕುಮಾರ್ ರೆಡ್ಡಿ ಅವರೂ ಬ್ಯಾಟಿಂಗ್ ವಿಭಾಗಕ್ಕೆ ಶಕ್ತಿ ತುಂಬಬೇಕಿದೆ. ಮೊಹಮ್ಮದ್ ಶಮಿ, ಜಯದೇವ್ ಉನದ್ಕತ್ ಮತ್ತು ಹರ್ಷಲ್ ಪಟೇಲ್ ಎದುರಾಳಿ ಬ್ಯಾಟರ್‌ಗಳನ್ನು ಒತ್ತಡಕ್ಕೆ ತಳ್ಳುವ ಸಮರ್ಥರಾಗಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್

INDIA'S FIRST 5 YEAR WARRANTY* *Conditions apply
ಆಧಾರ್^ ಆಧಾರಿತ ಲೋನ್ & ಕ್ಯಾಶ್ EMI
₹60^ EMI/ದಿನಕ್ಕೆ
5% ತಕ್ಷಣ ರಿಯಾಯಿತಿ^ ಆಯ್ದ ಕಾರ್ಡ್‌ಗಳ ಮೇಲೆ
AVAILABLE ON Flipkart amazon

Hero MotoCorp Ltd. Regd. Office: The Grand Plaza, Plot No.2, Nelson Mandela Road, Vasant Kunj Phase - II, New Delhi - 110070, India. | CIN: L35911DL1984PLC017354 | For further information, contact your nearest Hero MotoCorp authorised outlet CALL TOLL-FREE 1800 266 0018 or visit us on www.HeroMotoCorp.com. Accessories and features shown may not be a part of standard fitment. Always wear a helmet while riding a two-wheeler. ^^Mileage of Hero Passion+ as per internal testing conditions. *Hero MotoCorp offer warranty for a period of 5 years or 70000 Km on all its motorcycles and 5 years or 50000 Km on all its scooters, whichever is earlier, from the date of purchase. ^Finance offer is at the sole discretion of the Financier, subject to its respective T&Cs. The 5% cashback upto ₹5000/- is applicable on minimum transaction of ₹40,000. Available at select dealerships. #Ex showroom price of Hero Passion+ i3S self start drum price in Raipur. *T&C apply.

ಟೋಲ್ ಫ್ರೀ 1800 266 0018

AUTHORISED DEALERS: BENGALURU - HOSUR ROAD: RT KRISHNA HERO - PH: 9289923177. LALBAGH ROAD: PRAKASH HERO - PH: 9289922117. BYATARAYANAPURA: BIMAL HERO - PH: 9289922863. PEENYA: SAI HERO - PH: 9289922830. HOSUR ROAD: RT KRISHNA HERO - PH: 9289923177. BANASHANKARI: SAI HERO - PH: 9289922476. BANASWADI: BHAGATH HERO - PH: 9289922738. MAGADI ROAD: POORNA HERO - PH: 9289923212. MARATHALLI: VAAYURATHA HERO - PH: 9289923811. RAJAJI NAGAR: MAX HERO - PH: 9289923023. KOLAR: SAI BALAJI HERO PH. 9821745024. CHIKKABALLAPUR: MANJUNATH HERO - PH: 9821751332. TUMKUR: SAI HERO - PH: 9289922986. B.H.ROAD – SAI HERO, PH. 7022752841. KAMAKSHIPALYA: POORNA MOTORS – PH: 9606922534. JP NAGAR: SAI HERO, PH: 99002 36280. KANAKPURA ROAD: SAI HERO - 8904677394. HOSKOTE: BHAGATH HERO - PH: 8884600051. K R PURAM: BHAGATH HERO - PH: 7829488706. JIGANI: RT KRISHNA HERO – PH: 8762860999. RT NAGAR: BIMAL HERO 9535327710. TIPTUR: SAI HERO PH. 9164840456. KUNIGAL: SAI HERO - PH: 7022752858. DODDABALLAPURA: BIMAL HERO 9742202125. Associate Dealer: BELATHUR - 9902649569. MADIWALA - 9731660639. BANASHANKARI 3RD STAGE - 9513353864. BANNERGHATTA ROAD – 41209619. KENGERI - 9739275523. YELAHANKA - 28462524, 9341025589. MYSORE ROAD: 9611997733. DEVANAHALLI - 9964560599. KANAKAPURA - 9880212346. BAGEPALLI - 282828. SRINIVASPUR - 9738504002. SIDLAGHATTA - 254827. NELAMANGALA - 27723395. PAVAGADA - 9740324639. MADHUGIRI - 9972278989. VIJAYAPURA: 9449619920. SIRA: 9448417393. CHANDAPURA: 9481329064. VIDYARANYAPURA: 9606934533. MAGADI: 9482090890. Also Available at: DUNNASANDRA: 8310166369. HSR LAYOUT: 7428893265. MATHIKERE: 9035027951. DOMLUR: 7353919910- J.P.NAGAR: 9035024274. RT NAGAR: 9535327710. ATTIBELE: 8050609104. B NARAYANAPURA: 9945472149. VARTHUR: 9900877227. PAPAREDDYPALYA: 9916678309. ANEKAL: 9739519252. KONANKUNTE: 9886122251. SARJAPUR MAIN ROAD: 8762860999. BIDADI: 9844767719. RAMANAGARA: 9663399909. JIGANI: 9986498884. CHIKKANAYAKANAHALLI: 9880807399. TURUVEKERE: 9448403205. KORATAGERE: 9731713711. PERESANDRA: 9901502049.

VML.5805.2025